ಹುಬ್ಬಳ್ಳಿ
ಸೋಮವಾರ, 18 ಮೇ 2026
ಸಂಪುಟ 16, ಸಂಚಿಕೆ 54, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ತ್ರಿಭಾಷಾ ನೀತಿ, ಅನಗತ್ಯ ಭೀತಿ? | ೦೭ ಎಬೋಲಾ: ಜಾಗತಿಕ ತುರ್ತುಸ್ಥಿತಿ ಘೋಷಣೆ | ೦೭ ಐಪಿಎಲ್: ಪ್ಲೇ ಆಫ್‌ಗೆ ಆರ್‌ಸಿಬಿ ಲಗ್ಗೆ | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೋಹಿಣಿ

ದಿನದ ಮಾತು

ಸಜ್ಜನರ ದರ್ಶನ ಒಳ್ಳೆಯದು. ಅವರ ಹಿತೋಪದೇಶ ಕೇಳುವುದು ಇನ್ನೂ ಒಳ್ಳೆಯದು.
▲ ನೀತಿ ಮಂಜರಿ

ಮಿತವ್ಯಯ ಕರೆ: ಈ ಪರಿಯ ಆಕ್ರೋಶ ಏಕೆ?

ನೇರ ನೋಟ
• ದು.ಗು.ಲಕ್ಷ್ಮಣ
• ಪುಟ ೬

ಕಿರುಸುದ್ದಿ

ಮದ್ಯದ ದರ ತುಸು ಏರಿಕೆ

ಆಲ್ಕೋಹಾಲ್ ಅಂಶ ಆಧರಿಸಿ ದರ ನಿಗದಿ

• **ಬೆಂಗಳೂರು:** ಜಾಗತಿಕ ಮಟ್ಟದಲ್ಲಿ ಮದ್ಯದ ಅಂಶವನ್ನು ಆಧರಿಸಿ ಮದ್ಯದ ಬೆಲೆ ನಿರ್ಧಾರವಾಗುವ ಹೊಸ ನೀತಿ ಅನುಷ್ಠಾನದ ಪರಿಣಾಮ ಹೆಚ್ಚು ಮಾರಾಟವಾಗುವ ಮದ್ಯ ಮತ್ತು ಬಿಯರ್ ಬ್ರ್ಯಾಂಡ್‌ಗಳ ದರಗಳ ಪರಿಷ್ಕರಣೆಯಾಗಿದ್ದು, ಕಡಿಮೆ ಬೆಲೆಯ ದರ ಹೊಂದಿದ್ದ ಮದ್ಯದ ಬೆಲೆಯಲ್ಲಿ ಸ್ವಲ್ಪ ಮಟ್ಟಿನ ಏರಿಕೆಯಾಗಿದೆ. ತೆರಿಗೆ ಪದ್ಧತಿಯ ಹೊಸ ನೀತಿಯಡಿ ಮಾರುಕಟ್ಟೆ ಪರಿಗಣನೆ ಆಧಾರದ ಮೇಲೆ ಮದ್ಯ ಉತ್ಪನ್ನಗಳನ್ನು ಸ್ಲ್ಯಾಬ್‌ಗಳಲ್ಲಿ ನಿರ್ಧರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಉತ್ಪಾದಕರಿಗೆ ನೀಡಲಾಗಿದ್ದು, ಈ ಹಿಂದೆ ಇದ್ದ 16 ಸ್ಲ್ಯಾಬ್‌ಗಳನ್ನು 8 ಸ್ಲ್ಯಾಬ್‌ಗಳಿಗೆ ಇಳಿಸಲಾಗಿದೆ. 2026–27 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ, ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಮದ್ಯದ ಅಂಶವನ್ನು ಆಧರಿಸಿದ ತೆರಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ. ➡ಪುಟ ೪

ಉಕ್ರೇನ್ ಡ್ರೋನ್ ದಾಳಿ: ಭಾರತೀಯ ಸೇರಿ 4 ಸಾವು

• **ಮಾಸ್ಕೋ:** ರಷ್ಯಾ ಮೇಲೆ ಉಕ್ರೇನ್ ನಡೆಸಿದ ಈವರೆಗಿನ ಅತಿ ದೊಡ್ಡ ಡ್ರೋನ್ ದಾಳಿಗೆ ಓರ್ವ ಭಾರತೀಯ ಸೇರಿ ನಾಲ್ವರು ಬಲಿಯಾಗಿದ್ದು, 12 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

• ಪುಟ ೭

ಧಾರವಾಡದಲ್ಲಿ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ

• ಪುಟ ೮

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2

• ಪುಟ ೮

ಸುಪ್ರೀಂ ಆದೇಶ ಸರ್ಕಾರ ಪಾಲಿಸಲಿ: ಕಾರಜೋಳ

• ಪುಟ ೮



1991ರ ರಹಸ್ಯ

ಭಾರತ 47,000 ಕೆಜಿ ಚಿನ್ನವನ್ನು ಯುಕೆಗೆ ಕಳುಹಿಸಲು ಕಾರಣವೇನು?
• ಪುಟ ೭

ಸುದ್ದಿ ಸಮಗ್ರ

ರಕ್ಷಣೆ, ಖನಿಜ ಸೇರಿ 17 ಒಪ್ಪಂದಗಳಿಗೆ ಉಭಯ ದೇಶಗಳ ಸಹಿ

ಭಾರತ-ನೆದರ್‌ಲ್ಯಾಂಡ್ಸ್ ವ್ಯೂಹಾತ್ಮಕ ಪಾಲುದಾರಿಕೆ



• **ದ ಹೇಗ್:** ಜಾಗತಿಕ ಭೌಗೋಳಿಕ ರಾಜಕೀಯದಲ್ಲಿ ಆಗುತ್ತಿರುವ ವೇಗದ ಸ್ಥಿತ್ಯಂತರಗಳ ನಡುವೆ, ಭಾರತ ಮತ್ತು ನೆದರ್‌ಲ್ಯಾಂಡ್ಸ್ ತಮ್ಮ ನಡುವಣ ಬಾಂಧವ್ಯವನ್ನು ಈಗ ವ್ಯೂಹಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಎತ್ತರಿಸಿಕೊಂಡಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ನೆದರ್‌ಲ್ಯಾಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ನಡುವೆ ನಡೆದ ಫಲಪ್ರದ ಮಾತುಕತೆಗಳ ಪರಿಣಾಮವಾಗಿ ಉಭಯ ದೇಶಗಳ ನಡುವೆ ರಕ್ಷಣೆ, ಮಹತ್ವದ ಖನಿಜಗಳು ಮತ್ತಿತರ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸಿ 17 ಒಪ್ಪಂದಗಳಿಗೆ ಸಹಿ ಮಾಡಲಾಗಿದೆ.

ನೆದರ್‌ಲ್ಯಾಂಡ್ ಭೇಟಿಯಲ್ಲಿರುವ ಪ್ರಧಾನಿ ಮೋದಿಯವರು ಶನಿವಾರ ಸಂಜೆ ಅಲ್ಲಿನ ಪ್ರಧಾನಿ ಜತೆ ನಡೆಸಿದ ಮಾತುಕತೆಯಲ್ಲಿ ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯ ಬಗ್ಗೆ ಗಂಭೀರ ಕಳವಳ ವ್ಯಕ್ತವಾಯಿತು. ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಇಡೀ ವಲಯದ ಮೇಲೆ ತೀವ್ರತರ ಪರಿಣಾಮಗಳನ್ನು



ಉಂಟುಮಾಡಿರುವುದಷ್ಟೇ ಅಲ್ಲದೆ ಜಾಗತಿಕ ಇಂಧನ ಪೂರೈಕೆ ಮತ್ತು ವ್ಯಾಪಾರ ಸಂಪರ್ಕ ಜಾಲಗಳಿಗೆ ತೀವ್ರ ಅಡಚಣೆಯುಂಟಾಗಿರುವುದನ್ನು ಉಭಯ ನಾಯಕರು ಆತಂಕ ವ್ಯಕ್ತಪಡಿಸಿದರು.

ಹಾರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ವಾಣಿಜ್ಯ ವ್ಯವಹಾರದ ಸುಲಲಿತ ಹರಿಯುವಿಕೆ ಮತ್ತು ಮುಕ್ತ ನೌಕಾ ಸಂಚಾರಗಳಿಗೆ ಕರೆ ನೀಡಿದ ಉಭಯ ನಾಯಕರು, ಈ ಪ್ರದೇಶದಲ್ಲಿ ಯಾವುದೇ ನಿರ್ಬಂಧಾತ್ಮಕ ಕ್ರಮಗಳನ್ನು ವಿರೋಧಿಸಿದ್ದಾರೆ. ಇದೀಗ ಈ ನಿಟ್ಟಿನಲ್ಲಿ ನಡೆಯುತ್ತಿರುವ ಉಪಕ್ರಮಗಳ ಪ್ರಯತ್ನಗಳಿಗೆ ಪೂರ್ಣ ಬೆಂಬಲ ನೀಡುವುದಾಗಿ ಜಂಟಿ ಹೇಳಿಕೆಯಲ್ಲಿ ಘೋಷಿಸಿದರು. ಜಗತ್ತಿನ ಐದನೇ ಒಂದಂಶದ ಇಂಧನ ಪೂರೈಕೆ ಈ ಇಕ್ಕಟ್ಟಾದ ಸಮುದ್ರ ಮಾರ್ಗದ ಮೂಲಕ ನಡೆಯುತ್ತಿದ್ದು, ಕಳೆದ ಫೆ.28ರಿಂದ ಆತಂಕಕ್ಕೀಡಾಗಿದೆ. ಅಮೆರಿಕ-ಇಸ್ರೇಲ್, ಇರಾನ್ ಯುದ್ಧದಿಂದಾಗಿ ಉಂಟಾಗಿರುವ ಬಿಕ್ಕಟ್ಟು ಇನ್ನೂ ಇತ್ಯರ್ಥಗೊಳ್ಳದಿರುವುದು ಜಾಗತಿಕ ಕಳವಳಕ್ಕೆ ಕಾರಣವಾಗಿದೆ. ➡ಪುಟ ೪

» ವಿಜ್ಞಾನ, ಆರೋಗ್ಯ, ಕೃಷಿ, ಜಲನಿರ್ವಹಣೆ, ಸಂಶೋಧನೆ, ಹವಾಮಾನ ಬದಲಾವಣೆ, ಇಂಧನ ಪರಿವರ್ತನೆ, ಕಡಲ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಿಸಲು ಉಭಯ ದೇಶಗಳ ಒಪ್ಪಿಗೆ. ಉದ್ಯೋಗ, ಶಿಕ್ಷಣ ಕ್ಷೇತ್ರದಲ್ಲೂ ಸಹಕಾರಕ್ಕೆ ಒತ್ತು

ವಿಶ್ವವಿಖ್ಯಾತ ಸಿಇಒಗಳ ಜತೆ ಪ್ರಧಾನಿ ಮೋದಿ ಮಾತುಕತೆ

ಗುಜರಾತಿನ ಧೋಲೇರಾದಲ್ಲಿ ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಎಎಸ್‌ಎಂಎಲ್ ನಡುವೆ ಸೆಮಿಕಂಡಕ್ಟರ್ ಫ್ಯಾಬ್‌ಗೆ ಬೆಂಬಲ ನೀಡುವ ಒಪ್ಪಂದ ಈ ಒಪ್ಪಂದಗಳಲ್ಲಿ ಸೇರಿದೆ. ಯುರೋಪ್-ಭಾರತ ನಡುವಣ ಎಫ್‌ಟಿಎಯ ತ್ವರಿತ ಅನುಷ್ಠಾನಕ್ಕೆ ಉಭಯ ನಾಯಕರು ಕರೆ ನೀಡಿದರು. ಈ ವೇಳೆ ನಡೆದ ಸಿಇಒಗಳ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರು, ಭಾರತ ಪ್ರಮಾಣ ಮತ್ತು ಸ್ಥಿರತೆಯ ಸಂಕೇತವಾಗಿದೆ. ಇಂದು ಮೂಲಸೌಕರ್ಯಗಳ ಅಭಿವೃದ್ಧಿಯಲ್ಲಿನ ವೇಗ, ಸ್ವಚ್ಛ ಇಂಧನ, ಸಂಪರ್ಕಕ್ಕೆ ವಿಶ್ವದ ಯಾವುದೇ ದೇಶವನ್ನು ಭಾರತದೊಂದಿಗೆ ತುಲನೆ ಮಾಡಲು ಸಾಧ್ಯವಿಲ್ಲ. ಭಾರತವಿಂದು ವಿಶ್ವದ ಬೆಳವಣಿಗೆಗೆ ಶೇ.17ರಷ್ಟು ಕೊಡುಗೆ ನೀಡುತ್ತಿದೆ. ಅಭಿವೃದ್ಧಿ ಕ್ಷೇತ್ರದಲ್ಲಿ ಖಾಸಗಿಯವರಿಗೂ ಸಮಾನ ಅವಕಾಶ ನೀಡಲಾಗುತ್ತಿದೆ ಎಂದು ಬೊಟ್ಟು ಮಾಡಿದರು. ಈ ಸಭೆಯಲ್ಲಿ ನೆದರ್‌ಲ್ಯಾಂಡ್‌ನ ವಿಶ್ವವಿಖ್ಯಾತ ಉದ್ಯಮಿಗಳು, ಸಿಇಒಗಳು ಪಾಲ್ಗೊಂಡಿದ್ದರು.

ಚೋಳರ ತಾಮ್ರ ಶಾಸನ ಮರಳಿಸಿದ ನೆದರ್‌ಲ್ಯಾಂಡ್



ಚೋಳರ ಕಾಲದ ಅಮೂಲ್ಯ ತಾಮ್ರದ ಶಾಸನಗಳನ್ನು ನೆದರ್‌ಲ್ಯಾಂಡ್ ಪ್ರಧಾನಿ ರಾಬ್ ಜೆಟ್ಟನ್ ಭಾರತಕ್ಕೆ ಹಿಂದಿರುಗಿಸಿದ್ದಾರೆ. ವಿಶೇಷ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾಮ್ರದ ಶಾಸನ ಪ್ಲೇಟ್‌ಗಳನ್ನು ಜೆಟ್ಟನ್ ಹಸ್ತಾಂತರ ಮಾಡಿದ್ದಾರೆ. ➡ಪುಟ ೪

ಮೋದಿ ಪೋಲಾರ್ ಸ್ಟಾರ್ ಸ್ವೀಡನ್ ಅತ್ಯುನ್ನತ ಪುರಸ್ಕಾರ

• ಪುಟ ೭

ನೌಕೆಗೆ ಅಡ್ಡಿ ಬೇಡ: ವಿಶ್ವಸಂಸ್ಥೆಯಲ್ಲಿ ಭಾರತ

ಹಾರ್ಮುಜ್: ನೌಕೆಗಳ ಮೇಲಿನ ದಾಳಿಗೆ ಆತಂಕ



• **ಜಿನೀವಾ:** ಹಾರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ನೌಕೆಗಳನ್ನು ಗುರಿಪಡಿಸುತ್ತಿರುವುದು, ನಾಗರಿಕ ಸಿಬ್ಬಂದಿಯ ಪ್ರಾಣಕ್ಕೆ ಅಪಾಯ ತಂದೊಡ್ಡುತ್ತಿರುವುದು ಮತ್ತು ನೌಕಾಯಾನಕ್ಕೆ ಅಡ್ಡಿಪಡಿಸುತ್ತಿರುವ ಬಗ್ಗೆ ಭಾರತ ವಿಶ್ವಸಂಸ್ಥೆಯಲ್ಲಿ ತೀವ್ರ ಕಳವಳ ವ್ಯಕ್ತಪಡಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಉಂಟಾಗಿರುವ ಇಂಧನ ಮತ್ತು ರಸಗೊಬ್ಬರ ಬಿಕ್ಕಟ್ಟಿನ ಕುರಿತು ಶುಕ್ರವಾರ



ನಡೆದ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ವಿಶೇಷ ಸಭೆಯಲ್ಲಿ ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಮಾತನಾಡಿದರು. ಸುರಕ್ಷಿತ ನೌಕಾಯಾನಕ್ಕೆ ಸಂಬಂಧಿಸಿದ ಅಂತಾರಾಷ್ಟ್ರೀಯ ಕಾನೂನುಗಳನ್ನು ಗೌರವಿಸಬೇಕು ಎಂದು ಅವರು ಪ್ರತಿಪಾದಿಸಿದರು.

ಈ ಬಿಕ್ಕಟ್ಟನ್ನು ಎದುರಿಸಲು ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಅಲ್ಪಾವಧಿ ಹಾಗೂ ರಚನಾತ್ಮಕ ಕ್ರಮಗಳ ಸಂಯೋಜನೆ ಅತ್ಯಗತ್ಯ ಎಂದು ಪ್ರತಿಪಾದಿಸಿದ ಹರೀಶ್, ವಾಣಿಜ್ಯ ನೌಕೆಗಳನ್ನು ಗುರಿಪಡಿಸುವುದು, ನಾಗರಿಕ ಸಿಬ್ಬಂದಿಯನ್ನು ಅಪಾಯಕ್ಕೆ ಸಿಲುಕಿಸುವುದು ಮತ್ತು ಮುಕ್ತ ನೌಕಾಯಾನಕ್ಕೆ ಅಡ್ಡಿಪಡಿಸುವುದು ಒಪ್ಪಿಕೊಳ್ಳಲು ಸಾಧ್ಯವಿಲ್ಲದ್ದಾಗಿದೆ ಎಂಬುದನ್ನು ಪುನರುಚ್ಚರಿಸಿದ್ದಾರೆ.

ಇತ್ತೀಚಿನ ನೌಕೆ ಮೇಲಿನ ದಾಳಿ: ಸೊಮಾಲಿಯಾದಿಂದ ಹೊರಟಿದ್ದ ಭಾರತದ ಧ್ವಜ ಹೊಂದಿದ ವಾಣಿಜ್ಯ ನೌಕೆ ಮೇಲೆ ಮೇ 13ರಂದು ಒಮಾನ್ ಕರಾವಳಿಯಲ್ಲಿ ನಡೆದ ದಾಳಿ ಹಿನ್ನೆಲೆ ಭಾರತ ಈ ಹೇಳಿಕೆ ನೀಡಿದೆ. ➡ಪುಟ ೪

ಹಾರ್ಮುಜ್ ದಾಟಿ ಗುಜರಾತ್ ಪ್ರವೇಶಿಸಿದ ಎಲ್‌ಪಿಜಿ ಹಡಗು

ಮಾರ್ಷಲ್ ಐಲ್ಯಾಂಡ್ ರಾಷ್ಟ್ರಧ್ವಜ ಹೊಂದಿರುವ ಎಲ್‌ಪಿಜಿ ಹಡಗು ಸಿಮಿ 20,000 ಟನ್‌ಗಳಷ್ಟು ಎಲ್‌ಪಿಜಿ ಅನಿಲವನ್ನು ಭಾರತಕ್ಕೆ ತಲುಪಿಸಿದೆ. ಹಾರ್ಮುಜ್ ಜಲಸಂಧಿ ದಾಟಿಕೊಂಡ ಬಂದ ಸಿಮಿ ಗುಜರಾತ್‌ನ ಕಾಂಡ್ಲಾದ ದೀನದಯಾಳ್ ಬಂದರಿನಲ್ಲಿ ಲಂಗರು ಹಾಕಿದೆ. ಮೇ 13ರಂದು ಸಿಮಿ ಹಾರ್ಮುಜ್ ದಾಟಿದ್ದು, ಮಧ್ಯಪ್ರಾಚ್ಯ ಸಂಘರ್ಷ ಮಧ್ಯೆಯೂ ಇಂಧನ ಪೂರೈಕೆ ಮಾಡಿದೆ. ಈ ನೌಕೆಯಲ್ಲಿ 21 ಸಿಬ್ಬಂದಿಯಿದ್ದು, 8 ಉಕ್ರೇನಿಯನ್ನರು ಮತ್ತು 13 ಫಿಲಿಪಿನೋಗಳು ಇದ್ದರು. ಸದ್ಯದ ಆತಂಕದ ಪರಿಸ್ಥಿತಿಯಲ್ಲಿ ಹಾರ್ಮುಜ್ ದಾಟಿದ 11ನೇ ಹಡಗು ಇದಾಗಿದೆ.

ಪ್ರಯಾಣದ ಅವಧಿ ತಗ್ಗಿಸಲು ಕ್ರಮ: ಸಚಿವ ವಿ.ಸೋಮಣ್ಣ

ಬೆಂಗ್ಳೂರು-ಮುಂಬೈ ರೈಲಿಗೆ ನಿಶಾನೆ

• **ಬೆಂಗಳೂರು:** ನಗರದ ಸರ್.ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಲ್‌ವರೆಗೆ ಸಂಚರಿಸಲಿರುವ ಹೊಸ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಸೇವೆಗೆ ಭಾನುವಾರ ಚಾಲನೆ ನೀಡಲಾಯಿತು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಆನ್‌ಲೈನ್ ಮೂಲಕ ನೂತನ ರೈಲಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಮೇ 23ರಿಂದ ರೈಲು ಸಂಖ್ಯೆ 16553 ಎಸ್‌ಎಂವಿಟಿ ಬೆಂಗಳೂರು–ಲೋಕಮಾನ್ಯ ತಿಲಕ್ ಟರ್ಮಿನಲ್ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ಸೇವೆ ಆರಂಭವಾಗಿದೆ. ಈ ರೈಲು ಪ್ರತಿ ಮಂಗಳವಾರ ಮತ್ತು ಶನಿವಾರ ಸಂಚರಿಸಲಿದೆ. ಮೇ 24 ರಿಂದ ರೈಲು ಸಂಖ್ಯೆ 16554 ಲೋಕಮಾನ್ಯ ತಿಲಕ್ ಟರ್ಮಿನಲ್-ಎಸ್‌ಎಂವಿಟಿ ಬೆಂಗಳೂರು ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ಪ್ರತಿ ಭಾನುವಾರ ಮತ್ತು ಬುಧವಾರ ಸಂಚರಿಸಲಿದೆ. ಕೇಂದ್ರ ಸಚಿವ ವಿ.ಸೋಮಣ್ಣ ಮಾತನಾಡಿ, ಈ ರೈಲು ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಸೇರಿ ಹಲವು ಪ್ರಮುಖ ನಗರಗಳಲ್ಲಿ ನಿಲುಗಡೆ ಹೊಂದಿದೆ. ➡ಪುಟ ೪



ಹೈ-ಸ್ಪೀಡ್ ರೈಲು ಕಾರಿಡಾರ್‌ಗೆ ಆಗ್ರಹ

• **ಬೆಂಗಳೂರು:** ದಾವಣಗೆರೆ ಮತ್ತು ಹುಬ್ಬಳ್ಳಿ ಮಾರ್ಗವಾಗಿ ಬೆಂಗಳೂರು ಮತ್ತು ಮುಂಬೈ ನಡುವೆ ಹೈ-ಸ್ಪೀಡ್ ರೈಲು ಕಾರಿಡಾರ್ ಮಂಜೂರು ಮಾಡುವಂತೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಭಾನುವಾರ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಆಗ್ರಹಿಸಿದ್ದಾರೆ. ➡ಪುಟ ೪

4,500 ಕೋಟಿ ರೂ. ವಂಚನೆ ಪ್ರಕರಣ | ಸಿಐಡಿ ತನಿಖೆ ಆರಂಭ

ಶಿವಾನಂದ 5 ದಿನ ಪೊಲೀಸ್ ವಶಕ್ಕೆ

• **ಬೆಳಗಾವಿ:** ಆರ್‌ಬಿಐ ನಿಯಮಗಳನ್ನು ಪಾಲಿಸದೆ ಸಾವಿರಾರು ಜನರಿಂದ ಠೇವಣಿ ಸಂಗ್ರಹಿಸಿ ಅನಧಿಕೃತ ಬಡ್ಡಿ ವ್ಯವಹಾರ ನಡೆಸಿದ ಆರೋಪದಲ್ಲಿ ಶಿವಂ ಅಸೋಸಿಯೇಟ್ಸ್ ಮಾಲೀಕ



ಶಿವಾನಂದ ನೀಲಣ್ಣವರ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಮಾಹಿತಿ ನೀಡಿದ್ದು, ಪ್ರಾಥಮಿಕ ತನಿಖೆಯಲ್ಲಿ ಸುಮಾರು 35 ಸಾವಿರ ಜನರಿಂದ ಠೇವಣಿ ಸಂಗ್ರಹಿಸಿರುವುದು ಗೊತ್ತಾಗಿದೆ. ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆದಿರುವ ಶಂಕೆ ಇದೆ. ಆದರೆ, ವ್ಯವಹಾರಗಳು ಆರ್‌ಬಿಐ ನಿಯಮಾನುಸಾರ ನಡೆದಿಲ್ಲ ಎಂದರು. ಬೆಳಗಾವಿಯ ಮಾಳಮಾರುತಿ ಪೊಲೀಸರು ಆರೋಪಿಯನ್ನು ಶುಕ್ರವಾರ ರಾತ್ರಿ ಬಂಧಿಸಿ, ಮ್ಯಾಜಿಸ್ಟ್ರೇಟ್ ಅವರ ನಿವಾಸದ ಮುಂದೆ ಹಾಜರುಪಡಿಸಿದ್ದರು. ವಿಚಾರಣೆಗಾಗಿ ಆರೋಪಿಯನ್ನು 5 ದಿನ ಪೊಲೀಸ್ ವಶಕ್ಕೆ ನೀಡಲಾಗಿದೆ. ➡ಪುಟ ೪

ಸಿಐಡಿ ಅಧಿಕಾರಿಗಳ ಸಭೆ

• **ಬೆಳಗಾವಿ:** ಶಿವಂ ಅಸೋಸಿಯೇಷಟ್ಸ್‌ನ ಮಾಲಿಕ ಶಿವಾನಂದ ನೀಲಣ್ಣವರ ಇಷ್ಟು ದಿನ ಬೆಳಗಾವಿ ಜನರಿಗೆ ಮಾತ್ರ ಪರಿಚಯವಾಗಿದ್ದ. ಆದರೆ, 4500 ಕೋಟಿ ರೂ. ವಂಚನೆ ಪ್ರಕರಣ ರಾಜ್ಯಾದ್ಯಂತ ಭಾರೀ ಸಂಚಲನ ಮೂಡಿಸಿದೆ. ಹೂಡಿಕೆ ವಂಚನೆ ಆರೋಪ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸುವ ಕುರಿತು ಬೆಳಗಾವಿ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಭಾನುವಾರ ಮಹತ್ವದ ಉನ್ನತ ಮಟ್ಟದ ಸಭೆ ನಡೆಯಿತು. ➡ಪುಟ ೪

ಬ್ಯಾಂಕ್ ಅಧಿಕಾರಿಗಳು ಶಾಮೀಲು?

• **ಬೆಳಗಾವಿ:** ಜಿಲ್ಲೆಯಲ್ಲಿ 4,500 ಕೋಟಿ ರೂ. ವಂಚನೆ ಪ್ರಕರಣದ ತನಿಖೆಗೆ ಈಗಾಗಲೇ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. 35 ಸಾವಿರಕ್ಕೂ ಹೆಚ್ಚು ಜನರಿಂದ ಹೂಡಿಕೆ ಹಣ ಪಡೆದಿರುವುದು ಬೆಳಕಿಗೆ ಬಂದಿದೆ. ➡ಪುಟ ೪

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೆ ಏರಿಕೆ

ಸುಗ್ರೀವಾಜ್ಞೆಗೆ ರಾಷ್ಟ್ರಪತಿ ಮುರ್ಮು ಅನುಮೋದನೆ

• **ಹೊಸದಿಲ್ಲಿ:** ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಹೊರತುಪಡಿಸಿ ಸರ್ವೋಚ್ಚ ನ್ಯಾಯಾಲಯದ ಅನುಮೋದಿತ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33 ರಿಂದ 37ಕ್ಕೆ



ಹೆಚ್ಚಿಸುವ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಸರ್ವೋಚ್ಚ ನ್ಯಾಯಾಲಯ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಸುಗ್ರೀವಾಜ್ಞೆ, 2026 ಅನ್ನು ಶನಿವಾರ ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದು ಸರ್ವೋಚ್ಚ ನ್ಯಾಯಾಲಯ (ನ್ಯಾಯಮೂರ್ತಿಳ ಸಂಖ್ಯೆ) ಕಾಯ್ದೆ, 1956ರ ಸೆಕ್ಷನ್ 2ರಲ್ಲಿದ್ದ ''ಮೂವತ್ತಮೂರು'' ಎಂಬ ಪದದ ಬದಲಿಗೆ ''ಮೂವತ್ತೇಳು'' ಎಂದು ಬದಲಾಯಿಸುತ್ತದೆ. ➡ಪುಟ ೪

ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ: ಪಾರಾದ ಪ್ರಯಾಣಿಕರು



• **ಕೋಟಾ:** ದಿಲ್ಲಿಗೆ ತೆರಳುತ್ತಿದ್ದ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನ ಎಸಿ ಬೋಗಿಯಲ್ಲಿ ಭಾರೀ ಬೆಂಕಿ ಕಾಣಿಸಿಕೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿಯಾಗಿಲ್ಲ. ತಿರುವನಂತಪುರಂ – ದಿಲ್ಲಿಯ ಹಜರತ್ ನಿಜಾಮುದ್ದೀನ್ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಭಾನುವಾರ ಬೆಳಗ್ಗೆ 5 ಗಂಟೆ ಸುಮಾರಿಗೆ ಅವಘಡ ಸಂಭವಿಸಿದೆ. ➡ಪುಟ ೪



ಹುಬ್ಬಳ್ಳಿ: ಅಧಿಕ ಮಾಸದ ಪ್ರಯುಕ್ತ ತೊರವಿ ಗಲ್ಲಿಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ದೊಡ್ಡ ಗೌರಿಯನ್ನು ಸಂಕಲ್ಪದೊಂದಿಗೆ ಕೂಡಿಸಲಾಯಿತು. ಜೂನ್ 15 ರ ವರೆಗೆ ಪ್ರತಿನಿತ್ಯ ಸಂಜೆ 4 ಗಂಟೆಯಿಂದ ಕಾರ್ಯಕ್ರಮ ಆರಂಭವಾಗಲಿದೆ. 33 ದೇವರ ನಾಮ, 33 ಪ್ರದಕ್ಷಿಣೆ ಹಾಗೂ 33 ನಮಸ್ಕಾರ ಹಾಕಲಾಗುವುದು. ಭಗವದ್ಗೀತಾ ಭಜನಾ ಮಂಡಳಿಯ ಅಧ್ಯಕ್ಷೆ ಸುರೇಖಾ ಕುಲಕರ್ಣಿ, ಪರಿಮಳಾ ವಾಳ್ವೇಕರ, ಎನ್. ಲಕ್ಷ್ಮೀ, ವಿದ್ಯಾ ಜಕಾತಿ, ವಾಣಿ ಕಂಭಾಗಿ, ಭಾರತಿ ನಾಯಕ, ಶ್ರಾವಣಿ ಮಳಗಿ, ಪಂಡಿತ ನರಹರಿ ಆಚಾರ್ಯ ವಾಳ್ವೇಕರ ಇತರರಿದ್ದರು.

ಸರಿಯಾದ ಸಮಯಕ್ಕೆ ಮಾಸಾಶನ ನೀಡಿ

ಹುಬ್ಬಳ್ಳಿ: ವಿಮುಕ್ತ ದೇವದಾಸಿಯರಿಗೆ ಸರಿಯಾದ ಸಮಯಕ್ಕೆ ಮಾಸಾಶನ ನೀಡುವಂತೆ ಕರ್ನಾಟಕ ದಲಿತ ವಿಮೋಚನಾ ಸಮಿತಿ ಹುಬ್ಬಳ್ಳಿ ಶಹರ ಸಮಿತಿ ಪದಾಧಿಕಾರಿಗಳು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರಿಗೆ ನಗರದಲ್ಲಿ ಭಾನುವಾರ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ 46 ಸಾವಿರಕ್ಕೂ ಹೆಚ್ಚು ವಿಮುಕ್ತ ದೇವದಾಸಿಯರಿದ್ದಾರೆ. ರಾಜ್ಯ ಸರ್ಕಾರವು ಭೂಮಿ ಯೋಜನೆ, ಪ್ರತಿ ತಿಂಗಳು ಮಾಸಾಶನ, ವಸತಿ ಯೋಜನೆಯಡಿ ಸವಲತ್ತು ಕಲ್ಪಿಸಿದೆ. ಯಾವುದೂ ಸಮರ್ಪಕವಾಗಿ ದೊರೆಯುತ್ತಿಲ್ಲ. ದೇವದಾಸಿ ಪುನರ್ವಸತಿ ಯೋಜನಾ ಘಟಕವು ಹೊರಗುತ್ತಿಗೆ ಆಧಾರದ ಮೇಲಿದೆ. ಹಾಗಾಗಿ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಕೂಡಲೇ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಬೇಕು. ಮರು ಸಮೀಕ್ಷೆಯನ್ನೂ ಸರಿಯಾಗಿ ನಿರ್ವಹಿಸಿಲ್ಲ. ಇದರಿಂದ ವಿಮುಕ್ತ ದೇವದಾಸಿಯರಿಗೆ ಸಮಸ್ಯೆಯಾಗಿದೆ. ಕೂಡಲೇ ಸಮಸ್ಯೆ ಪರಿಹರಿಸುವಂತೆ ಕೋರಿ ಮನವಿ ಸಲ್ಲಿಸಿ ಒತ್ತಾಯಿಸಿದರು.

ಇದಕ್ಕೆ ಸ್ಪಂದಿಸಿದ ಡಾ. ನಾಗಲಕ್ಷ್ಮೀ ಚೌಧರಿ, ಈ ಎಲ್ಲ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು. ಸಮಿತಿ ಅಧ್ಯಕ್ಷ ಶ್ರೀಧರ ಕಂದಗಲ್, ಪ್ರಮುಖರಾದ ಶಾಂತವ್ವ ವಗರನಾಳ, ರೇಣುಕಾ ಸಂಶಿ, ಬಸವ್ವ ಖಾನಾಪೂರ, ದುರಗವ್ವ ಬಾಗಲವಾಡ, ಮಲ್ಲವ್ವ ತುರ್ವಿಹಾಳ, ರೇಣುಕಾ ಹೊಸಮನಿ, ಗುರುನಾಥ ಕ್ವಾಟಿ, ರವಿ ಚಲವಾದಿ, ಇರ್ಫಾನ್ ಡೋಬಿ, ಮಂಜು ಕಟಗೆಣ್ಣನವರ ಇತರರಿದ್ದರು.



ಹುಬ್ಬಳ್ಳಿ: ವಿಮುಕ್ತ ದೇವದಾಸಿಯರಿಗೆ ಸರಿಯಾದ ಸಮಯಕ್ಕೆ ಮಾಸಾಶನ ನೀಡುವಂತೆ ಕರ್ನಾಟಕ ದಲಿತ ವಿಮೋಚನಾ ಸಮಿತಿ ಹುಬ್ಬಳ್ಳಿ ಶಹರ ಸಮಿತಿ ಪದಾಧಿಕಾರಿಗಳು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರಿಗೆ ನಗರದಲ್ಲಿ ಭಾನುವಾರ ಮನವಿ ಸಲ್ಲಿಸಿದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: ಆನಂದ ನಗರದ 110/11ಕೆ.ವಿ ವಿದ್ಯುತ್ ಉಪಕೇಂದ್ರದ 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯದ ನಿಮಿತ್ತ ಮೇ 18 ರಂದು ಬೆಳಗ್ಗೆ 10 ರಿಂದ ಸಂಜೆ 4 ರ ವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ಕೋರಿದೆ.

ನ್ಯೂ ಆನಂದ ನಗರ, ಓಲ್ಡ್ ಆನಂದ ನಗರ, ಗೊಲ್ಲರ ಕಾಲೋನಿ, ಮಿಡ್ ವ್ಯಾಕ್, ಚಂದನ ಕಾಲೋನಿ, ಹುಬ್ಬಳ್ಳಿ ಆಸ್ಪತ್ರೆ, ಭಾರತಿ ನಗರ, ಲೋಹಿಯಾ ನಗರ, ಮಯೂರ ನಗರ, ಗೊಡ್ಕೆ ಪ್ಲಾಟ್, ಬ್ಯಾಹಟ್ಟಿ ಪ್ಲಾಟ್, ಆರೂಢಾ ನಗರ, ಮಹಾನಂದಿ ಪ್ಲಾಟ್, ಜೈ ಹನುಮಾನ ನಗರ, 7ನೇ ಅವೆನ್ಯೂ ಮೊರಾರ್ಜಿ ನಗರ, ಸಿದ್ಧರಾಮೇಶ್ವರ ನಗರ, ಸದಾತಾ ಕಾಲೋನಿ, ಸಿಮ್ಲಾ ನಗರ, ಯು.ಕೆ.ಟಿ ಹಿಲ್, ಅಯೋಧ್ಯಾ ನಗರ, ಆದರ್ಶ ಕಾಲೋನಿ, ಕೃಷ್ಣಗಿರಿ, ಕಲಾವಿಧರ ಪ್ಲಾಟ್, ಚೈತನ್ಯ ನಗರ, ಸೈಯದ್ ಫತೇಹ್ ಶಾವಲಿ ನಗರ, ಸಾಲಿ ಪ್ಲಾಟ್, ಮೇದಾರ್ ಪ್ಲಾಟ್, ಸುಭಾಷ್ ನಗರ ಕಾಲೋನಿ, ಅದಾರ ಗುಡಿಹಾಳ್, ಗೋಕುಲ್ ಧಾಮ್, ವಿಶಾಲ ನಗರ, ಸೀಬ್ ಕಾಲೋನಿ, ಗಣೇಶ್ ನಗರ, ಹೆಗ್ಗೇರಿ, ಭೂವನೇಶ್ವರ ನಗರ, ಪಿ ಟಿ ಕ್ವಾರ್ಟರ್ಸ್, ಚಾಣಕ್ಯಪುರಿ, ಗವಿ ಓಣಿ, ತೋರ್ವಿ ಹಕ್ಕಲ, ಕಮರಿ ಪೇಟೆ, ಕೌಲ್ ಪೇಟೆ, ಜ್ಯೋತಿ ಕಾಂಪ್ಲೆಕ್ಸ್, ಪಿ.ಬಿ.ರೋಡ್, ಆಸರಾ ಹೊಂಡಾ, ನಾರಾಯಣ ಸೋಫಾ, ಹಳೇ ಹುಬ್ಬಳ್ಳಿ ಮಾರುಕಟ್ಟೆ, ಹಿರೇ ಪೇಟೆ, ಅಂಬೇಡ್ಕರ್ ಕಾಲೋನಿ, ಶಿವಶಂಕರ ಕಾಲೋನಿ, ಮಗಜಿಕುಂದ ಪ್ಲಾಟ್, ಸಿದ್ಧಾರೂಢ ಮಠ ಮಹಾದ್ವಾರ, ಮೊಮಿನ್ ಪ್ಲಾಟ್, ಅರವಿಂದ ನಗರ, ಚನ್ನಪೇಟ್ ಮುಖ್ಯ ರಸ್ತೆ, ದೋಬಿ ಘಾಟ್, ಕೆ.ಹೆಚ್.ಬಿ ಕಾಲೋನಿ, ಚಟ್ನಿ ಕಾಂಪ್ಲೆಕ್ಸ್, ಶ್ರೀ ನಗರ, ರೈಲ್ವೆ ಕ್ವಾರ್ಟರ್ಸ್, ಕಾರವಾರ ರಸ್ತೆ, ಮೈಕ್ರೋ, ಶಕ್ತಿ ನಗರ, ಅರುಣ್ ಕಾಲೋನಿ, ಸಂಕೇಶ್ವರ್ ಕಾಲೋನಿ, ಶಾ ಎಸ್ಟೇಟ್, ಸಿಲ್ವರ್ ಟೌನ್, ನೆಹರು ನಗರ, ಮಂಜುನಾಥ ನಗರ, ಮಂಜುನಾಥ ನಗರ 2ನೇ ಹಂತ, ಸುರಭಿ ನಗರ, ಪದ್ಮರಾಜ್ ನಗರ, ಪ್ರಿಯದರ್ಶಿನಿ ಕಾಲೋನಿ, ಜೆ.ಪಿ. ನಗರ, ಅಕ್ಷಯ್ ಪಾರ್ಕ್, ವೆಂಕಟೇಶ್ವ ಕಾಲೋನಿ, ಅರ್ಜುನ್ ವಿಹಾರ, ಬಿಗ್ ಬಜಾರ್, ಇಂದ್ರಪ್ರಸ್ಥ, ಅಕ್ಷಯ್ ಸೆಂಟರ್, ಕುರ್ಡೇಕರ್ ಪ್ಲಾಟ್, ಎಂ. ಟಿ ಸಾಗರ 2ನೇ ಹಂತ, ಬಿ.ಎಸ್.ಎನ್.ಎಲ್ ಎಕ್ಸಚೆಂಜ್, ಗುರುನಾಥ ನಗರ, ಸಂಗಮ್ ಕಾಲೋನಿ, ಅಭಿನವ ನಗರ, ಶ್ರೀನಿವಾಸ ನಗರ, ಬೇಕರ್ಸ ಕಾಲೋನಿ,. ಸಹದೇವ ನಗರ, ಶಂಭಾಗಿ ಲೇ-ಔಟ್, ರಾಜೇಂದ್ರ ನಗರ, ಎಆರ್‌ಟಿ ನಗರ, ವಿಮಲೇಶ್ವರ ನಗರ, ಭಾರತ್ ನಗರ, ಸಂಭಾಜಿ ಲೇ-ಔಟ್, ಮಯೂರಿ ಗಾರ್ಡನ್, ಪಡದಯ್ಯನ ಹಕ್ಕಲ ಹಾಗೂ ಸುತ್ತಮುತ್ತಲಿನ ಪ್ರದೇಶಗಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೇ 19ಕ್ಕೆ ರಾಜ್ಯಪಾಲರ ಭೇಟಿಗೆ ಅವಕಾಶ


SABU THOMAS

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ಕುರಿತು ಚರ್ಚಿಸಲು ರಾಜ್ಯಪಾಲರು ಮೇ 19 ಮತ್ತು 20ರಂದು ಭೇಟಿಗೆ ಅವಕಾಶ ನೀಡಿದ್ದು, ಈ ಕುರಿತು ಬಂದ ಪತ್ರ ಬಿಜೆಪಿ ಮುಖಂಡರು ಭಾನುವಾರ ಪ್ರತ್ಯೇಕ ಪಾಲಿಕೆ ಹೋರಾಟಗಾರರಿಗೆ ತಲುಪಿಸಿದರು.

ರಾಜ್ಯಪಾಲರ ಭೇಟಿ ಪತ್ರವನ್ನು ಬಿಜೆಪಿ ಮುಖಂಡರಾದ ಮೋಹನ ರಾಮದುರ್ಗ, ಶಿವಾನಂದ ಕವಳಿ ಹಾಗೂ ಅನೇಕರು ಹೋರಾಟಗಾರ ಬಿ.ಡಿ.ಹಿರೇಮಠ, ಕವಿತಾ ಕಬ್ಬೇರ, ರಾಜು ಕಮತಿ, ಬಸವರಾಜ ಜಾಧವ, ವಿಠ್ಠಲ ಕಮ್ಮಾರ ಅವರ ಕೈಗೆ ನೀಡಿದರು.

ಚಾಲಕನಿಗೆ ಜೈಲು

ಧಾರವಾಡ: ಲಾರಿ ಮತ್ತು ಟ್ರ್ಯಾಕ್ಟರ್ ನಡುವಿನ ಅಪಘಾತದಲ್ಲಿ ವ್ಯಕ್ತಿಯ ಸಾವಿಗೆ ಕಾರಣನಾದ ಲಾರಿ ಚಾಲಕ ಪರಮೇಶ್ವರ ಹೊರಕೇರಿ ಎಂಬುವರಿಗೆ ಇಲ್ಲಿನ 2ನೇ ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯವು ಶಿಕ್ಷೆ ವಿಧಿಸಿ ಆದೇಶಿಸಿದೆ.

ನ್ಯಾಯಾಧೀಶ ಮೋಹಿತ್ ಬಿ.ಎಂ. ಅವರು ಪ್ರಕರಣದ ವಿಚಾರಣೆ ನಡೆಸಿ ಒಂದು ವರ್ಷ ಸಾದಾ ಜೈಲು ಶಿಕ್ಷೆ ಹಾಗೂ ರೂ.1 ಸಾವಿರ ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸಹಾಯಕ ಅಭಿಯೋಜಕ ಅಕ್ಷಯ ವಾಲಿ ಅವರು ವಾದ ಮಂಡಿಸಿದ್ದರು. 2015 ಏಪ್ರಿಲ್ 3ಕ್ಕೆ ಧಾ-ಹು ರಾಷ್ಟ್ರೀಯ ಹೆದ್ದಾರಿಯಲ್ಲಿ ಪರಮೇಶ್ವರ ಹೊರಕೇರಿ ಹುಬ್ಬಳ್ಳಿ ಕಡೆಯಿಂದ ಲಾರಿಯನ್ನು ಅತಿ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಟ್ರ್ಯಾಕ್ಟರ್‌ಗೆ ಗುದ್ದಿಸಿದ್ದ. ಈ ವೇಳೆ ಟ್ರ್ಯಾಕ್ಟರ್‌ನಲ್ಲಿದ್ದ ಬಸವರಾಜ ತಿಪ್ಪಣ್ಣಕಟಗಿ ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದರು. ಟ್ರ್ಯಾಕ್ಟರ್ ಚಾಲಕನಿಗೆ ಸಣ್ಣಪುಟ್ಟ ಗಾಯ ಗಳಾಗಿದ್ದವು. ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಾಥಮಿಕ ಚಿಕಿತ್ಸೆ ದೊರೆಯದೆ ಮೃತಪಟ್ಟ ಬಾಲಕ | ಆರೋಪ

ಆಂಬ್ಯುಲೆನ್ಸ್‌ನಲ್ಲಿ ಶವವಿಟ್ಟು ಪ್ರತಿಭಟನೆ

ಕುಂದಗೋಳ: ತಾಲೂಕಿನ ಗುಡಗೇರಿ ಗ್ರಾಮದ ಅಂಬೇಡ್ಕರ್ ನಗರದ ಕಾರ್ತಿಕ ಮಹಾಂತೇಶ ಪೂಜಾರ್ (7) ಎಂಬ ಬಾಲಕನಿಗೆ ವಿದ್ಯುತ್ ತಾಗಿದ್ದು ಪ್ರಾಥಮಿಕ ಚಿಕಿತ್ಸೆ ದೊರೆಯದೆ ಸಾವನ್ನಪ್ಪಿದ್ದಾನೆ ಎಂದು ಆರೋಪಿಸಿ 9 ಗಂಟೆಗಳು ಪ್ರತಿಭಟಿಸಿದ ಘಟನೆ ಶನಿವಾರ ಜರುಗಿದೆ.

ಗ್ರಾಮದ ಮೈಲಾರಲಿಂಗೇಶ್ವರ ದೇವಸ್ಥಾನ ಬಳಿ ಆಡಲು ಹೋದ ಹುಡುಗನಿಗೆ ವಿದ್ಯುತ್ ತಾಗಿದ್ದರಿಂದ ಸಾವು ಬದುಕಿನ ಮಧ್ಯೆ ಇದ್ದ ಬಾಲಕನನ್ನು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಕರೆತಂದಾಗ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆ ಸಿಗದೇ ಹಾಗೂ ತುರ್ತು ಸೇವೆ ಒದಗಿಸಬೇಕಾದ 108 ಅಂಬುಲೆನ್ಸ್‌ನ ನಿರ್ಲಕ್ಷ್ಯದಿಂದ ದಾರಿಮಧ್ಯೆಯೇ ಮೃತಪಟ್ಟನು ಎಂದು ಆರೋಪಿಸಿದ ಗ್ರಾಮಸ್ಥರು ಹಾಗೂ ಮೃತನ ಸಂಬಂಧಿಕರು ಆಂಬ್ಯುಲೆನ್ಸ್‌ನಲ್ಲಿಯೇ ಶವವನ್ನಿಟ್ಟು ಪ್ರತಿಭಟನೆ ಆರಂಭಿಸಿ ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ವೈದ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿದರು

ಈ ಘಟನೆಗೆ ಆರೋಗ್ಯ ಇಲಾಖೆಯ ನಿರ್ಲಕ್ಷ್ಯ ಹಾಗೂ ಅಂಬುಲೆನ್ಸ್ ಸಿಬ್ಬಂದಿಯ ಬೇಜವಾಬ್ದಾರಿತನವೇ ನೇರ ಕಾರಣವಾಗಿದ್ದು ಅವರನ್ನು ಅಮಾನತುಗೊಳಿಸಬೇಕು. ಮೃತರ ಬಾಲಕನಿಗೆ ಪರಿಹಾರ ನೀಡಬೇಕೆಂದು ಪಟ್ಟು ಹಿಡಿದು ಲಕ್ಷ್ಮೇಶ್ವರ - ಹುಲಗುರ ರಸ್ತೆ ತಡಿದು ಪ್ರತಿಭಟನೆ ಆರಂಭಿಸಿದರು. ಸ್ಥಳಕ್ಕೆ ಆಗಮಿಸಿದ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ ಪ್ರತಿಭಟನಾಕಾರರನ್ನು ಮನವೊಲಿಸಲು ಪ್ರಯತ್ನಿಸಿದರು. ಗುಡಗೇರಿ ಆಸ್ಪತ್ರೆಗೆ ಕೊರತೆಯಿರುವ ವೈದ್ಯರನ್ನು ನೇಮಕ ಮಾಡಿಕೊಡುವುದು, ಸದ್ಯ ನಿರ್ಲಕ್ಷ್ಯ ತೋರಿದ ವೈದ್ಯರನ್ನು ಬೇರೆಡೆಗೆ ವರ್ಗಾಯಿಸುವುದು ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಜಿಲ್ಲಾ ವೈದ್ಯಾಧಿಕಾರಿ ಎ.ಎಚ್. ಹೊರಕೇರಿ ಅವರಿಂದ 1 ಲಕ್ಷ ಹಾಗೂ ತಮ್ಮ ಕಡೆಯಿಂದ 50 ಸಾವಿರ ಸೇರಿ ಒಟ್ಟು 1.50 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದರೂ ಪ್ರತಿಭಟನಾಕಾರರು ಇದಕ್ಕೆ ಒಪ್ಪಲಿಲ್ಲ. ಬಳಿಕ ಪ್ರತಿಭಟನೆಯನ್ನು ತೀವ್ರಗೊಳಿಸಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನಿಟ್ಟು ಧರಣಿ ಮುಂದುವರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ವೈದ್ಯಾಧಿಕಾರಿ ಎಸ್.ಎಂ. ಹೂನಕೇರಿ, ತಾಲೂಕು ವೈದ್ಯಾಧಿಕಾರಿ ಮಂಜುನಾಥ ಸೊಪ್ಪಿನ ಮಠ, ಡಿವೈಎಸ್ಪಿ ವಿನೋದ ಮುಕ್ತೇದಾರ, ತಹಶೀಲ್ದಾರ್ ರಾಜು ಮಾವರಕರ, ಸಿಪಿಐ ಸಮೀರ್ ಮುಲ್ಲಾ, ಪಿಎಸ್‌ಐ ಪ್ರವೀಣ ನೇಸರ್ಗಿ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ದಲಿತ ಮುಖಂಡರು ಇದ್ದರು.



- ಡಿಸಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಸ್ಥಳಕ್ಕೆ ಆಗಮಿಸಿ ಸ್ಪಷ್ಟನೆ ಹೇಳುವರಿಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು
- ತಹಶೀಲ್ದಾರ್ ರಾಜು ಮಾವರಕರ್ ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರಾದರೂ, ನಿಲ್ಲದ ಪ್ರತಿಭಟನೆ

ಸೂಕ್ತ ಪರಿಹಾರದ ಭರವಸೆ

ಪ್ರತಿಭಟನಕಾರ ಜೊತೆಗೆ ಮಾತನಾಡಿದ ಎಸಿ ಶಾಲಂ ಹುಸೇನ್, ಮುಖ್ಯಮಂತ್ರಿಗಳ ವಿಶೇಷ ಪರಿಹಾರ ನಿಧಿಯಲ್ಲಿ ಪರಿಹಾರ ಕಲ್ಪಿಸಲಾಗುವುದು. ಘಟನೆಗೆ ಸಂಬಂಧಪಟ್ಟ ವೈದ್ಯರು ಹಾಗೂ ಸಿಬ್ಬಂದಿ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಮೇ 18ರಂದು ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಸಭೆ ನಡೆಸಿ ಸೂಕ್ತ ಪರಿಹಾರ ನೀಡುವುದಾಗಿ ಹೇಳಿದ ಬಳಿಕ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆ ಹಿಂಪಡಿದರು.

ವರ್ಗಾವಣೆಗೆ ಸೂಚನೆ

ಘಟನೆ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ವೈದ್ಯಾಧಿಕಾರಿ ಎ.ಎಚ್. ಹೊರಕೇರಿ, ನಮ್ಮ ವ್ಯಾಪ್ತಿಯಲ್ಲಿ ವೈದ್ಯಾಧಿಕಾರಿಗಳ ಕೊರತೆಯಿದೆ. ಈ ಕುರಿತು ವಾರದಲ್ಲಿ ಎರಡು ಬಾರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಇರುವ ವೈದ್ಯರಲ್ಲೇ ಎಲ್ಲಾ ವ್ಯವಸ್ಥೆ ಮಾಡಿಸಬೇಕಾಗಿದ್ದರಿಂದ ತೊಂದರೆ ಉಂಟಾಗಿದೆ. ಸಂಬಂಧಪಟ್ಟವರನ್ನು ವರ್ಗಾಯಿಸಲು ಸೂಚಿಸಿದ್ದು, ನಾಳೆಯಿಂದಲೇ ಸೂಕ್ತ ವೈದ್ಯರನ್ನು ನಿಯೋಜಿಸಲಾಗುವುದು ಎಂದರು.

ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಜ್ಯುಬ್ಲಿ ವೃತ್ತ ಬಂದ್

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆಯುತ್ತಿದ್ದು, ಮೂರನೇ ದಿನಕ್ಕೆ ಕಾಲಿಟ್ಟ ಸತ್ಯಾಗ್ರಹವು ಭಾನುವಾರ ಜ್ಯುಬ್ಲಿ ವೃತ್ತ ಬಂದ್ ಮಾಡುವ ಮೂಲಕ ಪ್ರತ್ಯೇಕ ಪಾಲಿಕೆ ರಚನೆಗೆ ಒತ್ತಾಯ ಮಾಡಿತು. ಜ್ಯುಬ್ಲಿವೃತ್ತದಲ್ಲಿ ಮಾನವ ಸರಪಳಿ ರಚಿಸಿ ದಾಂಡೇಲಿ, ಹುಬ್ಬಳ್ಳಿ, ಬೆಳಗಾವಿ ಮತ್ತು ಮಾರುಕಟ್ಟೆ ರಸ್ತೆ ತಡೆ ನಡಸಿದರು.

ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ನನ್ನ ಹೋರಾಟದ ಜೀವನದಲ್ಲಿ ಬಹಳ ಪತ್ರ ಕಂಡಿದ್ದೇನೆ. ಇಂತಹ ಪತ್ರಗಳಿಗೆ ಬೆಲೆ ಇಲ್ಲ, ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿ ಇದ್ದರೆ ರಾಜ್ಯಪಾಲರ ಅಂಕಿತ ಹಾಕಿಸಿ, ಪ್ರತ್ಯೇಕ ಪಾಲಿಕೆ ಘೋಷಿಸಲಿ ಎಂದರು.

ಮುಖಂಡ ಅರವಿಂದ ಏಗನಗೌಡರ ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರಿಗೆ ಒತ್ತಡ ಹೇರಿದ ಸಚಿವ ಪ್ರಹ್ಲಾದ್ ಜೋಶಿ, ಶಾಸಕ ಅರವಿಂದ ಬೆಲ್ಲದ ಅವರು ಪತ್ರ ರಾಜಕರಣ ಹಾಗೂ ದ್ವಂದ್ವ ನೀತಿ ಕೈಬಿಡಬೇಕು. ಯಾರದೋ ರಾಜಕೀಯ ಹಿತಾಸಕ್ತಿಗೆ ಅಥವಾ ಪತ್ರದ ಸುಳ್ಳು ಭರವಸೆಗಳಿಗೆ ಮಣಿದು ಹೋರಾಟ ಕೈಬಿಡುವ ಪ್ರಶ್ನೆಯೇ ಇಲ್ಲ, ಅಧಿಕೃತವಾಗಿ ಧಾರವಾಡ ಪ್ರತ್ಯೇಕ ಪಾಲಿಕೆ ಘೋಷಣೆಯಾಗುವವರೆಗೂ ಈ ಹೋರಾಟ ನಿಲ್ಲಿಸಲ್ಲ ಎಂದು ಎಚ್ಚರಿಸಿದರು.

ಬ್ಲಾಕ್ ಕಾಂಗ್ರೆಸ್-71ರ ಅಧ್ಯಕ್ಷ ಈಶ್ವರ ಶಿವಳ್ಳಿ ಮಾತನಾಡಿ, ರಾಜ್ಯ ಸರ್ಕಾರ ಒಪ್ಪಿಗೆ ನೀಡಿದ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಕಡತ ರಾಜಭವನ ತಲುಪಿದೆ. ಈ ಕಡತಕ್ಕೆ ಸಹಿ ಹಾಕುವುದು ತಡೆದ ಪ್ರಹ್ಲಾದ್ ಜೋಶಿ, ಈಗ ರಾಜ್ಯಪಾಲರ ಭೇಟಿಗೆ ಸಮಯ ಕೋರಿ ಪತ್ರ ಬರೆದಿರುವುದು ಹಾಸ್ಯಾಸ್ಪದ. ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರ ಸಹಿ ಹಾಕಿಸಬೇಕು ಎಂದರು.

ನಿವೃತ್ತ ನೌಕರರ ರಾಜ್ಯ ಸಂಘ, ದಲಿತ ಸಂಘರ್ಷ ಸಮಿತಿ, ಜಯ ಕರ್ನಾಟಕ ಸಂಘಟನೆ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ ಶೆಟ್ಟಿ ಮತ್ತು ವಿವಿಧ ಪ್ರಗತಿಪರ ಸಂಘಟನೆಗಳು ಬೆಂಬಲಿಸಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಒತ್ತಾಯಿಸಿದವು.

ಪರಮೇಶ ಕಾಳೆ, ಲಕ್ಷ್ಮಣ ಬಕ್ಕಾಯಿ, ಪಾಲಿಕೆ ಸದಸ್ಯರಾದ ಪ್ರಕಾಶ ಘಾಟಗೆ, ಶಂಭು ಸಾಲಮನಿ, ಕವಿತಾ ಕಬ್ಬೇರ, ಮಹಾದೇವ ಹೊರಟ್ಟಿ, ಎಸ್.ಸಿ.ನೀರಾವರಿ, ದಾನಪ್ಪ ಕಬ್ಬೇರ, ಡಾ.ಬಾಳಣ್ಣ ಶೀಗಿಹಳ್ಳಿ ಸೇರಿ ಅನೇಕರು ಪಾಲ್ಗೊಂಡಿದ್ದರು.



ಅನುಮತಿ ಬೇಡ, ಪ್ರತ್ಯೇಕತೆ ಬೇಕು: ಚಿಂಚೋರೆ

ಧಾರವಾಡ: ಪ್ರತ್ಯೇಕ ಪಾಲಿಕೆಯ ವಿಷಯದಲ್ಲಿ ಪ್ರಹ್ಲಾದ್ ಜೋಶಿ ಹಾಗೂ ಶಾಸಕ ಅರವಿಂದ ಬೆಲ್ಲದ ಉಲ್ಟಾ ಹೊಡೆಯುವ ಮೂಲಕ ಜನರಿಗೆ ಅನ್ಯಾಯ ಮಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ದೀಪಕ್ ಚಿಂಚೋರೆ ಆರೋಪಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರತ್ಯೇಕ ಪಾಲಿಕೆಗೆ ರಾಜ್ಯ ರಾಜ್ಯಪಾಲರ ಸಹಿಗೆ ಕಳುಹಿಸಿದ ಕಡತ ತಡೆ ಹಿಡಿದ ಪ್ರಹ್ಲಾದ್ ಜೋಶಿ ಹಾಗೂ ಅರವಿಂದ ಬೆಲ್ಲದ ಈಗ ರಾಜ್ಯಪಾಲರ ಅನುಮತಿ ಕೋರಿಕೆ ಪತ್ರ ನಾಟಕ ಎಂದು ದೂರಿದರು.

ಒಂದಡೆ ಬೃಹತ್ ಪಾಲಿಕೆ ನಿರ್ಣಯ ಅಂಗೀಕಾರಕ್ಕೆ ಸೂಚಿಸಿದ ಪ್ರಹ್ಲಾದ್ ಜೋಶಿ ಮತ್ತು ಶಾಸಕ ಅರವಿಂದ ಬೆಲ್ಲದ, ಮತ್ತೊಂದಡೆ ಜನತೆಯ ಕಣ್ಣಿಗೆ ಮಣ್ಣೆರಚಲು ರಾಜ್ಯಪಾಲರ ಭೇಟಿಗೂ ಪತ್ರ ಬರೆದು, ಅನುಮತಿ ಕೋರಿರುವುದು ಹಾಸ್ಯಾಸ್ಪದ. ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರ ಅಂಕಿತವೂ ಹಾಕಿಸಬೇಕು. ಇಲ್ಲವಾದಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

> **ಮೇ 22ರಂದು ಎಐಸಿಸಿ ಸದಸ್ಯ ದೀಪಕ್ ಚಿಂಚೋರೆ ಜನ್ಮದಿನದ ಅಂಗವಾಗಿ ಪ್ರತ್ಯೇಕ ಮಹಾನಗರ ಪಾಲಿಕೆ ಕುರಿತು ವಾರ್ಡ್‌ವಾರು ಜನಜಾಗೃತಿ ಅಭಿಯಾನ ನಡೆಸಲಾಗುವುದು. ಮುಂಬರುವ ದಿನಗಳಲ್ಲಿ ಪ್ರಹ್ಲಾದ್ ಜೋಶಿ ಹಾಗೂ ಅರವಿಂದ ಬೆಲ್ಲದ ಮನೆವರೆಗೂ ಪಾದಯಾತ್ರೆ ಮಾಡುತ್ತೇವೆ.**
> ■ **ಎಚ್.ಎಂ.ರಾಜು, ಅಧ್ಯಕ್ಷ, ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕ**

ಸುದ್ದಿಗೋಷ್ಠೀಯಲ್ಲಿ ಪಾಲಿಕೆ ಸದಸ್ಯರಾದ ಶಂಭು ಸಾಲಮನಿ, ಮಹೇಬೂಬ್ ಖಾನ್ ಫಠಾಣ, ಹು-ಧಾ 74ರ ಗ್ಯಾರಂಟಿ ಸಮಿತಿ ಅಧ್ಯಕ್ಷ ಆನಂದ ಮೂಶಣ್ಣವರ, ಮಂಜುನಾಥ ಭೋವಿ, ವೀರಣ್ಣ ಶೆಟ್ಟರ್, ಸೂರಜ್ ಗೌಳಿ ಇದ್ದರು.



ನಗರ ಸ್ವಚ್ಛತೆಗೆ ಸರ್ವರೂ ಸಹಕರಿಸಲಿ: ಶಾಸಕ ಮಹೇಶ ಟೆಂಗಿನಕಾಯಿ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವಾರ್ಡ್ ನಂಬರ್ 42ರ ಜಾವೂರ್ ಬಡಾವಣೆಯಲ್ಲಿ ಭಾನುವಾರ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಶಾಸಕ ಮಹೇಶ ಟೆಂಗಿನಕಾಯಿ ಅವರ ಮುದ್ದಾಳತ್ವದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಮಹೇಶ ಟೆಂಗಿನಕಾಯಿ ಅವರು, ಪ್ರತಿ ತಿಂಗಳು ಮೊದಲನೇ ಭಾನುವಾರ ಹಾಗೂ ಮೂರನೇ ಭಾನುವಾರ ಸೆಂಟ್ರಲ್ ಕ್ಷೇತ್ರದಲ್ಲಿ ನಿರಂತರ ಸ್ವಚ್ಛತಾ ಕಾರ್ಯ ನಡೆಯುತ್ತಾ ಬಂದಿದ್ದು, ಯುವ ಅಧ್ಯಕ್ಷ ಮುತ್ತು ಹೆಬ್ಬಳ್ಳಿ ಹಾಗೂ ಪದಾಧಿಕಾರಿಗಳು ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ ಎಂದರು.



ಹುಬ್ಬಳ್ಳಿ ನಗರ ಅಂದ ಚಂದ ವಾಗಿರಲು ನಾವು ಅನುಸರಿಸಬೇಕಾದ ಸ್ವಚ್ಛತೆ ಕಾರ್ಯವು ಅತಿ ಮುಖ್ಯವಾಗಿದ್ದು ಜೊತೆ ಜೊತೆಗೆ ಅವಳಿ ನಗರ ಸಹಕಾರ ಹಾಗೂ ಯುವ ಜನತೆಯ ಸಹಕಾರ ಕಾರ್ಯವೂ ಮುಖ್ಯವಾಗಿದೆ. ಕೇವಲ ಮಹಾನಗರ ಪಾಲಿಕೆಯವರು ಒಂದು ಕಸವನ್ನು ಗುಡಿಸುತ್ತಾರೆ ಎಂದು ನಾವು ಸುಮ್ಮನೆ ಕೂರುವುದು ಸರಿಯಲ್ಲ. ನಮ್ಮ ನಗರ ನಮ್ಮ ಓಣಿ ಪರಿಸರವನ್ನು ಸ್ವಚ್ಛವಾಗಿಡಲು ನಾವೆಲ್ಲರೂ ಪ್ರಯತ್ನಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಯುವ ಮೋರ್ಚಾ ಅಧ್ಯಕ್ಷ ಮುತ್ತು ಹೆಬ್ಬಳ್ಳಿ, ರಾಮನಗೌಡ ಶಟ್ಟನಗೌಡರ್, ಮಂಜುನಾಥ ಊಟ ವಾಲೆ, ಅಶೋಕ ವಾಲ್ಮೀಕಿ, ಪ್ರವೀಣ ಬೆಳಗಲಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಡಾ. ಬಾಬು ಜಗಜೀವನ ರಾಮ್ ಆದರ್ಶ ಅಳವಡಿಸಿಕೊಳ್ಳಿ: ಎಂ.ಆರ್. ಪಾಟೀಲ

ಕುಂದಗೋಳ: ಡಾ. ಬಾಬು ಜಗಜೀವನ ರಾಮ್ ಅವರು ಹಾಕಿಕೊಟ್ಟ ಆದರ್ಶ ತತ್ವಗಳನ್ನು ಇಂದಿನ ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಸಂಘಟನೆಗೆ ಮುಂದಾಗಬೇಕು ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ಪಟ್ಟಣದ ಅಂಬೇಡ್ಕರ್ ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ಬಾಬು ಜಗಜೀವನರಾಮ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿ, ಸಮಾಜದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನು ಸಬಲರನ್ನಾಗಿಸಬೇಕು. ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ರೂಪಿಸಬೇಕು. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸದೃಢರಾಗುವಂತೆ ಹೇಳಿದರು.

ಮಾಜಿ ಶಾಸಕಿ ಕುಸುಮಾವತಿ ಶಿವಳ್ಳಿ, ಮುಖಂಡರಾದ ಅರವಿಂದ ಕಟಗಿ ಹಾಗೂ ಚಂದ್ರಶೇಖರ ಜುಟ್ಟಲ್ ಮಾತನಾಡಿ, ಜಗಜೀವನರಾಮ್ ಸಮುದಾಯ ಭವನವು ಬಡಜನರಿಗೆ ಹಾಗೂ ಸಮಾಜದ ಕಾರ್ಯಕ್ರಮಗಳಿಗೆ ಸದುಪಯೋಗವಾಗಲಿ ಎಂದರು.

ಕಲ್ಯಾಣಪೂರ ಬಸವಣ್ಣಜ್ಜನವರು ಹಾಗೂ ಶಿವಾನಂದ ಮಠದ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ತಹಶೀಲ್ದಾರ್ ರಾಜು ಮಾವರಕರ, ಸಮಾಜ ಕಲ್ಯಾಣಾಧಿಕಾರಿ ಮೀನಾಕ್ಷಿ ಗುದಗಿ, ಕೃಷಿ ಇಲಾಖೆಯ ರೇಣುಕಾ ಗಡ್ಡದ, ಗ್ಯಾರಂಟಿ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಕೆಸಿಸಿ ಬ್ಯಾಂಕ್ ಪ್ರತಿನಿಧಿ ಉಮೇಶ ಹೆಬಸೂರ, ಬಸಪ್ಪ ಮಾದರ, ಮಾಲತೇಶ ಶಾಗೋಟಿ, ಈರಪ್ಪ ನಾಗಣ್ಣವರ, ಬಸವರಾಜ ದೊಡಮನಿ, ಮಂಜುನಾಥ ತಳಗೇರಿ, ರಾಮಣ್ಣ ಪೂಜಾರ, ಹನುಮಂತಪ್ಪ ಮೇಲಿನಮನಿ, ಬಸವರಾಜ ನಾಗಣ್ಣವರ, ಹೊನ್ನಪ್ಪ ದೊಡಮನಿ, ಅನೀಲ್ ಸೇರಿದಂತೆ ಅನೇಕ ಸಮಾಜ ಬಾಂಧವರು ಭಾಗವಹಿಸಿದ್ದರು.



ಯುವಜನರಲ್ಲಿ ಕ್ರೀಡಾ ಆಸಕ್ತಿ ಹೆಚ್ಚಲಿ



ನವಲಗುಂದ: ತಾಲೂಕಿನ ಶಲವಡಿ ಗ್ರಾಮದಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಯುವಕರಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ನಾಮಾಂಕಿತ ನಮೋ ಕ್ರಿಕೆಟ್ ಟೂರ್ನಮೆಂಟ್ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಆಯೋಜಕ, ಬಿಜೆಪಿ ಮುಖಂಡ ದೇವರಾಜ ಬ. ಧಾಡಿಬಾವಿ ಮಾತನಾಡಿ, ಹಳ್ಳಿಗಳು ಹಾಗೂ ಸಣ್ಣ ಪಟ್ಟಣಗಳ ಯುವ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸಿ ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹಿಸಲಾಗುವುದು. ಯುವಜನರಲ್ಲಿ ಕ್ರೀಡಾ ಆಸಕ್ತಿ ಹೆಚ್ಚಿಸುವುದು ಮತ್ತು ಫಿಟ್‌ನೆಸ್ ಕಾಪಾಡಿಕೊಳ್ಳಲು ಪ್ರೇರೇಪಿಸುವುದಾಗಿದೆ. ಯುವಕರು ಹೆಚ್ಚಿನ ತಂಡಗಳನ್ನು ಕಟ್ಟಿ ಕ್ರೀಡಾಕೂಟದಲ್ಲಿ ಭಾಗವಹಿಸುವಂತೆ ವಿನಂತಿಸಿದರು.

ಮುಖಂಡ ಸಿದ್ದನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯುವಕರಲ್ಲಿ ನಾಯಕತ್ವ ಗುಣ, ದೈಹಿಕ ಹಾಗೂ ಮಾನಸಿಕ ಸದೃಢತೆ ಬೆಳೆಸಲು ಕ್ರೀಡೆ ಅತ್ಯಂತ ಅವಶ್ಯಕವಾಗಿದೆ. ಈ ವೇದಿಕೆಯು ನಿಮ್ಮಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಉತ್ತಮ ಅವಕಾಶವಾಗಿದೆ. ಎಲ್ಲರೂ ಕ್ರೀಡಾಸ್ಫೂರ್ತಿಯಿಂದ ಪಾಲ್ಗೊಳ್ಳಬೇಕೆಂದರು.

ಈ ವೇಳೆ ಬಿ.ಎಫ್. ರೋಣದ, ಶ್ರೀಶೈಲಪ್ಪ ಹುಯಿಲಗೋಳ, ಮಲ್ಲಿಕಾರ್ಜುನ ಹಳ್ಳಿ, ಶ್ರೀಶೈಲ ಬಸವರಡ್ಡಿ, ಉಮೇಶ ಶಿರೋಳ, ರುದ್ರಗೌಡ ಎಮ್ಮಿ, ವಿ.ಬಿ.ಸಾಮ್ರಾಣಿ, ಬಸವರಾಜ ಗುಳೇದ, ಶರಣಪ್ಪ ಪರವಣ್ಣವರ, ರವಿಕುಮಾರ ಸವದತ್ತಿ, ಮಹೇಶ ತೋಟರ, ಶಂಭು ನಡುವಿನಹಳ್ಳಿ ಸೇರಿದಂತೆ ಸ್ಪರ್ಧಾಳುಗಳು ಉಪಸ್ಥಿತರಿದ್ದರು.

ಮದ್ಯವರ್ಜನ ಶಿಬಿರ ಉದ್ಘಾಟನೆ

ಹುಬ್ಬಳ್ಳಿ: ವ್ಯಕ್ತಿ ಅಭಿವೃದ್ಧಿ ಹೊಂದಿದರೆ ಕುಟುಂಬ ಅಭಿವೃದ್ಧಿಯಾಗುತ್ತದೆ. ಕುಟುಂಬ ಅಭಿವೃದ್ಧಿಯಾದರೆ ಗ್ರಾಮ ಅಭಿವೃದ್ಧಿಯಾಗುತ್ತದೆ ಎಂಬ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಕಲ್ಪನೆಯಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಬೇಕೆಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಧಾರವಾಡ ಜಿಲ್ಲೆಯ ನಿರ್ದೇಶಕ ಹನುಮಂತ ನಾಯ್ಕ ಹೇಳಿದರು.

ಹುಬ್ಬಳ್ಳಿ ಗ್ರಾಮೀಣ ತಾಲೂಕಿನ ಉಣಕಲ್‌ನಲ್ಲಿ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್, ಬೆಳ್ತಂಗಡಿ ವತಿಯಿಂದ ಆಯೋಜಿಸಿದ್ದ 2055ನೇ ಸಮುದಾಯ ಮದ್ಯವರ್ಜನ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನ ನಿಕಟಪೂರ್ವ ರಾಜ್ಯ ಸಂಘಟನಾ ಅಧ್ಯಕ್ಷ ರಾಜಣ್ಣ ಕೊರವಿ ಹಾಗೂ ಜನಜಾಗೃತಿ ವೇದಿಕೆ ಸದಸ್ಯ ಡಾ.ರಮೇಶ್ ಮಹಾದೇವಪ್ಪನವರ ಶಿಬಿರಕ್ಕೆ ಚಾಲನೆ ನೀಡಿದರು. ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಧಾರವಾಡ ಜಿಲ್ಲಾ ಸಂಘಟನಾ ಅಧ್ಯಕ್ಷ ವಸಂತ್ ಅರ್ಕಾಚಾರಿ, ನವನಗರ ಕ್ಯಾನ್ಸರ್ ಆಸ್ಪತ್ರೆಯ ವೈದ್ಯ ಡಾ. ಉಮೇಶ್ ಹಳ್ಳಿಕೆರೆ, ಮಾರುತಿ ಶೇಟ್, ಎಸ್.ಎಸ್. ಪಾಟೀಲ್ ಹಾಗೂ ಸ್ವಪ್ನ ಹಿರೇಮಠ ಉಪಸ್ಥಿತರಿದ್ದರು.



ಪರಿಶ್ರಮವೇ ಯಶಸ್ಸಿನ ಮೂಲ



ಹುಬ್ಬಳ್ಳಿ: ಪರಿಶ್ರಮವೇ ನಿಮ್ಮ ಯಶಸ್ಸಿಗೆ ಮೂಲ. ಇಂದು ನಾವು ಸೇವಿಸುವ ಆಹಾರ, ನೀರು, ಗಾಳಿ ಮುಂತಾದವುಗಳಿಂದ ಹಲವಾರು ರೋಗಗಳು ಉಂಟಾಗುತ್ತಿದ್ದು, ಮಾರಕ ಕಾಯಿಲೆಗಳಾದ ಕ್ಯಾನ್ಸರ್, ಬಿ. ಪಿ. ಇಂದಿಗೂ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿಲ್ಲ, ಇವುಗಳಿಗೆ ಸಂಶೋಧನೆ ನಡೆಸಿ ಪರಿಹಾರ ಕಂಡು ಹಿಡಿಯಬೇಕು ಎಂದು ಬೆಂಗಳೂರಿನ ಸಂಶೋಧನಾ ಸಂಸ್ಥೆ ಸಿ.ಈ.ಎನ್.ಎಸ್.ನ ಪ್ರಖ್ಯಾತ ವಿಜ್ಞಾನಿ, ಡಾ.ರಾಜರಾಮಣ್ಣ ಪ್ರಶಸ್ತಿ ಪುರಸ್ಕೃತ ಪ್ರೊ. ಸಿ.ವಿ. ಏಳುಮಗ್ಗದ ಹೇಳಿದರು. ಇಲ್ಲಿಯ ಎಸ್. ಕೆ. ಟಿ. ಸಾರಥಿ ಪಿ.ಯು. ವಿಜ್ಞಾನ . ಕಾಲೇಜು ಇವರು ಉಣಕಲ್ಲಿನ ಶ್ರೀನಗರ ಶಾಲೆಯ ಮೈದಾನದಲ್ಲಿ ಏರ್ಪಡಿಸಿದ್ದ ಧಾರವಾಡ ಜಿಲ್ಲೆಯ ಎಸ್.ಎಸ್.ಎಲ್.ಸಿ. 2026ರ ಪರೀಕ್ಷೆಯಲ್ಲಿ ಶೇ.90ಕ್ಕೂ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತರನ್ನು ಸನ್ಮಾನಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು. ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ, ಮನೋಚಿಕಿತ್ಸಕ ಡಾ. ಆನಂದ ಪಾಂಡುರಂಗಿ ಮಾತನಾಡಿ, ನಿಮ್ಮ ಕನಸನ್ನು ಮಕ್ಕಳ ಮೇಲೆ ಹೇರಬೇಡಿ. ಮಕ್ಕಳ ಕನಸನ್ನೆ ನಿಮ್ಮ ಕನಸನ್ನಾಗಿಸಿ ಅವರನ್ನು ಪ್ರೇರೇಪಿಸಿ ಎಂದರು. ಹೈದರಾಬಾದನ ಹೆಸರಾಂತ ಐ.ಸಿ.ಎಂ.ಆರ್.ನ ವಿಜ್ಞಾನಿ ಮಂಜುನಾಥ , ಹು-ಧಾ ಮಹಾನಗರ ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಮಾತನಾಡಿದರು. ಸಂಸ್ಥೆಯ ಮಾರ್ಗದರ್ಶಕ ಪ್ರೊ. ಪಿ. ಎಸ್. ಹೆಗಡಿ ಪ್ರಾಸ್ತಾವಿಸಿದರು. ಸಂಸ್ಥೆಯ ಅಧ್ಯಕ್ಷ ಎಲ್.ಪಿ.ಹೆಗಡಿ, ಶ್ರೀನಗರ ಸೊಸೈಟಿ ಅಧ್ಯಕ್ಷ ಡಿ. ಎನ್. ಮುತಾಲಿಕ ಇತರರಿದ್ದರು. ಪ್ರಾಚಾರ್ಯ ಆರ್.ವಿ.ಜಹಗಿರದಾರ ಸ್ವಾಗತಿಸಿದರು. ಉಪನ್ಯಾಸಕಿ ಸಹನಾ ನಂದಿ ವಂದಿಸಿದರು. ಅಮೃತಾ ನಿರೂಪಿಸಿದರು.

ವೃದ್ಧಾಶ್ರಮದಲ್ಲಿ ಹಣ್ಣು ಹಂಪಲು ವಿತರಣೆ

ಹುಬ್ಬಳ್ಳಿ: ನಗರದ ಕೇಶವಪುರದಲ್ಲಿರುವ ಸ್ನೇಹ ಸದನ ವೃದ್ಧಾಶ್ರಮದಲ್ಲಿ ವಿಶ್ವ ಕುಟುಂಬ ದಿನಾಚರಣೆ ಪ್ರಯುಕ್ತ ಎಸ್‌ಎಸ್ ಶೆಟ್ಟರ್ ಫೌಂಡೇಶನ್ ವತಿಯಿಂದ ವೃದ್ಧಾಶ್ರಮದಲ್ಲಿರುವವರಿಗೆ ಹಣ್ಣು ಹಂಪಲು ವಿತರಣೆ ಮಾಡಿ ಬಿಜೆಪಿ ಮುಖಂಡ ಸಂಕಲ್ಪ ಶೆಟ್ಟರ್ ವಿಶ್ವ ಕುಟುಂಬ ದಿನಾಚರಣೆಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭವ್ಯ ಭಾರತದ ಪರಂಪರೆಯು ವಸುದೈವ ಕುಟುಂಬಕಂ ಎನ್ನುವ ತತ್ವದ ಅಡಿಯಲ್ಲಿ ನಾವೆಲ್ಲರೂ ಒಂದೇ ಯಾರಿಗೂ ಸಹ ಕುಟುಂಬ ಇಲ್ಲ ಇಂದು ಕೊಳ್ಳಬೇಡಿ ನಿಮ್ಮ ಮಗನಾಗಿ ನಿಮ್ಮ ಸೇವೆಯನ್ನು ಮಾಡುವೆ ಎಂದರು.

ಈ ಸಂದರ್ಭದಲ್ಲಿ ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸಾವಕಾರ, ಹು -ಧಾ ಮಾಜಿ ಅಧ್ಯಕ್ಷ ನಾಗೇಶ ಕಲ್ಬುರ್ಗಿ, ಮುಖಂಡರಾದ ವಿರೂಪಾಕ್ಷ ರಾಯನಗೌಡ್ರ, ಶಂಕರ್ ಸುಂಕದ, ಭಾರತಿ ಟಪಾಲ್, ವಿನೋದ ಬಂಕಾಪುರ್, ಜಾವೇದ್ ಖಾನ್, ಜಯಶ್ರೀ ನಿಮಬ್ಬರಗಿ, ಶಿವಪ್ಪ ನಾಗೋಜಿ, ಸಿದ್ದು ಪರಣ್ಣವರ್, ಮಾಂತೇಶ್ ತಾವರೆ, ವಿನಯ್ ಭರಮಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸಾರಿಗೆ
ಮೂರು ವರ್ಷಗಳ ಪ್ರಗತಿಯ ಪಯಣ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹೊಸ ಬಸ್ಸುಗಳ ಸೇರ್ಪಡೆ

7800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ | ಈಗಾಗಲೇ **5998** ಬಸ್ಸುಗಳ ಸೇರ್ಪಡೆ (ಕರಾರಸಾನಿ-**1286** (EV ಬಸ್ - **50**), ಬಿಎಂಟಿಸಿ-**2329** (EV ಬಸ್ - **1730**), ವಾಕರಸಾಸಂ-**1210**, ಕಕರಸಾನಿ-**1173**)



ಶಕ್ತಿ ಗ್ಯಾರಂಟಿ
ಮಹಿಳಾ ಸಬಲೀಕರಣದತ್ತ ಪಯಣ
740 ಕೋಟಿ
ಉಚಿತ ಟಿಕೆಟ್‌ಗಳು
ರೂ. 19349.26
ಕೋಟಿ ಮೌಲ್ಯ



ಪ್ರಾಜೆಕ್ಟ್ ಮೆಜೆಸ್ಟಿಕ್

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ **'ಸಾರಿಗೆ ಹಬ್'** ನಿರ್ಮಾಣಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ

ವೇತನ ಪರಿಷ್ಕರಣೆ

1.05 ಲಕ್ಷ ನೌಕರರಿಗೆ ಶೇ. **12.5** ರಷ್ಟು ವೇತನ ಹೆಚ್ಚಳ | ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು **ರೂ. 72.80** ಕೋಟಿ, ಪ್ರತಿ ವರ್ಷ **ರೂ. 873.64** ಕೋಟಿ ಹೆಚ್ಚುವರಿ ವೆಚ್ಚ

ಮಾರ್ಚ್ 2023 ರ ವೇತನ ಹೆಚ್ಚಳ ಹಿಂಬಾಕಿ

ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ **ರೂ. 1271.92** ಕೋಟಿ ಪಾವತಿಗೆ ಅನುಮೋದನೆ ಮೊದಲ ಕಂತಿನ ಹಣ **ರೂ. 450** ಕೋಟಿ ಬಿಡುಗಡೆ

ಕೆ ಎಸ್ ಆರ್ ಟಿ ಸಿ ಆರೋಗ್ಯ

280ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳಿಗೆ ಹಾಗೂ ಅವಲಂಬಿತರಿಗೆ ಚಿಕಿತ್ಸೆ | ಇಲ್ಲಿಯವರೆಗೆ ಒಟ್ಟು **1,86,973** ಕ್ಲೇಮುಗಳು | **ರೂ. 55.02** ಕೋಟಿ ಪಾವತಿ | ವೈದ್ಯಕೀಯ ಮರುಪಾವತಿ ವೆಚ್ಚ ವಾರ್ಷಿಕ **ರೂ.16** ಕೋಟಿ

ಸಾರಿಗೆ ಸುರಕ್ಷಾ / ಕುಟುಂಬ ಕಲ್ಯಾಣ ವಿಮಾ ಯೋಜನೆ

ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ **ರೂ.1 ಕೋಟಿ** / **ರೂ. 50** ಲಕ್ಷ / **ರೂ. 30** ಲಕ್ಷದಂತೆ **ರೂ. 66.50** ಕೋಟಿ ಪಾವತಿ, ಅಪಘಾತ ಹೊರತು ಪಡಿಸಿ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ **ರೂ. 3** ಲಕ್ಷದಿಂದ **ರೂ. 14** ಲಕ್ಷದವರೆಗೆ ಹೆಚ್ಚಳ, ಒಟ್ಟು **ರೂ. 93.28** ಕೋಟಿ ಪಾವತಿ

ಸಾರಿಗೆ ಮಿತ್ರ (HRMS 2.0)

ನೌಕರರ ರಜೆ ಹಾಗೂ ಹಾಜರಾತಿಯಲ್ಲಿ ಪಾರದರ್ಶಕತೆ / ಏಕರೂಪತೆ, ಸಮಗ್ರ ಸೇವಾ ದಾಖಲಾತಿ, ಭವಿಷ್ಯ ನಿಧಿ ಮಾಹಿತಿ

ಡಿಜಿಟಲ್ ಉಪಕ್ರಮಗಳು

ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಅವತಾರ್ 4.0 | ಶೇ. **52** ರಷ್ಟು UPI ಬಳಕೆ | ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ-ಉಗ್ರಾಣ) | 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್ | ಲ್ಯಾಂಡ್ ಬೀಟ್ ಆಪ್ | ಇ-ವಾಣಿಜ್ಯ | ವಾಯುವ್ಯ ಸ್ನೇಹಿ | ನಮ್ಮ ಕಲಬುರಗಿ | ಅಪಘಾತ ನಿರ್ವಹಣಾ ತಂತ್ರಾಂಶ | ಇ-ಮಳಿಗೆ | ನ್ಯಾಯ ಪಥ



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು

1997-2026	ಮೇ 2023 - ಮೇ 2026
694	**245**

ಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಪ್ರಯಾಣವು ವಿಶ್ವದಾಖಲೆಗಳಲ್ಲಿ ಸೇರ್ಪಡೆ

ಹೊಸ ನೇಮಕಾತಿ

10497 ಹುದ್ದೆಗಳ ನೇಮಕಾತಿ | **9000** ಹೊಸ ನೇಮಕಾತಿ | **1497** ಅನುಕಂಪದ ನೇಮಕಾತಿ ಪೂರ್ಣ

ಬಸ್ಸುಗಳ ಪುನಃಶ್ಚೇತನ ಕಾರ್ಯ

2109 ಬಸ್ಸುಗಳ ಪುನಃಶ್ಚೇತನ ಕಾರ್ಯ

ಬಸ್ ಟ್ರಿಪ್‌ಗಳು

ಪ್ರತಿದಿನದ ಬಸ್ ಟ್ರಿಪ್‌ಗಳ ಸಂಖ್ಯೆ **154955** ರಿಂದ **186506**ಕ್ಕೆ ಹೆಚ್ಚಳ

ಧ್ವನಿ ಸ್ಪಂದನ

ದೃಷ್ಟಿ ವಿಶೇಷ ಚೇತನ ಪ್ರಯಾಣಿಕ ಸ್ನೇಹಿ ಉಪಕ್ರಮ

ತರಬೇತಿ

ಸಂಸ್ಥೆಗಳಲ್ಲಿ ಪರಿಣಾಮಕಾರಿ ತರಬೇತಿ ಕಾರ್ಯಯೋಜನೆ ರೂಪಿಸಿದ್ದು, ಒಂದು ವರ್ಷದ ಅವಧಿಯಲ್ಲಿ **33482** ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ನೂತನವಾಗಿ ನೇಮಕಗೊಂಡ ಚಾಲನಾ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಿದರು

ಮೂಲಸೌಕರ್ಯ ಅಭಿವೃದ್ಧಿ ಕಾರ್ಯ

ಮೈಸೂರು ನಗರದಲ್ಲಿ **ರೂ.120** ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ | ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಸ್ ನಿಲ್ದಾಣ ನಿರ್ಮಾಣ | ರಾಜ್ಯಾದ್ಯಂತ **31** ಬಸ್ ನಿಲ್ದಾಣಗಳು | **12** ಬಸ್ ಘಟಕಗಳು | **12** ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು | **10** ಸಿಬ್ಬಂದಿ ವಸತಿ ಗೃಹಗಳು ಮತ್ತು **02** ತರಬೇತಿ ಕೇಂದ್ರಗಳ ನಿರ್ಮಾಣ / ಮೇಲ್ದರ್ಜೆಗೇರಿಸಲಾಗಿದೆ | **ಸ್ಮಾರ್ಟ್ ಸಿಟಿ ಯೋಜನೆ**ಯಡಿ ಬೆಳಗಾವಿ, ತುಮಕೂರು (ಮೊದಲ ಹಂತ), ದಾವಣಗೆರೆ ಮತ್ತು ಬೇತೂರು ರಸ್ತೆ ಬಸ್ ನಿಲ್ದಾಣಗಳ ಮರುನಿರ್ಮಾಣ

ಬಸ್ಸುಗಳ ಬ್ರ್ಯಾಂಡಿಂಗ್

ಅಶ್ವಮೇಧ | ಪಲ್ಲಕ್ಕಿ | ಅಂಬಾರಿ ಉತ್ಸವ | ಕಲ್ಯಾಣ ರಥ | ಐರಾವತ ಕ್ಲಬ್ ಕ್ಲಾಸ್ 2.0 | ಅಮೋಘವರ್ಷ | ರಾಜ ರಥ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

18,758 ಸಿಬ್ಬಂದಿಗಳಿಗೆ ಹೃದಯ ತಪಾಸಣೆ, **10** ಸಿಬ್ಬಂದಿಗಳಿಗೆ ತೆರೆದ ಹೃದಯ ಚಿಕಿತ್ಸೆ ಹಾಗೂ **42** ಸಿಬ್ಬಂದಿಗಳಿಗೆ ಸ್ಟಂಟ್ ಅಳವಡಿಕೆ, ವೆಚ್ಚ **ರೂ. 50.56** ಲಕ್ಷ ಪಾವತಿ

ಸಾರಿಗೆ ವಿದ್ಯಾ ಚೇತನ / ವಿದ್ಯಾ ಸ್ಫೂರ್ತಿ

ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ ಹೆಚ್ಚಳ ಹಾಗೂ ಇಲ್ಲಿಯವರೆಗೆ **ರೂ. 4.25** ಕೋಟಿ ಪಾವತಿ

ಮೊಬೈಲ್ ಕಾರ್ಯಾಗಾರ/ ಮೆಟ್ರೋ ಫೀಡರ್ ವ್ಯವಸ್ಥೆ

ಅಪಘಾತ ತುರ್ತು ಸ್ಪಂದನ ವಾಹನ | ಸಂಚಾರಿ ಕಾರ್ಯಾಗಾರ ನಿಯೋಜನೆ | **241** ಮೆಟ್ರೋ ಫೀಡರ್ ಬಸ್ಸುಗಳು | **12** ಪ್ಯಾಕೇಜ್ ಟೂರ್ | **142** ಎಕ್ಸ್ ಪ್ರೆಸ್ | **33** ನೈಸ್ ರಸ್ತೆಗಳ ಸೇವೆಗಳು | **10292** ಪ್ರತಿ ದಿನ ಹೆಚ್ಚುವರಿ ಟ್ರಿಪ್‌ಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಮೊಬೈಲ್ ಆ್ಯಪ್ ಮೂಲಕವೇ ಹಾಜರಾತಿ | ಶಾಲಾ ಶಿಕ್ಷಣ ಇಲಾಖೆ ಜಾರಿ

ಶಾಲಾ ಶಿಕ್ಷಕರ ಹಾಜರಾತಿಗೆ ಕಾಮ್ಸ್ ಆ್ಯಪ್

ಎಸ್. ರುದ್ರೇಶ್ವರ

ರಾಮನಗರ: ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರು ಹಾಜರಾತಿಯನ್ನು ಇನ್ನು ಮುಂದೆ ಹಾಜರಾತಿ ಪುಸ್ತಕದಲ್ಲಿ ಹಾಕುವ ಹಾಗಿಲ್ಲ, ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ - ಕಾಮ್ಸ್ (ಕೆ.ಎ.ಎ.ಎಂ.ಎಸ್) ಮೊಬೈಲ್ ಆ್ಯಪ್ ಮೂಲಕವೇ ಹಾಜರಾತಿ ಹಾಕುವ ವ್ಯವಸ್ಥೆಯನ್ನು ಶಾಲಾ ಶಿಕ್ಷಣ ಇಲಾಖೆ ಜಾರಿಗೊಳಿಸಿದೆ.

ಆಡಳಿತದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಕಳೆದ ವರ್ಷವೇ ಸಚಿವರು ಬಯೋಮೆಟ್ರಿಕ್ ಮೂಲಕ ಹಾಜರಾತಿ ದಾಖಲಿಸಲು ಸಿದ್ಧತೆ ನಡೆಸಿದ್ದರು. ಆದರೆ ಎಐ ತಂತ್ರಜ್ಞಾನ ಬಳಕೆ ಹೆಚ್ಚಾಗುತ್ತಲೆ ಈಗ ಆಯುಕ್ತ ಕಚೇರಿ ಶೈಕ್ಷಣಿಕ ವರ್ಷದ ಮೇ 28 ರಿಂದಲೇ ಶಾಲೆಗಳಲ್ಲಿ ಎಐ ತಂತ್ರಾಂಶದ ಮೂಲಕವೇ ಹಾಜರಾತಿ ಹಾಕಲು ಸೂಚನೆ ನೀಡಿ ಸುತ್ತೋಲೆ ಹೊರಡಿಸಿದೆ. ಈಗಾಗಲೇ ರಾಜ್ಯ ಸರ್ಕಾರ ಕಳೆದ ಅದಿವೇಶನದಲ್ಲಿ ತಿಳಿಸಿದಂತೆ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್ ಮೆಂಟ್ ಸಿಸ್ಟಮ್ ಜಾರಿಗೆ ತಂದಿದ್ದು ಇದರ ಭಾಗವಾಗಿ ರಾಜ್ಯದಲ್ಲಿ ಹೆಚ್ಚಿನ ಸರ್ಕಾರಿ ನೌಕರರನ್ನು ಹೊಂದಿರುವ


> **ಶಿಕ್ಷಣ ಇಲಾಖೆಗೆ ಎಐ ಹಾಜರಾತಿ ಅಳವಡಿಕೆಗೆ ಸಿದ್ಧತೆ ನಡೆಸಿವೆ. ಸರ್ಕಾರ ನೌಕರರ ಹಾಜರಾತಿಯಲ್ಲಿ ಪಾರದರ್ಶಕತೆ ತರಲು ಬದಲಾವಣೆ ತಂದಿದೆ. ಶಾಲೆಗಳಲ್ಲಿ ಬಯೋಮೆಟ್ರಿಕ್ ಬದಲು ಎಐ ತಂತ್ರಜ್ಞಾನದ ಮೂಲಕವೇ ಶಿಕ್ಷಕರ ಹಾಜರಾತಿ ಕಡ್ಡಾಯ.**
> ■ ಮಧು ಬಂಗಾರಪ್ಪ, ಶಿಕ್ಷಣ ಸಚಿವ

ಶಿಕ್ಷಣ ಇಲಾಖೆಯ 60,913 ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1.65618 ಲಕ್ಷ ಶಿಕ್ಷಕರಿಗೆ ಮತ್ತು ಬೋಧಕೇತರ ಸಿಬ್ಬಂದಿಗೂ ಎಐ ಆಪ್ ಮೂಲಕವೇ ಹಾಜರಾತಿ ಹಾಕುವ ವ್ಯವಸ್ಥೆ ಜಾರಿಗೊಳಿಸಿದೆ.

ಕಾಮ್ಸ್ (ಕೆಎಎಎಂಎಸ್)ಆ್ಯಪ್: ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ ಭಾಗವಾಗಿ ಕೃತಕ ಬುದ್ಧಿಮತ್ತೆ (ಎಐ)ಮತ್ತುಜಿಯೋ-ಫೆನ್ಸಿಂಗ್ ತಂತ್ರಜ್ಞಾನಗಳನ್ನು ಬಳಸಿ ಅಭಿವೃದ್ಧಿ ಪಡಿಸಿದ ಮೊಬೈಲ್ ಆಪ್‌ನ್ನು ಶಿಕ್ಷಕರು ಡೌನ್ ಲೋಡ್ ಮಾಡಿಕೊಂಡು ಶಿಕ್ಷಕರು ಶಾಲೆ ಆವರಣದೊಳಗಿದ್ದಾಗ ಮಾತ್ರ ಮೊಬೈಲ್ ಬಳಸಿ ಹಾಜರಾತಿ ಹಾಕಬೇಕಿದೆ. ಬೆಳಿಗ್ಗೆ ಶಾಲೆಗೆ ಹಾಜರಾದಾಗ ಮತ್ತು ಶಾಲೆ ಮುಕ್ತಾಯದ ವೇಳೆ ಎರಡು ಬಾರಿ ಹಾಜರಾತಿ ಕಡ್ಡಾಯವಾಗಿದೆ. ಶಿಕ್ಷಕರ ರಜೆ, ಓ.ಓ.ಡಿ ಮುಂತಾದ ಎಲ್ಲಾ ಮಾಹಿತಿಯನ್ನು ಆ್ಯಪ್‌ನಲ್ಲಿಯೇ ದಾಖಲಿಸಬೇಕು. ಹಾಜರಾತಿ ಆ್ಯಪ್‌ನಲ್ಲಿ ಶಿಕ್ಷಕರು ಇರುವ ಸ್ಥಳ, ಶಾಲೆಯ ಜಿಯೋ ಟ್ಯಾಗ್ ಮಾಡಿಕೊಂಡು ಆಪ್‌ನಲ್ಲಿ ಸೂಚಿಸಿದ ಸಮಯದೊಳಗೆ ಲಾಗಿನ್ ಆಗಿ ಹಾಜರಾತಿ ಹಾಕಬೇಕಿದೆ. ಕೇವಲ ಶಾಲೆ ಮಾತ್ರವಲ್ಲದೆ ಶಿಕ್ಷಕರು ಮೌಲ್ಯಮಾಪನ ಮತ್ತು ಇಲಾಖೆಯ ತರಬೇತಿಗಳಿಗೆ ಹೋದಾಗಲೂ ಆ್ಯಪ್ ಮೂಲಕವೇ ಹಾಜರಾತಿ ದಾಖಲಿಸಬೇಕು.

ಈಗಾಗಲೇ ಶಿಕ್ಷಣ ಇಲಾಖೆಯ ಆಯುಕ್ತ ಕಚೇರಿ ಯಶಸ್ವಿ ಪ್ರಯೋಗ ನಡೆಸಿ ಬಳಿಕ ಮೇ.9ರಿಂದಲೇ ರಾಜ್ಯ ಎಲ್ಲಾ ತಾಲೂಕುಗಳಲ್ಲಿಯೂ ಬಿಇಒ ಮತ್ತು ಬಿಆರ್‌ಸಿಗಳ ಮೂಲಕ ಆ್ಯಪ್‌ನ ಬಳಕೆ ಮತ್ತು ಹಾಜರಾತಿ ಹಾಕುವ ಬಗ್ಗೆ ಎಲ್ಲಾ ಶಿಕ್ಷಕರಿಗೂ ತರಬೇತಿಯನ್ನು ಕೊಡುತ್ತಿದೆ. ಕೆಲ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆ ಸಂಘ ಸಂಸ್ಥೆಗಳಲಿದ್ದವರು ಶಾಲೆಗೆ ಅನಧಿಕೃತ ಗೈರಾದರೂ ಮರುದಿನ ಶಾಲಾ ಹಾಜರಾತಿ ಪುಸ್ತಕದಲ್ಲಿ ಮುಖ್ಯ ಶಿಕ್ಷಕರ ಅಡ್ಜಸ್ಟ್‌ಮೆಂಟ್ ಮೇಲೆ ಸಹಿ ಮಾಡಿಕೊಳ್ಳುತ್ತಿದ್ದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಸ್ಪೀಕರ್ ಅವರು ವಿಧಾನಸೌಧದ ಬಾಗಿಲು ಮೆಟ್ಟಿಲುಗಳನ್ನು ಹೊಸದು ಮಾಡಲು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ.ಅದರ ಜೊತೆಗೆ ಮುಖ್ಯ ಮಂತ್ರಿಯವರ ಕುರ್ಚಿಯ ನಟ್ಟು ಬೋಲ್ಟ್ ಕೂಡಾ ರಿಪೇರಿ ಮಾಡಿಸಬೇಕು
-ಶ್ರೀರಾಮುಲು

-ಅದು ಅವರ ವ್ಯಾಪ್ತಿಯಲ್ಲಿ ಇಲ್ಲ, ಅದೇನಿದ್ದರೂ ಹೈಕಮಾಂಡಿನದು.ಅವರು ಅದನ್ನು ಮಾಡೋದು ಬಿಡಿ ,ಸಿ.ಎಂ ಕುರ್ಚಿಯ ಕುರಿತು ಕನಸಿನಲ್ಲಿ ಯೋಚನೆ ಮಾಡಲೂ ಹೆದರುತ್ತಿದ್ದಾರೆ ಅಂತ ನಿಗೂಢ ಮೂಲಗಳಿಂದ ಬಂದ ವರದಿ!

ದಿನ ಭವಿಷ್ಯ

ಮೇಷ ಸಂಬಂಧದಲ್ಲಿ ಉಂಟಾಗಿದ್ದ ಸಮಸ್ಯೆ ನಿವಾರಣೆ. ಹಣದ ವಿಚಾರದಲ್ಲಿ ಎಚ್ಚರವಿರಲಿ. ಸಾಲ ನೀಡಿದರೆ ಮರಳಿ ಬಾರದ ಪರಿಸ್ಥಿತಿ.

ವೃಷಭ ಎಲ್ಲ ಇದ್ದೂ ಅಸಂತೃಪ್ತಿಯ ಭಾವ. ಕೆಲ ವಿಷಯ ಅಗತ್ಯಕ್ಕಿಂತ ಗಂಭೀರ ತೆಗೆದುಕೊಳ್ಳದಿರಿ. ನೆಮ್ಮದಿ ಕೆಡಿಸಲು ಅವಕಾಶ ಕೊಡದಿರಿ.

ಮಿಥುನ ಏರಿಳಿತಗಳ ದಿನ. ವೃತ್ತಿಯಲ್ಲಿ ಹೊಣೆ ಹೆಚ್ಚು. ಹೊಸ ಉದ್ಯೋಗ ಅವಕಾಶ. ಪ್ರೀತಿಯಲ್ಲಿ ಅಪಸ್ವರ ಎದ್ದೀತು. ವಿವೇಕದಿಂದ ವ್ಯವಹರಿಸಿ.

ಕಟಕ ವೃತ್ತಿಯ ಒತ್ತಡ ನಿಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ವೃತ್ತಿ ಮಾತ್ಸರ್ಯ ನೆಮ್ಮದಿ ಕಲಕಬಹುದು.

ಸಿಂಹ ಇನ್ನಷ್ಟು ವಿಳಂಬ ಬೇಡ, ಪ್ರಮುಖ ನಿರ್ಧಾರ ಇಂದೇ ತಾಳಿ. ಅದರಿಂದ ಉತ್ತಮ ಫಲಿತಾಂಶ. ಹಿರಿಯರಿಗೆ ದೈಹಿಕ ನೋವು.

ಕನ್ಯಾ ಪ್ರತಿಯೊಬ್ಬರ ವಿಷಯವನ್ನೂ ನೀವೇ ನಿರ್ಧರಿಸುವವರು ಎಂಬಂತೆ ವರ್ತಿಸದಿರಿ. ನಿಮ್ಮ ನಡೆಗೆ ಕೆಲವರ ವಿರೋಧ ಸಂಭವ.

ತುಲಾ ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಸರಿಯಾಗಿ ನಿಭಾಯಿಸುವಿರಿ. ಶೇರು ವ್ಯವಹಾರ ಲಾಭ ತರಲಿದೆ. ಮನೆಯ ಕಾರ್ಯ ಸುಗಮವಾಗಿ ಸಾಗಲಿದೆ.

ವೃಶ್ಚಿಕ ಖಾಸಗಿ ಮತ್ತು ವೃತ್ತಿ ಬದುಕಲ್ಲಿ ಪೂರಕ ದಿನ. ಸಂಕೀರ್ಣ ಕಾರ್ಯವನ್ನು ಸುಲಭದಲ್ಲಿ ಮುಗಿಸುವಿರಿ. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ ಸಂಭವ.

ಧನು ಇಂದು ಸಕಾಲದಲ್ಲಿ ಕಾರ್ಯ ಮುಗಿಯದು. ಕೆಲ ವಿದ್ಯಮಾನಗಳಿಗೆ ಭಾವಾವೇಶ ತೋರುವಿರಿ. ಶಾಂತಚಿತ್ತರಾಗಿ ಪ್ರತಿಕ್ರಿಯೆ ತೋರುವುದು ಅವಶ್ಯ.

ಮಕರ ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಆತ್ಮೀಯರ ಬೆಂಬಲ. ಮನದ ಒತ್ತಡ ನಿವಾರಣೆ. ವೃತ್ತಿಯಲ್ಲಿ ಇತರರ ಸಹಕಾರ ಪಡೆಯುವಿರಿ.

ಕುಂಭ ವೃತ್ತಿ ಒತ್ತಡ ಕಡಿಮೆ. ಆದರೆ ಖಾಸಗಿ ಬದುಕಲ್ಲಿ ಹೊಸ ಸವಾಲು ಉದ್ಭವ. ದಿನದಂತ್ಯಕ್ಕೆ ಸಂತೋಷ ಪಡುವ ಬೆಳವಣಿಗೆ. ಆಪ್ತ ಸಂಗದಿಂದ ನೆಮ್ಮದಿ.

ಮೀನ ಉದ್ಯೋಗ ಬದಲಾವಣೆಗೆ ಈಗ ಕಾಲ ಅಪಕ್ವ. ಆಪ್ತರ ಕುರಿತಂತೆ ಭಾವುಕ ಪ್ರಸಂಗ ಎದುರಿಸುವಿರಿ. ಹಣದ ಬಿಕ್ಕಟ್ಟು ಪರಿಹಾರ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 4,9,1,5

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕೇಂದ್ರ ಸಚಿವ ಕುಮಾರಸ್ವಾಮಿ ಪ್ರಶ್ನೆ

ಬೆಲೆ ಹೆಚ್ಚಳದ ಪಟ್ಟಿ ಕೊಡಿ

ಮೈಸೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಬಗ್ಗೆ ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಕಳೆದ ಮೂರು ವರ್ಷಗಳಲ್ಲಿ ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲು ನಿಮ್ಮ ಸರಕಾರವು ಎಷ್ಟು ಸಲ ಬೆಲೆ ಏರಿಕೆ ಮಾಡಿದೆ? ಯಾವ ಯಾವ ಬಾಬತ್ತುಗಳ ಮೇಲೆ ಎಷ್ಟೆಷ್ಟು ತೆರಿಗೆ ವಿಧಿಸಿದೆ ಎಂಬ ಬಗ್ಗೆ ಜನರಿಗೆ ಹೇಳಲಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ನೇರ ಸವಾಲು ಹಾಕಿದರು.

ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಜನರೊಂದಿಗೆ ಜನತಾದಳ ಮತ್ತು ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಸಚಿವರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಳೆದ ಮೂರು ವರ್ಷಗಳಲ್ಲಿ ಮದ್ಯ, ಬಸ್ಸು, ವಿದ್ಯುತ್ ಸೇರಿದಂತೆ ಅನೇಕ ಬಾಬತ್ತುಗಳ ಮೇಲೆ ನಿರಂತರವಾಗಿ ತೆರಿಗೆ ವಿಧಿಸಿ ಬೆಲೆ ಏರಿಕೆ ಮಾಡಲಾಗಿದೆ. ಒಂದೆಡೆ ಗ್ಯಾರಂಟಿಗಳನ್ನು ಕೊಡುತ್ತೇವೆ ಎಂದು ಜನರ ಮೂಗಿಗೆ ತುಪ್ಪ ಸವರುತ್ತಿರುವ ಸರ್ಕಾರವು ಮತ್ತೊಮ್ಮೆ ಅದಕ್ಕೂ ಮೀರಿ ಬೆಲೆ ಏರಿಕೆ ಮಾಡುತ್ತಿದೆ. ಎಷ್ಟು ಬಾರಿ ತೆರಿಗೆ ಹೇರಿಕೆ, ಬೆಲೆ ಏರಿಕೆ ಮಾಡಿದ್ದೇವೆ ಎಂಬ ಬಗ್ಗೆ ಕಾಂಗ್ರೆಸ್ ಸರ್ಕಾರ ಪಟ್ಟಿ ನೀಡಲಿ ಎಂದು ಕುಮಾರಸ್ವಾಮಿ ಅವರು ಗುಡುಗಿದರು. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ಏನು ಮಾಡಿದ್ದಾರೆ ಎಂದು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ. ಬರುವ 19ರಂದು ಸಾಧನಾ ಸಮಾವೇಶ ಮಾಡಲು ಹೊರಟಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ನೀಡಿರುವ ಕೊಡುಗೆಯ ಬಗ್ಗೆ ಆಲೋಚನೆ ಮಾಡಲಿ ಎಂದು ಕೇಂದ್ರ ಸಚಿವರು ಹರಿಹಾಯ್ದರು.



ನಮ್ಮಲ್ಲಿ ಗೊಂದಲವಿಲ್ಲ

ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ, ಯಾವುದೇ ಒತ್ತಡಗಳಿಗೆ ಮಣಿಯುವುದಿಲ್ಲ, ಕಾರ್ಯಕರ್ತರ ಭಾವನೆಗಳಿಗೆ ಬೆಲೆ ಕೊಟ್ಟು ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಮನವರಿಕೆ ಮಾಡಿಕೊಡಲು ಸಮಾವೇಶ ಮಾಡಿದ್ದೇವೆ ಎಂದು ಅವರು ಒತ್ತಿ ಹೇಳಿದರು. ನಮ್ಮ ಪಕ್ಷಕ್ಕೆ ಲಕ್ಷಾಂತರ ಮಂದಿ ನಿಷ್ಠಾವಂತ ಕಾರ್ಯಕರ್ತರು ಬೆನ್ನೆಲುಬಾಗಿದ್ದಾರೆ. ಕಾರ್ಯಕರ್ತರ ಶ್ರಮದ ಫಲವಾಗಿ ಇಂದಿಗೂ ಜೆಡಿಎಸ್ ಪ್ರಬಲವಾಗಿ ಉಳಿದಿದೆ ಎಂದ ಕೇಂದ್ರ ಸಚಿವರು ಹಿಂದೆ ನಡೆದ ಇದೇ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಸನ್ನಿವೇಶವನ್ನು ನೆನಪು ಮಾಡಿಕೊಂಡರು.

ಅಮೆರಿಕ, ಇಸ್ರೇಲ್ ಜೊತೆಗೂಡಿ ಇರಾನ್ ಮೇಲೆ 60 ದಿನಗಳ ಕಾಲ ಯುದ್ಧ ಮಾಡಿದ್ದರಿಂದ ತೈಲ ಸರಬರಾಜು ಬಿಕ್ಕಟ್ಟು ಉಂಟಾಗಿದೆ. ಜಗತ್ತಿನ ಮುಂದುವರಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಇದೆ. ಮುಂದುವರೆದ ದೇಶ ಎಂದು ಗುರುತಿಸಿಕೊಂಡಿರುವ ಸಿಂಗಾಪುರದಲ್ಲಿ ಪೆಟ್ರೋಲ್ ಬೆಲೆ 245ರೂ. ಇದೆ ಎಂಬುದನ್ನು ಕಾಂಗ್ರೆಸ್ ನಾಯಕ ಕಣ್ತೆರೆದು ನೋಡಬೇಕು. ಯುದ್ಧದಿಂದ ಜಗತ್ತಿನ ಎಲ್ಲಾ ದೇಶಗಳು ತೈಲ ಬಿಕ್ಕಟ್ಟು ಎದುರಿಸುತ್ತಿವೆ. ಯುದ್ಧ ನಡೆಯುತ್ತದೆ ಎಂದು ಯಾರಿಗಾದರೂ ಮೊದಲೇ ಕನಸು ಬಿದ್ದಿರುತ್ತದಾ? ಇದರ ಕನಸು ಬಿದ್ದಿದ್ದರೆ ಕಾಂಗ್ರೆಸ್ ನಾಯಕರು ಹೇಳಲಿ. ಒಂದು ವೇಳೆ ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇದ್ದಿದ್ದರೆ ಏನು ಮಾಡುತ್ತಿತ್ತು? ಎಂದು ಸಚಿವ ಕುಮಾರಸ್ವಾಮಿ ಅವರು ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿಕಾರಿದರು.

75 ಕ್ಷೇತ್ರ ಗೆಲುವಿನ ಗುರಿ: ಮುಂಬರುವ ವಿಧಾನಸಭೆ ಚುನಾವಣೆಗೆ ಸಜ್ಜಾಗುವಂತೆ ಈಗಲೇ ಕಾರ್ಯಕರ್ತರ ಪಡೆಗೆ ಕರೆ ಕೊಟ್ಟ ಪಕ್ಷದ ರಾಜ್ಯಾಧ್ಯಕ್ಷರು ಆಗಿರುವ ಕುಮಾರಸ್ವಾಮಿ ಅವರು ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು 75 ಕ್ಷೇತ್ರಗಳಲ್ಲಿ ಜಯ ಗಳಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಿತವ್ಯಯದಿಂದ ಬದಲಾವಣೆ: ಜೋಶಿ



ಬಾಗಲಕೋಟೆ: ಜಾಗತಿಕ ಮಟ್ಟದಲ್ಲಿ ಯುದ್ಧದ ಭೀತಿಯಿಂದಾಗಿ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದರಿಂದ ನಮ್ಮ ದೇಶವಷ್ಟೇ ಅಲ್ಲ, ಬೇರೆ ದೇಶಗಳಲ್ಲೂ ಆತಂಕ ಶುರುವಾಗಿದೆ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜನಸಾಮಾನ್ಯರ ಮೇಲೆ ಬೀಳಬಹುದಾದ ಪರಿಣಾಮಗಳ ಕುರಿತಾಗಿ ಹೇಳಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸಮರ್ಥನೆ ಮಾಡಿಕೊಂಡರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ದೇಶಗಳಲ್ಲಿ ಇಂಧನದ ಎಮರ್ಜೆನ್ಸಿ ಘೋಷಣೆ ಮಾಡಿದ್ದಾರೆ. ಬಹಳಷ್ಟು ಮುಂದುವರಿದ ದೇಶಗಳಿಗೂ ಇದರ ಪೆಟ್ಟು ಬಿದ್ದಿದೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ಆರ್ಥಿಕ ವ್ಯವಸ್ಥೆಗೆ ಪೆಟ್ಟು ಬೀಳುತ್ತಿದೆ. ನಾವು ನಮ್ಮ ಮೇಲೆ ಮಿತವ್ಯಯ ಹಾಕಿಕೊಳ್ಳುವುದರಿಂದ ಬದಲಾವಣೆಯನ್ನು ಕಾಣಬಹುದಾಗಿದೆ. ಜಗತ್ತಿನ ಮುಂದುವರಿದಿರುವ ರಾಷ್ಟ್ರಗಳಲ್ಲೂ ಭೀಕರತೆ ಕಂಡು ಬರುತ್ತಿದೆ. ನಾವು ಎಲ್‌ಪಿಜಿ ಸಿಲಿಂಡರ್ ಅಭಾವ ತಗ್ಗಿಸಿದ್ದೇವೆ. ರಾಹುಲ್ ಗಾಂಧಿ ಅಂಥವರ ಮಾತು ಕೇಳಿ ದಾರಿ ತಪ್ಪಿಸುವ ಕೆಲಸ ಕೆಲವರು ಮಾಡುತ್ತಿದ್ದಾರೆ ಎಂದರು.

ಹಿಜಾಬ್ ವಿಷಯಕ್ಕೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳುವುದಕ್ಕಾಗಿ ಯಾವುದಾದರೂ ಹೊಸ ವಿಷಯವನ್ನು ಎಳೆದು ತರುತ್ತದೆ. ಈಗ ಹಿಜಾಬ್ ವಿಷಯವನ್ನು ಹುಡುಕಿ ಹಿಡಿದುಕೊಂಡಿದ್ದಾರೆ. ಕೇಸರಿಗೆ ಅನುಮತಿ ಇಲ್ಲ, ಹಿಜಾಬ್‌ಗೆ ಇದೆ ಎನ್ನುತ್ತಾರೆ. ನಾವು ಶಿವದಾರ, ಜನಿವಾರಕ್ಕೆ ಅನುಮತಿ ನೀಡಿದ್ದೇವೆ ಎನ್ನುತ್ತಾರೆ. ಅವರ ತಲೆ ಕೆಟ್ಟು ಹೋಗಿದೆ ಅನಿಸುತ್ತೆ. ರಾಹುಲ್ ಗಾಂಧಿ ಮಾತನ್ನು ಕೇಳಿ ಸಿದ್ದರಾಮಯ್ಯ ಇಂಥ ಕೆಲಸಕ್ಕೆ ಮುಂದಾದರೆ ಕಾಂಗ್ರೆಸ್ ಪಕ್ಷ ಮುಸ್ಲಿಂ ಲೀಗ್ ಆಗಲಿದೆ ಎಂದು ಹೇಳಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯಕ್ಕೆ ಉತ್ತರಿಸಿದ ಅವರು, ಎರಡು ಬಾರಿ ಇದು ಸೋರಿಕೆಯಾಗಿದೆ. ಸಚಿವ ಧರ್ಮೇಂದ್ರ ಪ್ರಧಾನ ಈ ಬಗ್ಗೆ ಸಂಪೂರ್ಣ ಪರಿಶೀಲನೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಈ ಪರೀಕ್ಷೆ ಆನ್‌ಲೈನ್ ಮೂಲಕ ನಡೆಸಲು ಚಿಂತನೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಈ ಬಗ್ಗೆ ವಿಚಲಿತರಾಗದಂತೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಪ್ರತಿಭಾವಂತರಿಗೆ ಅನ್ಯಾಯವಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು ತಿಳಿಸಿದರು.

ಶಿವಾನಂದ 5 ದಿನ ಪೊಲೀಸ್ ವಶಕ್ಕೆ

ಪುಟ 1ರಿಂದ ಜಿಲ್ಲಾಧಿಕಾರಿ ನಿರ್ದೇಶನದಂತೆ ಉಪವಿಭಾಗಾಧಿಕಾರಿ ಶ್ರವಣ ನಾಯಕ ನೇತೃತ್ವದಲ್ಲಿ ಸಹಕಾರ ಇಲಾಖೆ ಹಾಗೂ ಪೊಲೀಸರ ತಂಡ ಶಿವಾನಂದ ಅವರ ಮನೆ, ಕಚೇರಿ ಸೇರಿದಂತೆ ವಿವಿಧ ಸ್ಥಳಗಳ ಮೇಲೆ ದಾಳಿ ನಡೆಸಿತು. ಎರಡು ದಿನಗಳಿಂದ ದಾಖಲೆಗಳ ತಪಾಸಣೆ ನಡೆಯುತ್ತಿದ್ದು, ಹಣ ವರ್ಗಾವಣೆ ಹಾಗೂ ಹೂಡಿಕೆ ವ್ಯವಹಾರಕ್ಕೆ ಸಂಬಂಧಿಸಿದ ನೂರಾರು ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪೊಲೀಸರು ಶುಕ್ರವಾರ ರಾತ್ರಿ ಎಫ್ ಐಆರ್ ದಾಖಲಿಸಿ ಶಿವಾನಂದ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ನಡೆದಿರುವ ಅನುಮಾನವೂ ವ್ಯಕ್ತವಾಗಿದೆ.

ಸಿಐಡಿ ಅಧಿಕಾರಿಗಳ ಸಭೆ

ಪುಟ 1ರಿಂದ ಬೆಳಗಾವಿ ನಗರ ಪೊಲೀಸ್ ಕಮಿಷನರ್ ಭೂಷಣ್ ಬೊರಸೆ ಉಪಸ್ಥಿತಿಯಲ್ಲಿ ನಡೆದ ಈ ಸಭೆಗೆ ಸಿಐಡಿ ಡಿಐಜಿ ಭೀಮಾಶಂಕರ್ ಗುಳೇದ್ ಸೇರಿದಂತೆ ಮೂವರು ಪ್ರಮುಖ ತನಿಖಾಧಿಕಾರಿಗಳ ತಂಡ ಆಗಮಿಸಿತ್ತು. ಸಭೆಯಲ್ಲಿ ಮಾರ್ಕೆಟ್ ವಿಭಾಗದ ಎಸಿಪಿ, ಮಾಳಮಾರುತಿ ಸಿಪಿಐ ಹಾಗೂ ಸಿಇಎನ್ ಪೊಲೀಸ್ ಠಾಣೆಯ ಸಿಪಿಐ ಕೂಡ ಭಾಗವಹಿಸಿದ್ದು, ಇದುವರೆಗೆ ಸ್ಥಳೀಯ ಪೊಲೀಸರು ನಡೆಸಿದ ತನಿಖೆ, ಜಪ್ತಿ ಮಾಡಲಾದ ಪ್ರಮುಖ ದಾಖಲೆಗಳು ಮತ್ತು ಜಾಲತಾಣ ಆಧಾರಿತ ಡಿಜಿಟಲ್ ಪುರಾವೆಗಳ ಬಗ್ಗೆ ಸಿಐಡಿ ಅಧಿಕಾರಿಗಳು ಸಮಗ್ರ ಮಾಹಿತಿ ಪಡೆದುಕೊಂಡರು. ಸಭೆ ಮುಗಿಯುತ್ತಿದ್ದಂತೆಯೇ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಅಧಿಕೃತ ಕಡತಗಳು ಹಾಗೂ ವಶಪಡಿಸಿಕೊಳ್ಳಲಾದ ಮಹತ್ವದ ದಾಖಲೆಗಳನ್ನು ಸಿಐಡಿ ತಂಡವು ತನ್ನ ಸುಪರ್ದಿಗೆ ಪಡೆದುಕೊಂಡಿದ್ದು, ಭಾನುವಾರದಿಂದಲೇ ಅಧಿಕಾರಿಗಳು ಅಧಿಕೃತವಾಗಿ ತನಿಖಾ ಕಾರ್ಯಾಚರಣೆ ಪ್ರಾರಂಭಿಸಿದ್ದಾರೆ.

ಬ್ಯಾಂಕ್ ಅಧಿಕಾರಿಗಳು ಶಾಮೀಲು?

ಪುಟ 1ರಿಂದ ಆದರೆ, ಶಿವಾನಂದ ನೀಲಣ್ಣವರ ಖಾಸಗಿ ಬ್ಯಾಂಕ್ ಖಾತೆಗಳಲ್ಲಿ ಕೋಟ್ಯಂತರ ರೂ. ಪತ್ತೆಯಾಗಿದ್ದು, ವಹಿವಾಟುಗಳ ಬಗ್ಗೆ ಬ್ಯಾಂಕ್‌ಗಳು ಮೌನ ವಹಿಸಿದ್ದೇಕೆ ಎಂಬ ಪ್ರಶ್ನೆ ಇದೀಗ ಚರ್ಚೆಗೆ ಕಾರಣವಾಗಿದೆ. ಖಾಸಗಿ ಬ್ಯಾಂಕ್‌ಗಳ ನಾಲ್ಕು ಪ್ರಮುಖ ಖಾತೆಗಳನ್ನು ತನಿಖಾಧಿಕಾರಿಗಳು ಫ್ರೀಜ್ ಮಾಡಿದ್ದಾರೆ. ಈ ಒಂದೊಂದು ಖಾತೆಯಲ್ಲೂ ನೂರಾರು ಕೋಟಿ ರೂಪಾಯಿ ಹಣ ಪತ್ತೆಯಾಗಿದೆ. ಈ ಖಾತೆಗಳಿಗೆ ಪ್ರತಿದಿನ ಲಕ್ಷಾಂತರ ರೂಪಾಯಿ ಜಮೆಯಾಗುತ್ತಿತ್ತು.

ಇದೇ ಖಾತೆಗಳಿಂದ ತಿಂಗಳಿಗೆ 75 ಕೋಟಿ ರೂಪಾಯಿಗೂ ಅಧಿಕ ಮೊತ್ತವನ್ನು ಹೂಡಿಕೆದಾರರಿಗೆ ಬಡ್ಡಿ ರೂಪದಲ್ಲಿ ವರ್ಗಾವಣೆ ಮಾಡಲಾಗುತ್ತಿತ್ತು ಎಂಬ ಅಂಶ ಬೆಳಕಿಗೆ ಬಂದಿದೆ. ನಿಯಮಾವಳಿಗಳ ಪ್ರಕಾರ ಹಣಕಾಸು ಗುಪ್ತಚರ ಘಟಕ, ಜಾರಿ ನಿರ್ದೇಶನಾಲಯ ಹಾಗೂ ಆದಾಯ ತೆರಿಗೆ ಇಲಾಖೆಗೆ ಈ ಬಗ್ಗೆ ಬ್ಯಾಂಕ್‌ಗಳು ವರದಿ ಮಾಡಬೇಕಿತ್ತು. ಕೋಟ್ಯಂತರ ರೂಪಾಯಿ ವ್ಯವಹಾರದ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಯಾವುದೇ ಎಚ್ಚರಿಕೆ ಕ್ರಮ ಕೈಗೊಳ್ಳದಿರಲು ಶಿವಾನಂದ ನೀಲಣ್ಣವರ ಜತೆಗಿನ ಒಳಸಂಚು ಕಾರಣವೇ ಎಂಬ ನಿಟ್ಟಿನಲ್ಲಿ ಸಿಐಡಿ ಮಾಹಿತಿ ಸಂಗ್ರಹಿಸುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಶಪಡಿಸಿಕೊಂಡಿರುವ ಲ್ಯಾಪ್‌ಟ್ಯಾಪ್, ಮೊಬೈಲ್, ಹಾರ್ಡ್ ಡಿಸ್ಕ್ ಹಾಗೂ ಆನ್‌ಲೈನ್ ವ್ಯವಹಾರಗಳ ಡಿಜಿಟಲ್ ದಾಖಲೆಗಳ ಬಗ್ಗೆ ವಿಶೇಷವಾಗಿ ಮಾಹಿತಿ ಪಡೆಯಲಾಗುತ್ತಿದೆ ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೆ ಏರಿಕೆ

ಪುಟ 1ರಿಂದ ಈ ಬದಲಾವಣೆಯೊಂದಿಗೆ, ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಸರ್ವೋಚ್ಚ ನ್ಯಾಯಾಲಯದ ಒಟ್ಟು ನ್ಯಾಯಮೂರ್ತಿಗಳ ಸಂಖ್ಯೆ ಈಗಿರುವ 34 ರಿಂದ 38ಕ್ಕೆ ಏರಿಕೆಯಾಗಲಿದೆ.

ಸಚಿವಸಂಪುಟದ ಅನುಮೋದನೆ ಮತ್ತು ಜಾರಿ: ಈ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟವು ಮೇ 5ರಂದು ಅನುಮೋದನೆ ನೀಡಿತ್ತು. ಸಂಸತ್ತಿನ ಅಧಿವೇಶನ ನಡೆಯದ ಅವಧಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ ಸಂವಿಧಾನದ ವಿಧಿ 123ರ ಅನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ನಿಭಾಯಿಸಲು ಈ ವಿಸ್ತರಣೆ ನಾಲ್ಕು ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಲಿದ್ದು, ಈ ಹುದ್ದೆಗಳಿಗೆ ಕೊಲಿಜಿಯಂ ಪ್ರಕ್ರಿಯೆಯ ಮೂಲಕವೇ ನೇಮಕಾತಿ ನಡೆಯಬೇಕಿದೆ.

ನ್ಯಾಯಾಧೀಶರ ಸಂಖ್ಯೆ ಹೆಚ್ಚಳದ ಇತಿಹಾಸ: 1950 ರಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿದಾಗ, ಸಂವಿಧಾನದ ವಿಧಿ 124(1)ರ ಅನ್ವಯ ಮುಖ್ಯ ನ್ಯಾಯಮೂರ್ತಿಗಳು ಸೇರಿದಂತೆ ಕೇವಲ ಎಂಟು ನ್ಯಾಯಮೂರ್ತಿಗಳಿದ್ದರು. ನಂತರ ಸಂಸತ್ತು ನ್ಯಾಯಮೂರ್ತಿಗಳ ಸಂಖ್ಯೆಯನ್ನು 1956ರಲ್ಲಿ 11ಕ್ಕೆ, 1960ರಲ್ಲಿ 14ಕ್ಕೆ ಮತ್ತು 1977ರಲ್ಲಿ 18ಕ್ಕೆ ಹೆಚ್ಚಿಸಿತು. ಬಳಿಕ, ಈ ಸಂಖ್ಯೆಯನ್ನು 1986 ರಲ್ಲಿ 26ಕ್ಕೆ ಮತ್ತು 2009 ರಲ್ಲಿ 31ಕ್ಕೆ ಹೆಚ್ಚಿಸಲಾಯಿತು. ಕೊನೆಯದಾಗಿ 2019 ರಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 31ರಿಂದ 34ಕ್ಕೆ ಹೆಚ್ಚಿಸಲಾಗಿತ್ತು.

ಹಾರ್ಮುಜ್: ನೌಕೆಗಳ ಮೇಲಿನ ದಾಳಿಗೆ ಆತಂಕ

ಪುಟ 1ರಿಂದ ಈ ದಾಳಿಯ ಹಿಂದಿರುವ ಅಪರಾಧಿಗಳು ಯಾರೆಂದು ಇನ್ನೂ ಪತ್ತೆಯಾಗಿಲ್ಲ, ಒಮಾನ್ ಅಧಿಕಾರಿಗಳು ನೌಕೆಯಲ್ಲಿದ್ದ ಎಲ್ಲಾ 14 ನಾಗರಿಕ ಸಿಬ್ಬಂದಿಯನ್ನು ಯಶಸ್ವಿಯಾಗಿ ರಕ್ಷಿಸಿದ್ದಾರೆ. ಪ್ರಾದೇಶಿಕ ಸಂಘರ್ಷ ಆರಂಭವಾದ ದಿನದಿಂದ ಕನಿಷ್ಠ ಎರಡು ಭಾರತೀಯ ಧ್ವಜದ ಹಡಗುಗಳು ದಾಳಿಗೆ ಒಳಗಾಗಿದ್ದು, ಈ ಘಟನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದ್ದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಹಿಂದೆ ತಿಳಿಸಿತ್ತು.

ಪ್ರಾದೇಶಿಕ ಹಿನ್ನೆಲೆ: ಒಮಾನ್ ಬಳಿ ಇರುವ ಹಾರ್ಮುಜ್ ಜಲಸಂಧಿ ಒಂದು ಕಿರಿದಾದ ಜಲಮಾರ್ಗವಾಗಿದ್ದು, ಇದರ ಮೂಲಕ ಜಾಗತಿಕ ಇಂಧನ ಪೂರೈಕೆಯ ಸರಿಸುಮಾರು ಐದನೇ ಒಂದು ಭಾಗದಷ್ಟು ಸಾಗಾಟ ನಡೆಯುತ್ತದೆ. ಯುಎಸ್ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಪ್ರದೇಶದಲ್ಲಿ ಅಸ್ಥಿರತೆ ತೀವ್ರಗೊಂಡಿದ್ದು, ಪ್ರತಿಯಾಗಿ ಪ್ರತ್ಯುತ್ತರ ದಾಳಿಗಳು ನಡೆದಿವೆ.

ಮದ್ಯದ ದರ ತುಸು ಏರಿಕೆ

ಪುಟ 1ರಿಂದ ರಾಜ್ಯದ ಗ್ರಾಹಕರಿಗೆ ಅಗ್ಗದ ದರದಲ್ಲಿ ಮದ್ಯ ದೊರಕುವಂತೆ ಹಾಗೂ ರಾಜ್ಯದ ಮದ್ಯದ ದರ ನೆರೆ ರಾಜ್ಯಗಳಿಗೆ ಅಂದರೆ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಇರುವ ಮದ್ಯದ ದರಗಳಿಗೆ ಹೋಲಿಸಿದಾಗ ಅದಕ್ಕಿಂತ ಕಡಿಮೆ ಇರುವಂತೆ ಹಾಗೂ ತುಲನಾತ್ಮಕವಾಗಿ ಸಮ ಇರುವಂತೆ ಐಎಂಎಲ್ ತರ್ಕಬದ್ಧಗೊಳಿಸಲಾಗಿದೆ ಎಂದು ಅಬಕಾರಿ ಇಲಾಖೆ ತಿಳಿಸಿದೆ.

ಸ್ಟ್ರಾಂಗ್ ಬಿಯರ್ ಬೆಲೆ ಏರಿಕೆ: ಆಲ್ಕೋಹಾಲ್ ಪ್ರಮಾಣ ಆಧರಿಸಿ ಅಬಕಾರಿ ಸುಂಕ ವಿಧಿಸುವ ನೀತಿಯ ಕಾರಣಕ್ಕೆ ಬಿಯರ್ ಬೆಲೆಯಲ್ಲಿಯೂ ಏರುಪೇರಾಗಿದೆ. ಆಲ್ಕೋಹಾಲ್ ಪ್ರಮಾಣ ಶೇ.5 ರಿಂದ ಶೇ.8 ರಷ್ಟು ಇರುವ ಬಿಯರ್‌ಗಳ ಬೆಲೆಯಲ್ಲಿ 25 ರಿಂದ 80 ರೂ. ವರೆಗೂ ಇಳಿಕೆಯಾಗಿದೆ. ಸ್ಟ್ರಾಂಗ್ ಬಿಯರ್ ಬೆಲೆಯಲ್ಲಿ ಶೇ.20ರಷ್ಟು ಏರಿಕೆಯಾಗಿದೆ.

ಭಾರತ-ನೆದರ್‌ಲ್ಯಾಂಡ್ಸ್ ವ್ಯೂಹಾತ್ಮಕ ಪಾಲುದಾರಿಕೆ

ಪುಟ 1ರಿಂದ ಇದೇ ವೇಳೆ ಉಕ್ರೇನ್-ರಷ್ಯಾ ನಡುವಣ ಸಂಘರ್ಷ ಕುರಿತಂತೆಯೂ ಉಭಯ ನಾಯಕರು ಚರ್ಚಿಸಿ, ವಿಶ್ವಸಂಸ್ಥೆಯ ಮಾರ್ಗಸೂಚಿ ಹಾಗೂ ಅಂತಾರಾಷ್ಟ್ರೀಯ ಕಾನೂನಿನಲ್ಲಿ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಶಾಂತಿ ಸ್ಥಾಪನೆಗೆ ಕರೆನೀಡಿದರು.

ಜಾಗತಿಕ ಬಿಕ್ಕಟ್ಟಿನ ನಡುವೆಯೇ ಭಾರತದ ಹಿತಾಸಕ್ತಿಗಳನ್ನು ಕಾಯುವ ಗಂಭೀರ ಪ್ರಯತ್ನದ ಭಾಗವಾಗಿ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಅಲ್ಲದೆ ನಾಲ್ಕು ಯುರೋಪಿಯನ್ ದೇಶಗಳ(ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ, ಇಟಲಿ) ಭೇಟಿಯ ಭಾಗವಾಗಿ ಪ್ರಧಾನಿ ಮೋದಿ ಇಲ್ಲಿಗಾಗಮಿಸಿದ್ದರು. ಉಭಯ ದೇಶಗಳ ನಡುವೆ ಇದೀಗ ವ್ಯಾಪಾರ ಮತ್ತು ಹೂಡಿಕೆಗೆ ಉತ್ತೇಜನ, ರಕ್ಷಣೆ ಮತ್ತು ಭದ್ರತೆ, ಸೆಮಿಕಂಡಕ್ಟರ್, ಬಾಹ್ಯಾಕಾಶ, ಎಐ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಮಹತ್ವದ ತಂತ್ರಜ್ಞಾನಗಳು ಒಳಗೊಂಡ ವ್ಯೂಹಾತ್ಮಕ ಪಾಲುದಾರಿಕೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೆ ಹಸಿರು ಜಲಜನಕ ಅಭಿವೃದ್ಧಿ ಮೇಲಿನ ಮಹತ್ವಾಕಾಂಕ್ಷಿ ಭಾರತ-ನೆದರ್ಲ್ಯಾಂಡ್ಸ್ ಮಾರ್ಗಸೂಚಿಯೊಂದಕ್ಕೆ ಚಾಲನೆ ನೀಡಲಾಗಿದೆ. ನೆದರ್ಲ್ಯಾಂಡ್ ಯುರೋಪಿನಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ನೆಲೆಗಳಲ್ಲೊಂದಾಗಿದ್ದು, ಉಭಯ ದೇಶಗಳ ನಡುವಣ ದ್ವಿಪಕ್ಷೀಯ ವ್ಯಾಪಾರ 2024-25ರಲ್ಲಿ 27.8 ಬಿಲಿಯನ್ ಡಾಲರ್‌ಗೆ ತಲುಪಿತ್ತು. ಹಾಗೆಯೇ ಭಾರತದ ನಾಲ್ಕನೇ ಅತಿದೊಡ್ಡ ಹೂಡಿಕೆದಾರ ಯುರೋಪಿಯನ್ ದೇಶವಾಗಿದ್ದು, 55.6 ಬಿ.ಡಾ. ವಿದೇಶಿ ನೇರ ಹೂಡಿಕೆದಾರನೂ ಆಗಿದೆ. ನೆದರ್ಲ್ಯಾಂಡ್ ವಿಶ್ವದರ್ಜೆಯ ಲಾಜಿಸ್ಟಿಕ್ ಜಾಲವನ್ನು ಹೊಂದಿದ್ದು, ಭಾರತದ ರಫ್ತುದಾರರ ಪಾಲಿಗೆ ಅಲ್ಲಿನ ಪೋರ್ಟ್ ಆಫ್ ರೋಟ್ಟರ್‌ಡಾಮ್ ಯುರೋಪಿಗೆ ಇರುವ ವ್ಯೂಹಾತ್ಮಕ ಗೇಟ್‌ವೇ ಆಗಿ ಮಹತ್ವ ಪಡೆದಿದೆ.

ಚೋಳರ ತಾಮ್ರ ಶಾಸನ ಮರಳಿಸಿದ ನೆದರ್‌ಲ್ಯಾಂಡ್

ಪುಟ 1ರಿಂದ ಇದು ಮೊದಲನೇ ರಾಜರಾಜ ಚೋಳ ಮತ್ತು ಪುತ್ರ ರಾಜೇಂದ್ರ ಚೋಳನ ಆಡಳಿತ ಕಾಲ 11ನೇ ಶತಮಾನಕ್ಕೆ ಸೇರಿದ ದಾಖಲೆಯಾಗಿದೆ. ಇದು ತಮಿಳುನಾಡಿನ ನಾಗಪಟ್ಟಣದ ಚೂಲಾಮಣಿವರ್ಮ ಹೆಸರಿನ ಬೌದ್ಧ ವಿಹಾರಕ್ಕೆ ಭೂದಾನ ಮತ್ತು ಹಣಕಾಸಿನ ನೆರವು ನೀಡಿರುವ ಬಗ್ಗೆ ದಾಖಲಿಸುತ್ತದೆ. ಇದು 30 ಕೆ.ಜಿ. ತೂಕದ್ದಾಗಿದ್ದು, 21 ತಾಮ್ರದ ಪ್ಲೇಟ್‌ಗಳಿವೆ. ಇದರಲ್ಲಿ ಚೋಳರ ರಾಜಮುದ್ರೆ ಮುದ್ರಿಸಲ್ಪಟ್ಟಿದೆ. 21ರಲ್ಲಿ ಮೊದಲ 5 ಪ್ಲೇಟ್‌ಗಳಲ್ಲಿ ಸಂಸ್ಕೃತ ಹಾಗೂ ಇನ್ನುಳಿದ 16 ಪ್ಲೇಟ್‌ಗಳಲ್ಲಿ ತಮಿಳು ಭಾಷೆಯಲ್ಲಿ ಶಾಸನ ಬರೆಯಲಾಗಿದೆ. ಶಾಸನ ಪ್ಲೇಟ್‌ಗಳಲ್ಲಿ ವಿಷ್ಣುವಿನಿಂದ ಸೂರ್ಯನವರೆಗೆ, ಎಲ್ಲಾ ಚೋಳ ಪೀಳಿಗೆಯ ಅರಸರ ಹೆಸರುಗಳನ್ನು ಮುದ್ರಿಸಲಾಗಿದೆ. ಇದನ್ನು 1712ರಲ್ಲಿ ಡಚ್ ಮಿಷನರಿಯ ಪಾದ್ರಿ ಫ್ಲೋರೆಂಟಿಯಸ್ ಕ್ಯಾಂಪರ್ ನೆದರ್‌ಲ್ಯಾಂಡ್‌ಗೆ ಕೊಂಡೊಯ್ದಿದ್ದ. ಲೀಡೆನ್ ವಿಶ್ವವಿದ್ಯಾಲಯದಲ್ಲಿ ಇದನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದರು. 2012ರಲ್ಲೇ ಇವುಗಳನ್ನು ಹಿಂದಿರುಗಿಸಲು ಕೇಂದ್ರ ಸರ್ಕಾರ ಮನವಿ ಮಾಡಿತ್ತು. ಆದರೆ ಪ್ರಧಾನಿ ಮೋದಿ ಭೇಟಿ ಸಂದರ್ಭದಲ್ಲಿ ಅಧಿಕೃತವಾಗಿ ಭಾರತಕ್ಕೆ ಹಸ್ತಾಂತರಿಸಲಾಗಿದೆ. ಪ್ರತಿ ಭಾರತೀಯನಿಗೂ ಇದೊಂದು ಸಂತಸದ ಕ್ಷಣವೆಂದು ಮೋದಿ ಬಣ್ಣಿಸಿದ್ದಾರೆ.

ಬೆಂಗೂರು-ಮುಂಬೈ ರೈಲಿಗೆ ನಿಶಾನೆ

ಪುಟ 1ರಿಂದ ಪ್ರಸ್ತುತ ಪ್ರಯಾಣ ಅವಧಿ ಸುಮಾರು 22 ಗಂಟೆಗಳಾಗಿದ್ದು, ಮುಂದಿನ ದಿನಗಳಲ್ಲಿ ಪ್ರಯಾಣ ಸಮಯ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಟಿಕೆಟ್ ದರ ಎಷ್ಟಿದೆ?: ಬೆಂಗಳೂರು-ಮುಂಬೈ ಮಾರ್ಗದ ಸ್ಲೀಪರ್ ದರ 580 ರೂ. 3 ಎಸಿ 1,510 ರೂ, ಹಾಗೂ 2 ಎಸಿ 2,155 ರೂ. ನಿಗದಿಪಡಿಸಲಾಗಿದೆ. ದಾವಣಗೆರೆ-ಮುಂಬೈ ರೈಲಿನ ಟಿಕೆಟ್ ದರ ಸ್ಲೀಪರ್ 470 ರೂ, 3 ಎಸಿ 1,235 ರೂ, 2 ಎಸಿ 1,750 ರೂ. ಹಾಗೂ ಹುಬ್ಬಳ್ಳಿ-ಮುಂಬೈ ರೈಲಿನ ಟಿಕೆಟ್ ದರ ಸ್ಲೀಪರ್ 420 ರೂ, 3 ಎಸಿ 1,105 ರೂ, 2 ಸಿ 1,565 ರೂ. ನಿಗದಿಪಡಿಸಲಾಗಿದೆ.

ರೈಲು ಸಂಚಾರದ ವೇಳಾಪಟ್ಟಿ: ಬೆಂಗಳೂರು ಎಸ್‌ಎಂವಿಟಿಯಿಂದ ರಾತ್ರಿ 8.35 ಕ್ಕೆ ಹೊರಡುವ ರೈಲು ಮರುದಿನ ರಾತ್ರಿ 8.40ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್ ತಲುಪಲಿದೆ. ಅದೇ ರೀತಿ ಮುಂಬೈನಿಂದ ರಾತ್ರಿ 11.15ಕ್ಕೆ ಹೊರಡುವ ರೈಲು ಮರುದಿನ ರಾತ್ರಿ, 10.30ಕ್ಕೆ ಬೆಂಗಳೂರಿನ ಎಸ್ ಎಂವಿಟಿ ತಲುಪಲಿದೆ.

ಹೈ-ಸ್ಪೀಡ್ ರೈಲು ಕಾರಿಡಾರ್‌ಗೆ ಆಗ್ರಹ

ಪುಟ 1ರಿಂದ ಈ ಯೋಜನೆಯು ಮಧ್ಯ ಮತ್ತು ಉತ್ತರ ಕರ್ನಾಟಕದಾದ್ಯಂತ ಆರ್ಥಿಕ ಚಟುವಟಿಕೆಗಳನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ. ಬೆಂಗಳೂರನ್ನು ಚೆನ್ನೈ ಮತ್ತು ಹೈದರಾಬಾದ್‌ನೊಂದಿಗೆ ಸಂಪರ್ಕಿಸುವ ಇತ್ತೀಚೆಗೆ ಘೋಷಿಸಲಾದ ಹೈ-ಸ್ಪೀಡ್ ರೈಲು ಕಾರಿಡಾರ್‌ಗಳಂತೆಯೇ ಬೆಂಗಳೂರು-ಮುಂಬೈ ಕಾರಿಡಾರ್ ಕೂಡ ಕರ್ನಾಟಕದ ದೀರ್ಘಕಾಲೀನ ಆರ್ಥಿಕ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಅವರು ಗಮನ ಸೆಳೆದಿದ್ದಾರೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ನಡೆದ ನೂತನ, ಎಸ್‌ಎಂವಿಟಿ ಬೆಂಗಳೂರು - ಲೋಕಮಾನ್ಯ ತಿಲಕ್ ಟರ್ಮಿನಲ್ ದ್ವಿ-ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲಿನ ಹಸಿರು ನಿಶಾನೆ ತೋರುವ ಸಮಾರಂಭದಲ್ಲಿ ವರ್ಚುವಲ್ ಆಗಿ ಭಾಗವಹಿಸಿ ತೇಜಸ್ವಿ ಸೂರ್ಯ ಈ ಮನವಿ ಮಾಡಿದ್ದಾರೆ. ಬೆಂಗಳೂರು ಮತ್ತು ಮುಂಬೈ ಭಾರತದ ಎರಡು ಪ್ರಮುಖ ಆರ್ಥಿಕ ರಾಜಧಾನಿಗಳಾಗಿವೆ. ಬೆಂಗಳೂರು ದೇಶದ ತಂತ್ರಜ್ಞಾನ ರಾಜಧಾನಿಯಾಗಿ ಮತ್ತು ಮುಂಬೈ ವಾಣಿಜ್ಯ ರಾಜಧಾನಿಯಾಗಿ ಹೊರಹೊಮ್ಮಿದೆ. ಪ್ರತಿ ವರ್ಷ ಲಕ್ಷಾಂತರ ಜನರು ಬೆಂಗಳೂರು ಮತ್ತು ಮುಂಬೈ ನಡುವೆ ಪ್ರಯಾಣಿಸುತ್ತಾರೆ. ದಾವಣಗೆರೆ ಮತ್ತು ಹುಬ್ಬಳ್ಳಿ ಮೂಲಕ ಈ ಎರಡು ನಗರಗಳನ್ನು ಸಂಪರ್ಕಿಸುವ ಹೈ-ಸ್ಪೀಡ್ ರೈಲು ಕಾರಿಡಾರ್ ಕೇವಲ ಸಂಪರ್ಕವನ್ನು ಸುಧಾರಿಸುವುದಲ್ಲದೆ, ಮಧ್ಯ ಮತ್ತು ಉತ್ತರ ಕರ್ನಾಟಕದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ದೊಡ್ಡ ಉತ್ತೇಜನ ನೀಡುತ್ತದೆ ಎಂದು ವಿವರಿಸಿದ್ದಾರೆ.

ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ: ಪಾರಾದ ಪ್ರಯಾಣಿಕರು

ಪುಟ 1ರಿಂದ ರಾಜಸ್ಥಾನದ ಕೋಟಾದ ವಿಕ್ರಮ್‌ಗಢ ಆಲೋಟ್ ರೈಲು ನಿಲ್ದಾಣದ ಬಳಿ ರೈಲಿನ ಎಸಿ ಬೋಗಿಯಲ್ಲಿ ಬೆಂಕಿ ಕಂಡುಬಂದಿದೆ. ಬೆಂಕಿ ಕಾಣಿಸಿಕೊಂಡ ಬಿ1 ಎಸಿ ಬೋಗಿಯಲ್ಲಿ 68 ಪ್ರಯಾಣಿಕರಿದ್ದರು. ತಕ್ಷಣವೇ ಎಲ್ಲರನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಬೋಗಿಯಲ್ಲಿ ಬೆಂಕಿ ಹೊತ್ತಿಕೊಂಡ ಬಗ್ಗೆ ಮೊದಲು ಗಾರ್ಡ್ ಗಮನಿಸಿ ತಕ್ಷಣವೇ ಎಚ್ಚರಿಸಿದ್ದ. ಬಳಿಕ ತುರ್ತು ಬ್ರೇಕ್‌ಗಳನ್ನು ಬಳಸಿ ರೈಲನ್ನು ನಿಲ್ಲಿಸಲಾಯಿತು. ತಕ್ಷಣವೇ ರೈಲ್ವೆ ರಕ್ಷಣಾ ಪಡೆ ಮತ್ತು ರೈಲಿನಲ್ಲಿರುವ ಸಿಬ್ಬಂದಿ ಮತ್ತು ಇತರ ಅಧಿಕಾರಿಗಳು ಬೋಗಿಯಲ್ಲಿದ್ದ ಪ್ರಯಾಣಿಕರನ್ನು ಸ್ಥಳಾಂತರಿಸಲು ಪ್ರಾರಂಭಿಸಿದರು.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ
TRANSPORT DEPARTMENT

ಸಾರಿಗೆ ಇಲಾಖೆ
ಮೂರು ವರ್ಷಗಳ ಸಾಧನೆಯ ಮೈಲಿಗಲ್ಲು



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರೂ. 70.12 ಕೋಟಿ ವೆಚ್ಚದಲ್ಲಿ **15** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ | **ರೂ. 39.25** ಕೋಟಿ ವೆಚ್ಚದಲ್ಲಿ **6** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ ಪ್ರಗತಿ

ಸ್ವಯಂಚಾಲಿತ/ಗಣಕೀಕೃತ ಪರೀಕ್ಷಾ ಪಥ (ADTS)

ರೂ. 266.00 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧ **45** ಸ್ಥಳಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಸ್ಥಾಪನೆ

ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರ

ಪಿ.ಪಿ.ಪಿ. ಯೋಜನೆಯಡಿ DBFOT ಮಾದರಿಯಲ್ಲಿ **12** ಹಾಗೂ BOO ಮಾದರಿಯಲ್ಲಿ **20** ಸ್ಥಳಗಳಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರಗಳ ನಿರ್ಮಾಣಕ್ಕೆ ಕ್ರಮ

ಭಾರಿ ವಾಹನ ಚಾಲಕರ ತರಬೇತಿ ಕೇಂದ್ರ

ಬೆಂಗಳೂರು, ಧಾರವಾಡ, ಕಲಬುರಗಿ ಮತ್ತು ಮಂಗಳೂರುಗಳಲ್ಲಿ **ರೂ. 46.00** ಕೋಟಿಗಳ ವೆಚ್ಚದಲ್ಲಿ, ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣ | ಬಳ್ಳಾರಿ, ವಿಜಯಪುರ, ನಾಗಮಂಗಲ ಮತ್ತು ಶಿವಮೊಗ್ಗಗಳಲ್ಲಿ **ರೂ. 21.00** ಕೋಟಿ ವೆಚ್ಚದಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣಕ್ಕೆ ಕ್ರಮ

ಸೀಝಿಂಗ್ ಯಾರ್ಡ್

ಬೆಂಗಳೂರಿನ ಚಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ ವತಿಯಿಂದ **ರೂ. 1.48** ಕೋಟಿ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣ | ಬೆಂಗಳೂರಿನ ದೇವನಹಳ್ಳಿ ಮತ್ತು ಮಂಗಳೂರಿನಲ್ಲಿ **ರೂ. 7.58** ಕೋಟಿಗಳ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣಕ್ಕೆ ಕ್ರಮ

ನೋಂದಾಯಿತ ವಾಹನಗಳ ನಿಷ್ಕ್ರಿಯಪಡಿಸುವ ನೀತಿ (RVSF)

ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಸ್ಕ್ರ್ಯಾಪ್ ಮಾಡುವ RVSF ಯೋಜನೆ | ಇದುವರೆಗೂ **11,368** ವಾಹನಗಳ ನಿಷ್ಕ್ರಿಯಗೊಳಿಸಲಾಗಿದೆ

ಡ್ರೈವರ್ ಡ್ರೋಜಿನೆಸ್ & ಅಟೆನ್ಷನ್ ವಾರ್ನಿಂಗ್ ಸಿಸ್ಟಮ್ (DD & AWS)

300 ಕೆ ಎಸ್ ಆರ್ ಟಿ ಸಿ ಬಸ್ಸುಗಳಲ್ಲಿ **ರೂ. 2.50** ಕೋಟಿಗಳ ವೆಚ್ಚದಲ್ಲಿ Driver Drowsiness & Attention Warning ಸಾಧನಗಳ ಅಳವಡಿಕೆ

Vehicle Location Tracking Device & Emergency Button ಅಳವಡಿಸುವ ಯೋಜನೆ

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ **2,25,560** ಸಾರ್ವಜನಿಕ ಸೇವಾ ವಾಹನಗಳಲ್ಲಿ VLTD and Panic Button ಅಳವಡಿಕೆ | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ - ಯೋಜನೆಯ ಭಾಗವಾಗಿ **ರೂ. 22.00** ಕೋಟಿಗಳ ವೆಚ್ಚದಲ್ಲಿ ಸಾರಿಗೆ ಆಯುಕ್ತರ ಕಛೇರಿಯಲ್ಲಿ Command and Control Centre ಸ್ಥಾಪನೆ

ಅತಿ ಸುರಕ್ಷಿತ ನೋಂದಣಿ ಫಲಕ (HSRP)

ಕರ್ನಾಟಕ ರಾಜ್ಯದಲ್ಲಿ ಒಟ್ಟು **59** ಲಕ್ಷಕ್ಕೂ ಅಧಿಕ ಸಂಖ್ಯೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳ ಅಳವಡಿಕೆ

ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್

ರೂ. 5.65 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿರುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ **7** ಟೋಲ್ ಪ್ಲಾಜಾಗಳಲ್ಲಿ ಮತ್ತು **80** ವಿವಿಧ ಸ್ಥಳಗಳಲ್ಲಿ **ರೂ. 70.00** ಕೋಟಿ ವೆಚ್ಚದಲ್ಲಿ AI ಆಧಾರಿತ ಕ್ಯಾಮರಾ ಅಳವಡಿಸಲು ಕ್ರಮ

ಸಂಪರ್ಕ ರಹಿತ / ಆನ್ ಲೈನ್ ಸೇವೆಗಳು

ಸಾರಥಿ - **15** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ಸಾರಥಿ - **16** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **9** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **12** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆ

ಜಿಯೋ ಫೆನ್ಸಿಂಗ್

ಜಿಯೋ ಫೆನ್ಸಿಂಗ್ ಆಧಾರಿತ m-Vahan Fitness App ಅನ್ನು **66** ಆರ್‌ಟಿಒಗಳಲ್ಲಿ ಜಾರಿ | ಪರಿಶೀಲನೆ ಬಳಿಕವೇ ವಾಹನಗಳ ಅರ್ಹತಾ ಪ್ರಮಾಣ ಪತ್ರ ನೀಡಿಕೆ

ಕೇಂದ್ರಿಕೃತ ಮುದ್ರಣ ಸೌಲಭ್ಯ (CPF)

ಮೈಕ್ರೋಚಿಪ್ ಆಧಾರಿತ RC & DL Smart card ವ್ಯವಸ್ಥೆ | ಕೇಂದ್ರಿಕೃತ ಮುದ್ರಣ ಸೌಲಭ್ಯ | ಈ ಯೋಜನೆಯನ್ನು ಜಾರಿಗೆ ತರುವಲ್ಲಿ ರಾಜ್ಯವು **4ನೇ** ಸ್ಥಾನದಲ್ಲಿದೆ

ರೆಟ್ರೋರಿಫ್ಲೆಕ್ಟೀವ್ ಟೇಪ್

ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಿಗೆ **Retro Reflective Tape & rear marking plate** ಅಳವಡಿಕೆ

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿ

ಮೋಟಾರು ಸಾರಿಗೆ ಸಂಬಂಧಿತ ಕಾರ್ಮಿಕರ ಮಂಡಳಿಯು ಪ್ರಸ್ತುತ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ/ ಸಾರಿಗೆ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಬಂಧ ಸಂಪುಟ ಅನುಮೋದನೆ ದೊರಕಿದೆ/ ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಒಪ್ಪಿಗೆ ಪಡೆದು ಸಾರಿಗೆ ಇಲಾಖೆಯ ವ್ಯಾಪ್ತಿಗೆ ತರಲಾಗುವುದು | ಸದರಿ ಮಂಡಳಿಯಡಿಯಲ್ಲಿ ವಿದ್ಯಾರ್ಥಿ ವೇತನ, ಅಪಘಾತ ಪರಿಹಾರ, ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ, ವಿವಾಹ ವೆಚ್ಚ, ಫಲಾನುಭವಿ/ಫಲಾನುಭವಿಯ ಪತ್ನಿಗೆ ಹೆರಿಗೆ ಭತ್ಯೆ, ಮಕ್ಕಳಿಗೆ ಶೈಕ್ಷಣಿಕ ಸಹಾಯ, ಭವಿಷ್ಯ ನಿಧಿ, ವಸತಿ ಹಾಗೂ ವೃದ್ಧಾಶ್ರಮ ಸೌಲಭ್ಯ ಒದಗಿಸಲಾಗುವುದು

ಹೊಗೆ ತಪಾಸಣೆ ಪ್ರಮಾಣ ಪತ್ರಕ್ಕೆ ಹೊಸ ತಂತ್ರಾಂಶ ಅಭಿವೃದ್ಧಿ

5,95,000 ವಾಹನಗಳ ತಪಾಸಣೆ ಹಾಗೂ ಪ್ರಮಾಣ ಪತ್ರಗಳ ನೀಡಿಕೆ



ಮಾನ್ಯ ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ರಸ್ತೆ ಸುರಕ್ಷತಾ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ
1ನೇ ಮಹಡಿ, ಟಿಟಿಎಂಸಿ ಕಟ್ಟಡ, 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027
ವೆಬ್ ಸೈಟ್: www.transport.karnataka.gov.in ಇ-ಮೇಲ್: transcom@nic.in ದೂ.ಸಂ.: 080-22214900

ಸಂಪಾದಕೀಯ

ಕೇರಳ: ಕಾಂಗ್ರೆಸ್ ಗಜಪ್ರಸವ

ಕೇರಳದ ನೂತನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಕಾಂಗ್ರೆಸಿನ ಪಾಲಿಗೆ ಗಜಪ್ರಸವವೇ ಆದಂತಾಯಿತು. ಚುನಾವಣಾ ಫಲಿತಾಂಶ ಪ್ರಕಟವಾಗಿ ಹತ್ತು ದಿನಗಳ ಬಳಿಕ ಈ ಆಯ್ಕೆ ನಡೆದುದು ಕಾಂಗ್ರೆಸ್ ಅನುಭವಿಸಿದ ಇಕ್ಕಟ್ಟನ್ನು ಮತ್ತು ಧರ್ಮಸಂಕಟವನ್ನು ಸಾರಿ ಹೇಳುತ್ತದೆ. ಮೊದಲಿಗೆ ಮೂವರು ಸ್ಪರ್ಧಿಗಳಿದ್ದರೂ ಬಳಿಕ ಇಬ್ಬರು ಪ್ರಮುಖ ಸ್ಪರ್ಧಿಗಳಾಗಿ ಉಳಿದಿದ್ದರು. ಕೊನೆಗೆ ಡಿ.ಸತೀಶನ್ ಅವರು ಮುಖ್ಯಮಂತ್ರಿ ಹುದ್ದೆಗೆ ಆರಿಸಲ್ಪಟ್ಟರು. ಅಚ್ಚರಿಯೆಂದರೆ ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿಯಾಗಿ ಹೈಕಮಾಂಡ್ ಆರಿಸಿದ್ದೆಂದು ಹೇಳಲಾಗುತ್ತಿದ್ದರೂ ಅವರು



ಆಯ್ಕೆಯಾಗಿರುವುದು ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ, ಅದರಲ್ಲೂ ಮುಖ್ಯವಾಗಿ ರಾಹುಲ್ ಗಾಂಧಿ ಪಾಲಿಗೆ ದೊಡ್ಡ ಹಿನ್ನಡೆಯೆಂದೇ ಪರಿಗಣಿಸಲಾಗಿದೆ. ರಾಹುಲ್ ಗಾಂಧಿಗೆ ಪರಮಾಪ್ತರಾಗಿರುವ ವೇಣುಗೋಪಾಲ್ ಅವರೇ ಮುಖ್ಯಮಂತ್ರಿಯಾಗುವರೆಂಬುದು ಬಹುತೇಕರ ನಿರೀಕ್ಷೆಯಾಗಿತ್ತು. ರಾಹುಲ್ ಗಾಂಧಿ ಕೂಡಾ ವೇಣುಗೋಪಾಲ್ ಅವರನ್ನೇ ಮುಖ್ಯಮಂತ್ರಿ ಮಾಡಲು ಒಲವು ತೋರಿದ್ದರು. ಆದರೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಸತೀಶನ್ ಪರವಾಗಿ ಪಟ್ಟು ಹಿಡಿದ ಕಾರಣದಿಂದಾಗಿ ಕಾಂಗ್ರೆಸ್ ಹೈಕಮಾಂಡ್ ಮಣಿಯಲೇ ಬೇಕಾಗಿದೆ ಬಂದಿದೆ. ಅದಕ್ಕಿಂತಲೂ ಮುಖ್ಯವಾಗಿ ಯುಡಿಎಫ್‌ನ ಪ್ರಮುಖ ಅಂಗಪಕ್ಷವಾಗಿರುವ ಮುಸ್ಲಿಂಲೀಗ್ ಒತ್ತಡಕ್ಕೆ ಕಾಂಗ್ರೆಸ್ ಮಣಿಯಿತೆಂದು ಹೇಳುವುದು ಹೆಚ್ಚು ಸೂಕ್ತವಾದೀತು.

ಸತೀಶನ್ ಅವರನ್ನೆ ಮುಖ್ಯಮಂತ್ರಿಯಾಗಿ ಮಾಡಬೇಕೆಂಬುದು ಮುಸ್ಲಿಂಲೀಗ್‌ನ ಒತ್ತಾಯವಾಗಿತ್ತು ಎಂಬುದು ರಹಸ್ಯ ವಿಚಾರವೇನಲ್ಲ. ಮೈತ್ರಿ ಪಕ್ಷವೊಂದು ಕಾಂಗ್ರೆಸಿನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ನಿರ್ಧರಿಸುವಲ್ಲಿ ಒತ್ತಡ ತಂತ್ರ ಪ್ರಯೋಗಿಸಿತೆಂಬುದು ಮತ್ತು ಅದರಲ್ಲಿ ಸಫಲವೂ ಆಯಿತೆಂಬುದು ಕಾಂಗ್ರೆಸಿನ ಹೈಕಮಾಂಡ್ ಹಾಗೂ ರಾಹುಲ್ ಗಾಂಧಿಯ ವರ್ಚಸ್ಸಿಗೆ ಬಿದ್ದ ಪೆಟ್ಟು.

ಆದರೆ ಕಾಂಗ್ರೆಸಿನ ಮುಖ್ಯಮಂತ್ರಿಯಾಗಲು ಸತೀಶನ್ ಅವರೇ ಹೆಚ್ಚು ಅರ್ಹರಾಗಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ಕಳೆದ ಐದು ವರ್ಷಗಳಲ್ಲಿ ವಿಪಕ್ಷ ನಾಯಕರಾಗಿ ಅವರು ಪಿಣರಾಯಿ ಸರಕಾರದ ವಿರುದ್ಧ ಸಮರ್ಥವಾಗಿ ಹೋರಾಟ ಸಂಘಟಿಸಿದ್ದರು. ಚುನಾವಣೆಯಲ್ಲಿ ಕಾಂಗ್ರೆಸಿನ ಮುಂಚೂಣಿ ನಾಯಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕಾಂಗ್ರೆಸ್ ಅಧಿಕೃತವಾಗಿ ಪ್ರಕಟಿಸಿರದಿದ್ದರೂ ಜನರು ಅವರನ್ನೇ ಮುಖ್ಯಮಂತ್ರಿಯಾಗಿ ಕಣ್ಣ ಮುಂದಿಟ್ಟುಕೊಂಡೇ ಮತ ಚಲಾಯಿಸಿದ್ದರು. ಹಾಗಾಗಿ ಅವರ ಬದಲಾಗಿ ಹೈಕಮಾಂಡ್ ಬೇರೆ ಮುಖ್ಯಮಂತ್ರಿಯನ್ನು ಹೇರಿದ್ದರೆ, ಅದು ಕರ್ನಾಟಕ, ಹರ್‍ಯಾನಗಳಲ್ಲಿ ಮಾಡಿದ ತಪ್ಪನ್ನೇ ಪುನರಾವರ್ತಿಸಿದಂತಾಗುತ್ತಿತ್ತು. ಕಾಂಗ್ರೆಸ್ ಮತ್ತೊಂದು ಬಿಕ್ಕಟ್ಟನ್ನು ತಾನಾಗಿ ಆಹ್ವಾನಿಸಿದಂತಾಗುತ್ತಿತ್ತು.

ಹೊಸ ಮುಖ್ಯಮಂತ್ರಿಯ ಮುಂದೆ ದೊಡ್ಡ ಸವಾಲುಗಳಿರುವುದೂ ಸುಳ್ಳಲ್ಲ. ಅವನ್ನು ಹೇಗೆ ನಿಭಾಯಿಸುವರೆಂದು ಕಾದು ನೋಡಬೇಕು.

ಮಿತವ್ಯಯ ಕರೆ: ಈ ಪರಿಯ ಆಕ್ರೋಶ ಏಕೆ?

ಪ್ರಧಾನಿ ಮೋದಿ ಅವರ ಮಿತವ್ಯಯ ಕರೆಯ ವಿರುದ್ಧ ಒಂದು ವರ್ಗ, ಕೆಲವು ರಾಜಕೀಯ ಪಕ್ಷಗಳು ಆಕ್ರೋಶ ವ್ಯಕ್ತಪಡಿಸುತ್ತಿರುವುದು ಏಕೆ?

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಅಮೆರಿಕ -ಇರಾನ್, ರಷ್ಯಾ-ಉಕ್ರೇನ್ ನಡುವಿನ ದೀರ್ಘಕಾಲದ ಸಂಘರ್ಷದಿಂದಾಗಿ ಹೆಚ್ಚು ತೊಂದರೆ, ಸಂಕಟ ಪಡುತ್ತಿರುವ ದೇಶಗಳಲ್ಲಿ ಭಾರತ ಪ್ರಮುಖವಾದುದು. 140 ಕೋಟಿ ಜನಸಂಖ್ಯೆಯುಳ್ಳ ಬೃಹತ್ ದೇಶ ಭಾರತ ಕಚ್ಚಾ ಇಂಧನಕ್ಕಾಗಿ ಇರಾನ್, ಇರಾಕ್, ಸೌದಿ ಅರೇಬಿಯಾ ಹಾಗೂ ರಷ್ಯಾ ದೇಶಗಳ ಮೇಲೆ ಅವಲಂಬಿತವಾಗಿರಬೇಕಾದದು ಅನಿವಾರ್ಯ. ಯಾವುದೇ ಒಂದು ದೇಶ ತನಗೆ ಅಗತ್ಯವಿರುವ ಎಲ್ಲಾ ಸಾಮಗ್ರಿ ವಸ್ತುಗಳನ್ನು ತಾನೇ ಉತ್ಪಾದಿಸಿ ಆತ್ಮನಿರ್ಭರವೆನಿಸಿಕೊಳ್ಳುವುದು ಅಸಾಧ್ಯ. ತನ್ನಲ್ಲಿಲ್ಲದ ಅಗತ್ಯ ವಸ್ತುಗಳಿಗೆ ಪರದೇಶಗಳ ನೆರವು ಪಡೆಯಲೇಬೇಕಾಗುತ್ತದೆ. ಅದು ಸಹಜ ಜಾಗತಿಕ ವ್ಯಾಪಾರ-ವ್ಯವಹಾರಸೂತ್ರವೂಹೌದು. ಭಾರತದಲ್ಲಿ ಕಚ್ಚಾತೈಲದ ಉತ್ಪಾದನೆ ಕೇವಲ ಶೇಕಡ 15-18 ರಷ್ಟು ಮಾತ್ರ. ಶೇಕಡ 85 ರಷ್ಟು ಕಚ್ಚಾತೈಲವನ್ನು ಭಾರತ ವಿದೇಶಗಳಿಂದಲೇ ಆಮದು ಮಾಡಿಕೊಳ್ಳಬೇಕಾಗುತ್ತದೆ ಎಂಬುದು ಆರ್ಥಿಕ ಕ್ಷೇತ್ರದ ತಿಳುವಳಿಕೆಯುಳ್ಳವರಿಗೆಲ್ಲ ತಿಳಿದಿರುವ ಸಂಗತಿಯೇ.

ಅಮೆರಿಕ-ಇರಾನ್ ನಡುವೆ ಭೀಕರ ಕದನ ಶುರುವಾದಾಗಲೇ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಗಗನಕ್ಕೇರಲಿದೆ ಎಂಬುದನ್ನು ಬಹುತೇಕರು ಊಹಿಸಿದ್ದರು. ಹಾಗಿದ್ದರೂ ಕೇಂದ್ರದ ಮೋದಿ ಸರಕಾರ ಇದುವರೆಗೂ ಬೆಲೆ ಏರಿಸಿರಲಿಲ್ಲ. ಯುದ್ಧ ಶೀಘ್ರವೇ ಸ್ಥಗಿತಗೊಂಡು ಪರಿಸ್ಥಿತಿ ತಿಳಿಯಾಗಬಹುದು ಎಂಬ ಆಶಯವೇ ಬೆಲೆ ಏರಿಸದಿರುವುದಕ್ಕೆ ಮುಖ್ಯ ಕಾರಣ ಇದ್ದಿರಬಹುದು. ಆದರೆ ಈಗಿನ ಸ್ಥಿತಿ ಗಮನಿಸಿದರೆ ಸದ್ಯಕ್ಕೆ ಯುದ್ಧ ನಿಲ್ಲುವಂತೆ ಕಾಣಿಸುತ್ತಿಲ್ಲ. ಯುದ್ಧ ನಿಂತರೂ ತೈಲ ಹೊತ್ತ ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ಅನಾಯಾಸವಾಗಿ ದಾಟಿಬರುವ ಸನ್ನಿವೇಶ ಕಂಡುಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಈಗ ಅನಿವಾರ್ಯವಾಗಿ ಪೆಟ್ರೋಲ್ ಡೀಸೆಲ್‌ಗಳ ಬೆಲೆಯಲ್ಲಿ ಕೊಂಚ ಏರಿಕೆ ಮಾಡಿದೆ. ಹಾಗೆ ನೋಡಿದರೆ ಬೇರೆ ದೇಶಗಳ ಹೋಲಿಕೆಯಲ್ಲಿ ಇದೇನು ದೊಡ್ಡ ಮೊತ್ತದ ಏರಿಕೆಯಲ್ಲ. ಭಾರತೀಯ ಕರೆನ್ಸಿಯಲ್ಲಿ ಅಮೆರಿಕದಲ್ಲಿ ಲೀಟರ್‌ಗೆ ರೂ.103, ಸಿಂಗಾಪುರದಲ್ಲಿ ರೂ.240, ಯುರೋಪ್‌ನಲ್ಲಿ ರೂ.210, ಬ್ರೆಜಿಲ್‌ನಲ್ಲಿ ರೂ.128.63, ಇಟಲಿಯಲ್ಲಿ ರೂ.202.54, ಶ್ರೀಲಂಕಾದಲ್ಲಿ ರೂ.140.15, ಜರ್ಮನಿಯಲ್ಲಿ ರೂ.237.10, ಮೆಕ್ಸಿಕೋದಲ್ಲಿ ರೂ.129.59... ಭಾರತದಲ್ಲಾದರೂ ಈಗ ರೂ.106.17. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ್ದು ಕಡಿಮೆ ಬೆಲೆ ಏರಿಕೆ.

ಭಾರತ ಪ್ರತಿದಿನ ಅಂದಾಜು 48 ಲಕ್ಷ ಬ್ಯಾರೆಲ್ ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿದೆ. ಇದು ನಮ್ಮ ಒಟ್ಟು ತೈಲ ಬೇಡಿಕೆಯ ಶೇಕಡ 89 ರಷ್ಟು. ಒಂದು ಬ್ಯಾರಲ್‌ಗೆ ಇದುವರೆಗೆ ಇದ್ದ ಬೆಲೆ 110 ಡಾಲರ್. ಒಂದು ಡಾಲರ್‌ಗೆ 84 ರೂಪಾಯಿ ಎಂದಿಟ್ಟುಕೊಳ್ಳಿ. (ರೂಪಾಯಿ ಬೆಲೆ ದಿನೇ ದಿನೇ ಕುಸಿಯುತ್ತಲೇ ಇದೆ ಕೂಡಾ) ಒಂದು ದಿನಕ್ಕೆ ವಿದೇಶಕ್ಕೆ ಹೋಗುವ ಹಣ ರೂ. 4,435 ಕೋಟಿ. ಒಂದು ತಿಂಗಳಿಗೆ ರೂ.1,33,000 ಕೋಟಿ. ಒಂದು ವರ್ಷಕ್ಕೆ ರೂ.16 ಲಕ್ಷ ಕೋಟಿ. ಪ್ರತಿ ನಿಮಿಷಕ್ಕೆ 3 ಕೋಟಿ ರೂಪಾಯಿ ಹಣ ಈ ದೇಶ ಬಿಟ್ಟು ಹೋಗುತ್ತಿದೆ.

ಇದಲ್ಲದೆ ಐಓಸಿ, ಬಿಪಿಸಿಎಲ್, ಎಚ್‌ಪಿಸಿಎಲ್ ಎಂಬ ರಾಷ್ಟ್ರೀಯ ತೈಲ ಶುದ್ಧೀಕರಣ ಕಂಪನಿಗಳು ತಿಂಗಳಿಗೆ 30,000 ಕೋಟಿ ರೂಪಾಯಿ ನಷ್ಟ ಭರಿಸುತ್ತಿವೆ. ಪ್ರತಿ ಲೀಟರ್ ಪೆಟ್ರೋಲ್‌ಗೆ ರೂ.18-20 ನಷ್ಟ, ಡೀಸಲಿಗೆ ರೂ.35ರಿಂದ 100 ನಷ್ಟವನ್ನು ಸ್ವತಃ ಹೊರುತ್ತಿವೆ. ಹೀಗಿದ್ದರೂ 2022 ಏಪ್ರಿಲ್‌ನಿಂದ ಇಲ್ಲಿವರೆಗೆ ಪೆಟ್ರೋಲ್ ಬೆಲೆ ಏರಿಕೆಯಾಗದೆ ಹಾಗೆ ಉಳಿದಿದೆ. ಹಾಗಿರುವಾಗ ಈಗ ಅತ್ಯಲ್ಪ ಪ್ರಮಾಣದ ಏರಿಕೆ ಮಾಡಿದರೆ ಅದಕ್ಕೆ ಏಕಿಷ್ಟು ಆಕ್ರೋಶ?

ಅಷ್ಟಕ್ಕೂ ಪ್ರಾಕೃತಿಕ ಕೊಡುಗೆಯಾಗಿರುವ ಪೆಟ್ರೋಲನ್ನು ಎಲ್ಲೆಂದರಲ್ಲಿ ಬಾವಿ ತೋಡಿ ಹೊರತೆಗೆಯಲು ಸಾಧ್ಯವೇ? ಅದು ಎಲ್ಲಿ ಲಭ್ಯವೋ ಅಲ್ಲಿಂದಲೇ ತರಬೇಕು. ವಿದೇಶಗಳಿಂದ ತರಿಸಬೇಕಾಗಿರುವುದರಿಂದಲೇ ಇಂಧನದ ಬೆಲೆ ದುಬಾರಿಯಾಗಲು ಕಾರಣ.

1973ರಲ್ಲಿ ಅರಬ್ ದೇಶಗಳು 'ಅರಬ್ ಆಯಿಲ್ ಎಂಬಾರ್ಗೋ' ಸೂತ್ರದಂತೆ ತೈಲ ಪೂರೈಕೆ ನಿಲ್ಲಿಸಿದಾಗ ಭಾರತ ಮೊದಲ ಬಾರಿ ತೈಲಾಘಾತ ಎದುರಿಸಬೇಕಾಗಿತ್ತು. ಆ ಬಿಕ್ಕಟ್ಟು ಭಾರತಕ್ಕೊಂದು ಸ್ಪಷ್ಟ ಸಂದೇಶ ನೀಡಿತು. ಇನ್ನಾದರೂ ವಿದೇಶಿ ತೈಲ ಅವಲಂಬನೆಗೆ ಮಂಗಳ ಹಾಡಿ ಎಂಬ ಸಂದೇಶ ಅದು. ವಿದೇಶಿ ತೈಲ ಅವಲಂಬನೆ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಅಪಾಯ ಎಂಬ ಸಂದೇಶವದು. ಭಾರತ ಮಾಡಿದ್ದೇನು? ಏನೂ ಮಾಡಲಿಲ್ಲ. 50 ವರ್ಷಗಳು ಕಳೆದಿದ್ದರೂ ನಮಗೆ ಈಗಲೂ ಅರಬ್ ತೈಲವೇ ಗತಿ. ವಿಶ್ವದ ಒಟ್ಟು ತೈಲ ಪ್ರಮಾಣದ ಶೇಕಡ 20ರಷ್ಟು ಹಡಗು ಹಾದು ಹೋಗುವ ಹೊರ್ಮುಜ್ ಜಲಸಂಧಿ ಯುದ್ಧದ ಕರಿ ನೆರಳಲ್ಲಿ ಈಗ ಮುಚ್ಚಿ ಹೋಗಿದೆ. ಭಾರತಕ್ಕೆ ತೈಲ ಬರುವುದಾದರೂ ಹೇಗೆ ?

ಬೇರೆ ದೇಶಗಳಿಗೂ ಆಗ ನಮ್ಮದೇ ಸ್ಥಿತಿಯಿತ್ತು. ಆದರೆ ಅವೆಲ್ಲ ಸುಮ್ಮನೆ ಕೂರಲಿಲ್ಲ. ನಾರ್ವೆ ತಾನೇ ತೈಲ ಉತ್ಪಾದಿಸುವ ದೇಶವಾಗಿದ್ದರೂ ಅಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ಆದ್ಯತೆ ನೀಡಲಾಯಿತು. ಹಾಗಾಗಿ 2023ರಲ್ಲಿ ಅಲ್ಲಿ ಮಾರಾಟವಾದ ಹೊಸ ವಾಹನಗಳಲ್ಲಿ ಶೇಕಡ 90ರಷ್ಟು ಎಲೆಕ್ಟ್ರಿಕ್ ವಾಹನಗಳು. ಚೀನಾದಲ್ಲಿ 2023ರಲ್ಲಿ ಮಾರಾಟವಾದ ಎಲೆಕ್ಟ್ರಿಕ್ ವಾಹನ 60 ಲಕ್ಷ. ಅದು ಲಿಥಿಯಂ ಬ್ಯಾಟರಿ ತಯಾರಿಕೆಯಲ್ಲಿ ವಿಶ್ವಕ್ಕೆ ನಂಬರ್ ಒನ್ ಆಯಿತು. ಸಾವಿರಾರು ಕೋಟಿ ಹೂಡಿಕೆ ಮಾಡಿ 'ಶಕ್ತಿ ಕ್ರಾಂತಿ' ಮಾಡಿತು. ಅದರಿಂದಾಗಿ ಚೀನಾಕ್ಕೆ ಇಂದು ತೈಲ ದೇಶಗಳ ಹಂಗಿಲ್ಲ. ಇಸ್ರೇಲ್‌ನಲ್ಲಿ ಒಂದು ಹನಿ ತೈಲ ಉತ್ಪಾದನೆಯಾಗದು. ಅದು ಅವಲಂಬಿಸಿದ್ದು ಪೂರ್ತಿ ಸೌರ ಶಕ್ತಿಯನ್ನು. ಇಂದು ಸೌರ ಶಕ್ತಿಯಲ್ಲಿ ಅದು ಸ್ವಾವಲಂಬಿ.



ಭಾರತದಲ್ಲಾದರೋ 300 ದಶಲಕ್ಷ ಮನೆಗಳು, ವರ್ಷದಲ್ಲಿ 300 ಬಿಸಿಲಿನ ದಿನಗಳು, ಜಗತ್ತಿನ ಅತಿ ಹೆಚ್ಚು ಯುವ ಜನಸಂಖ್ಯೆ. ಆದರೆ ಸೌರಶಕ್ತಿಯ ಬಳಕೆಯಲ್ಲಿ ನಾವು ಚೀನಾ, ನಾರ್ವೆ, ಇಸ್ರೇಲಿಗಿಂತ ಹಿಂದೆ. ಬಿಸಿಲಿಗೇನೂ ದುಡ್ಡು ಕೊಟ್ಟು ಖರೀದಿಸುವ ಅಗತ್ಯವಿಲ್ಲ. ಆದರೆ ಬೇಸಿಗೆ ಕಾಲದ ಸುಡುಬಿಸಲು ವ್ಯರ್ಥವಾಗಿ ಹೋಗುತ್ತಿದೆ. ಬಿಸಿಲು ಬಳಸಿ ಸೌರಶಕ್ತಿ ನಿರ್ಮಿಸುವ ಕಾರ್ಯದಲ್ಲಿ ನಿರೀಕ್ಷಿತ ವೇಗ ಇಲ್ಲಿಲ್ಲ. ಪರ್ಯಾಯ ಇಂಧನ ತಯಾರಿಕೆಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಯನ್ನು ಪ್ರಕೃತಿ ಧಾರಾಳವಾಗಿ ನೀಡಿದೆ. ಆದರೆ ಅದರ ಸದುಪಯೋಗದ ಬಗ್ಗೆ ನಮಗೆ ಗೊತ್ತಿಲ್ಲ. ಹಾಗಾಗಿ ತೈಲ ದೇಶಗಳಿಗೆ ಜೋತು ಬಿದ್ದು ಸಂಕಟ ಅನುಭವಿಸಬೇಕಾಗಿದೆ.

ಕೇಂದ್ರ ಸರ್ಕಾರ ಸೌರಶಕ್ತಿಗೆ ಗಮನ ಹರಿಸಿಯೇ ಇಲ್ಲ ಎಂದು ಇದರ ಅರ್ಥವಲ್ಲ. 2014ರ ಬಳಿಕ ಸಾಕಷ್ಟು ಗಮನ ಹರಿಸಲಾಗಿದೆ. 'ಪಿಎಂ ಸೂರ್ಯ ಘರ್ ಯೋಜನಾ' ಅಡಿಯಲ್ಲಿ ಸೋಲಾರ್ ಅಳವಡಿಕೆಗೆ ಶೇಕಡ 40 ಸಬ್ಸಿಡಿ ಲಭ್ಯವಿದೆ. ಆದರೆ ಇದನ್ನು ಅಳವಡಿಸಿದವರೆಷ್ಟು? ನಮ್ಮ ಜನಪ್ರತಿನಿಧಿಗಳು ಈ ಬಗ್ಗೆ ಜನರ ಗಮನ ಸೆಳೆಯುವ ಕೆಲಸಕ್ಕೆ ಏಕೆ ಮುಂದಾಗಿಲ್ಲ ?

ಇನ್ನು, ಚಿನ್ನ ಖರೀದಿಸಲೇಬೇಡಿ ಎಂದು ಪ್ರಧಾನಿ ಮೋದಿ ಹೇಳಿಲ್ಲ. ಚಿನ್ನ ಖರೀದಿಯನ್ನು ಮಿತಗೊಳಿಸಿ ಎಂದಷ್ಟೇ ಹೇಳಿದ್ದು. ಭಾರತಕ್ಕೆ ಬೇಕಾದ ಚಿನ್ನ ಕೂಡ ಬರಬೇಕಿರುವುದು ವಿದೇಶಗಳಿಂದಲೇ. ಅದಕ್ಕೆ ಪ್ರತಿಯಾಗಿ ಭಾರತ ಡಾಲರ್ ಕೊಡಬೇಕು. ಡಾಲರ್ ಹೆಚ್ಚು ಬೇಕಾದಷ್ಟು ರೂಪಾಯಿ ದುರ್ಬಲವಾಗುತ್ತದೆ. ದೇಶದ ಆರ್ಥಿಕತೆಗೆ ಪೆಟ್ಟು ಬೀಳುತ್ತದೆ. ಒಂದು ಕುಟುಂಬ 10 ಗ್ರಾಂ ಚಿನ್ನ ಕಡಿಮೆ ಖರೀದಿಸಿದರೆ ರೂ.1.06 ಲಕ್ಷ ರೂ. ಉಳಿತಾಯವಾಗಲಿದೆ. ಇದೇ ನಿರ್ಧಾರವನ್ನು 5 ಕೋಟಿ ಕುಟುಂಬ ಕೈಗೊಂಡರೆ 8 ಲಕ್ಷ ಕೋಟಿ ಉಳಿತಾಯವಾಗಲಿದೆ. ಇದೇನೂ ಕಡಿಮೆ ಮೊತ್ತವಲ್ಲ. ದೇಶದ ರಕ್ಷಣಾ ಬಜೆಟಿನ ಮೂರುಪಟ್ಟು. ಒಂದೊಂದು ಹನಿ ಸೇರಿ ಸಾಗರವಾದಂತೆ. ದೇಶ ಸಂಕಟದ ಪರಿಸ್ಥಿತಿ ಎದುರಿಸುತ್ತಿರುವಾಗ ನಾವು ಇಷ್ಟನ್ನೂ ಮಾಡಲಾರೆವೆ?

ಪ್ರಧಾನಿ ಮೋದಿ ಅವರ ಮಿತವ್ಯಯ ಕರೆಯ ವಿರುದ್ಧ ಒಂದು ವರ್ಗ, ಕೆಲವು ರಾಜಕೀಯ ಪಕ್ಷಗಳು ಭಾರೀ ಆಕ್ರೋಶ ವ್ಯಕ್ತಪಡಿಸುತ್ತಿವೆ. ಅದೇಕೆ ಎಂಬುದೇ ಆಶ್ಚರ್ಯ. ದೇಶ ಆರ್ಥಿಕ ಸಂಕಟ ಪರಿಸ್ಥಿತಿ ಎದುರಿಸಿದಾಗ ಈ ಹಿಂದೆ ಪ್ರಧಾನಿಗಳಾಗಿದ್ದ ಇಂದಿರಾ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಕೂಡ ಇಂಥದ್ದೇ ಕರೆ ಕೊಟ್ಟಿದ್ದರು ಎಂಬುದನ್ನು ಮರೆತರೆ ಹೇಗೆ? ಶಾಸ್ತ್ರಿ ಪ್ರತಿ ಸೋಮವಾರ ಒಂದು ಹೊತ್ತಿನ ಊಟ ತ್ಯಜಿಸಿ ಎಂದು ಕರೆ ನೀಡಿದ್ದರು. ಆಗ ತೀವ್ರ ಬರಗಾಲ ಕಾಡಿತ್ತು. ಪ್ರಧಾನಿ ಮೋದಿ ನೀವು ಊಟ ತ್ಯಜಿಸಿ, ಚಹಾ ಕುಡಿಯಬೇಡಿ ಎಂದೇನು ಕರೆ ಕೊಟ್ಟಿಲ್ಲವಲ್ಲ. ಚಿನ್ನ ಕಡಿಮೆ ಖರೀದಿಸಿ, ನಿಮ್ಮ ಹೊರಗಿನ ಓಡಾಟಗಳಿಗೆ ಮಿತಿಹಾಕಿ ಇಂಧನ ಉಳಿಸಿ ಎಂಬರ್ಥದ ಕರೆಗೂ ಆಕ್ರೋಶವೆ? 'ನಮ್ ದುಡ್ಡು ನಮ್ಮಿಷ್ಟ. ಮೋದಿ ಯಾರು ಇದನ್ನೆಲ್ಲ ಹೇಳೋಕೆ?' ಎಂದು ತೀರಾ ಬಾಲಿಶವಾಗಿ ಆಡುವವರಿಗೇನು ಮಾಡಲಾದೀತು. ಪ್ರಧಾನಿಯ ಕರೆಯನ್ನು ಅಪಾರ್ಥ ಮಾಡಿಕೊಂಡ ಶತಮೂರ್ಖರು ಎಂದಷ್ಟೇ ಹೇಳಬಹುದು .

ಆದರೆ ಪ್ರಧಾನಿಯ ಮಿತವ್ಯಯ ಕರೆಗೆ ಬಹಳಷ್ಟು ಮಂದಿ ಸ್ಪಂದಿಸಿರುವುದು ಈ ದೇಶದಲ್ಲಿ ಪ್ರಜ್ಞಾವಂತ ಮನಸ್ಸುಗಳು ಸಾಕಷ್ಟಿವೆ ಎಂಬುದಕ್ಕೆ ದ್ಯೋತಕ. ಎಲ್ಲರಿಗಿಂತಲೂ ನ್ಯಾಯಾಂಗ ಮಿತವ್ಯಯ ಮಂತ್ರ ಪಠಿಸಿರುವುದು ಶುಭ ಸಂಕೇತ. ಸುಪ್ರೀಂ ಕೋರ್ಟ್ ಶೇಕಡ 50ರಷ್ಟು ಸಿಬ್ಬಂದಿಗೆ ವಾರಕ್ಕೆ ಎರಡು ದಿನ ವರ್ಕ್ ಫ್ರಮ್ ಹೋಮ್‌ಗೆ ಅವಕಾಶ ಕಲ್ಪಿಸಲು ನಿರ್ಧರಿಸಿದೆ. ಜೊತೆಗೆ ನ್ಯಾಯಮೂರ್ತಿಗಳ ನಡುವೆ ಕಾರ್ ಪೂಲಿಂಗ್ ವ್ಯವಸ್ಥೆ ಮಾಡಿಕೊಳ್ಳಲು ತಿಳಿಸಿದೆ. ಮಧ್ಯಪ್ರದೇಶ ಹೈಕೋರ್ಟ್ ನ್ಯಾಯಾಧೀಶರೊಬ್ಬರು ಸೈಕಲ್‌ನಲ್ಲಿ ಕೋರ್ಟಿಗೆ ಆಗಮಿಸಿ ಮೋದಿ ಕರೆಗೆ ಬೆಂಬಲ ನೀಡಿದ್ದಾರೆ. ಸ್ವತಃ ಪ್ರಧಾನಿ ಅವರೇ ತಮ್ಮ ಬೆಂಗಾವಲು ವಾಹನ ಕಡಿತಕ್ಕೆ ಆದೇಶಿಸಿದ್ದಾರೆ. ಸಚಿವರು ಅಧಿಕಾರಿಗಳ ಅನವಶ್ಯಕ ದೇಶಿಯ-ವಿದೇಶಿಯ ಪ್ರಯಾಣಕ್ಕೆ ಕಡಿವಾಣ, ಸೆಮಿನಾರ್-ಸಮ್ಮೇಳನಗಳನ್ನು ಆನ್ಲೈನ್‌ನಲ್ಲಿ ನಡೆಸುವುದು, ಅಧಿಕಾರಿಗಳು ಮೆಟ್ರೋ- ಸಾರ್ವಜನಿಕ ಸಾರಿಗೆ ಬಳಸಲು ಸೂಚನೆ, ವಿಜೃಂಭಣೆ ಕಾರ್ಯಕ್ರಮ, ಸಭೆಗಳಿಗೆ ಕಡಿವಾಣ ಮುಂತಾದ ಸ್ವಾಗತಾರ್ಹ ಉಪಕ್ರಮಗಳನ್ನು ಕೈಗೊಂಡಿರುವುದು ಒಳ್ಳೆಯ ಮೇಲ್ಪಂಕ್ತಿ.

ಈ ಹಿನ್ನೆಲೆಯಲ್ಲಿ ಮೊದಲು ಎಲ್ಲ ಪಕ್ಷದ ರಾಜಕಾರಣಿಗಳು ತಮ್ಮ ಎಗ್ಗಿಲ್ಲದ ದುಂದುವೆಚ್ಚ, ಓಡಾಟಗಳಿಗೆ ಕಡಿವಾಣ ಹಾಕಬೇಕು. ಸಾಧನಾ ಸಮಾವೇಶ, ಅಭಿಮಾನೋತ್ಸವ, ದುಂದುವೆಚ್ಚದ ಅದ್ದೂರಿ ಮದುವೆಗಳು, ಜಯಂತಿ, ಪಾರ್ಟಿ ಇತ್ಯಾದಿ ರಾಜಕೀಯ ಲಾಭ ಗಿಟ್ಟಿಸುವ ಕಾರ್ಯಗಳನ್ನು ಮುಲಾಜಿಲ್ಲದೆ ಸ್ಥಗಿತಗೊಳಿಸಬೇಕು. ಒಂದಿನಿತೂ ಪ್ರಾಣಬೆದರಿಕೆಯಿಲ್ಲದಿದ್ದರೂ ಹಿಂದೆಮುಂದೆ ಬೆಂಗಾವಲು ವಾಹನ, ಗನ್ ಮ್ಯಾನ್ ಸೌಲಭ್ಯ ಸವಿಯುತ್ತಿರುವ ರಾಜಕಾರಣಿಗಳು ಅವೆಲ್ಲವನ್ನು ತ್ಯಜಿಸಿ ಸಾಮಾನ್ಯರಂತೆ ಓಡಾಡಬೇಕು. ಆಗ ಸಾಮಾನ್ಯ ಜನರೂ ಮಿತವ್ಯಯ ಸಾಧಿಸಲು ಮುಂದಾಗುತ್ತಾರೆ. 'ಯಥಾ ರಾಜಾ ತಥಾ ಪ್ರಜಾ' ಎಂಬ ಮಾತೇ ಇದೆಯಲ್ಲವೆ.

ಗೇಮಿಂಗ್ ಡಿಸಾರ್ಡರ್

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಗೇಮಿಂಗ್ ಡಿಸಾರ್ಡರ್ ಎಂಬ ಈ ಲೇಖನದ ಶೀರ್ಷಿಕೆಯೇ ಓದುಗರಿಗೆ ಅರೇ ಇದೇನು, ಎಂದು ಆಶ್ಚರ್ಯ ಮೂಡಿಸಲು ಸಾಕು. ಗೇಮಿಂಗ್ ಡಿಸಾರ್ಡರ್ ಎಂಬುದು ಆಧುನಿಕ ಇಂಟರ್‌ನೆಟ್, ಮೊಬೈಲ್‌ಗಳಲ್ಲಿ ಪ್ರದರ್ಶಿತವಾಗುವ ಆಟಗಳು. ನಾವು ಮದ್ಯ, ಮಾದಕ ವಸ್ತುಗಳು, ಗಾಂಜಾ, ಧೂಮಪಾನ, ಮತ್ತು ಕೊಕೇನ್ ವ್ಯಸನಗಳ ಕುರಿತು ಕೇಳಿದ್ದೇವೆ. ಜೂಜಾಟದ ಜಾಲದಲ್ಲಿ ಬಿದ್ದು ಲಕ್ಷಗಟ್ಟಲೇ ಹಣ ಕಳೆದುಕೊಂಡವರಿದ್ದಾರೆ. ಗೇಮಿಂಗ್ ಡಿಸಾರ್ಡರ್ ಎಂದರೇನು ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಒಂದು ಉದಾಹರಣೆಯನ್ನು ಓದುಗರು ನೆನಪಿಸಿಕೊಳ್ಳಬಹುದು.

ಕಳೆದ ಫೆಬ್ರವರಿ ನಾಲ್ಕನೇ ದಿನಾಂಕದಂದು ಉತ್ತರ ಪ್ರದೇಶದ ಗಜಿಯಾಬಾದ್‌ನಲ್ಲಿ ಹರೆಯದ ಮೂವರು ಸಹೋದರಿಯರು ಒಟ್ಟಿಗೇ ಆತ್ಮಹತ್ಯೆ ಮಾಡಿಕೊಂಡ ಘಟನೆ ಓದುಗರಿಗೆ ನೆನಪಿರಬಹುದು. ಇದಕ್ಕೆ ಕಾರಣ ಕೊರಿಯನ್ ಗೇಮ್ (Korean game) ಎಂಬ ಆನ್‌ಲೈನ್ ಆಟ. ಇದರಂತೆ ಪಬ್ಜೀ ಮತ್ತು ಇತರ ಆನ್‌ಲೈನ್ ಆಟಗಳಿವೆ. ಈ ಆಟಗಳ ಒಂದು ವಿಶಿಷ್ಟತೆ ಎಂದರೆ ಆಟವನ್ನು ಗೆಲ್ಲಲು ಹಲವು ಹಂತಗಳನ್ನು ದಾಟಬೇಕು. ಹರೆಯದವರು ಆನ್‌ಲೈನ್ ಆಟ ಆಡುವಾಗ ತಾವು ಪ್ರತಿ ಹಂತವನ್ನು ದಾಟಬಲ್ಲೆವೆಂಬ ಸ್ಪರ್ಧಾ ಭಾವನೆ ಉಂಟಾಗುತ್ತದೆ. ಅದರ ಆಗುಹೋಗುಗಳನ್ನು ತಿಳಿಯದೇ ಅದೇ ಆಟದಲ್ಲಿ ಮಗ್ನರಾಗಿ, ಕೊನೆಯ ಹಂತದಲ್ಲಿ ಆಟವು ಒಡ್ಡುವ ಷರತ್ತುಗಳಿಗೆ ಮಾರು ಹೋಗಿ ತಮ್ಮ ಜೀವವನ್ನೇ ಕಳೆದುಕೊಳ್ಳುತ್ತಾರೆ. ಗೇಮಿಂಗ್ ಡಿಸಾರ್ಡರ್ ಎನ್ನುವುದು ಹರೆಯದವರನ್ನು ಒಂದು ವಿಧದ ವ್ಯಸನಿಗಳನ್ನಾಗಿ ಮಾಡಿ ಅದರಿಂದ ಹಲವಾರು ದುಷ್ಪರಿಣಾಮಗಳಾಗಬಹುದು. ಅದೇ ರೀತಿ ವೀಡಿಯೋ ಗೇಮ್‌ಗಳು ಹರೆಯದವರ ಮನಸ್ಸಿನ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತವೆ.



ಹರೆಯದವರು ಏಕೆ ಗೇಮಿಂಗ್ ಡಿಸಾರ್ಡರ್ ವ್ಯಸನಕ್ಕೊಳಗಾಗುವಲ್ಲಿ ಹರೆಯದ ಮೆದುಳಿನ ಪಾತ್ರ ಮುಖ್ಯವಾದದ್ದು. ಆಟಗಳಲ್ಲಿ ಎದುರಿಸಬೇಕಾದ ಸವಾಲುಗಳಲ್ಲಿ ಯಶಸ್ವಿಯಾದಾಗ ಅದಕ್ಕೆ ಪ್ರತಿಫಲವಾಗಿ ಸಂತೋಷ ನೀಡುವ ಕೇಂದ್ರಗಳು ಸೂಕ್ಷ್ಮವಾದ ಹರೆಯದ ಮಿದುಳಿನ ನರಕೋಶಗಳಲ್ಲಿರುತ್ತವೆ. ಒಂದು ಸವಾಲಿನಲ್ಲಿ ಗೆದ್ದರೆ, ಆ ಕೂಡಲೇ ಡೋಪಮೀನ್ ಎಂಬ ನರವಾಹಕವು ಹೆಚ್ಚು ಸ್ರವಿಕೆಯಾಗುತ್ತದೆ. ಡೋಪಮೀನ್ ನರವಾಹಕವು ಮನಸ್ಸನ್ನು ಪುಳಕಿತಗೊಳಿಸಿ ಮುಂದಿನ ಹಂತದ ಸವಾಲನ್ನು ಎದುರಿಸಲು ಅಣಿಯಾಗುವ ಭಾವನೆಯನ್ನುಂಟು ಮಾಡುತ್ತದೆ. ಸೋತಾಗ, ಸೋತ ಸವಾಲನ್ನು ಪುನಃ ಎದುರಿಸಿ ಗೆಲ್ಲಲು ಹರೆಯದ ಮನಸ್ಸು ಇಚ್ಛಿಸುತ್ತದೆ. ಛಲ ಬಿಡದ ತ್ರಿವಿಕ್ರಮನಂತೆ ಸೋಲು ಗೆಲುವುಗಳ ಸುಳಿಯಲ್ಲಿ ಸಿಕ್ಕು ಹರೆಯದ ಮನಸ್ಸಿನಲ್ಲಿ ಏನು ಮಾಡಬೇಕೆಂಬ ಗೊಂದಲವುಂಟಾಗುತ್ತದೆ. ಇದರೊಂದಿಗೆ ಜಾಲತಾಣಗಳಲ್ಲಿ ಕಾಣುವ ಸ್ನೇಹಿತರು, ಅವರು ಹುರಿದುಂಬಿಸುವ ವಿಧಗಳು ವಾಸ್ತವ ಎಂದು ಭಾವಿಸಿ ಪುನಃ ಆಡಲು ಮನಸ್ಸು ಹಾತೊರೆಯುತ್ತದೆ. ಇದರಿಂದ ಹರೆಯದ ಮನಸ್ಸಿಗೆ ಹೆಚ್ಚು ಗೊಂದಲ ಉಂಟಾಗಿ ಒತ್ತಡ ಹೆಚ್ಚಾಗುತ್ತದೆ. ಒಂದು ಹಂತದಲ್ಲಿ ಯಶಸ್ಸು ಸಾಧಿಸಲಾಗದೇ ಮನಸ್ಸು ಖಿನ್ನತೆಗೆ ಜಾರುತ್ತದೆ.

ಆನ್‌ಲೈನ್ ಆಟಗಳಂತೆ ಬೇರೆ ಬೇರೆ ಆಟಗಳಲ್ಲಿ, ಯಾಕೆ ವ್ಯಸನಗಳು ಅಂಟಿಕೊಳ್ಳುವುದಿಲ್ಲ ಎಂಬುದು ಓದುಗರ ಪ್ರಶ್ನೆ. ಆನ್‌ಲೈನ್ ಆಟಗಳನ್ನು ವಿಶಿಷ್ಟ ರೀತಿಯಲ್ಲಿ ವಿನ್ಯಾಸಗೊಳಿಸಿರುತ್ತಾರೆ. ಆಟದ ಸವಾಲುಗಳ ಹಂತಗಳನ್ನು ಯಶಸ್ವಿಯಾಗಿ ಪೂರೈಸಿದಾಗ, ಹೆಚ್ಚು ಹೆಚ್ಚು ಡೋಪಮೀನ್ ನರವಾಹಕವು ಸ್ರವಿಸಿ, ಆದರಿಂದ ಸಂತೋಷ ಹೆಚ್ಚಾಗಿ ಮುಂದಿನ ಹಂತವನ್ನು ಸಾಧಿಸಲು ಮನಸ್ಸು ಕಾತುರಪಡುತ್ತದೆ. ಇದೇ ಒಂದು ಗೀಳಾಗಿ ಪರಿಣಮಿಸಿ, ಹರೆಯದ ಮನಸ್ಸು ವ್ಯಸನಕ್ಕೆ ಬಲಿಯಾಗುತ್ತದೆ. ಈ ವಿಧದಲ್ಲಿ ಹರೆಯದವರು ಒಂದು ಸುಳಿಯಲ್ಲಿ ಸಿಕ್ಕು ಹೊರಬರಲು ಅಸಹಾಯಕರಾಗುತ್ತಾರೆ. ಇಮೋಜೀ ಮೂಲಕ ಹೊಗಳುವ ಸಂದೇಶ ಕಳಿಸುತ್ತಾರೆ. ಆಟದಲ್ಲಿ ಒಂದು ಹಂತದಲ್ಲಿ ಸೋತರೆ, ಇಲ್ಲಿ ಇನ್ನೂ ಮುಂದುವರೆಸು ಎಂಬ ಸಲಹೆಗಳು ಸಂದೇಶಗಳು ವೀಕ್ಷಕರಿಂದ ಬರುತ್ತವೆ. ಇದನ್ನು ನೋಡಿದ ಹರೆಯದ ಮನಸ್ಸಿಗೆ ಏನಾದರಾಗಲೀ ತಾನು ಗೆಲ್ಲಲೇಬೇಕೆಂಬ ಹಟ ಪ್ರಾರಂಭವಾಗಿ ಅಂತಿಮ ಹಂತ ತಲುಪಲು ತೀರ್ಮಾನಿಸುತ್ತದೆ. ಇದು ಒಂದು ವಿಧದಲ್ಲಿ ವಿಷವರ್ತುಲವಾಗಿ ಪರಿಣಮಿಸುತ್ತದೆ. ಇದರಿಂದ ಹರೆಯದವರ ಮನೋಸ್ಥಿತಿಯು ನಕಾರಾತ್ಮಕ ಭಾವನೆಗಳಿಗೆ ತುತ್ತಾಗಿ ಅದು ಆತ್ಮಹತ್ಯೆಯಲ್ಲಿ ಕೊನೆಗೊಳ್ಳಬಹುದು.

ಅತಿಯಾಗಿ ಆನ್‌ಲೈನ್ ಆಟ ಆಡುವುದರಿಂದ ಹರೆಯದವರಲ್ಲಿ ಹಲವಾರು ನಡವಳಿಕಾ ಸಮಸ್ಯೆಗಳು ಪ್ರಾರಂಭವಾಗುತ್ತವೆ. ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಆಟದಲ್ಲಿ ತಲ್ಲೀನರಾಗಿ ರಾತ್ರಿಯಲ್ಲಿ ನಿದ್ದೆಗೆಟ್ಟಾಗ ನಿದ್ರೆಯಲ್ಲಿ ವ್ಯತ್ಯಾಸವಾಗುತ್ತದೆ. ಕೆಲವರು ಹಗಲೆಲ್ಲಾ ಮಲಗಿ ರಾತ್ರಿ ಒಂಟಿಯಾಗಿ ಆಡಲು ಬಯಸುತ್ತಾರೆ. ಓದುವುದರಲ್ಲಿ ಏಕಾಗ್ರತೆಯ ಕೊರತೆ, ಪಠ್ಯೇತರ ಚಟುವಟಿಕೆಗಳಲ್ಲಿ ನಿರಾಸಕ್ತಿ ಉಂಟಾಗುತ್ತದೆ. ಕುಟುಂಬದ ಸದಸ್ಯರೊಂದಿಗೆ ಬೆರೆಯುವುದಿಲ್ಲ. ರೂಮಿಗೇ ಸೀಮಿತವಾಗಿ ಒಂಟಿತನ ಉಂಟಾಗುತ್ತದೆ. ಸಾಮಾಜಿಕ ಮತ್ತು ಪಠ್ಯೇತರ ಚಟುವಟಿಕೆಗಳಿಂದ ದೂರವಾಗುತ್ತಾರೆ. ಗೆಳೆಯರೊಂದಿಗೆ ಬೆರೆಯಲು ಇಚ್ಛಿಸುವುದಿಲ್ಲ. ಹೇಗೆ ಆಡಬೇಕು, ಹೇಗೆ ಮುಂದಿನ ಹಂತಕ್ಕೆ ತಲುಪಬೇಕು ಎಂಬ ಗುಂಗಿನಲ್ಲೇ ಯಾವಾಗಲೂ ಮನಸ್ಸು ಮುಳುಗಿರುತ್ತದೆ. ಓದಿನ ಕಡೆ ಗಮನವಿಲ್ಲದೇ ಪರೀಕ್ಷೆಗಳಲ್ಲಿ ಫೇಲಾಗಿ ಖಿನ್ನತೆಗೀಡಾಗುತ್ತಾರೆ. ಇದರಿಂದ ಪಾಪಪ್ರಜ್ಞೆ ಉಂಟಾಗಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೆ ತುತ್ತಾಗಬಹುದು. ತಾವು ಕಲಿಕೆಯಲ್ಲಿ ಹಿಂದುಳಿದು ಮುಂದೆ ಸಾಧನೆ ಮಾಡಲಾಗುವುದಿಲ್ಲ ಎಂದು ಅನಿಸಿದರೂ ಆಟ ಆಡುವುದನ್ನು ಬಿಡಲು ಇಷ್ಟವಾಗದೆ ಖಿನ್ನತೆಗೊಳಗಾಗುತ್ತಾರೆ.

ಆನ್‌ಲೈನ್ ಗೇಮಿಂಗ್ ವ್ಯಸನವನ್ನು ತಡೆಯುವುದು ಬಹು ಮುಖ್ಯ. ಇದಕ್ಕೆ ಅವಶ್ಯವಿರುವುದು ಪೋಷಕ ಮಕ್ಕಳ ಆತ್ಮೀಯ ಸಂಬಂಧ ಮತ್ತು ಮುಕ್ತ ಸಂವಾದ. ಸ್ಮಾರ್ಟ್‌ಫೋನ್‌ಗಳನ್ನು ಕೊಡಿಸುವಾಗ ವೀಡಿಯೋ ಗೇಮ್‌ಗಳು ಮತ್ತು ಇತರೇ ದೃಶ್ಯಗಳನ್ನು ನೋಡುವುದು, ಅವುಗಳಲ್ಲಿ ಭಾಗವಹಿಸುವುದು ಎಷ್ಟು ಹಾನಿಕರ ಎಂಬುದನ್ನು ಸಮಾಧಾನ ಚಿತ್ತದಿಂದ ಮಕ್ಕಳಿಗೆ ತಿಳಿಸಬೇಕು. ಅವುಗಳನ್ನು ನೋಡಲೇಬಾರದು ಎಂದು ಬುದ್ಧಿವಾದ ಹೇಳಿದರೆ ಹರೆಯದ ಮನಸ್ಸಿಗೆ ಇನ್ನಷ್ಟು ಕುತೂಹಲ ಹೆಚ್ಚಿ ಅವುಗಳ ವ್ಯಸನಕ್ಕೆ ಈಡಾಗಬಹುದು. ಅದಕ್ಕಿಂತ ಅವುಗಳನ್ನು ನೋಡಲು, ನಾವೇ ಮಿತಿ ಹಾಕಿಕೊಳ್ಳಬೇಕು. "ಸ್ಕ್ರೀನ್ ಟೈಂ"ಗೆ ಮಿತಿಹಾಕಿಕೊಂಡು ಅದಕ್ಕಿಂತ ಹೆಚ್ಚಿನ ಸಮಯ ಕಳೆದರೆ, ಶಿಕ್ಷಣದ ಮತ್ತು ಸಾಮಾಜಿಕ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ನಿಧಾನವಾಗಿ ಉದಾಹರಣೆಗಳೊಂದಿಗೆ ವಿವರಿಸಬೇಕು.

ಮಕ್ಕಳು ಮತ್ತು ಹರೆಯದವರಿಗೆ ಮನರಂಜನೆಗೋಸ್ಕರ ಸ್ನೇಹಿತರೊಂದಿಗೆ ಬೆರೆಯಲು, ಹವ್ಯಾಸಗಳನ್ನು ರೂಢಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಬಾಲ್ಯದಿಂದಲೇ ಜೀವನ ಕೌಶಲಗಳನ್ನು ಕಲಿಸಿ, ಹರೆಯಕ್ಕೆ ಬಂದಾಗ ಅವುಗಳು ಹೇಗೆ ಹರೆಯದ ಸವಾಲುಗಳನ್ನೆದುರಿಸಲು, ಒತ್ತಡಗಳನ್ನು ಪರಿಹರಿಸಿಕೊಳ್ಳಲು ಸಹಾಯಕ ಎಂಬುದನ್ನು ಪ್ರೀತಿ ಮತ್ತು ಆತ್ಮೀಯತೆಯಿಂದ ಹಂಚಿಕೊಳ್ಳಬೇಕು. ಹರೆಯದವರಿಗೆ ದಿನವಿಡೀ ಓದು, ಟೆಸ್ಟು, ಪರೀಕ್ಷೆ ಪಾಠ ಹೀಗೆ ಹಲವಾರು ಒತ್ತಡಗಳು ಮನಸ್ಸನ್ನು ಸುಳಿಯಲ್ಲಿ ಸಿಕ್ಕಿಸುತ್ತವೆ. ಹರೆಯದ ಮನಸ್ಸು ತನ್ನನ್ನು ಬೇರೆಯವರೊಂದಿಗೆ ಹೋಲಿಸಿಕೊಂಡು ತಾನು ಇನ್ನೂ ಹೆಚ್ಚಿಗೆ ಸಾಧಿಸಬೇಕು, ಇಲ್ಲದಿದ್ದಲ್ಲಿ ಅದು ತನಗೆ ಅವಮಾನ ಎಂದು ಭಾವಿಸುವುದು ಸಹಜ. ಇತರರೊಂದಿಗೆ ಹೋಲಿಕೆ ಒಳ್ಳೆಯದೇ ಆದರೆ ಹೋಲಿಕೆ ಎಂಬುದು ಸಕಾರಾತ್ಮಕವಾಗಿರಬೇಕು.

ತನಗಿಂತ ತನ್ನ ಸ್ನೇಹಿತರಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಂದಾಗ, ಅವನು ಬುದ್ಧಿವಂತ, ತಾನು ದಡ್ಡ ಎಂದು ಭಾವಿಸುವುದಕ್ಕಿಂತ ಗೆಳೆಯನು ಹೇಗೆ ಪ್ರಯತ್ನಿಸಿದನು, ತಾನೂ ಹಾಗೆ ಪ್ರಯತ್ನಿಸಿದರೆ ಅಷ್ಟೇ ಸಾಧನೆ ಮಾಡಬಹುದು ಎಂಬ ಆತ್ಮವಿಶ್ವಾಸ ತಳೆಯಬೇಕು. ತನ್ನ ಸಾಮರ್ಥ್ಯದ ಕುರಿತು ಯೋಚಿಸಿ ತನಗೆ ಇಷ್ಟು ಸಾಧ್ಯ, ಅದಕ್ಕಿಂತ ಹೆಚ್ಚು ಪ್ರಯತ್ನಿಸುತ್ತೇನೆ. ಅದೂ ಸಾಧ್ಯವಾಗದಿದ್ದಾಗ, ಬೇರೆ ದಾರಿಯನ್ನು ಕಂಡುಕೊಂಡು ಅದರಲ್ಲಿ ಸಾಧನೆ ಮಾಡುತ್ತೇನೆ ಎಂಬ ನಿರ್ಧಾರಕ್ಕೆ ಬಂದು, ಈ ಆನ್‌ಲೈನ್ ಗೇಮ್ ಎಂದೂ ಆಡುವುದಿಲ್ಲ ಎಂಬ ನಿರ್ಧಾರಕ್ಕೆ ಬರಬೇಕು.

ಬೌದ್ಧಿಕ ಮಟ್ಟ ಅಂಕಗಳಿಂದಷ್ಟೇ ಅಳೆಯಬಹುದೇ?

▶ ಪ್ರಸಾದ್ ಕುಮಾರ್

ಮಕ್ಕಳಿಗೆ ಏನು ಶಿಕ್ಷಣ ಕೊಡಬೇಕೆಂಬುದು ಈಗ ಬದಿಗೆ ಸರಿದು, ಮಕ್ಕಳಿಂದ ಹೇಗೆ ಅಂಕಗಳನ್ನು ಪಡೆಯುವುದು ಎಂಬುದೇ ಸದ್ಯದ ಶಿಕ್ಷಣದ ಗುರಿಯಾಗಿದೆ!

ಸಾಮಾಜಿಕ ಮಾಧ್ಯಮದಲ್ಲಿ ಇತ್ತೀಚೆಗೆ ಕಂಡು ಬಂದ ಒಂದು ಹಾಸ್ಯಾಸ್ಪದ ಬರಹ ಹೀಗಿತ್ತು...

Nowadays children get 'marks' in Fahrenheit 96.7, 97, 98.50...

We used to get same in Celsius 36.5, 37.00, 40.5...

(ಇಂದು ವಿದ್ಯಾರ್ಥಿಗಳ ಅಂಕಗಳು 96.7, 97, 98.50 ಹೀಗೆ ಫ್ಯಾರನ್‌ಹೀಟ್ ಲೆಕ್ಕದಲ್ಲಿದ್ದರೆ ಅಂದು ನಾವು ಪಡೆಯುತ್ತಿದ್ದದು ಮಾತ್ರ ಸೆಲ್ಸಿಯಸ್ ಲೆಕ್ಕದಲ್ಲಿ 36.5, 37.00, 40.5)

ವಿಚಾರ ತಮಾಷೆಯದ್ದೇ ಇರಬಹುದು. ಆದರೆ ಒಪ್ಪುವಂತಹುದು ಎಂಬುದು ಮಾತ್ರ ಸತ್ಯವೇ. ಇತ್ತೀಚಿನ ದಿನಗಳಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳ ಮಾರ್ಕ್‌ಗಳನ್ನು ನೋಡಿದರೆ ಒಂದು ಕ್ಷಣ ಹುಬ್ಬೇರದೆ ಇರದು. ಯಾರಿಗೆ ನೋಡಿದರು ಶೇಕಡಾ 80-90 ರ ಮೇಲೇನೆ. ಯಾವ ಶಾಲೆಯ ಮುಂದೆ ನೀವು ಅಡ್ಡಾಡಿದರು ಕನಿಷ್ಟ 20 ಮಕ್ಕಳ ಫೋಟೋ ಬ್ಯಾನರ್‌ನಲ್ಲಿ ರಾರಾಜಿಸುತ್ತಿರುತ್ತದೆ. ಒಂದು ತರಗತಿಯಲ್ಲಿ 40 ಮಕ್ಕಳಿದ್ದರೆ ಅದರಲ್ಲಿ ಕನಿಷ್ಟವೆಂದರೂ 25 ಮಕ್ಕಳು ಶೇಕಡ 85ರ ಮೇಲೆ ಇರುತ್ತಾರೆ! ದಡ್ಡಶಿಖಾಮಣಿ ಎಂದೆನ್ನಿಸುವ ವಿದ್ಯಾರ್ಥಿ ಕೂಡ 60-70 ಗಡಿಯಲ್ಲಿ ಇರುವುದು ತೀರಾ ಸಾಮಾನ್ಯ! ಇನ್ನು ಫೇಲ್ ಆದವರು ಯಾರು ಎಂಬುದನ್ನು ಭೂತಗನ್ನಡಿ ಹಿಡಿದು ನೋಡಬೇಕಷ್ಟೇ!

ಯಾಕೆ ಇದು ಹೀಗೆ? ಹಾಗಾದರೆ ಇಂದಿನ ಎಲ್ಲಾ ವಿದ್ಯಾರ್ಥಿಗಳ ಐಕ್ಯೂ ಮಟ್ಟ ಉನ್ನತ ಮಟ್ಟದಲ್ಲಿಯೇ ಇದೆಯೇ? ಅಥವಾ ನಮ್ಮ ಕಾಲದಲ್ಲಿ ಯಾರು ಕೂಡ ಈ ಪಾಟಿ ಬುದ್ಧಿವಂತರಿರಲಿಲ್ಲವೇ? ಒಂದು 25-30 ವರ್ಷದ ಹಿಂದಿನ ಮಾರ್ಕ್‌ನ್ನು ತೆಗೆದು ನೋಡಿದರೆ ಖಂಡಿತವಾಗಿಯೂ ನಿಮಗೆ ಹೀಗೆಯೇ ಅನ್ನಿಸಬಹುದು. 'ಸೆಲ್ಸಿಯಸ್' ಲೆಕ್ಕದಲ್ಲಿ ಸಿಗುತ್ತಿದ್ದ ಅವಾಗಿನ ಮಾರ್ಕ್‌ಗಳೇ ದೊಡ್ಡ ಸಾಧನೆ ಎಂಬಂತಿತ್ತು. ಆವಾಗೆಲ್ಲಾ ಶೇಕಡಾ 80% ಆಸು ಪಾಸು ಸುಳಿಯುವುದೇ ಒಂದು ಸೋಜಿಗ. ಪ್ರಥಮ ದರ್ಜೆಯಲ್ಲಿ ಪಾಸ್ ಆಗುವುದೆಂದರೆ ಅದೇ ಒಂದು ದೊಡ್ಡ ಸಾಧನೆ. ಊರಿಗೆ ಊರೇ ಸಂಭ್ರಮ ಪಡುವ ವಿಚಾರವದು. ಅಷ್ಟೇ ಏಕೆ ಬರೇ ಪಾಸ್ ಆದರೆ ಸಾಕು ಚಾಕಲೇಟ್ ಹಂಚುತ್ತಿದ್ದ ಕಾಲವದು! ಫಸ್ಟ್ ಕ್ಲಾಸ್ ಇದ್ದರೆ ಸಾಕು ಕಾಲೇಜುಗಳು ಕರೆದು ಸೀಟು ಕೊಡುತ್ತಿತ್ತು ಎಂಬುದು ಬೇರೆ ಮಾತು!



ಆದರೆ ಇಂದು ಪಾಸ್ ಬಿಡಿ 80 ರ ಮೇಲೆ ಬಂದರೂ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಹ ಪರಿಸ್ಥಿತಿ! ಬರೆ ಅಂಕಗಳ ಮೇಲೆ ಕಣ್ಣಿಟ್ಟಿರುವ ಇಂದಿನ ಕಾಲದಲ್ಲಿ 95% ದಾಟಿದ ವಿದ್ಯಾರ್ಥಿಗೂ ಇದು ಸಾಕು ಎಂಬ ಸಂತೃಪ್ತಿಯಿಲ್ಲ. ಬದಲಾಗಿ ಮರು ಮೌಲ್ಯಮಾಪನಕ್ಕೆ ಹಾಕಿ ಮತ್ತೆರಡು ಮಾರ್ಕ್ ಪಡೆಯುವ ಆಸೆ. 90, 95, 100 ಕ್ಕೆ 100 ಇವೆಲ್ಲಾ ಇಂದು ಸರ್ವೇ ಸಾಮಾನ್ಯವೆಂಬಂತಾಗಿದೆ.

ಹಾಗೆಂದು ಇಂದಿನ ವಿದ್ಯಾರ್ಥಿಗಳು ಸೂಪರ್ ಪವರ್ ಇರುವವರೇನೂ ಅಲ್ಲ. ನೀಟಾಗಿ ಒಂದು ಅರ್ಜಿ ಬರೆಯಲು, ಬ್ಯಾಂಕ್‌ಗಳಲ್ಲಿರುವ ಕ್ಯಾಷ್ ವೋಚರನ್ನು ನೀಟಾಗಿ ತುಂಬಲು ಕೆಲವು ವಿದ್ಯಾರ್ಥಿಗಳು ಕಷ್ಟ ಪಡುತ್ತಾರೆ. ಪಡೆಯುತ್ತಿರುವ ಮಾರ್ಕ್‌ಗೂ, ಪಡೆದ ಶಿಕ್ಷಣಕ್ಕೂ ಇಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ತಪ್ಪು ಯಾರದ್ದು ಎಂಬುದೇ ಇಲ್ಲಿ ಪ್ರಶ್ನೆ. ನಿಜವಾಗಿಯೂ ಇಲ್ಲಿ ವಿದ್ಯಾರ್ಥಿಗಳನ್ನು ದೂಷಿಸುವುದು ತರವಲ್ಲ.

ಮಾರ್ಕ್ ನೋಡಿ ಇಂದಿನ ಮಕ್ಕಳ ಬುದ್ಧಿವಂತಿಕೆಯನ್ನು ಅಳೆಯುವಂತೆ ಮಾಡಿರುವುದೇ ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ! ಚೆನ್ನಾಗಿ ಓದಿಸಿ, ಉತ್ತೀರ್ಣ-ಅನುತ್ತೀರ್ಣ ಎಂಬ ಜರಡಿ ಹಿಡಿಯುತ್ತಾ ವಿದ್ಯಾರ್ಥಿಗಳನ್ನು ಮುಂದೆ ಸಾಗಿಸುವುದನ್ನು ಬಿಟ್ಟು ಅದ್ಯಾವ ರೀತಿಯಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದರೆ ವಿದ್ಯಾರ್ಥಿಗಳು ನೂರಕ್ಕೆ ನೂರ ಅಂಕ ಪಡೆಯಬಹುದು ಎಂಬುದರತ್ತ ನಮ್ಮ ಶಿಕ್ಷಣ ಕ್ರಮವನ್ನು, ಪರೀಕ್ಷೆಯನ್ನು, ಮೌಲ್ಯಮಾಪನವನ್ನು ನವೀಕರಿಸಿದ್ದರ ಪರಿಣಾಮವಿದು! ದುರದೃಷ್ಟವಶಾತ್ ನಮ್ಮ ಶಿಕ್ಷಣ ಇಲಾಖೆಗೂ ಬೇಕಿರುವುದು ನಂಬರ್ ಗೇಮ್. ಎಲ್ಲರನ್ನೂ ಪಾಸ್ ಮಾಡಿಸಿ ನೂರಕ್ಕೆ ನೂರನ್ನು ಪಡೆದು ಶಹಬಾಷ್‌ಗಿರಿ ಪಡೆಯಬೇಕೆಂಬ ತರಾತುರಿ. ಅದಕ್ಕಾಗಿಯೇ ಶಿಕ್ಷಣ ಇಲಾಖೆ ಪ್ರತಿ ಜಿಲ್ಲೆಗಳಿಗೆ, ಅಲ್ಲಿಂದ ಶಾಲೆಗೆ ಒತ್ತಡವನ್ನು ರವಾನಿಸುತ್ತಿದೆ. ನಾಪಾಸ್ ಸಂಖ್ಯೆ ಎಲ್ಲಿ ಜಾಸ್ತಿಯಾಗಿ ಶಾಲೆ ರದ್ದಾಗುವುದೋ ಎಂಬ ಭೀತಿ ಸರಕಾರಿ ಶಿಕ್ಷಕರದ್ದಾದರೆ, ಎಲ್ಲಿ ಅಡ್ಮಿಷನ್ ಕೊರತೆಯಾಗುತ್ತದೋ ಎಂಬ ಭೀತಿ ಖಾಸಾಗಿ ಶಾಲೆಗಳದ್ದು! ಇವೆಲ್ಲದರ ಒಟ್ಟು ಪರಿಣಾಮ ಶಿಕ್ಷಣ ಶೈಲಿಯನ್ನೇ ಬುಡಮೇಲುಗೊಳಿಸಿಕೊಂಡು ಅಂಕಗಳ ಮೇಲೆ ಅಂಕಗಳ ಏರಿಕೆಗಷ್ಟೇ ಗಮನ ಹರಿಸುವಂತಾಗಿದೆ ಶಾಲೆಗಳು! ಮಕ್ಕಳಿಗೆ ಏನು ಶಿಕ್ಷಣ ಕೊಡಬೇಕೆಂಬುದು ಬದಿಗೆ ಸರಿದು, ಮಕ್ಕಳಿಂದ ಹೇಗೆ ಅಂಕಗಳನ್ನು ಪಡೆಯುವುದು ಎಂಬುದೇ ಸದ್ಯದ ಶಿಕ್ಷಣದ ಗುರಿಯಾಗಿದೆ!

ಇರುವ ಸಿಲೆಬಸ್‌ನ್ನು ಚೆನ್ನಾಗಿ ಓದಿಕೊಂಡು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ತಮ್ಮದೇ ವಿಶ್ಲೇಷಣೆಯ ಮೂಲಕ ಬರೆಯುವ ಕಾಲ ಅಂದಿನದ್ದಾದರೆ, ಮುಖ್ಯ ಪರೀಕ್ಷೆಯಲ್ಲಿ ಯಾವೆಲ್ಲಾ ಪಾಠದಿಂದ ಅದ್ಯಾವ ರೀತಿಯ ಪ್ರಶ್ನೆಗಳನ್ನು ಕೇಳಲಾಗುವುದು ಎಂಬುನ್ನು ಮೊದಲೇ ಹೇಳುವ ಬ್ಲೂ ಪ್ರಿಂಟನ್ನು ವಿದ್ಯಾರ್ಥಿಗಳಿಗೆ ನೀಡುತ್ತಾ ಅಂಕಗಳ ಬೆನ್ನು ಬೀಳುವಂತೆ ಮಾಡುವ ಕಾಲ ಇಂದಿನದ್ದು.

ಮುಖ್ಯ ಪರೀಕ್ಷೆಗೆ 3-4 ತಿಂಗಳು ಇರುವಾಗಲೇ (ಸಿಲೆಬಸ್ ಮುಗಿದರೂ ಮುಗಿಯದಿದ್ದರೂ) ಪಾಠವನ್ನು ನಿಲ್ಲಿಸಿ ಬಂದಿರುವ ಬ್ಲೂಪ್ರಿಂಟ್‌ನ್ನು ಹಿಡಿದುಕೊಂಡು ಮುಖ್ಯ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಅಣಿಯಾಗಿಸುವುದು ಇಂದಿನ ಶಿಕ್ಷಣ ವ್ಯವಸ್ಥೆಯ ಒಂದು ಸೊಗಡು! ಇನ್ನು ಮುಖ್ಯ ಪರೀಕ್ಷೆ ಬರುವ ಮೊದಲೇ ಒಂದೆರಡು ರಿಹರ್ಸಲ್‌ಗಳನ್ನು (ಪೂರ್ವ ಸಿದ್ಧತಾ ಪರೀಕ್ಷೆಗಳನ್ನು) ಕೂಡ ಮಾಡಿಕೊಂಡು ವಿದ್ಯಾರ್ಥಿಯನ್ನು ಮಾರ್ಕ್ ಬೇಟೆಗೆ ಅಣಿಗೊಳಿಸಲಾಗುವುದು. ಇನ್ನು ಪ್ರಶ್ನೆಗೆ ಉತ್ತರವೂ ಅಷ್ಟೇ. ಎಲ್ಲವೂ ರೆಡಿಮೇಡ್ ಇದ್ದ ಹಾಗೆ. ವಿಶ್ಲೇಷಣಾತ್ಮಕ, ಸ್ವ ಚಿಂತನೆಯ ಉತ್ತರಗಳಿಗೆ ಆಸ್ಪದ ಕಡಿಮೆ ಅಥವಾ ಇಲ್ಲವೇ ಇಲ್ಲ. ನಾಲ್ಕು ಸಾಲುಗಳ ಉತ್ತರದಲ್ಲಿ ಒಂದು ಸಾಲು ಸರಿಯಾಗಿದ್ದರೂ ಒಂದಷ್ಟು ಮಾರ್ಕ್ ಕೊಡುವ ವ್ಯವಸ್ಥೆ. ಅದನ್ನೇ ಗುರರಾಜ್ ಕರ್ಜಗಿ ಅವರು ಸೊಗಸಾಗಿ ಹೇಳಿದ್ದು, "ಎಲ್ಲಾದರೂ ದನಕ್ಕೆ ಎಷ್ಟು ಕಾಲು ಎಂದು ನಾಲ್ಕು ಅಂಕದ ಪ್ರಶ್ನೆಯೇನಾದರು ಇದ್ದರೆ ಅದಕ್ಕೆ ಮೂರು ಕಾಲು ಎಂದು ಉತ್ತರ ಬರೆದವನಿಗೂ ಝೀರೋ ಕೊಡುವ ಹಾಗಿಲ್ಲ. ಬದಲಾಗಿ 3 ಮಾರ್ಕ್ ಕೊಡಲಾಗುವುದು. ಯಾಕೆಂದರೆ ಕಾಲಿಗೊಂದು ಮಾರ್ಕ್ ಎಂಬ ಲೆಕ್ಕಾಚಾರದ ಮೌಲ್ಯಮಾಪನ ಇವತ್ತಿನದ್ದು..."

ಅಂಕಗಳ ಪಾಡು ಇದೇ ತರ ಮುನ್ನುಗ್ಗುತ್ತಾ ಹೋದರೆ ಪಡೆಯುವ ಶಿಕ್ಷಣಕ್ಕೆ ಬೆಲೆ ಉಳಿದೀತೆ? ಅಂಕ ಗಳಿಕೆಯೇ ಶಿಕ್ಷಣದ ಉದ್ದೇಶವೇ? ಸ್ವಸ್ಥ ಸಮಾಜಕ್ಕೆ ಶಿಕ್ಷಣದ ಬುನಾದಿ ನೆಟ್ಟಗಿರಬೇಕು. ಅದುವೇ ಅಡ್ಡ ಬಿದ್ದರೆ ಗತಿ ಏನು? ಸದ್ಯದ ಸಮಾಜದಲ್ಲಿ ನೈತಿಕತೆಯ ಅಧಃಪತನವಾಗಿರುವುದು ಇದೇ ಕಾರಣಕ್ಕೆ.

ಮಕ್ಕಳು ಓದಬೇಕು, ಉತ್ತಮ ಪ್ರಜೆಯಾಗಬೇಕು ಎಂಬ ಒಂದು ಕಾಲದಲ್ಲಿದ್ದ ಬಯಕೆ ಇಂದು ಇಲ್ಲ ಎಂಬುದೇ ದುರಂತ. ಇಂದಿನ ಪೋಷಕರು ಬಯಸುವುದು ಮಕ್ಕಳು ಓದಬೇಕು, ಓದಿ ಪ್ರತಿಷ್ಠಿತ ಕಂಪೆನಿಯಲ್ಲಿ 6 ಅಂಕೆಯ ಸಂಬಳ ಪಡೆಯುವಂತಾಗಬೇಕು ಎಂಬುದಷ್ಟೇ. ಅದಕ್ಕಾಗಿಯೇ ಕೂಸು ಹುಟ್ಟುವ ಮೊದಲೇ ಶಾಲೆಯ ಬಗ್ಗೆ ಯೋಚಿಸಲಾಗುತ್ತದೆ! ಯಾರು ಎಲ್ಲಿ ಏನು ಕಲಿಯುತ್ತಿದ್ದಾರೆ ಎಂಬುದೆಲ್ಲಾ ಗೌಣವಾಗಿ ಎಲ್ಲಿ ಕಲಿತರೆ ನೂರಕ್ಕೆ ನೂರು ಅಂಕಗಳು ಬರುತ್ತವೆ ಎಂಬುದಷ್ಟೇ ಲೆಕ್ಕಾಚಾರವಾಗಿ ಉಳಿದಿವೆ. ಓದಿದ ಮೇಲೆ ಡಾಕ್ಟರೋ, ಇಂಜಿನಿಯರೋ ಆಗುವ ಎರಡೇ ಬಯಕೆ ಇಂದಿನ ಬಹುತೇಕ ವಿದ್ಯಾರ್ಥಿಗಳದ್ದು (ಪೋಷಕರದ್ದು ಕೂಡ).

ಉತ್ತಮ ಅಂಕ ಅಥವಾ 85-90% ಗೂ ಅಧಿಕ ಅಂಕ ಪಡೆದ ಯಾವುದೇ ವಿದ್ಯಾರ್ಥಿಯನ್ನು ನೀವು ತಡೆದು ಕೇಳಿ ಮುಂದೆ ಏನಾಗಬೇಕೆಂದಿರುವೆ ಎಂದು. ಇಂಜಿನಿಯರ್, ವೈದ್ಯಕೀಯ ಇಲ್ಲವೇ ತಪ್ಪಿದರೆ ಒಂದಷ್ಟು ವಿದ್ಯಾರ್ಥಿಗಳು ಸಿಎ ಎನ್ನುವುದನ್ನು ಬಿಟ್ಟರೆ ಬೇರೆ ಇನ್ನಾವುದೇ ಉತ್ತರಗಳು ಸಿಗುವುದಿಲ್ಲ. ಯಾಕೆಂದರೆ ಕೈ ತುಂಬಾ ದುಡ್ಡುಗಳಿಸಬಹುದಾದ ಆಯ್ಕೆಗಳಿವು! ನೈತಿಕತೆಯನ್ನು ಬೋಧಿಸಿ ಉತ್ತಮ ಸಮಾಜ ನಿರ್ಮಾಣಗೈಯುವ ಶಿಕ್ಷಕ ವೃತ್ತಿಯನ್ನಾಗಲೀ, ನ್ಯಾಯವನ್ನು ಎತ್ತಿ ಹಿಡಿಯುವ ವಕೀಲಿವೃತ್ತಿ ಇಲ್ಲವೇ ನ್ಯಾಯಾಧೀಶನ ವೃತ್ತಿಯನ್ನಾಗಲಿ ಹೇಳುವ ಒಂದೇ ಒಂದು ವಿದ್ಯಾರ್ಥಿ ಸಿಗುವುದು ಇಂದು ಅಪರೂಪ! ಹಾಗಾದರೆ ಇಂದಿನ ಎಲ್ಲಾ ಉತ್ತಮ ಅತ್ಯುತ್ತಮ ವಿದ್ಯಾರ್ಥಿಗಳು ಡಾಕ್ಟರೋ, ಇಂಜಿನಿಯರೋ ಆಗುವುದಾದರೆ ಮುಂಬರುವ ದಿನಗಳಲ್ಲಿ ಸ್ವಸ್ಥ ಸಮಾಜವನ್ನು ಕಟ್ಟಬೇಕಾದ ಶ್ರೇಷ್ಠ ಶಿಕ್ಷಕ ವೃತ್ತಿಗೆ ಬರುವವರ್ಯಾರು!? ಬರೇ ಜಸ್ಟ್ ಪಾಸ್ ವಿದ್ಯಾರ್ಥಿಗಳೇ!? ಯೋಚಿಸಿದರೆ ಭಯವಾಗುತ್ತದೆ! ಬುದ್ಧಿವಂತ ವಿದ್ಯಾರ್ಥಿಗಳು ಶಿಕ್ಷಕ ವೃತ್ತಿಗೆ ಬಾರದೇ ಹೋದರೆ ಭವಿಷ್ಯದಲ್ಲಿ ಉತ್ತಮ ವೈದ್ಯ, ಉತ್ತಮ ಇಂಜಿನಿಯರ್, ಉತ್ತಮ ನ್ಯಾಯಾಧೀಶ ಎಂಬುದೆಲ್ಲಾ ಮರೀಚಿಕೆಯಾಗಬಹುದೇನೋ!

ಸರಕಾರ, ಶಿಕ್ಷಣ ಇಲಾಖೆಯಿಂದ ಹಿಡಿದು ಪ್ರತೀ ಶಿಕ್ಷಿತ ಪೋಷಕ ವರ್ಗವು ಯೋಚಿಸಬೇಕಾದ ವಿಷಯವಿದು ಅಲ್ಲವೇ?

ಯುಎಇ ಅಣು ಸ್ಥಾವರಕ್ಕೆ ಡ್ರೋನ್ ದಾಳಿ

ಮಧ್ಯಪ್ರಾಚ್ಯದಲ್ಲಿ ಮತ್ತೆ ಹೆಚ್ಚಿದ ಭೀತಿ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನ(ಯುಎಇ) ಏಕೈಕ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ಭಾನುವಾರ ಡ್ರೋನ್ ದಾಳಿ ನಡೆದಿದ್ದು, ಅದರ ಆವರಣದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆದರೆ, ಸ್ಥಾವರ ಸುರಕ್ಷಿತವಾಗಿದೆ ಮತ್ತು ಯಾವುದೇ ವಿಕಿರಣ ಸೋರಿಕೆ ಅಥವಾ ಗಾಯಗಳಾದ ವರದಿಯಾಗಿಲ್ಲ ಎಂದು ಯುಎಇ ಪರಮಾಣು ನಿಯಂತ್ರಣ ಸಂಸ್ಥೆ ತಿಳಿಸಿದೆ. ಆದಾಗ್ಯೂ, ಮಧ್ಯಪ್ರಾಚ್ಯದಲ್ಲಿ ಮತ್ತೆ ಆತಂಕ ಹೆಚ್ಚಳವಾಗಿದೆ.

ವಿಯೆನ್ನಾ ಮೂಲದ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ), ದಾಳಿಯಿಂದಾಗಿ ವಿದ್ಯುತ್ ಜನರೇಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಒಂದು ರಿಯಾಕ್ಟರ್ ಪ್ರಸ್ತುತ ತುರ್ತು ಡೀಸೆಲ್ ಜನರೇಟರ್‌ಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದೆ. ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರೊಸ್ಸಿ, ಈ ಘಟನೆಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಪರಮಾಣು ಸುರಕ್ಷತೆಗೆ ಧಕ್ಕೆ ತರುವ ಇಂತಹ ಮಿಲಿಟರಿ ಕ್ರಮಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಈ ದಾಳಿಯ ಜವಾಬ್ದಾರಿಯನ್ನು ಯಾರೂ ಹೊತ್ತುಕೊಂಡಿಲ್ಲ ಮತ್ತು ಯುಎಇ ಯಾರ ಮೇಲೂ ನೇರ ಆರೋಪ ಮಾಡಿಲ್ಲ. ಆದರೆ, ಹಾರ್ಮುಜ್ ಜಲಸಂಧಿಯ ವಿಚಾರವಾಗಿ ಉದ್ವಿಗ್ನತೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಇರಾನ್ ಹಲವು ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ನಡೆಸಿದೆ ಎಂದು ಯುಎಇ ಆರೋಪಿಸಿದೆ.



ತೀವ್ರಗೊಂಡ ಉದ್ವಿಗ್ನತೆ

ಇಸ್ರೇಲ್ ಸೇನಾ ಅಧಿಕಾರಿ ಸೇರಿದಂತೆ ಇಬ್ಬರು ಅನಾಮಧೇಯ ಮೂಲಗಳು ನೀಡಿರುವ ಮಾಹಿತಿ ಪ್ರಕಾರ, ಇರಾನ್ ಮೇಲಿನ ದಾಳಿಯನ್ನು ಪುನರಾರಂಭಿಸುವ ಬಗ್ಗೆ ಇಸ್ರೇಲ್ ಪ್ರಸ್ತುತ ಯುಎಸ್‌ನೊಂದಿಗೆ ಸಮಾಲೋಚನೆ ನಡೆಸುತ್ತಿದೆ. ಇಸ್ರೇಲ್ ಯಾವುದೇ ಪರಿಸ್ಥಿತಿಗೂ ಸಿದ್ಧವಾಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಈ ಮಧ್ಯೆ, ಇರಾನ್ ಸರ್ಕಾರಿ ದೂರದರ್ಶನ, ಸಾರ್ವಜನಿಕರನ್ನು ಯುದ್ಧಕ್ಕೆ ಸಜ್ಜುಗೊಳಿಸಲು ಸಶಸ್ತ್ರ ನಿರೂಪಕರ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದು, ಅದರಲ್ಲಿ ಒಬ್ಬ ನಿರೂಪಕ ಯುಎಇ ಧ್ವಜಕ್ಕೆ ಗುಂಡು ಹಾರಿಸುವಂತೆ ಸನ್ನೆ ಮಾಡಿರುವುದು ಕಂಡುಬಂದಿದೆ.

1991ರ ರಹಸ್ಯ

ಭಾರತ 47,000 ಕೆಜಿ ಚಿನ್ನವನ್ನು ಯುಕೆಗೆ ಕಳುಹಿಸಲು ಕಾರಣವೇನು?

ಭಾರತ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾಗ, ವಿದೇಶಿ ಸಾಲ ಮರುಪಾವತಿ ಸುಸ್ತಿದಾರರಾಗುವುದನ್ನು ತಪ್ಪಿಸಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) 1991ರ ಜುಲೈನಲ್ಲಿ ಸುಮಾರು 47,000 ಕೆಜಿ ಚಿನ್ನವನ್ನು ಇಂಗ್ಲೆಂಡ್‌ಗೆ ರಹಸ್ಯವಾಗಿ ವಿಮಾನದ ಮೂಲಕ ರವಾನಿಸಿ, 405 ಮಿಲಿಯನ್ ಡಾಲರ್ ತುರ್ತು ಸಾಲ ಪಡೆದುಕೊಂಡಿತು. ಈ ಕಾರ್ಯಾಚರಣೆ, ದೇಶವನ್ನು ಆರ್ಥಿಕ ದಿವಾಳಿತನದಿಂದ ರಕ್ಷಿಸಿದ್ದಲ್ಲದೆ, ಪ್ರಧಾನಿ ಪಿ.ವಿ. ನರಸಿಂಹರಾವ್ ನೇತೃತ್ವದ ನೂತನ ಸರ್ಕಾರ ದೇಶದಲ್ಲಿ ಐತಿಹಾಸಿಕ ಆರ್ಥಿಕ ಸುಧಾರಣೆಗಳನ್ನು ತರಲು ಪ್ರಮುಖ ಮುನ್ನುಡಿಯಾಯಿತು.

ಏನಿದು ರಹಸ್ಯ ಚಿನ್ನ ರವಾನೆ?

ಆರ್‌ಬಿಐ ಮುಂಬೈನಿಂದ ನಾಲ್ಕು ಕಂತುಗಳಲ್ಲಿ ಒಟ್ಟು 46.91 ಟನ್ ಚಿನ್ನವನ್ನು 1991ರ ಜುಲೈ 4ರಿಂದ ಏರ್‌ಲಿಫ್ಟ್ ಮಾಡಲು ಪ್ರಾರಂಭಿಸಿತು. ಸಶಸ್ತ್ರ ಪಡೆಗಳ ಕಾವಲಿನಲ್ಲಿ ಆರ್‌ಬಿಐನ ವಾಹನಗಳ ಮೂಲಕ ಚಿನ್ನವನ್ನು ಮುಂಬೈನ ಸಾಂತಾಕ್ರೂಜ್ ವಿಮಾನ ನಿಲ್ದಾಣಕ್ಕೆ ಸಾಗಿಸಲಾಯಿತು. ಸಾಮಾನ್ಯ ಕಸ್ಟಮ್ಸ್ ನಿಯಮಗಳಿಂದ ವಿನಾಯಿತಿ ಪಡೆಯಲು ಹಣಕಾಸು ಸಚಿವಾಲಯದಿಂದ ವಿಶೇಷ ಅನುಮತಿಯನ್ನೂ ಪಡೆಯಲಾಗಿತ್ತು.





ಪ್ರಸ್ತುತ ಚಿನ್ನದ ದಾಸ್ತಾನು ಮತ್ತು ವಿದೇಶಿ ವಿನಿಮಯದ ಸವಾಲುಗಳು

1991ರ ಪರಿಸ್ಥಿತಿಗೆ ಹೋಲಿಸಿದರೆ ಇಂದು ಭಾರತದ ಆರ್ಥಿಕ ಸ್ಥಿತಿ ಸಂಪೂರ್ಣ ಬದಲಾಗಿದೆ. ಮಾರ್ಚ್ 2026ರ ಹೊತ್ತಿಗೆ ಆರ್‌ಬಿಐ 115 ಬಿಲಿಯನ್ ಡಾಲರ್ ಮೌಲ್ಯದ 880.52 ಮೆಟ್ರಿಕ್ ಟನ್ ಚಿನ್ನದ ದಾಸ್ತಾನು ಹೊಂದಿದೆ. ಇದರಲ್ಲಿ ಶೇ.77ರಷ್ಟು ಚಿನ್ನವನ್ನು ದೇಶದ ಒಳಗೇ ಸುರಕ್ಷಿತವಾಗಿ ಇಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ವಿದೇಶಗಳಿಂದ 100 ಟನ್‌ಗಿಂತಲೂ ಹೆಚ್ಚು ಚಿನ್ನವನ್ನು ವಾಪಸ್ ತರಲಾಗಿದೆ. ಆದರೂ, 2025-26ರ ಹಣಕಾಸು ವರ್ಷದಲ್ಲಿ ಭಾರತ ಸುಮಾರು 72 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಂಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ ತೈಲ ಬೆಲೆಗಳು ಏರಿಕೆ ಕಂಡು ಆಮದು ವೆಚ್ಚ ಹೆಚ್ಚಾಗುತ್ತಿರುವುದರಿಂದ, ವಿದೇಶಿ ವಿನಿಮಯ ಮತ್ತು ಭಾರತೀಯ ರೂಪಾಯಿಯ ಮೌಲ್ಯವನ್ನು ರಕ್ಷಿಸಲು ಕನಿಷ್ಠ ಒಂದು ವರ್ಷದವರೆಗೆ ಅನಗತ್ಯ ಚಿನ್ನದ ಖರೀದಿಯನ್ನು ಮುಂದೂಡುವಂತೆ ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ.

ಸುದ್ದಿ ಸಮಗ್ರ

ಪೋಲಾರ್ ಸ್ಟಾರ್ ಮೋದಿ

ಗೋಥೆನ್‌ಬರ್ಗ್(ಸ್ವೀಡನ್): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಸ್ವೀಡನ್‌ನ ಅತ್ಯುನ್ನತ ಗೌರವಗಳಲ್ಲಿ ಒಂದಾದ ರಾಯಲ್ ಆರ್ಡರ್ ಆಫ್ ಪೋಲಾರ್ ಸ್ಟಾರ್ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಸ್ಕ್ಯಾಂಡಿನೇವಿಯನ್ ರಾಷ್ಟ್ರವಾದ ಸ್ವೀಡನ್ ಸರ್ಕಾರವು ಪ್ರಧಾನಮಂತ್ರಿಗೆ ನೀಡುವ ಅತ್ಯುನ್ನತ ಗೌರವ ಇದಾಗಿದೆ. ಇದು ಪ್ರಧಾನಿ ಮೋದಿಯವರಿಗೆ ಲಭಿಸಿರುವ 31ನೇ ಅಂತಾರಾಷ್ಟ್ರೀಯ ಗೌರವವಾಗಿದೆ.

ರಾಯಲ್ ಆರ್ಡರ್ ಆಫ್ ದ ಪೋಲಾರ್ ಸ್ಟಾರ್ ಪ್ರಶಸ್ತಿಯನ್ನು 1748ರಲ್ಲಿ ಸ್ಥಾಪಿಸಲಾಗಿದ್ದು, ಸ್ವೀಡನ್ ಅಥವಾ ಸ್ವೀಡನ್‌ನ ಹಿತಾಸಕ್ತಿಗಳಿಗಾಗಿ ವೈಯಕ್ತಿಕ ಕೊಡುಗೆ ನೀಡಿದವರಿಗೆ, ವಿಶೇಷವಾಗಿ ಸಾರ್ವಜನಿಕ ಸೇವೆ ಹಾಗೂ ಕರ್ತವ್ಯ ನಿರ್ವಹಣೆಯಲ್ಲಿ ವಿಶಿಷ್ಟ ಸಾಧನೆ ಮಾಡಿದವರಿಗೆ ಈ ಗೌರವ ನೀಡಲಾಗುತ್ತದೆ ಎಂದು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಪ್ರಧಾನಿ ಮೋದಿ ಅವರು ಎರಡು ದಿನಗಳ ಸ್ವೀಡನ್ ಪ್ರವಾಸಕ್ಕಾಗಿ ಭಾನುವಾರ ಅಲ್ಲಿಗೆ ಆಗಮಿಸಿದ್ದರು. ಗೋಥೆನ್‌ಬರ್ಗ್ ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವೀಡನ್ ಪ್ರಧಾನಿ ಆತ್ಮೀಯವಾಗಿ ಸ್ವಾಗತಿಸಿದರು.



ಪ್ರಧಾನಿ ಮೋದಿಗೆ ಸ್ವೀಡನ್ ವಾಯುಪಡೆಯ ಯುದ್ಧವಿಮಾನಗಳು ಎಸ್ಕಾರ್ಟ್ ನೀಡಿದವು.

ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ಹಾಗೂ ಯುರೋಪಿನ ಪ್ರಮುಖ ಉದ್ಯಮಿಗಳೊಂದಿಗೆ ಯುರೋಪಿಯನ್ ಬಿಸಿನೆಸ್ ರೌಂಡ್ ಟೇಬಲ್ ಫಾರ್ ಇಂಡಸ್ಟ್ರಿ ಸಭೆಯಲ್ಲೂ ಮೋದಿ ಭಾಗವಹಿಸಲಿದ್ದಾರೆ. ಈ ಸಭೆ ಭಾರತ ಮತ್ತು ಯುರೋಪ್ ನಡುವಿನ ಹೂಡಿಕೆ ಹಾಗೂ ಕೈಗಾರಿಕಾ ಸಂಪರ್ಕವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿರೀಕ್ಷೆಯಿದೆ.



1991ರ ಆರ್ಥಿಕ ಕುಸಿತಕ್ಕೆ ಕಾರಣಗಳೇನು?

1990-91ರ ವೇಳೆಗೆ ಹೆಚ್ಚುತ್ತಿದ್ದ ಸಾಲ, ರಾಜಕೀಯ ಅಸ್ಥಿರತೆ ಮತ್ತು ವಿದೇಶಿ ವಿನಿಮಯದ ತೀವ್ರ ಕೊರತೆಯಿಂದಾಗಿ ಭಾರತದ ಆರ್ಥಿಕತೆ ಕುಸಿದಿತ್ತು. ಆಗ ದೇಶದಲ್ಲಿದ್ದ ವಿದೇಶಿ ವಿನಿಮಯ ಕೇವಲ ಒಂದು ವಾರದ ಆಮದಿಗೆ ಮಾತ್ರ ಸಾಕಾಗುವಷ್ಟಿತ್ತು. 1991ರ ಜನವರಿಯ ಕೊಲ್ಲಿ ಯುದ್ಧದಿಂದಾಗಿ ಜಾಗತಿಕ ತೈಲ ಬೆಲೆಗಳು ತೀವ್ರವಾಗಿ ಏರಿದ್ದರಿಂದ ಮತ್ತು ಗಲ್ಫ್ ದೇಶಗಳಿಂದ ಬರುತ್ತಿದ್ದ ಹಣ ನಿಂತುಹೋಗಿದ್ದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಇದರಿಂದಾಗಿ ಅಂತಾರಾಷ್ಟ್ರೀಯ ಸಂಸ್ಥೆಗಳು ಭಾರತದ ಕ್ರೆಡಿಟ್ ರೇಟಿಂಗ್ ಅನ್ನು ಕಡಿಮೆ ಮಾಡಿದ್ದವು.

ಚಿನ್ನ ನಿನ್ನ ನಾ ಮಾರುವೆ!

- ಜುಲೈ 1991ರಲ್ಲಿ 46.91 ಟನ್ ಚಿನ್ನವನ್ನು ಯುಕೆಗೆ ರಹಸ್ಯವಾಗಿ ರವಾನಿಸಿದ ಆರ್‌ಬಿಐ
- ದೇಶ ದಿವಾಳಿಯಾಗುವುದನ್ನು ತಪ್ಪಿಸಲು ಈ ಮೂಲಕ 405 ಮಿಲಿಯನ್ ಡಾಲರ್ ತುರ್ತು ಸಾಲ
- ಚಂದ್ರಶೇಖರ್ ನೇತೃತ್ವದ ಉಸ್ತುವಾರಿ ಸರ್ಕಾರದಿಂದ ಈ ತುರ್ತು ಚಿನ್ನದ ಯೋಜನೆಗೆ ಅನುಮೋದನೆ
- ಮಾರ್ಚ್ 2026ರ ಹೊತ್ತಿಗೆ ಭಾರತದ ಒಟ್ಟು ಚಿನ್ನದ ದಾಸ್ತಾನು 880.52 ಮೆಟ್ರಿಕ್ ಟನ್‌ಗಳಿಗೆ ಏರಿಕೆ
- ಯುದ್ಧದ ಹಿನ್ನೆಲೆಯಲ್ಲಿ ಪ್ರಧಾನಿಯಿಂದ ಚಿನ್ನದ ಖರೀದಿಯನ್ನು ಒಂದು ವರ್ಷ ಮುಂದೂಡಲು ವಿನಂತಿ

ತುರ್ತು ಆರ್ಥಿಕ ಕ್ರಮಗಳು ಮತ್ತು ಸಾಲ

ಆರ್‌ಬಿಐ ಗವರ್ನರ್ ಎಸ್.ವೆಂಕಟರಮಣನ್ ನೇತೃತ್ವದ ತಂಡದ ಈ ಪ್ರಸ್ತಾವನೆಗೆ, ನವೆಂಬರ್ 1990ರಿಂದ ಜೂನ್ 1991ರವರೆಗೆ ಅಧಿಕಾರದಲ್ಲಿದ್ದ ಪ್ರಧಾನಿ ಚಂದ್ರಶೇಖರ್ ಅವರ ಉಸ್ತುವಾರಿ ಸರ್ಕಾರ ಧೈರ್ಯದಿಂದ ಅನುಮೋದನೆ ನೀಡಿತು. ಆರ್‌ಬಿಐ ಚಿನ್ನವನ್ನು ಅಡವಿಡುವ ಮುನ್ನ, ಮೇ 1991ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಯೂನಿಯನ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್ ಮೂಲಕ 20 ಟನ್ ಮುಟ್ಟುಗೋಲು ಹಾಕಿಕೊಂಡ ಚಿನ್ನವನ್ನು ವಿನಿಮಯ ಮಾಡಿಕೊಂಡು 215 ಮಿಲಿಯನ್ ಡಾಲರ್ ಸಂಗ್ರಹಿಸಲಾಗಿತ್ತು. ನಂತರ 1991ರ ನವೆಂಬರ್ ವೇಳೆಗೆ ಭಾರತ ಈ ಎಲ್ಲಾ ಸಾಲವನ್ನು ಮರುಪಾವತಿಸಿತು, ಆದರೆ ಚಿನ್ನ ವಿದೇಶಿ ಬ್ಯಾಂಕುಗಳಲ್ಲೇ ಉಳಿದು ಭಾರತದ ಆಸ್ತಿಯಾಗಿ ಮುಂದುವರಿಯಿತು.

ಚಿನ್ನದ ನಿಯಂತ್ರಣಕ್ಕೆ ಐತಿಹಾಸಿಕ ಕಾಯ್ದೆಗಳು

ವಿದೇಶಿ ವಿನಿಮಯವನ್ನು ಉಳಿಸಲು ಭಾರತ ಸರ್ಕಾರ ಈ ಹಿಂದೆಯೂ ಚಿನ್ನದ ಮಾರುಕಟ್ಟೆಯ ಮೇಲೆ ಕಠಿಣ ನಿಯಂತ್ರಣಗಳನ್ನು ಹೇರಿತ್ತು. 1962ರ ಚೀನಾ ಯುದ್ಧದ ನಂತರ ಆರ್ಥಿಕತೆ ಸುಧಾರಿಸಲು ತಂದ ಚಿನ್ನದ ನಿಯಂತ್ರಣ ನಿಯಮಗಳು, 1968ರಲ್ಲಿ ಹಣಕಾಸು ಸಚಿವ ಮೊರಾರ್ಜಿ ದೇಸಾಯಿ ಅವರ ಅವಧಿಯಲ್ಲಿ 'ಚಿನ್ನದ ನಿಯಂತ್ರಣ ಕಾಯ್ದೆ'ಯಾಗಿ ಜಾರಿಗೆ ಬಂದವು. ಇದು ಸಾರ್ವಜನಿಕರು ಚಿನ್ನದ ಬಿಸ್ಕೆಟ್‌ಗಳನ್ನು ಹೊಂದುವುದನ್ನು ನಿಷೇಧಿಸಿತು ಮತ್ತು 14 ಕ್ಯಾರೆಟ್‌ಗಿಂತ ಹೆಚ್ಚಿನ ಚಿನ್ನದ ಒಡವೆಗಳ ತಯಾರಿಕೆಯನ್ನು ನಿರ್ಬಂಧಿಸಿತು. ಆದರೆ ಈ ನಿಯಂತ್ರಣಗಳು ವಿಫಲವಾಗಿ, ಕೇರಳ, ಗುಜರಾತ್ ಮತ್ತು ಮಹಾರಾಷ್ಟ್ರ ಕರಾವಳಿಯಲ್ಲಿ ಚಿನ್ನದ ಕಳ್ಳಸಾಗಣೆ ಹೆಚ್ಚಾಗಲು ಕಾರಣವಾಯಿತು.

ಕಿರುಸುದ್ದಿ

ವಿಜಯ್ ಮೇಲೆ ನನಗೆ ಅಸೂಯೆ ಇಲ್ಲ: ರಜಿನಿ

ಚೆನ್ನೈ: ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಜತೆ ತಮ್ಮ ಸ್ನೇಹವು ರಾಜಕೀಯಕ್ಕಿಂತ ಮಿಗಿಲಾಗಿದ್ದು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ವಿರುದ್ಧ ತಮಗೆ ಯಾವುದೇ ಅಸೂಯೆ ಅಥವಾ ರಾಜಕೀಯ ವಿರೋಧವಿಲ್ಲ ಎಂದು ಸೂಪರ್‌ಸ್ಟಾರ್ ರಜನಿಕಾಂತ್ ಸ್ಪಷ್ಟಪಡಿಸಿದರು. ಇಲ್ಲಿನ ಪೋಯ್ಸ್ ಗಾರ್ಡನ್ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ರಜನಿಕಾಂತ್, ಚುನಾವಣೆಗೆ ಸಂಬಂಧಿಸಿ ಸಾಮಾಜಿಕ ಜಾಲತಾಣಗಳು ಮತ್ತು ರಾಜಕೀಯ ವಲಯಗಳಲ್ಲಿ ತಮ್ಮ ವಿರುದ್ಧ ಹಲವು ಟೀಕೆಗಳು ಹರಿದಾಡುತ್ತಿರುವ ಕಾರಣ ಸಾರ್ವಜನಿಕವಾಗಿ ಮಾತನಾಡಲು ನಿರ್ಧರಿಸಿದ್ದೇನೆ ಎಂದರು.ಚುನಾವಣೆಯ ಸಂಬಂಧವಾಗಿ ನನ್ನ ವಿರುದ್ಧ ಹಲವು ಟೀಕೆಗಳು ಕೇಳಿಬರುತ್ತಿವೆ. ನಾನು ಇದಕ್ಕೆ ಪ್ರತಿಕ್ರಿಯಿಸದಿದ್ದರೆ, ಅವೇ ಸತ್ಯ ಎಂದು ಜನ ಭಾವಿಸುತ್ತಾರೆ ಎಂದ ಅವರು, ಚುನಾವಣೆಯ ಬಳಿಕ ಸ್ಟಾಲಿನ್ ಅವರನ್ನು ಭೇಟಿಯಾದದ್ದು ಸಂಪೂರ್ಣ ವೈಯಕ್ತಿಕ ಕಾರಣಕ್ಕಾಗಿ ಎಂದು ರಜನಿಕಾಂತ್ ಸ್ಪಷ್ಟಪಡಿಸಿದರು.

ಹಂಬನ್ತೋಟ ಬಂದರು ಬಳಿ ವಿಮಾನ ನಿಲ್ದಾಣ ಲೀಸ್‌ಗೆ?

ಹೊಸದಿಲ್ಲಿ: ಶ್ರೀಲಂಕಾ ಸರ್ಕಾರವು ಚೀನಾದ ನಿಯಂತ್ರಣದಲ್ಲಿರುವ ಹಂಬನ್ತೋಟ ಬಂದರು ಸಮೀಪದ ಮಟ್ಟಾಲ ರಾಜಪಕ್ಸೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಎಂಆರ್‌ಐಎ) ಅನ್ನು 30 ವರ್ಷದ ನಿರ್ಮಾಣ-ಕಾರ್ಯಾಚರಣೆ-ವರ್ಗಾವಣೆ (ಬಿಒಟಿ)ಯ ಮಾದರಿಯಲ್ಲಿ ವಿದೇಶಿ ಹೂಡಿಕೆದಾರರಿಗೆ ಲೀಸ್‌ಗೆ ನೀಡಲು ಮುಂದಾಗಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆ. 2017ರಲ್ಲಿ ಹಂಬನ್ತೋಟ ಬಂದರನ್ನು ಚೀನಾ 99 ವರ್ಷಗಳಿಗೆ ಲೀಸ್ ಮೂಲಕ ವಶಪಡಿಸಿಕೊಂಡಿದೆ. ಈಗ ಅದೇ ಪ್ರದೇಶದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಶ್ರೀಲಂಕಾ ಮುಂದಾಗಿದ್ದು, ಭಾರತೀಯ ಕಂಪನಿಗಳಿಗೆ ಹೂಡಿಕೆ ಅವಕಾಶ ಒದಗಿಸಲು ಕೇಂದ್ರ ಪ್ರಯತ್ನ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ಇರಾನ್‌ಗೆ ಪ್ರಮುಖ 5 ಷರತ್ತು ಹಾಕಿದ ಅಮೆರಿಕ

ವಾಷಿಂಗ್ಟನ್: ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸದ್ಯ ನಡೆಯುತ್ತಿರುವ ಶಾಂತಿ ಮಾತುಕತೆ ವೇಳೆ ಇರಾನ್ ಮುಂದೆ ಐದು ಪ್ರಮುಖ ಷರತ್ತುಗಳನ್ನು ಅಮೆರಿಕ ಮುಂದಿಟ್ಟಿದೆ ಎಂದು ವರದಿಯಾಗಿದೆ.ಹಿಂದಿನ ನಿರ್ಬಂಧಗಳು ಮತ್ತು ನೀತಿ ನಿರ್ಧಾರಗಳಿಂದ ಉಂಟಾದ ನಷ್ಟಗಳಿಗೆ ಇರಾನ್‌ಗೆ ಯಾವುದೇ ಪರಿಹಾರವನ್ನು ನೀಡಲು ವಾಷಿಂಗ್ಟನ್ ನಿರಾಕರಿಸಿದೆ. 400 ಕೆಜಿಗಳಷ್ಟು ಸಮೃದ್ಧ ಯುರೇನಿಯಂ ಅನ್ನು ಅಮೆರಿಕಕ್ಕೆ ಹಸ್ತಾಂತರಿಸಬೇಕೆಂದು ಅಮೆರಿಕ ಒತ್ತಾಯಿಸಿದೆ ಎಂದು ವರದಿಯಾಗಿದೆ.

ಎಬೋಲಾ: ಜಾಗತಿಕ ತುರ್ತುಸ್ಥಿತಿ ಘೋಷಣೆ

ಅಬುಜಾ: ಕಾಂಗೋ ಮತ್ತು ನೆರೆಯ ರಾಷ್ಟ್ರ ಉಗಾಂಡದಲ್ಲಿ ಎಬೋಲಾ ಸೋಂಕು ಹರಡುತ್ತಿರುವ ಹಿನ್ನೆಲೆ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಜಾಗತಿಕ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ. ಕೋವಿಡ್‌ನಂತೆ ಜಾಗತಿಕ ಮಹಾಮಾರಿಯ ಮಟ್ಟವನ್ನು ತಲುಪಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಸ್ಪಷ್ಟಪಡಿಸಿದೆ. ನೈಜೀರಿಯಾದ ಅಬುಜಾದಲ್ಲಿ ಮಾತನಾಡಿದ ವಿಶ್ವ ಆರೋಗ್ಯ ಸಂಸ್ಥೆ ಮಹಾನಿರ್ದೇಶಕ ಟೆಡ್ರೊಸ್ ಅಧನೊಮ್, ಈಗಾಗಲೇ 300ಕ್ಕೂ ಹೆಚ್ಚು ಶಂಕಿತ ಪ್ರಕರಣಗಳು ಮತ್ತು 88 ಸಾವುಗಳು ವರದಿ ಆಗಿರುವುದಾಗಿ ತಿಳಿಸಿದ್ದಾರೆ.

ಕಾಂಗೋದ ಪೂರ್ವ ಭಾಗದ ಇಟುರಿ ಪ್ರಾಂತ್ಯವೇ ಈ ಸೋಂಕಿನ ಕೇಂದ್ರವಾಗಿದ್ದು, ಈಗ ರಾಜಧಾನಿ ಕಿನ್ಶಾಸಾದಲ್ಲೂ ಸೋಂಕು ದೃಢಪಟ್ಟಿವೆ. ಎಬೋಲಾ ಅತ್ಯಂತ ಅಪಾಯಕಾರಿ ಮಹಾಮಾರಿಯಾಗಿದೆ. ವಾಂತಿ, ರಕ್ತ, ವೀರ್ಯ ಸೇರಿದಂತೆ ದೇಹದ ದ್ರವಾಂಶಗಳಿಂದ ಹರಡುತ್ತದೆ. ಅಪರೂಪದ ಬುಂಡಿಬುಗ್ಯೋ ವೈರಸ್ ರೂಪಾಂತರ:ಈ ಬಾರಿ ಹರಡುತ್ತಿರುವ ಬುಂಡಿಬುಗ್ಯೋ ಅಪರೂಪದ ಎಬೋಲಾ ರೂಪಾಂತರವಾಗಿದೆ. ಇದಕ್ಕಿನ್ನೂ ಲಸಿಕೆ ಲಭ್ಯವಿಲ್ಲವೆಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. 2007-08ರಲ್ಲಿ ಉಗಾಂಡಾದ ಬುಂಡಿಬುಗ್ಯೋ ಜಿಲ್ಲೆಯಲ್ಲಿ ರೂಪಾಂತರ ಕಂಡುಬಂದಿತ್ತು. ಆಗ 149 ಮಂದಿ ಸೋಂಕಿಗೆ ಒಳಗಾಗಿದ್ದು, 37 ಮಂದಿ ಮೃತಪಟ್ಟಿದ್ದಾರೆ. ಕಾಂಗೋದಲ್ಲಿ ನಡೆಯುತ್ತಿರುವ ಉಗ್ರ ಹಿಂಸಾಚಾರ, ಗಣಿ ಕಾರ್ಮಿಕರ ನಿರಂತರ ವಲಸೆ ಹಾಗೂ ಗಡಿಭಾಗ ಸಂಚಾರ ಸೋಂಕು ಪತ್ತೆಹಚ್ಚಲು, ನಿಯಂತ್ರಿಸಲು ಕಷ್ಟವಾಗುತ್ತಿದೆ ಎಂದು ಆಫ್ರಿಕಾ ರೋಗ ತಡೆ ಮತ್ತು ನಿಯಂತ್ರಣ ಕೇಂದ್ರ ತಿಳಿಸಿದೆ.

ಒಎಸ್‌ಎಂ ಪಾರದರ್ಶಕ ವ್ಯವಸ್ಥೆ, ಆತಂಕ ಅನಗತ್ಯ

ಹೊಸದಿಲ್ಲಿ: ಸಿಬಿಎಸ್‌ಇಯ 12ನೇ ತರಗತಿ ಫಲಿತಾಂಶಗಳ ಕುರಿತಾಗಿ ಆನ್-ಸ್ಕ್ರೀನ್ ಮಾರ್ಕಿಂಗ್(ಒಎಸ್‌ಎಂ) ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಹೆಚ್ಚಿದ ಹಿನ್ನೆಲೆ ಕೇಂದ್ರ ಶಿಕ್ಷಣ ಸಚಿವಾಲಯ, ಒಎಸ್‌ಎಂ ಹೊಸ ವ್ಯವಸ್ಥೆಯಲ್ಲ ಎಂಬ ಸ್ಪಷ್ಟನೆಯನ್ನು ನೀಡಿದೆ. ಶಿಕ್ಷಣ ಸಚಿವಾಲಯದ ಪ್ರಕಾರ, ಒಎಸ್‌ಎಂ ಹೊಸ ವ್ಯವಸ್ಥೆಯೇ ಅಲ್ಲ. ಸಿಬಿಎಸ್‌ಇ 2014ರಲ್ಲೇ ಈ ವ್ಯವಸ್ಥೆಯನ್ನು ಪರಿಚಯಿಸಿತ್ತು. ಈ ವರ್ಷ ಅದನ್ನು ಮತ್ತೆ ಜಾರಿಗೆ ತಂದಿದ್ದು, ಮೌಲ್ಯಮಾಪನವನ್ನು ಹೆಚ್ಚು ಪಾರದರ್ಶಕ ಹಾಗೂ ನಿಖರವಾಗಿಸಲು ತಂತ್ರಜ್ಞಾನ ಬಳಸಲಾಗಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ಒಎಸ್‌ಎಂ ಮೂಲಕ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನ
- ಪ್ರಾದೇಶಿಕ ಕಚೇರಿಗಳ ಹೊರಗಡೆಯೂ ಶಿಕ್ಷಕರಿಂದ ಉತ್ತರ ಪತ್ರಿಕೆಗಳ ಪರಿಶೀಲನೆ ಸಾಧ್ಯತೆ
- ಐಬಿ, ಕ್ಯಾಂಬ್ರಿಜ್ ಇತ್ಯಾದಿ ಅಂತಾರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲೂ ಇದೇ ವಿಧಾನ ಬಳಕೆಯಲ್ಲಿದೆ ಎಂದ ಸಚಿವಾಲಯ
- ಕೆಲವು ಉತ್ತರ ಪತ್ರಿಕೆಗಳಲ್ಲಿ ಹಗುರ ಬಣ್ಣದ ಮಸಿ ಬಳಕೆಯಿಂದ ಓದಲು ತೊಂದರೆ ಕಂಡುಬಂದಿದ್ದು, ಅಂತಹ 13,000ಕ್ಕೂ ಹೆಚ್ಚು ಉತ್ತರ ಪತ್ರಿಕೆಗಳ ಕೈಯಾರೆ ಮೌಲ್ಯಮಾಪನ
- ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಬಂದಿವೆ ಎಂಬ ಅನುಮಾನ ನಿವಾರಣೆಗೆ ಉತ್ತರ ಪತ್ರಿಕೆಗಳ ಪ್ರತಿಯನ್ನು ಕಡಿಮೆ ಶುಲ್ಕದಲ್ಲಿ ನೀಡಲು ಸಿಬಿಎಸ್‌ಇ ನಿರ್ಧಾರ

ಕೇರಳ: ಸಚಿವರ ಪಟ್ಟಿ ಪ್ರಕಟಿಸಿದ ಸತೀಶನ್

ತಿರುವನಂತಪುರಂ: ಕೇರಳದಲ್ಲಿ ಯುಡಿಎಫ್‌ನ ನೂತನ ಸರ್ಕಾರ ರಚಿಸಲು ಸಜ್ಜಾಗಿರುವ ನಿಯೋಜಿತ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಭಾನುವಾರ 20 ಸಚಿವರ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಅನೇಕ ಸಾಮಾಜಿಕ ಮತ್ತು ಪ್ರಾದೇಶಿಕ ಅಂಶಗಳ ಹಿನ್ನೆಲೆಯಲ್ಲಿ ಅನೇಕ ಆಪ್ತ ಸಹಕಾರಿಗಳಿಗೆ ಸಂಪುಟದಲ್ಲಿ ಅವಕಾಶ ನೀಡಲು ಸಾಧ್ಯವಾಗಿಲ್ಲ ಎಂದು ಅವರು ಸಮಜಾಯಿಷಿ ನೀಡಿದ್ದಾರೆ.

ಸಚಿವರ ಹೆಸರನ್ನು ಪ್ರಕಟಿಸಿದ ಅವರು, ಖಾತೆಗಳ ವಿವರವನ್ನು ರಾಜ್ಯಪಾಲರಿಗೆ ಸಲ್ಲಿಸಲಾಗುವುದು ಮತ್ತು ಅನಂತರ ಗಜೆಟ್ ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು ಎಂದರು. ಇದರಂತೆ ಮುಸ್ಲಿಂಲೀಗಿನ ಕುಂಞಾಲಿಕುಟ್ಟಿ, ಕಾಂಗ್ರೆಸಿನ ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್(ಪ್ರದೇಶ ಕಾಂಗ್ರೆಸ್ ಅಧ್ಯಕ್ಷ), ಕೆ.ಮುರಳೀಧರನ್, ಮಾನ್ಸ್ ಜೋಸೆಫ್, ಶಿಬು ಬೇಬಿ ಜಾನ್, ಅನೂಪ್ ಜಾಕೋಬ್, ಸಿ.ಪಿ.ಜಾನ್ , ಎ.ಪಿ.ಅನಿಲ್ ಕುಮಾರ್, ಎನ್. ಸಂಶುದ್ದೀನ್ , ಪಿ.ಸಿ.ವಿಷ್ಣುನಾಥ್, ರೋಜಿ ಎಂ.ಜಾನ್, ಬಿಂದು ಕೃಷ್ಣ ಎಂ.ಲಿಜು, ಕೆ.ಎಂ.ಶಾಜಿ, ಪಿ.ಕೆ.ಬಶೀರ್ , ಅಬ್ದುಲ್ ಗಫೂರ್, ಟಿ. ಸಿದ್ದಿಖಿ, ಕೆ.ಎ.ತುಳಸಿ ಮತ್ತು ಒ.ಜೆ.ಜನೀಶ್ ಅವರ ಹೆಸರು ಪಟ್ಟಿಯಲ್ಲಿದೆ. ಮುಸ್ಲಿಂಲೀಗ್ ಕಡೆಯಿಂದ 5 ಸಚಿವರ ಹೆಸರನ್ನು ನೀಡಲಾಗಿದ್ದು, ಪಿ.ಕೆ. ಕುಂಞಾಲಿಕುಟ್ಟಿ, ಎನ್.ಸಂಶುದ್ದೀನ್, ಕೆ.ಎಂ.ಶಾಜಿ, ಪಿ.ಕೆ.ಬಶೀರ್, ವಿ.ಇ.ಅಬ್ದುಲ್ ಗಫೂರ್ ಸಂಪುಟದಲ್ಲಿರಲಿದ್ದಾರೆ.

ತಿರುವಾಂಕೂರು ರಾಧಾಕೃಷ್ಣನ್ ವಿಧಾನಸಭಾಧ್ಯಕ್ಷರಾಗಲಿದ್ದು, ಶನಿಮೋಳ್ ಉಸ್ಮಾನ್ ಉಪಸ್ಪೀಕರ್ ಆಗಲಿದ್ದಾರೆ. ಸರಕಾರದ ಮುಖ್ಯ ಸಚೇತಕರಾಗಿ ಕಾಂಗ್ರೆಸ್‌ನವರೇ ಇರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ಉಕ್ರೇನ್ ಡ್ರೋನ್ ದಾಳಿ: ಭಾರತೀಯ ಸೇರಿ ನಾಲ್ವರ ಸಾವು

ಮಾಸ್ಕೋ: ರಷ್ಯಾ ಮೇಲೆ ಉಕ್ರೇನ್ ನಡೆಸಿದ ಈವರೆಗಿನ ಅತಿ ದೊಡ್ಡ ಡ್ರೋನ್ ದಾಳಿಗೆ ಓರ್ವ ಭಾರತೀಯ ಸೇರಿ ನಾಲ್ವರು ಬಲಿಯಾಗಿದ್ದು, 12 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಡ್ರೋನ್‌ಗಳ ಅವಶೇಷಗಳು ರಷ್ಯಾದ ಅತಿ ದೊಡ್ಡ ವಿಮಾನ ನಿಲ್ದಾಣದ ಮೇಲೆ ಬಿದ್ದರೂ ಯಾವುದೇ ಹಾನಿಯಾಗಿಲ್ಲ. ರಷ್ಯಾ ಮೇಲೆ ಡ್ರೋನ್ ನಡೆಸಿರುವುದಾಗಿ ಉಕ್ರೇನ್ ಅಧ್ಯಕ್ಷ ವೊಲಾಡಿಮಿರ್ ಝೆಲೆನ್ಸ್ಕಿ ದೃಢೀಕರಿಸಿದ್ದು, ದಾಳಿಯನ್ನು ಸಮರ್ಥಿಸಿದ್ದಾರೆ. ದಾಳಿಗೆ ಪ್ರತ್ಯುತ್ತರವಾಗಿ ರಷ್ಯಾ, ಉಕ್ರೇನ್ ರಾಜಧಾನಿ ಕೀವ್ ಮೇಲೆ 287 ಡ್ರೋನ್‌ಗಳಿಂದ ದಾಳಿಯನ್ನು ನಡೆಸಿದೆ. ಒಟ್ಟು 556 ಉಕ್ರೇನ್ ಡ್ರೋನ್‌ಗಳನ್ನು ರಷ್ಯಾ ಹೊಡೆದುರುಳಿಸಿದೆ.

ಭಾರತೀಯ ಕಾರ್ಮಿಕ ಬಲಿ: ದಾಳಿಗೆ ಭಾರತೀಯ ಕಾರ್ಮಿಕನೊಬ್ಬ ಬಲಿಯಾಗಿದ್ದನ್ನು ರಷ್ಯಾದಲ್ಲಿನ ಭಾರತೀಯ ರಾಯಭಾರ ಕಚೇರಿ ಭಾನುವಾರ ದೃಢೀಕರಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ 2020) ಅನ್ವಯ ಜು.1ರಿಂದ ಸಿಬಿಎಸ್‌ಇ 9ನೇ ತರಗತಿಗೆ ತ್ರಿಭಾಷಾ ಅಧ್ಯಯನ ಕಡ್ಡಾಯ

ಸಿಬಿಎಸ್‌ಇ ತ್ರಿಭಾಷಾ ಅಧ್ಯಯನ ನೀತಿ, ಅನಗತ್ಯ ಭೀತಿ?

ಹೊಸದಿಲ್ಲಿ: 2026-27 ಶೈಕ್ಷಣಿಕ ವರ್ಷದ ಆರಂಭವಾದ ಎರಡು ತಿಂಗಳ ಬಳಿಕ, ಸಿಬಿಎಸ್‌ಇ 2026ರ ಜು.1ರಿಂದ 9ನೇ ತರಗತಿಯಲ್ಲಿ ತ್ರಿಭಾಷಾ ನೀತಿ(ತ್ರೀ ಲಾಂಗ್ವೇಜ್ ಫಾರ್ಮುಲಾ) ಜಾರಿಗೆ ತರುವುದಾಗಿ ಅಧಿಸೂಚನೆ ಹೊರಡಿಸಿದ್ದು, ಈ ನೀತಿಯ ವಿವರ ಇಲ್ಲಿದೆ.

1. ತ್ರಿಭಾಷಾ ನೀತಿ ಎಂದರೇನು?


ರಾಷ್ಟ್ರೀಯ ಶಿಕ್ಷಣ ನೀತಿ 2020(ಎನ್‌ಇಪಿ 2020) ಪ್ರಕಾರ, ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯಬೇಕು. ಅವುಗಳಲ್ಲಿ ಕನಿಷ್ಠ ಎರಡು ಭಾಷೆಗಳು ಭಾರತೀಯ ಮೂಲದ್ದಾಗಿರಬೇಕು. ಈ ನಿಯಮ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಅನ್ವಯವಾಗುತ್ತದೆ. ಆದರೆ, ಯಾವ ಭಾಷೆಗಳನ್ನು ಆಯ್ಕೆ ಮಾಡಬೇಕು ಎಂಬುದರಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ಇರುತ್ತದೆ. ಯಾವುದೇ ಭಾಷೆಯನ್ನು ಬಲವಂತವಾಗಿ ಹೇರಬಾರದು ಎಂದು ನೀತಿ ಹೇಳುತ್ತದೆ.

2. ತ್ರಿಭಾಷಾ ನೀತಿ ಇತಿಹಾಸ ಏನು?

ಈ ಕಲ್ಪನೆಯನ್ನು ಮೊದಲಾಗಿ 1964-66ರ ಕೊಠಾರಿ ಕಮಿಷನ್ ಶಿಫಾರಸು ಮಾಡಿತ್ತು. ಬಳಿಕ 1968ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇದನ್ನು ಅಳವಡಿಸಲಾಯಿತು. ನಂತರ 1986ರ ಶಿಕ್ಷಣ ನೀತಿಯಲ್ಲಿ ರಾಜೀವ್ ಗಾಂಧಿ ಸರ್ಕಾರ ಇದನ್ನು ಮರುದೃಢಪಡಿಸಿತು. 1992ರಲ್ಲಿ ಪಿ.ವಿ. ನರಸಿಂಹ ರಾವ್ ಸರ್ಕಾರ ಪರಿಷ್ಕರಣೆ ಮಾಡಿ ಭಾಷಾ ವೈವಿಧ್ಯತೆ ಮತ್ತು ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಮುಂದುವರಿಸಿತು. ಹಿಂದಿನ ಮಾದರಿಯಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, ಅಧಿಕೃತ ಭಾಷೆ ಮತ್ತು ಮತ್ತೊಂದು ಆಧುನಿಕ ಭಾರತೀಯ ಅಥವಾ ಯುರೋಪಿಯನ್ ಭಾಷೆ ಸೇರಿದ್ದವು.

3. ಎನ್‌ಇಪಿ 2020 ಏನು ಹೇಳುತ್ತದೆ?

ರಾಷ್ಟ್ರೀಯ ಶಿಕ್ಷಣ ನೀತಿ 2020 ಶಾಲಾ ಹಂತದಲ್ಲೇ ಬಹುಭಾಷಾ ಕಲಿಕೆಯನ್ನು ಉತ್ತೇಜಿಸಲು ತ್ರಿಭಾಷಾ ಸೂತ್ರವನ್ನು ಜಾರಿಗೆ ತರಬೇಕು ಎಂದು ಹೇಳುತ್ತದೆ. ಜೊತೆಗೆ ರಾಜ್ಯಗಳ ಆಶಯ, ಸಂವಿಧಾನಾತ್ಮಕ ಅಂಶಗಳು ಹಾಗೂ ಜನರ ಅಭಿರುಚಿಯನ್ನು ಗಮನದಲ್ಲಿಟ್ಟು ಯಾವುದೇ ಭಾಷೆಯನ್ನು ಹೇರಬಾರದು ಎಂದು ಸ್ಪಷ್ಟಪಡಿಸುತ್ತದೆ. ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳಾಗಿರಬೇಕು. ಉಳಿದ ಭಾಷೆಗಳಲ್ಲಿ ರಾಜ್ಯಗಳು, ಪ್ರದೇಶಗಳು ಮತ್ತು ವಿದ್ಯಾರ್ಥಿಗಳಿಗೆ ಆಯ್ಕೆ ಸ್ವಾತಂತ್ರ್ಯ ನೀಡಲಾಗಿದೆ.



4. ವಿದೇಶಿ ಭಾಷೆಗಳ ವಿಷಯ ಏನು?

ಇಂಗ್ಲಿಷ್ ಹಾಗೂ ಭಾರತೀಯ ಭಾಷೆಗಳ ಜೊತೆಗೆ ಪ್ರೌಢಶಾಲಾ ಹಂತದಲ್ಲಿ ಕೊರಿಯನ್, ಜಪಾನೀಸ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್ ಮುಂತಾದ ವಿದೇಶಿ ಭಾಷೆಗಳನ್ನೂ ಕಲಿಯಲು ಅವಕಾಶ ಇದೆ. ಆದರೆ ಹೊಸ ಬದಲಾವಣೆಯಲ್ಲಿ ಇಂಗ್ಲಿಷ್ ಅನ್ನು ವಿದೇಶಿ ಭಾಷೆ ವರ್ಗಕ್ಕೆ ಸೇರಿಸಿರುವುದು ಪ್ರಮುಖ ಚರ್ಚೆಗೆ ಕಾರಣವಾಗಿದೆ. ತ್ರಿಭಾಷಾ ಚೌಕಟ್ಟಿನಲ್ಲಿ ಒಂದು ವಿದೇಶಿ ಭಾಷೆಗೆ ಮಾತ್ರ ಅವಕಾಶ ಇರುವುದರಿಂದ, ವಿದ್ಯಾರ್ಥಿಗಳು ಇಂಗ್ಲಿಷ್ ಜೊತೆಗೆ ಮತ್ತೊಂದು ವಿದೇಶಿ ಭಾಷೆಯನ್ನು ಆಯ್ಕೆ ಮಾಡುವ ಅವಕಾಶ ಸೀಮಿತವಾಗಬಹುದು.

5. ಪಠ್ಯಪುಸ್ತಕಗಳು ಸಿದ್ಧವಾಗಿವೆಯೇ?

ಸಿಬಿಸ್‌ಇ ಪ್ರಕಾರ, ವಿಶೇಷ ಆರ್3 ಪಠ್ಯಪುಸ್ತಕಗಳು ಸಿದ್ಧವಾಗುವವರೆಗೆ 9ನೇ ತರಗತಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಭಾಷೆಗೆ 6ನೇ ತರಗತಿಯ ಆರ್3 (2026-27 ಆವೃತ್ತಿ) ಪಠ್ಯಪುಸ್ತಕಗಳನ್ನು ಬಳಸಬೇಕು. ಅದೇ ವೇಳೆ, ತಕ್ಕ ಮಟ್ಟಿನ ಭಾಷಾ ಶಿಕ್ಷಕರ ಕೊರತೆ ಇರುವ ಶಾಲೆಗಳು ತಾತ್ಕಾಲಿಕವಾಗಿ ಆ ಭಾಷೆಯಲ್ಲಿ ಕಾರ್ಯನಿರ್ವಹಣಾ ಪ್ರಾವೀಣ್ಯತೆ ಹೊಂದಿರುವ ಇತರ ವಿಷಯ ಶಿಕ್ಷಕರನ್ನು ಬಳಸಬಹುದು ಎಂದು ಮಂಡಳಿ ತಿಳಿಸಿದೆ.

6. ತಮಿಳುನಾಡಿನಲ್ಲಿ ವಿರೋಧ

ತಮಿಳುನಾಡು ಇತಿಹಾಸಾತ್ಮಕವಾಗಿ ಈ ನೀತಿಗೆ ವಿರೋಧ ವ್ಯಕ್ತಪಡಿಸಿದೆ. 1937ರಲ್ಲಿ ಅಂದಿನ ಮದ್ರಾಸ್ ಸರ್ಕಾರದ ಮುಖ್ಯಸ್ಥ ಸಿ.ಗೋಪಾಲಾಚಾರಿ ಶಾಲೆಗಳಲ್ಲಿ ಕಡ್ಡಾಯ ಹಿಂದಿಯನ್ನು ಪರಿಚಯಿಸಿದಾಗ, ಪೆರಿಯಾರ್ ಇ.ವಿ. ರಾಮಸಾಮಿ ಸೇರಿದಂತೆ ದ್ರಾವಿಡ ನಾಯಕರು ಪ್ರತಿಭಟನೆ ನಡೆಸಿದ್ದರು. ಬಳಿಕ 1968ರಲ್ಲಿ ತ್ರಿಭಾಷಾ ನೀತಿ ಜಾರಿಗೆ ಬಂದಾಗಲೂ ಹಿಂದಿ ಹೇರಿಕೆಯ ಪ್ರಯತ್ನವೆಂದು ತಮಿಳುನಾಡು ವಿರೋಧಿಸಿತು.ಅಂದಿನ ಮುಖ್ಯಮಂತ್ರಿ ಸಿ.ಎನ್. ಅಣ್ಣಾದುರೈ ನೇತೃತ್ವದಲ್ಲಿ ತಮಿಳು ಮತ್ತು ಇಂಗ್ಲಿಷ್ ಮಾತ್ರ ಬೋಧಿಸುವ ದ್ವಿಭಾಷಾ ನೀತಿ ಅನುಸರಿಸಲಾಯಿತು. ಇಂದಿಗೂ ತಮಿಳುನಾಡು ಮಾತ್ರ ತ್ರಿಭಾಷಾ ನೀತಿಯನ್ನು ಸಂಪೂರ್ಣ ಜಾರಿಗೆ ತರದ ರಾಜ್ಯವಾಗಿದೆ.

ಹಿಜಾಬ್‌ಗೆ ಅವಕಾಶ: ಆದೇಶ ಹಿಂಪಡೆಗೆ ಹಿಂಜಾವೇ ಆಗ್ರಹ

ಬೆಂಗಳೂರು: ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿ ಸರ್ಕಾರ ಹೊರಡಿಸಿರುವ ಆದೇಶವನ್ನು ತಕ್ಷಣವೇ ಹಿಂಪಡೆಯಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ತೀವ್ರ ಸ್ವರೂಪದ ಆಂದೋಲನ ಹಮ್ಮಿಕೊಳ್ಳಲಾಗುವುದು ಎಂದು ಹಿಂದೂ ಜಾಗರಣ ವೇದಿಕೆ (ಕರ್ನಾಟಕ ದಕ್ಷಿಣ) ಎಚ್ಚರಿಕೆ ನೀಡಿದೆ.

ಈ ಕುರಿತು ಜಂಟಿ ಪ್ರಕಟಣೆ ನೀಡಿರುವ ಹಿಂದೂ ಜಾಗರಣ ವೇದಿಕೆಯ ಪ್ರಾಂತ ಸಂಚಾಲಕರಾದ ಕೇಶವಮೂರ್ತಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮುಸ್ಲಿಂ ತುಷ್ಟೀಕರಣ ಮತ್ತು ಓಲೈಕೆಯ ರಾಜಕಾರಣದ ಭಾಗವಾಗಿ ಈ ನಿರ್ಧಾರ ಕೈಗೊಂಡಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ಸಮಾನತೆ ಮೂಡಿಸುವ ಸಲುವಾಗಿಯೇ ಸಮವಸ್ತ್ರ ಸಂಹಿತೆಯನ್ನು ಜಾರಿಗೆ ತರಲಾಗಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯವೂ ಸಹ ವಿದ್ಯಾರ್ಥಿಗಳಲ್ಲಿ ಸಮಾನತೆ ತರಲು ಏಕರೂಪದ ಸಮವಸ್ತ್ರ ಇರಬೇಕು ಎಂಬುದೇ ಆಗಿತ್ತು. ಆದರೆ, ಹಿಜಾಬ್ ಯಾವುದೇ ಕಾರಣಕ್ಕೂ ಸಮವಸ್ತ್ರದ ಭಾಗವಾಗಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅತಿಯಾದ ಓಲೈಕೆ ರಾಜಕಾರಣದಿಂದಾಗಿ ಈಗಾಗಲೇ ರಾಜ್ಯದ ಹಲವೆಡೆ ಮತೀಯ ಸಂಘರ್ಷಗಳು ನಡೆದಿವೆ. ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಸ್ಲಿಮರನ್ನು ರಾಷ್ಟ್ರವಿರೋಧಿ ಹಾಗೂ ಹಿಂದೂ ವಿರೋಧಿಗಳಂತೆ ಬಿಂಬಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಸರ್ಕಾರದ ಆದೇಶದಲ್ಲಿ ಜನಿವಾರ, ಶಿವಧಾರ ಮುಂತಾದವುಗಳನ್ನು ಉಲ್ಲೇಖಿಸಲಾಗಿದೆ. ಸರ್ಕಾರವು ಈ ವಿವಾದಾತ್ಮಕ ಆದೇಶವನ್ನು ತಕ್ಷಣವೇ ಕೈಬಿಟ್ಟು, ಎಲ್ಲಾ ವಿದ್ಯಾರ್ಥಿಗಳಿಗೆ ಸಮಾನ ರೀತಿಯ ಸಮವಸ್ತ್ರವನ್ನು ಕಡ್ಡಾಯಗೊಳಿಸಲು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಸರ್ಕಾರ ತನ್ನ ಪಟ್ಟನ್ನು ಸಡಿಲಿಸದಿದ್ದರೆ, ಮುಂದಿನ ದಿನಗಳಲ್ಲಿ ಹಿಂದೂ ಸಮಾಜವನ್ನು ಒಗ್ಗೂಡಿಸಿ ರಾಜ್ಯವ್ಯಾಪಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಕೇಶವಮೂರ್ತಿ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ವಿಜಯಪುರ ನಗರದ ಬಿಎಲ್‌ಡಿಇ ಒಳಾಂಗಣ ಕ್ರೀಡಾಂಗಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಮೇ 23ರವರೆಗೆ ನಡೆಯುವ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಚಾಲನೆ ನಿಡಿದರು. ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ ಬಂಗಾರಪ್ಪ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಡಾ. ಆನಂದ್ ಕೆ., ಜಿ.ಪಂ. ಸಿಇಒ ರಿಷಿ ಆನಂದ್, ವಿಡಿಎ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ ಉಪಸ್ಥಿತರಿದ್ದರು.

ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-2

ಬೆಂಗಳೂರು: ರಾಜ್ಯಾದ್ಯಂತ ಮೇ 18 ರಿಂದ ಮೇ 25ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ನಡೆಯುಲಿದ್ದು, ಪರೀಕ್ಷೆಗೆ ಒಟ್ಟು 1,15,112 ವಿದ್ಯಾರ್ಥಿಗಳು ನೋಂದಣಿಯಾಗಿದ್ದಾರೆ. ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಬಯಸುವ 11,881 ವಿದ್ಯಾರ್ಥಿಗಳು ಹಾಗೂ ಹಾಜರಾತಿ ಕೊರತೆಯಿಂದ ಪರೀಕ್ಷೆ-1ಕ್ಕೆ ಹಾಜರಾಗಲು ಸಾಧ್ಯವಾಗದ 7,658 ವಿದ್ಯಾರ್ಥಿಗಳು ಪರೀಕ್ಷೆ-2ಕ್ಕೆ ನೋಂದಣಿಯಾಗಿದ್ದಾರೆ.

ರಾಜ್ಯದಲ್ಲಿ 358 ಕೇಂದ್ರಗಳಲ್ಲಿ ಪರೀಕ್ಷೆಯು ನಡೆಯುತ್ತಿದ್ದು, ಒಟ್ಟು ನೋಂದಣಿಯಾದ ವಿದ್ಯಾರ್ಥಿಗಳ ಪೈಕಿ 76,673 ವಿದ್ಯಾರ್ಥಿಗಳು ಮತ್ತು 38,439 ವಿದ್ಯಾರ್ಥಿನಿಯಾಗಿದ್ದಾರೆ. 5,488 ಸರ್ಕಾರಿ ಶಾಲೆಗಳ ಪೈಕಿ 55,403 ವಿದ್ಯಾರ್ಥಿಗಳು, 3,250 ಅನುದಾನಿತ ಶಾಲೆಗಳಿಂದ 31,436 ವಿದ್ಯಾರ್ಥಿಗಳು ಮತ್ತು 5,060 ಅನುದಾನರಹಿತ ಶಾಲೆಗಳಿಂದ 28,273 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ಕ್ಕೆ ನೋಂದಣಿಯಾಗಿದ್ದಾರೆ.

ಪರೀಕ್ಷೆ-2 ವೇಳಾಪಟ್ಟಿ

- ಮೇ 18 -ಪ್ರಥಮ ಭಾಷೆ,
- ಮೇ 19 - ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತ ಪರೀಕ್ಷೆ
- ಮೇ 20 - ದ್ವಿತೀಯ ಭಾಷೆ
- ಮೇ 21 - ಗಣಿತ
- ಮೇ 22 - ತೃತೀಯ ಭಾಷೆ
- ಮೇ 23 - ಸಮಾಜ ವಿಜ್ಞಾನ,
- ಮೇ 25 - ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಪ್ರೋಗ್ರಾಮಿಂಗ್ ಇನ್ ಸಿ ಮತ್ತು ಅರ್ಥಶಾಸ್ತ್ರ ವಿಷಯ

ಕಿರುಸುದ್ದಿ

ಯೋಗದ ಪ್ರಯೋಜನಗಳ ಬಗ್ಗೆ ಜಾಗೃತಿ

ಬೆಂಗಳೂರು: ಅಂತಾರಾಷ್ಟ್ರೀಯ ಯೋಗ ದಿನಾಚರಣೆ-2026ರ ಪೂರ್ವಭಾವಿಯಾಗಿ ನೂರು ದಿನಗಳ ಕೌಂಟ್‌ಡೌನ್ ಸರಣಿಯ ಭಾಗವಾಗಿ, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ (ಎಸ್-ವ್ಯಾಸ), ಡೀಮ್ಡ್-ಟು-ಬಿ ವಿಶ್ವವಿದ್ಯಾಲಯವು ಬೆಂಗಳೂರಿನ ಜಿಗಣಿಯಲ್ಲಿರುವ ಪ್ರಶಾಂತಿ ಕುಟೀರಂ ಕ್ಯಾಂಪಸ್‌ನಲ್ಲಿ ಸರಣಿಯ 36ನೇ ದಿನದಂದು ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಸಹಯೋಗದೊಂದಿಗೆ ಯೋಗ ಕಾರ್ಯಕ್ರಮ ನಡೆಯಿತು. ಯೋಗದ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮಕ್ಕಾಗಿ ಅದರ ಅಳವಡಿಕೆ ಉತ್ತೇಜಿಸುವ ಗುರಿ ಹೊಂದಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ 2026ರ ಪೂರ್ವಭಾವಿಯಾಗಿ ಆಯೋಜಿಸಲಾಗುತ್ತಿರುವ ರಾಷ್ಟ್ರವ್ಯಾಪಿ ಚಟುವಟಿಕೆಗಳ ಭಾಗವಾಗಿ ಈ ಕಾರ್ಯಕ್ರಮವು ರೂಪುಗೊಂಡಿತು. ಎಸ್-ವ್ಯಾಸ ಸ್ಥಾಪಕ ಕುಲಪತಿ ಪದ್ಮಶ್ರೀ ಡಾ.ಎಚ್.ಆರ್.ನಾಗೇಂದ್ರ ಅವರು ಯೋಗದ ಮಹತ್ವ, ಅದರ ವೈಜ್ಞಾನಿಕ ಆಯಾಮಗಳು ಮತ್ತು ದೈನಂದಿನ ಜೀವನದಲ್ಲಿ ಅದರ ಪ್ರಸ್ತುತತೆಯ ಕುರಿತು ವಿವರಿಸಿದರು. ಯುವ ಯೋಗಕ್ಕಾಗಿ ಯೋಗ ಎಂಬ ಶೀರ್ಷಿಕೆಯ ಮೊದಲ ಗೋಷ್ಠಿಯಲ್ಲಿ ಯೋಗ ತಿಲಗಂ ಯೋಗ ಚಿಕಿತ್ಸಾ ಶಾಲೆಯ ಸಹಾಯಕ ಪ್ರಾಧ್ಯಾಪಕ ಡಾ. ಬಾಲಾಜಿ ಆರ್. ಉಪನ್ಯಾಸ ನೀಡಿದರು. ರೋಗಕ್ಕಿಂತ ಹೆಚ್ಚಾಗಿ ಆರೋಗ್ಯ ಮತ್ತು ಯೋಗಕ್ಷೇಮದ ಮೂಲದ ಮೇಲೆ ಕೇಂದ್ರೀಕರಿಸುವ ಸಲ್ಯೂಟೋಜೆನೆಸಿಸ್ ಪರಿಕಲ್ಪನೆಯನ್ನು ಡಾ. ಬಾಲಾಜಿ ವಿವರಿಸಿದರು. ಮಾಹಿತಿ ಅತಿಸಾಂದ್ರತೆ ಹೊಂದಿರುವ ಜಗತ್ತಿನ ಯುಗದಲ್ಲಿ ಮಾನಸಿಕ ಸ್ವಾಸ್ಥ್ಯಕ್ಕಾಗಿ ಯೋಗ ಎಂಬ ಶೀರ್ಷಿಕೆಯ ಎರಡನೇ ಗೋಷ್ಠಿಯಲ್ಲಿ ಕೃಷ್ಣಮಾಚಾರ್ಯ ಯೋಗ ಮಂದಿರದ ತಾಂತ್ರಿಕ ಸಲಹೆಗಾರ್ತಿ ಡಾ. ಲತಾ ಸತೀಶ್ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 650 ಮಂದಿ ಭಾಗವಹಿಸಿದ್ದರು.

ಶಿಕ್ಷಣ ನೀತಿ ಶಿಫಾರಸು ಅಧ್ಯಯನಕ್ಕೆ ಉಪಸಮಿತಿ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗವು ಸಲ್ಲಿಸಿರುವ ಅಂತಿಮ ವರದಿಯ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವ ಎಚ್. ಕೆ. ಪಾಟೀಲ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್. ಸಿ. ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಸಚಿವ ಸಂಪುಟ ಉಪಸಮಿತಿಗೆ ಸದಸ್ಯರಾಗಿದ್ದಾರೆ ಎಂದು ಸಚಿವ ಸಂಪುಟ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಚಂದ್ರಶೇಖರ್ ಆರ್. ತಿಳಿಸಿದ್ದಾರೆ.

ಕೃಷಿಹೊಂಡದಲ್ಲಿ ಈಜಲು ಹೋದ ಮೂವರ ಸಾವು

ಮಾಲೂರು: ಕೃಷಿ ಹೊಂಡದಲ್ಲಿ ಈಜಾಡಲು ತೆರಳಿದ್ದಾಗ ತಂದೆ ಹಾಗೂ ಇಬ್ಬರು ಮಕ್ಕಳು ಜಲಸಮಾಧಿಯಾಗಿರುವ ದಾರುಣ ಘಟನೆ ಮಾಲೂರಿನ ನಕ್ಕನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮೃತಪಟ್ಟವರು ತಂದೆ ಶ್ರೀನಿವಾಸ್ (45), ಮಕ್ಕಳಾದ ಚೇತನ್(15), ರಾಜೇಶ್ (09)ಸಾವನ್ನಪ್ಪಿರುವವರೆಂದು ಗುರುತಿಸಲಾಗಿದೆ. ಈ ಕೃಷಿ ಹೊಂಡವು ನಕ್ಕನಹಳ್ಳಿ ಗ್ರಾಮದ ಬೈರಪ್ಪನವರಿಗೆ ಸೇರಿದವರಿಗಾಗಿದೆ. ಬೈರಪ್ಪ ಎಂಬುವರಿಗೆ ಸೇರಿದ ಕೃಷಿ ಹೊಂಡದಲ್ಲಿ ಮಕ್ಕಳಿಗೆ ಈಜು ಕಳಿಸಲು ಕರೆದುಕೊಂಡು ಹೋಗುತ್ತಿದ್ದಾಗ ಕಾಲು ಜಾರಿ ಮೂವರು ನೀರಿಗೆ ಬಿದ್ದಿದ್ದಾರೆ. ಮೇಲೆ ಬರಲು ಆಗದೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮಾಸ್ತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಮದಿಂದ ಸ್ವಲ್ಪ ದೂರದಲ್ಲಿರುವ ಈ ಕೃಷಿ ಹೊಂಡಕ್ಕೆ ಬೇಸಿಗೆಯ ಬಿರು ಬಿಸಲಾಗಿದ್ದರಿಂದ ಮಕ್ಕಳು ತಂದೆಯ ಜೊತೆ ಕೃಷಿ ಹೊಂಡಕ್ಕೆ ಈಜಲು ಹೋಗಿದ್ದ ರೆಂದು ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಈ ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ. ನಂತರ ಸುತ್ತಮುತ್ತಲಿನವರು ಬಂದು ಇವರುಗಳನ್ನು ಕೃಷಿ ಹೊಂಡ ದಿಂದ ಹೊರ ತೆಗೆಯಲಾಗಿದೆ ಆ ಹೊತ್ತಿಗಾಗಲೇ ಅವರುಗಳ ಪ್ರಾಣ ಪಕ್ಷಿ ಹಾರಿಹೋಗಿತ್ತು. ನಕ್ಕನಹಳ್ಳಿಯ ಬೈರಪ್ಪನ ಕೃಷಿ ಹೊಂಡದಲ್ಲಿ ಸುತ್ತಲೂ ಮುಂಜಾಗ್ರತಾ ಕ್ರಮವಾಗಿ ಯಾವುದೇ ರೀತಿ ತಂತಿ ಬೇಲಿ ಹಾಕದೆ ನಿರ್ಲಕ್ಷ್ಯ ತೋರಿದ್ದರಿಂದ ಈ ಘಟನೆ ಸಂಭವಿಸಬಹುದೆ ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕೃಷಿ ಇಲಾಖೆಯಿಂದ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದು ಜನತೆ ಮನವಿ ಮಾಡಿದ್ದಾರೆ. ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳಾದ ಅಡಿಷನಲ್ ಎಸ್ಪಿ ರವಿಶಂಕರ್, ಡಿವೈಎಸ್ಪಿ ಕೃಷ್ಣಪ್ಪ, ಮಾಸ್ತಿ ಪಿ.ಐ. ಓಂ ಪ್ರಕಾಶ್ ಗೌಡ ಭೇಟಿ ನೀಡಿದ್ದು ಮಾಸ್ತಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಫಲಾನುಭವಿಗಳಿಗೆ ಸವಲತ್ತು, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ನಾಳೆ ಸಾರ್ಥಕ ಸೇವೆಗಳ ಸಮರ್ಪಣೆಕಾರ್ಯಕ್ರಮ

ಬೆಂಗಳೂರು: ಮೇ 20ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 3 ವರ್ಷಗಳು ತುಂಬಲಿದ್ದು, ಈ ದಿನ ತುಮಕೂರಿನಲ್ಲಿ ರಾಜ್ಯದ ಜನತೆಗೆ ಆಗಿರುವ ಪ್ರಯೋಜನಗಳ ಸೌಲಭ್ಯ ವಿತರಣೆ ಕಾರ್ಯಕ್ರಮವಾಗಿ ಸಾರ್ಥಕ ಸೇವೆಗಳ ಸಮರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅದಕ್ಕೆ ಮುನ್ನಾ ದಿನ ಮೇ 19ಕ್ಕೆ ಅಧಿಕೃತವಾಗಿ ಕಾರ್ಯಕ್ರಮ ನಿಗದಿಯಾಗಿದೆ.

ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರ ಚಾಲನೆ ನೀಡಿ ಅವುಗಳನ್ನು ಆದ್ಯತಾ ಕಾರ್ಯಕ್ರಮಗಳಾಗಿತೆಗೆದುಕೊಂಡುಸಮರ್ಪಕವಾಗಿ ಅನುಷ್ಠಾನಗೊಳಿಸಿದೆ. ಈ ವಿಷಯವನ್ನು ಜನಸಮುದಾಯದೊಂದಿಗೆ ಹಂಚಿಕೊಳ್ಳಬೇಕಿತ್ತು, ಮೇ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ 2ನೇ ಅವಧಿಯ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆ ದಿನದಂದು ಕಾರ್ಯಕ್ರಮ ಆಯೋಜಿಸಲು ಆರಂಭದಲ್ಲಿ ನಿರ್ಧರಿಸಲಾಗಿತ್ತು. ಪ್ರಮುಖವಾಗಿ ಕಂದಾಯ ಇಲಾಖೆಯಲ್ಲಿ ಬಹುಕಾಲದಿಂದ ಜಮೀನು ವಾರಸುದಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ತುಮಕೂರು ಜಿಲ್ಲೆಯಲ್ಲಿ ಆಗಿರುವ ಇತರೆ ಇಲಾಖೆಗಳ ಅಭಿವೃದ್ಧಿ ಸಂಬಂಧಿಸಿದಂತೆ ಸುಮಾರು 682 ಕೋಟಿ ರೂ.ಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ಕಾರ್ಯಕ್ರಮಗಳನ್ನುಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ. ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು, ಪಕ್ಷಾತೀತ ಕಾರ್ಯಕ್ರಮ ಆಗಿರಲಿದೆ. ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಎಲ್ಲಾ ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಸಂಸದರು, ಮುಖಂಡರು ಆಗಮಿಸಲಿದ್ದಾರೆ. ಕಾರ್ಯಕ್ರಮಕ್ಕೆ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 2 ಲಕ್ಷಕ್ಕೂ ಹೆಚ್ಚು ಜನ ಆಗಮಿಸಲಿದ್ದು, ಅವರಿಗೆ ಬಸ್ಸುಗಳ ವ್ಯವಸ್ಥೆ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ.



ಕಳೆದ ಒಂದೂವರೆ ವರ್ಷದಲ್ಲಿ ತುಮಕೂರುಜಿಲ್ಲೆಯಕಂದಾಯ ಇಲಾಖೆಯಲ್ಲಿ ಅಭೂತಪೂರ್ವ ಅಭಿವೃದ್ಧಿ ಕೆಲಸಗಳು ನಡೆದಿದ್ದು, ಮೇ 19ರ ಕಾರ್ಯಕ್ರಮದಲ್ಲಿ ಇ-ಪೌತಿ ಖಾತೆ, ದರಖಾಸ್ತು ಪೋಡಿ, ಕಂದಾಯ ಗ್ರಾಮ ಹಕ್ಕುಪತ್ರಗಳು, ಪಿಂಚಣಿ ಸೇರಿದಂತೆ ಸುಮಾರು 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ.
■ ಡಾ.ಜಿ.ಪರಮೇಶ್ವರ್, ಗೃಹ ಸಚಿವ

1 ದಿನ ಮುಂಚಿತವಾಗಿ ಕಾರ್ಯಕ್ರಮ

ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಬೇಡಿಕೆ ಈಡೇರಿಸುವಂತೆ ಅಂದೇ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಅದಕ್ಕೆ ಮುನ್ನಾ ದಿನ ಮೇ 19ರಂದೇ ಕಾರ್ಯಕ್ರಮ ಆಯೋಜಿಸಲು ಸಿಎಂಯವರು ಸೂಚಿಸಿದ ಹಿನ್ನೆಲೆಯಲ್ಲಿ ದಿನಾಂಕ ಮಾತ್ರ ಬದಲಾಗಿದೆ. ಉಳಿದಂತೆ ಎಲ್ಲ ಕಾರ್ಯಕ್ರಮಗಳು ಪೂರ್ವ ಯೋಜಿತದಂತೆ ನಡೆಯಲಿವೆ.

ಸರ್ಕಾರಕ್ಕೆ ಬದ್ಧತೆ ಇಲ್ಲ: ಕಾರಜೋಳ

ಸುಪ್ರೀಂ ಆದೇಶ ಪಾಲಿಸಲಿ

ಕಲಬುರಗಿ: ದೇಶದಲ್ಲಿ ಒಕ್ಕೂಟ ವ್ಯವಸ್ಥೆ ಇರುವುದರಿಂದ ಕೇಂದ್ರ ಸರ್ಕಾರವಾಗಲಿ ಹಾಗೂ ಸುಪ್ರೀಂಕೋರ್ಟ್ ಆಗಲಿ ನೀಡಿರುವ ಆದೇಶಗಳನ್ನು ಪಾಲನೆ ಮಾಡುವುದು ರಾಜ್ಯ ಸರ್ಕಾರದಜವಾಬ್ದಾರಿಮತ್ತುಕರ್ತವ್ಯವಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಯಾವುದೇ ಕಾನೂನು ತಂದರೆ, ಅದು ಈ ನೆಲದ ಕಾನೂನಾಗಿರುತ್ತದೆ. ಅದೇ ರೀತಿ ಸುಪ್ರೀಂಕೋರ್ಟ್ ಯಾವುದೇ ಆದೇಶ ಮಾಡಿದ್ರೂ, ಅದು ಈ ನೆಲದ ಆದೇಶವಾಗಿರುತ್ತದೆ. ಈ ನೆಲದ ಆದೇಶಗಳನ್ನು ಸ್ವೀಕರಿಸಿ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರಬೇಕು ಎಂದರು. ಒಳಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶವಿದೆ. ಆದರೂ ಸಿಎಂ ಸಿದ್ದರಾಮಯ್ಯ ಮಾಡಲಿಲ್ಲ. ಅವರದ್ದೆ ಸರ್ಕಾರ ನೇಮಿಸಿದ ಮೂರು ಮೂರು ಆಯೋಗ, ನ್ಯಾಯಮೂರ್ತಿ ಸದಾಶಿವ ಆಯೋಗ, ನಾಗಮೋಹನ್ ದಾಸ್ ಆಯೋಗ ಹಾಗೂ ಬಸವರಾಜ ಬೊಮ್ಮಾಯಿ ಆಡಳಿತದಲ್ಲಿನ ಮಾಧುಸ್ವಾಮಿ ಕಮಿಟಿ ವರದಿ ಯಾವುದನ್ನೂ ತೆಗೆದುಕೊಳ್ಳಲಿಲ್ಲ ಎಂದ ಅವರು, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ರೀತಿಯ ಬದ್ಧತೆಯಿಲ್ಲ ಎಂದು ಹೇಳಿದರು.

ಅಪರಾಧ ಪ್ರಕರಣಗಳು ಹೆಚ್ಚಳ

ಸಿಎಂ ಸಿದ್ದರಾಮಯ್ಯ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿವೆ. ದಲಿತ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣ ಜಾಸ್ತಿಯಾಗಿವೆ. ದೇಶದಲ್ಲೇ ಅತಿ ಹೆಚ್ಚು ದಲಿತ ಮಹಿಳೆಯರ ಮೇಲೆ ಕೊಲೆ, ಅತ್ಯಾಚಾರ ಪ್ರಕರಣಗಳಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದೆ. ಅಹಿಂದ ನಾಯಕ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರಿಂದಲೇ ದಲಿತರಿಗೆ ರಕ್ಷಣೆ ಕೊಡಲು ಸಾಧ್ಯವಾಗುತ್ತಿಲ್ಲ. ದಲಿತರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಕೊಡುವುದಾಗಿ ಹೇಳಿದ ಸಿಎಂ ಸಿದ್ದರಾಮಯ್ಯ, ದಲಿತರಿಗಾಗಿ ಕಳೆದ ಮೂರು ವರ್ಷಗಳಲ್ಲಿ ಇಡಲಾದ 48 ಸಾವಿರ ಕೋಟಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಿದ್ದಾರೆ. ಈ ಹಣವನ್ನು ವಾಪಸ್ ಕೊಟ್ಟು ದಲಿತ ಮಕ್ಕಳ ಶಿಕ್ಷಣಕ್ಕೆ, ಉದ್ಯೋಗಕ್ಕೆ ಹಾಗೂ ಭೂ ಒಡೆತನದ ಯೋಜನೆಗೆ , ಶಾಲಾ ಕಟ್ಟಡಕ್ಕೆ ಉಪಯೋಗ ಮಾಡಲಿ ಎಂದು ಗೋವಿಂದ ಕಾರಜೋಳ ಒತ್ತಾಯಿಸಿದರು.

ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ ಈಶ್ವರ ಖಂಡ್ರೆ

ಮಂಗಳೂರು: ಸಚಿವ ಸಂಪುಟ ಪುನರ್‌ರಚನೆ ಮಾಡುವುದು ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರ ಪರಮಾಧಿಕಾರ. ಯಾವುದೇ ಸಮಯದಲ್ಲಿ ಸಂಪುಟ ಪುನರ್‌ರಚನೆ ಮಾಡಬಹುದು ಅಥವಾ ಮಾಡದೆಯೂ ಇರಬಹುದು. ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ನಾವೆಲ್ಲರೂ ಬದ್ಧ. ನಮ್ಮಲ್ಲಿ ಯಾವುದೇ ರೀತಿಯ ಗೊಂದಲ ಇಲ್ಲ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.



ಕರ್ನಾಟಕ ಗೇರು ಅಭಿವೃದ್ಧಿ ನಿಗಮ ವತಿಯಿಂದ ನಗರದ ಕದ್ರಿಪಾರ್ಕ್‌ನಲ್ಲಿ ಏರ್ಪಡಿಸಿರುವ ಎರಡು ದಿನಗಳ ಗೇರು ಮೇಳಕ್ಕೆ ಚಾಲನೆ ನೀಡಿದ ವೇಳೆ ಸುದ್ದಿಗಾರರ ಜತೆ ಭಾನುವಾರ ಅವರು ಮಾತನಾಡಿದರು.

ರಾಜ್ಯ ಸರಕಾರ ಭದ್ರವಾಗಿದೆ. ಉತ್ತಮ ಆಡಳಿತ ನೀಡಿದ್ದೇವೆ. ಇನ್ನೂ ಎರಡು ವರ್ಷ ಉತ್ತಮ ಆಡಳಿತ ನೀಡುತ್ತೇವೆ. ಜನಪರ, ಜೀವಪರ ಆಡಳಿತ ನೀಡಿದ ಕಾರಣವೇ ನಾವು ಎಲ್ಲ ಉಪಚುನಾವಣೆಯಲ್ಲಿ ಗೆದ್ದಿದ್ದೇವೆ. ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದರು. ನೀವು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖಂಡ್ರೆ, ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಶಿಸ್ತಿನ ಸಿಪಾಯಿ. ಯಾವುದೇ ಜವಾಬ್ದಾರಿ ನೀಡಿದರೂ ಸಮರ್ಥವಾಗಿ ನಿಭಾಯಿಸಿದ್ದೇನೆ. ಈಗ ಯಾವುದೇ ಹುದ್ದೆ ಖಾಲಿ ಇಲ್ಲ, ಹೀಗಾಗಿ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ಗೇರು ಅಭಿವೃದ್ಧಿ ನಿಗಮದ 48 ವರ್ಷದ ಇತಿಹಾಸದಲ್ಲಿ ಮೊದಲ ಬಾರಿ ಗೇರು ಮೇಳ ಆಯೋಜಿಸಲಾಗಿದೆ. ಗೋಡಂಬಿ ಉತ್ಪಾದನೆ ದಿನೇ ದಿನೇ ಕುಸಿಯುತ್ತಿದೆ. ನಮ್ಮ ದೇಶದಲ್ಲಿ ಗೇರು ಉತ್ಪನ್ನಗಳಿಗೆ ಬೇಡಿಕೆ ಇದೆ. ಗೇರು ಬೆಳೆಗೆ ಪ್ರೋತ್ಸಾಹ ನೀಡಬೇಕು. ಗೇರು ಉತ್ಪನ್ನಗಳನ್ನು ವಿದೇಶದಿಂದ ಆಮದು ಮಾಡಿಕೊಂಡು ವಿದೇಶಿ ವಿನಿಮಯವೂ ನಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಿಗಮದ ವತಿಯಿಂದ ಗೇರು ಬೆಳೆಗೆ ಪ್ರೋತ್ಸಾಹ ನೀಡಲು ಗೇರು ಮೇಳ ಆಯೋಜಿಸಲಾಗಿದೆ ಎಂದರು.

ನಾಳೆ ಮೃಗಾಲಯ ಲೋಕಾರ್ಪಣೆ

ಬೆಂಗಳೂರು: ಕಲಬುರಗಿಯಲ್ಲಿ ಆಧುನೀಕರಿಸಲಾಗಿರುವ ನೂತನ ಮೃಗಾಲಯವನ್ನು ಮೇ 18ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಚಿತ್ತಾಪುರ ತಾಲೂಕು ಮಾಡಬೂಳ್‌ನ ಸುಮಾರು 23 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಈ ಮೃಗಾಲಯದಲ್ಲಿ 23 ಪ್ರತ್ಯೇಕ ಪ್ರದೇಶಗಳಿವೆ. ಹುಲಿ, ಸಿಂಹ, ಕರಡಿ, ಆಮೆ, ಮೊಸಳೆ, ಚುಕ್ಕೆ ಚಿಂಕೆ, ಚಿನ್ನದ ಬಣ್ಣದ ನರಿ, ಜೀಬ್ರಾ, ಲಂಗೂರ್ ಸೇರಿದಂತೆ ಹಲವು ಪ್ರಾಣಿಗಳು ಹಾಗೂ ವಿವಿಧ ಪ್ರಭೇದದ ಪಕ್ಷಿಗಳ ಸುಂದರ ಕೋಣೆಗಳನ್ನು ವಿನ್ಯಾಸಗೊಳಿಸಲಾಗಿದೆ.

ಚಿತ್ತಾಪುರದ ಶಾಸಕ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವಪ್ರಿಯಾಂಕ ಖರ್ಗೆ ಅವರೂ ಈ ಮೃಗಾಲಯದ ಅಭಿವೃದ್ಧಿಗೆ ಆಸಕ್ತಿಯಿಂದ ಶ್ರಮಿಸಿದ್ದಾರೆ. ಈ ಮೃಗಾಲಯ ನಿರ್ಮಾಣಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 27.61 ಕೋಟಿ ರೂ., ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ 6 ಕೋಟಿ ರೂ. ಒದಗಿಸಲಾಗಿದೆ. ಕರ್ನಾಟಕ ಅರಣ್ಯ ಇಲಾಖೆ 50 ಲಕ್ಷ ರೂ. ವೆಚ್ಚದಲ್ಲಿ ಮೃಗಾಲಯದಲ್ಲಿ ಹುಲ್ಲುಗಾವಲು, ವೃಕ್ಷಾರೋಪಣ ಕಾರ್ಯ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಂಪಿಯಲ್ಲಿ ಈಗಾಗಲೇ ಮೃಗಾಲಯವಿದೆ. ಕಲಬುರಗಿಯಲ್ಲಿ ಸೋಮವಾರ ಉದ್ಘಾಟನೆಯಾಗಲಿರುವ ಮೃಗಾಲಯ ಹಲವು ದಶಕಗಳ ಬೇಡಿಕೆಯನ್ನು ಈಡೇರಿಸಿದೆ.

₹75 ಪ್ರವೇಶ ದರ ನಿಗದಿ

ಅರಣ್ಯ ಪ್ರದೇಶ ಕಡಿಮೆ ಇರುವ ಕಲಬುರಗಿ ಮತ್ತು ಕಲ್ಯಾಣ ಕರ್ನಾಟಕದ ಜನರಿಗೆ ವಿವಿಧ ಪ್ರಾಣಿಗಳನ್ನು ಒಟ್ಟಿಗೆ ನೋಡುವ ಅವಕಾಶ ಈ ಮೃಗಾಲಯದಲ್ಲಿ ಲಭಿಸಲಿದೆ. 12 ವರ್ಷ ವಯಸ್ಸು ಮೇಲ್ಪಟ್ಟವರಿಗೆ 75 ರೂ., 5ರಿಂದ 12 ವರ್ಷ ವಯಸ್ಸಿನ ಮಕ್ಕಳಿಗೆ 40 ರೂ. ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ತಲಾ 25 ರೂ. ನಿಗದಿ ಮಾಡಲಾಗಿದೆ. ಟಿಕೆಟ್‌ಗಳನ್ನು ಮೃಗಾಲಯದ ಕೌಂಟರ್‌ನಲ್ಲಿ ಪಡೆಯಬಹುದು. ಈ ಮೃಗಾಲಯದಲ್ಲಿ 50 ಕಾರು ಮತ್ತು 20 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದೂ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಶಾಲಾ ಮಕ್ಕಳಿಗೆ ಮೃಗಾಲಯ ಭೇಟಿಯಿಂದ ವಿವಿಧ ವನ್ಯಜೀವಿಗಳ ಬಗ್ಗೆ ಮಾಹಿತಿ ದೊರಕುವುದರ ಜೊತೆಗೆ ವಿವಿಧ ಜಾತಿಯ ಸಸ್ಯ ಪ್ರಭೇದಗಳ ಪರಿಚಯವೂ ಆಗುತ್ತದೆ. ಇದು ಮಕ್ಕಳಲ್ಲಿ ಪ್ರಕೃತಿ ಪರಿಸರದ ಬಗ್ಗೆ ಪ್ರೀತಿ ಮೂಡಿಸುತ್ತದೆ ಎಂದು ಸಚಿವ ಈಶ್ವರ ಖಂಡ್ರೆ ಮಾಧ್ಯಮ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಧಾರವಾಡದಲ್ಲಿ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ


ಧಾರವಾಡ: ತಂಪಾದ ಹವಾಮಾನಕ್ಕೆ ಹೆಸರಾದ ಧಾರವಾಡ ಜಿಲ್ಲೆಯಲ್ಲಿ ಮಧ್ಯಾಹ್ನ ದಿಢೀರ್ ಹವಾಮಾನ ವೈಪರೀತ್ಯ ಉಂಟಾಗಿ, ಜೀವರಾಶಿಗೆ ತಂಪು ಎರೆಯುವ ಬದಲು ಜನಜೀವನವನ್ನೇ ಅಸ್ತವ್ಯಸ್ತಗೊಳಿಸುವ ಧಾರಾಕಾರ ಮಳೆ ಭಾನುವಾರ ಸುರಿದಿದೆ. ಸುಡು ಬಿಸಲಿನಿಂದ ಕಂಗಾಲಾಗಿದ್ದ ಧಾರವಾಡಿಗರಿಗೆ ಈ ಮಳೆ ಆರಂಭದಲ್ಲಿ ತಂಪು ನೀಡಿದರೂ, ಸುಮಾರು 1ಗಂಟೆಗೂ ಅಧಿಕ ಹೊತ್ತು ನಿರಂತರ ಸುರಿದ ಗುಡುಗು, ಮಿಂಚು ಹಾಗೂ ಬಿರುಗಾಳಿ ಮಿಶ್ರಿತ ಮಳೆಯು ಜನರಿಗೆ ಸಂಕಷ್ಟ ತಂದೊಡ್ಡಿತು. ಮಳೆಯಿಂದ ಚರಂಡಿಗಳು ತುಂಬಿ ನೀರು ರಸ್ತೆಯ ಮೇಲೆ ಹರಿಯಿತು. ನಗರದ ಕೋರ್ಟ್ ಸರ್ಕಲ್ ಹತ್ತಿರದ ರಸ್ತೆ ಜಲಾವೃತವಾಗಿ ವಾಹನ ಸಂಚಾರ ಸ್ಥಗಿತಗೊಂಡ ಪರಿಣಾಮ ಸವಾರರು ಪೇಚೆಗೆ ಸಿಲುಕಿದರು.

ಗದಗನಲ್ಲಿ ಗುಡುಗು, ಸಿಡಿಲುಸಹಿತ ಮಳೆ

ಗದಗ: ಗದಗ-ಬೆಟಗೇರಿ ಅವಳಿ ನಗರ ಸೇರಿದಂತೆ ಜಿಲ್ಲಾದ್ಯಂತ ಭಾನುವಾರ ಗುಡುಗು-ಸಿಡಿಲಿನ ಮಧ್ಯೆ ಇಡೀ ದಿನ ಧಾರಾಕಾರ ಮಳೆ ಸುರಿಯಿತು. ಪರಿಣಾಮ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಜಿಲ್ಲೆಯ ಗಜೇಂದ್ರಗಡ, ರೋಣ, ಮುಂಡರಗಿ, ಶಿರಹಟ್ಟಿ ಸೇರಿದಂತೆ ವಿವಿಧೆಡೆ ಮಳೆ ಸುರಿತು. ಕೆಲವೆಡೆ ಮೋಡ ಕವಿದ ವಾತಾವರಣ ಜತೆಗೆ ಭರ್ಜರಿ ಮಳೆ ಸುರಿಯಿತು. ಮಳೆಯ ಪರಿಣಾಮ ತಗ್ಗು ಪ್ರದೇಶದಲ್ಲಿರುವ ರಸ್ತೆಗಳು ಜಲಾವೃತಗೊಂಡಿದ್ದವು.

ಸೇವೆಯ ಗಂಗೋತ್ರಿ-ಮಾಧವರಾವ್ ಪರಲ್ಕರ್

ಗಿರಿಧರ್ ಉದ್ಯಾವರ



ಸೇವಾಗಾಥ
ಕಥೆ-6

ಪ್ರಜ್ಞಾಹೀನ ಮಗುವಿನ ದೇಹದ ಮೇಲೆ ವೈದ್ಯರ ಬೆರಳುಗಳು ಚಲಿಸುತ್ತಿದ್ದಂತೆಲ್ಲ ಮಗುವಿನಲ್ಲಿಉಂಟಾಗುತ್ತಿದ್ದ ಚಲನೆಯನ್ನು ಕಂಡು ತಾಯಿಯ ಕಣ್ಣುಗಳಲ್ಲಿ ಸಂತಸದ ಹೊಳಪು ಹೆಚ್ಚುತ್ತಿತ್ತು. ಮಗನ ಚಿಕಿತ್ಸೆಗಾಗಿ ನೀರಿನಂತೆ ಹಣವನ್ನು ವ್ಯಯಿಸಿದ ನಂತರವೂ ಚೇತರಿಸಿಕೊಳ್ಳುವ ಯಾವುದೇ ಭರವಸೆ ಆ ತಾಯಿಗೆಇರಲಿಲ್ಲ, ಅಲ್ಲದೇ, ವೈದ್ಯ ಪರಲ್ಕರ್‌ರವರು ಶುಲ್ಕದ ರೂಪದಲ್ಲಿಒಂದುರೂಪಾಯಿಯನ್ನೂಪಡೆದಿರಲಿಲ್ಲ, ಆದರೆಈ ಪವಾಡಪರಲ್ಕರರಕೈಗಳಮಸಾಜಿನಿಂದಾದದ್ದೋಅಥವಾ ಅವರಲ್ಲಿರಕ್ತಗತವಾಗಿರುವ ನಿಸ್ವಾರ್ಥ ಸೇವೆಯಿಂದಾದದ್ದೋ ತಿಳಿಯದು. ಗಂಭೀರ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಆ ಮಗು 6 ಗಂಟೆಯೊಳಗೆ ಎದ್ದು ಕುಳಿತಿತ್ತು.ಆದೇ ಬಾಲಕ ಇಂದು ಮುಂಬಯಿನ ಅತ್ಯಂತ ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟ್ಗಳಲ್ಲಿಒಬ್ಬನಾಗಿದ್ದಾನೆ.

ಸಿ. ಎ. ಕಂಚನ್ ನಾರಂಗ್ ರಂತಹ ಅದೆಷ್ಟೋ ರೋಗಿಗಳಿಗೆ ಮತ್ತು ಅವರ ಕುಟುಂಬದ ಸದಸ್ಯರ ಪಾಲಿಗೆ ಮಾಧವ್‌ರಾವ್‌ಪರಲ್ಕರ್‌ರವರು ದೇವರೇ ಆಗಿದ್ದರು. ಡಾ.ಪರಲ್ಕರರು ಎಂತಹ ಪ್ರಚಾರಕರಾಗಿದ್ದರೆಂದರೆ ಅವರ ಅಮೂಲ್ಯವಾದ ಜೀವನ ಸೇವಾ ಗಂಗೋತ್ರಿಯೇ ಆಗಿತ್ತು. ಅದೆಷ್ಟೋ ರೋಗಿಗಳ ಮತ್ತು ಅವರ ಪರಿವಾರದವರ ಕಷ್ಟಗಳನ್ನು ಪರಿಹರಿಸಿದ್ದರು. ಡಾಕ್ಟರ್ ಪರಲ್ಕರರಿಂದ ಸ್ಥಾಪಿಸಲ್ಪಟ್ಟ ನಾನಾ ಪಾಲ್ಕರ್ ರುಗ್ಣ ಸೇವಾ ಸದನವು, ಮುಂಬೈನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ರೋಗಿಗಳಿಗೆ ಒಂದು ವರದಾನವೇ ಸರಿ.

ಬಾಲ್ಯದಿಂದಲೇಸಂಘದಸ್ವಯಂಸೇವಕರಾಗಿದ್ದಮಾಧವರಾವ್ ಪರಲ್ಕರ್, ವಿದ್ಯಾರ್ಥಿಯಾಗಿದ್ದಾಗ ಕಲಿಕೆಯಲ್ಲಿ ಬುದ್ಧಿವಂತರಾಗಿದ್ದರು. 1947ರಲ್ಲಿ ಆಯುರ್ವೇದ ಚಿಕಿತ್ಸೆಯಲ್ಲಿ ಪದವಿ ಪೂರ್ಣಗೊಳಿಸಿ, ಕೆಲ ದಿನಗಳ ಕಾಲ ಕ್ಲಿನಿಕ್ ನಡೆಸಿದ ಅವರು ನಂತರ ಸಂಘದ ಪ್ರಚಾರಕರಾದರು. ಆ ದಿನಗಳಲ್ಲಿ ಅವರು ಬಾಂದ್ರಾದಿಂದ ವಿರಾರ್ ಮತ್ತು ಚೆಂಬೂರಿಗೆ ಸೈಕಲ್ಲಿನಲ್ಲೇ ಓಡಾಡುತ್ತಿದ್ದರು. ಅವರು ತಮ್ಮ ವಾಕ್ಚಾತುರ್ಯ ಮತ್ತು ಧೀಮಂತ ವ್ಯಕ್ತಿತ್ವದಿಂದಾಗಿ ಯುವಜನ ವಲಯದಲ್ಲಿ ಬಹಳ ಜನಪ್ರಿಯರಾಗಿದ್ದರು. ಇವರು ಹಲವಾರು ವರ್ಷಗಳ ಕಾಲ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅಖಿಲ ಭಾರತೀಯ ಸಂಘಟನಾ ಕಾರ್ಯದರ್ಶಿಯಾಗಿದ್ದರು. ಆದಾಗ್ಯೂ ಅವರ ಮನಸ್ಸಿನಲ್ಲಿ ಬಡ ರೋಗಿಗಳ ಬಗೆಗಿನ ಸೇವಾ ಮನೋಭಾವವನ್ನು ಗುರುತಿಸಿದ ಅಂದಿನ ಸರಸಂಘಸಂಚಾಲಕರಾದ ಪರಮ ಪೂಜನೀಯ ಶ್ರೀ ಗುರೂಜಿ ಗೋಳವಲ್ಕರ್‌ರವರು, ಡಾಕ್ಟರ್ ಪರಲ್ಕರರಿಗೆ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ಊಟ, ವಸತಿಯ ಸೌಲಭ್ಯಕ್ಕಾಗಿ ಒಂದು ಸೇವಾಸದನವನ್ನು ಸ್ಥಾಪಿಸುವ ಗುರುತರ ಜವಾಬ್ದಾರಿಯನ್ನು ನೀಡಿದರು. ಕ್ಯಾನ್ಸರ್ ಮತ್ತು ಟಿ. ಬಿ. ಯಂತಹ ಗಂಭೀರ ಕಾಯಿಲೆಗಳ ಚಿಕಿತ್ಸೆಯು ದುಬಾರಿ ಹಾಗೂ ದೀರ್ಘಕಾಲದ್ದಾಗಿರುತ್ತದೆ. ರೋಗಿಗಳಿಗೇನೋ ಆಸ್ಪತ್ರೆಯಲ್ಲಿಯೇ ಆಹಾರವನ್ನು ನೀಡಲಾಗುತ್ತದೆ. ಆದರೆ ಕುಟುಂಬದ ಸದಸ್ಯರಿಗೆ ಮುಂಬೈನಂಥ ಮಹಾನಗರದಲ್ಲಿ ವಸತಿ ಹಾಗೂ ಊಟದ ವೆಚ್ಚವನ್ನು ನಿಭಾಯಿಸುವುದು ಕಷ್ಟಸಾಧ್ಯ. ಇಂದು ಟಾಟಾ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ 10 ಅಂತಸ್ತಿನ 'ನಾನಾ ಪಾಲ್ಕರ್ ಸ್ಮಾರಕ ರುಗ್ಣ ಸೇವಾಸದನವ' ನೂರಾರು ರೋಗಿಗಳಿಗೆ ಹಾಗೂ ಕುಟುಂಬದವರಿಗೆ ಆಪದ್ಬಾಂಧವನೆನಿಸಿದೆ. 10 ರೂಪಾಯಿಗೆ ಊಟ ಮತ್ತು 1 ತಿಂಗಳವರೆಗೆ ಉಚಿತ ವಸತಿಯು ಬಡ ಪರಿವಾರದವರಿಗೆ ದೊಡ್ಡ ವರದಾನವೇ ಸರಿ.

ತಮ್ಮ ಅವಿರತ ಪರಿಶ್ರಮ ಹಾಗೂ ಸೇವಾಭಾವದ ಬಲದಿಂದ ಪರಲ್ಕರರು ಈ ಸೇವಾಸದನವನ್ನು ಕಟ್ಟಿ ಬೆಳೆಸಿದರು. ಪರಲ್ಕರರು ಸಮಾಜದ ಪ್ರತಿಯೊಂದು ವರ್ಗದವರ ಸಹಕಾರವನ್ನು ಪಡೆದರು. ಸಾಮಾನ್ಯ ಸ್ವಯಂಸೇವಕ ಕುಟುಂಬಗಳಿಂದ ವಾರ್ಷಿಕ 500 ರೂಪಾಯಿ ಪಡೆದರೆ, ಬಿರ್ಲಾ ಫೌಂಡೇಶನ್‌ನ ಮಾಲೀಕ ಆದಿತ್ಯ ಬಿರ್ಲಾರಿಂದ 75 ಲಕ್ಷ ಬೆಲೆಯುಳ್ಳ ಲಿಥೋಟ್ರಿಪ್ಸಿ ಯಂತ್ರವನ್ನು ದಾನವಾಗಿ ಪಡೆದರು. ಅಂತೆಯೇ, ಆಸ್ಪತ್ರೆಯಲ್ಲಿನ ಬಡ ರೋಗಿಗಳಿಗೆ ಉಚಿತವಾಗಿ ಲೇಜರ್ ಶಸ್ತ್ರಚಿಕಿತ್ಸೆ ಮಾಡಲೆಂದು ಡಾಕ್ಟರ್ ಅಜಿತ್ ಫಡಕೆ ಅವರನ್ನು ಮನವೊಲಿಸಿದರು.

ಪರಲ್ಕರ್ ರವರ ಸತತ ಪ್ರಯತ್ನದಿಂದ ಪ್ರಾರಂಭವಾದ ಗೋಖಲೆ ಡಯಾಲಿಸಿಸ್ ಕೇಂದ್ರದಲ್ಲಿ ಇಂದು 14 ಯಂತ್ರಗಳ ಸಹಾಯದಿಂದ ಹಲವು ಶಿಫ್ಟ್ ಗಳಲ್ಲಿ ಬಡ ರೋಗಿಗಳಿಗೆ ಉಚಿತವಾಗಿ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಸೇವಾ ಸದನದ ಟ್ರಸ್ಟಿ ಹಾಗೂ ಪರಲ್ಕರರ ಸಹೋದ್ಯೋಗಿಯಾಗಿದ್ದ ವಿವೇಕ್ ಛತ್ರೆಯವರ ಅಭಿಪ್ರಾಯದಂತೆ ವೈದ್ಯಕೀಯ ವಲಯದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಪರಲ್ಕರ್ ಅಗ್ರಗಣ್ಯರು. ಪರಲ್ಕರರ ಅಪ್ರತಿಮ ಸೇವೆಯಿಂದ ಪ್ರಭಾವಿತರಾಗಿದ್ದ ಮುಂಬೈ ಆಸ್ಪತ್ರೆಯ ಡೀನ್ ಗೋಯಲ್ ರಿಂದ ಹಿಡಿದು ಎಲ್ಲಾ ವೈದ್ಯರೂ, ಸರಳವಾದ ಧೋತಿ ಕುರ್ತಾದಲ್ಲಿರುವ ಈ ಆಯುರ್ವೇದ ವೈದ್ಯರಿಗೆ ಎಲ್ಲಾ ರೀತಿಯ ಸಹಾಯ ಮಾಡಲು ಸದಾ ಸಿದ್ಧರಾಗಿರುತ್ತಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದು, ಖೈದಿಗಳಿಗೆ ಯೋಗ ಕಲಿಸಿದ್ದು ಮಾತ್ರವಲ್ಲದೆ ಮಸಾಜ್ ನ ಅದ್ಭುತ ಕಲೆಯಿಂದ ಉಚಿತವಾಗಿ ನೂರಾರು ರೋಗಿಗಳನ್ನು ಗುಣಪಡಿಸಿದ್ದರು. 22 ಫೆಬ್ರವರಿ 2008ರಲ್ಲಿ, ತಮ್ಮ 81ನೇ ವಯಸ್ಸಿನಲ್ಲಿ ಕೊನೆಯುಸಿರೆಳೆವ ಮುನ್ನ ಅವರು, ಪಾಲ್ಕರ್ ಸ್ಮೃತಿ ಸಂಸ್ಥಾನವನ್ನು ಏಳನೇ ಮಹಡಿಯವರೆಗೆ ಎತ್ತರಿಸಿದ್ದರು.

ಪ್ರಶಿಕ್ಷಣ ವರ್ಗದಲ್ಲಿ ಸಂಸದ ಕಾರಜೋಳ ಹೇಳಿಕೆ

ದೇಶಕ್ಕೆ ಮೋದಿಯೊಬ್ಬರೆ ಅಹಿಂದ ನಾಯಕ

ಕಲಬುರಗಿ: 13 ವರ್ಷ ಸಿಎಂ ಆಗಿ,12 ವರ್ಷಗಳಿಂದ ದೇಶದ ಪಿಎಂ ಆಗಿ ಯಾವುದೇ ಕಳಂಕವಿಲ್ಲದೇ, ಭ್ರಷ್ಟಾಚಾರ ರಹಿತ ಆಡಳಿತ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಒಬ್ಬರೇ ಈ ದೇಶದ ಅಹಿಂದ ನಾಯಕ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ನಗರದ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026 ಬಿಜೆಪಿ ಜಿಲ್ಲಾ ಪ್ರಶಿಕ್ಷಣ ವರ್ಗದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅಹಿಂದ ನಾಯಕ ಎಂದು ಹೇಳಿಕೊಳ್ಳುವ ಮೂಲಕ ಜನರ ದಾರಿ ಕೆಡಿಸುವುದಲ್ಲದೇ ಮನಸ್ಸನ್ನು ಕೆಡಿಸಿದ್ದಾರೆ. ಹಿಂದುಳಿದ ವರ್ಗದ ನಾಯಕ, ಅತ್ಯಂತ ನಾಯಕ ಪ್ರಾಮಾಣಿಕ ನಾಯಕ ದೇಶಕ್ಕೆ ಒಬ್ಬರೇ ಅದು ಪ್ರಧಾನಿ ನರೇಂದ್ರ ಮೋದಿ ಎಂದು ಹೇಳಿದರು.

65 ವರ್ಷಗಳ ಕಾಲದ ಆಡಳಿತದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಿದ ಉದಾಹರಣೆಗಳು ಕಾಂಗ್ರೆಸ್ ಬಳಿ ಇಲ್ಲ, ಕಾಂಗ್ರೆಸ್ ಟಾಟಾಟಾಚ್ ಜಾಸ್ತಿ. ರಾಜ್ಯದಲ್ಲಿ ಆಡಳಿತಕ್ಕೆ ಬಂದ ಮೂರು ವರ್ಷಗಳ ಅವಧಿಯಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಭಂಡತನದ ಆಡಳಿತದಿಂದ ರಾಜ್ಯದ ಐದು ಸಾರಿಗೆ ನಿಗಮಗಳು ನಷ್ಟಕ್ಕೆ ಸಿಲುಕಿವೆ. ಸಂಬಳ ಕೊಡಲು ದುಡ್ಡಿಲ್ಲ, 29,407 ಗ್ರಾಮಗಳಲ್ಲಿ ಸರ್ಕಾರಿ ಪ್ರೌಢಶಾಲೆ, ಶಾಲೆಬಾಗಿಲ್ಲ, ನಮ್ಮ ಅವಧಿಯಲ್ಲಿ ಫ್ರೀ ಬಸ್ ಪಾಸ್ ನೀಡುವ ಮೂಲಕ ಶಾಲಾ ಮಕ್ಕಳಿಗೆ ಆಸರೆಯಾಗಿದ್ದೇವೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 81 ಕೋಟಿ ಜನರಿಗೆ 5ಕೆಜಿ ಉಚಿತ ಅಕ್ಕಿ ನೀಡಿದೆ. ಅದರಲ್ಲಿ 3 ಕೆಜಿ ತಟ್ಟಿನ ಚೀಲದ ಮೇಲೆ ಸಿದ್ದರಾಮಯ್ಯ ತಮ್ಮ ಫೋಟೋ ಹಾಕಿ ಅಕ್ಕಿ ನಾವೇ ಕೊಡ್ತಾ ಇದಿವಿ ಅಂತ ಹೇಳ್ತಾ ತಿರುಗುತ್ತಿದ್ದಾರೆ.



ಜಿಲ್ಲಾ ನಾಯಕರಿಗೆ ನೀತಿ ಪಾಠ

ಸಾಮಾಜಿಕ ನ್ಯಾಯದಲ್ಲಿ ನಡೆಯುವುದೇ ನಮ್ಮ ಪಕ್ಷದ ಸಿದ್ಧಾಂತ. ಅಂತ್ಯೋದಯ ಕಾರ್ಯಕ್ರಮ, ಸರ್ವೋದಯ ಸಿದ್ಧಾಂತ ಈ ಅಂಶಗಳನ್ನು ನಾವು ಮರೆತರೆ ನಾವ್ಯಾರೂ ಪಕ್ಷದಲ್ಲಿರಲು ಲಾಯಕ್ ಇಲ್ಲ. ಬಿಜೆಪಿ ನಮಗೆ ತಾಯಿ ಇದ್ದಂತೆ. ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಒಗ್ಗಟ್ಟಾಗಿ ಹೋರಾಟ ಮಾಡುವ ಮೂಲಕ ಕೇಂದ್ರ, ಸರ್ಕಾರದ ಯೋಜನೆ ಜನರಿಗೆ ಮುಟ್ಟಿಸುವ ಕೆಲಸ ಮಾಡಬೇಕು. ದಿಕ್ಕಿಗೆ ಒಬ್ಬರಾಗಿ ಹೋಗಬೇಡಿ. ಬೀದಿಗಿಳಿದು ವೈಮನಸ್ಸು ಬದಿಗಿಟ್ಟು ರಾಜ್ಯ ಸರ್ಕಾರದ ವೈಫಲ್ಯಗಳ ಕುರಿತು ಧ್ವನಿ ಎತ್ತಿ ಎಂದು ಜಿಲ್ಲಾ ಬಿಜೆಪಿ ನಾಯಕರಿಗೆ ಗೋವಿಂದ ಕಾರಜೋಳ ನೀತಿ ಪಾಠ ಮಾಡಿದರು.

> **ನಮ್ಮ ಪೂರ್ವಜರು ನಮಗೆ ಉಂಡು ಉಳಿದಿದ್ದು ಉಳಿತಾಯ ಮಾಡಿ ಎಂದು ಹೇಳಿ ಹೋಗಿದ್ದಾರೆ. ವಿನಾಕಾರಣ ಖರ್ಚು ಮಾಡದೇ ಅಗತ್ಯವಿದ್ದಲ್ಲಿ ಮಾತ್ರ ಖರ್ಚು ಮಾಡಿ. ಈ ಮಾತನ್ನೇ ಪ್ರಧಾನಿ ಹೇಳಿರುವ ಮಾತಿನ ತಾತ್ಪರ್ಯವಾಗಿದೆ. ಅಮೇರಿಕಾ ಈಗಾಗಲೇ ದಿವಾಳಿ ಅಂಚಿನಲ್ಲಿದೆ. ವಿಶ್ವದ 3ನೇ ಆರ್ಥಿಕ ರಾಷ್ಟ್ರಕ್ಕಾಗಿ ಪ್ರಧಾನಿ ಮೋದಿ ಶ್ರಮಿಸುತ್ತಿದ್ದು, ಅವರೊಂದಿಗೆ ಕೈ ಜೋಡಿಸೋಣ.**
> ■ ಗೋವಿಂದ ಕಾರಜೋಳ, ಸಂಸದ

ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಡಿಮೆ ದರದಲ್ಲಿ ಔಷಧಿ ಸಿಗಬೇಕು ಎಂದು ಜನೌಷಧಿ ಕೇಂದ್ರ ತೆರೆಯಲಾಗಿದೆ. ಆದರೆ, ಈ ಸರ್ಕಾರ ಅವುಗಳನ್ನು ಮುಚ್ಚಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ, ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ,ನಗರಾಧ್ಯಕ್ಷ ಚಂದು ಪಾಟೀಲ್, ಕಾರ್ಯದರ್ಶಿ, ಶಾಸಕ ಬಸವರಾಜ ಮತ್ತಿಮಡು, ಅವಿನಾಶ್ ಜಾಧವ್, ಬಿ.ಜಿ.ಪಾಟೀಲ್, ಅರುಣ ಶಹಾಪುರ,ಮಾಜಿ ಶಾಸಕ ರಾಜಕುಮಾರ್ ಪಾಟೀಲ್, ಸುಭಾಷ್ ಗುತ್ತೇದಾರ, ದತ್ತಾತ್ರೇಯ ಪಾಟೀಲ್,ಶರಣಪ್ಪ ತಳವಾರ,ಮಾಜಿ ಸಚಿವ ಬಾಬುರಾವ್ ಚೌಹಾಣ್, ಶಿವರಾಜ್ ಪಾಟೀಲ್, ನಿತಿನ್ ಗುತ್ತೇದಾರ್, ಧರ್ಮಣ್ಣ ಇಟಗಾ,ಸಿದ್ದಾಜಿ ಪಾಟೀಲ್, ರಾಜಶೇಖರ ಮೂರ್ತಿ, ಉಮೇಶ್ ಪಾಟೀಲ್,ಮಹಾದೇವ ಬೆಳಮಗಿ,ಗೌರಿ ಚಿಚಕೋಟಿ, ವೆಂಕಟರೆಡ್ಡಿ,ಡಾ.ಸುಧಾ ಹಾಲಕಾಯಿ, ಶೋಭಾ, ಸಂತೋಷಿ ರಾಣಿ ಪಾಟೀಲ್ ಸೇರಿದಂತೆ ಇತರರು ಇದ್ದರು.

ರಾಷ್ಟ್ರದ ಸೇವೆಗೆ ಆರ್‌ಎಸ್‌ಎಸ್ ಕಾರ್ಯ ಅನನ್ಯ: ರಾಘವೇಂದ್ರ

ಮಸ್ಕಿ: ಬೌದ್ಧಿಕ, ಶಾರೀರಿಕ ಹಾಗೂ ಸಮಾಜ ಮುಖಿ ಕೆಲಸವನ್ನು ಮಾಡಲು ನಮ್ಮಲ್ಲಿ ಇರುವ ಪ್ರತಿಭೆಗಳನ್ನು ಹೊರ ತರಲು ಪ್ರಶಿಕ್ಷಣ, ವರ್ಗಗಳು, ಮುಖ್ಯವಾಗುತ್ತದೆ ಎಂದು ಜಿಲ್ಲಾ ಕಾರ್ಯವಾಹಕ ರಾಘವೇಂದ್ರ ಹೇಳಿದರು.

ಪಟ್ಟಣದ ನರಸನಗೌಡ ಸ್ಮಾರಕ ಪ್ರೌಢ ಶಾಲೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪ್ರಾರಂಭಿಕ ಶಿಕ್ಷಣ ವರ್ಗ, ನಾಲ್ಕು ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.



ಶತ ಶತಮಾನಗಳಿಂದ ವರ್ಗಗಳ ಕಾರ್ಯ ಅತ್ಯಂತ ಮಹತ್ವದ, ಚಿಂತನೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸಾಮಾಜಿಕ ಚಟುವಟಿಕೆ ಸೇರಿದಂತೆ ದೇಶದ ಬೆಳವಣಿಗೆಗೆ ಈ ರೀತಿಯ ಶಿಬಿರಗಳನ್ನು ಮಾಡಲಾಗುತ್ತದೆ. ರಾಷ್ಟ್ರವನ್ನು ಕಟ್ಟಲು ಸಂಘ ಬಲಿಷ್ಠವಾಗಿ ಕೆಲಸ ಮಾಡುವ ಕಾರ್ಯ ಮಾಡುತ್ತದೆ. ತನು ಮನದಿಂದ ಸಂಘದ ಕಾರ್ಯವನ್ನು ಸ್ವಯಂಸೇವಕರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ವರ್ಗದ ಅಧಿಕಾರಿಗಳಾದ ವಿಶ್ವನಾಥ ಅಭಿಬ್ ಬಾಗಲವಾಡ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ, ಸ್ವಯಂಸೇವಕರು, ಹಿತೈಷಿಗಳು ಉಪಸ್ಥಿತಿ ಇದ್ದರು.

ನಾನು ಬ್ಲ್ಯಾಕ್‌ಮೇಲ್ ರಾಜಕಾರಣಿಯಲ್ಲ: ಯತ್ನಾಳ

ವಿಜಯಪುರ: ನಾನು ಬ್ಲ್ಯಾಕ್‌ಮೇಲ್ ರಾಜಕಾರಣಿಯಲ್ಲ, ಬಿ.ಎಸ್.ಯಡಿಯೂರಪ್ಪ ಅವರ ಭ್ರಷ್ಟಾಚಾರದ ಎಲ್ಲ ದಾಖಲೆಗಳು ನನ್ನ ಬಳಿ ಇದ್ದವು. ಆದರೆ, ಪಕ್ಷದ ಹಿತದೃಷ್ಟಿಯಿಂದ ನಾನು ಬ್ಲಾಕ್ ಮೇಲ್ ಮಾಡಲು ಹೋಗಿಲ್ಲ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ಲಾಕ್ ಮೇಲ್ ಮಾಡಿದ್ದರೇ ಎಂದೋ ಸಚಿವನರಾಗಿರುತ್ತಿದೆ. ನಾನು ಹೊಸ ಪಕ್ಷ ಕಟ್ಟಿದರೆ ಹಿಂದೂಗಳ ಮತ ವಿಭಜನೆಯಾಗುತ್ತದೆ ಎಂಬುದು ಸಚಿವ ಎಂ.ಬಿ.ಪಾಟೀಲ ಹಾಗೂ ಕಾಂಗ್ರೆಸ್ ಲೆಕ್ಕಾಚಾರವಾಗಿದೆ. ಕಾಂಗ್ರೆಸ್ ಪಕ್ಷ ಮುಸ್ಲಿಂ ಮತಗಳ ಮೇಲೆ ಸರ್ಕಾರ ಮಾಡುವ ಉದ್ದೇಶವಿದೆ. ಮುಸ್ಲಿಂ ಉದ್ದಾರವೇ ಅವರ ಉದ್ದೇಶ. ಇದರಲ್ಲಿ ಎಂ.ಬಿ.ಪಾಟೀಲರ ಸಹಕಾರ ಎಲ್ಲಿಂದ ಬರುತ್ತದೆ ಎಂದು ಟಾಂಗ್ ಕೊಟ್ಟರು.

ಬಿಜೆಪಿ, ಕಾಂಗ್ರೆಸ್‌ನಲ್ಲಿರುವವರು ಹೊಂದಾಣಿಕೆ ಇದ್ದಾರೆ. ವಿಜಯೇಂದ್ರ ಯಾವುದೇ ವಿಚಾರಕ್ಕೂ ಪ್ರತಿಕ್ರಿಯೆ ಇಲ್ಲ, ಸಚಿವ ಜಮೀರ್ 2346 ಕೋಟಿ ಜಿಎಸ್‌ಟಿ ಹಗರಣ ಹೊರ ಬಂದಿದೆ. ಇದಕ್ಕೆ ವಿಜಯೇಂದ್ರ ಪ್ರತಿಕ್ರಿಯೆ ನೀಡಿಲ್ಲ, ಎಲ್ಲ ಹಿಂದೂಗಳನ್ನು ತೆಗೆದುಕೊಂಡು ರಾಜ್ಯದಲ್ಲಿ ಪರ್ಯಾಯ ಮಾಡುತ್ತೇವೆ, ಎಂ.ಬಿ.ಪಾಟೀಲರ ಆಶಯದಂತೆ ನಾನು ಸಿಎಂ ಆಗುತ್ತೇನೆ. ಅವರು ಬೇಕಾದರೆ ವಿರೋಧ ಪಕ್ಷದ ನಾಯಕ ಸ್ಥಾನದಲ್ಲಿ ಕೂರಲಿ ಎಂದರು.

ಕೇಸರಿ ಶಾಲು ವಿತರಣೆ

ವಿಜಯಪುರ: ಜೂನ್‌ನಲ್ಲಿ ಶಾಲೆ ಪ್ರಾರಂಭ ಆಗುತ್ತಿದ್ದಂತೆ ಪ್ರತಿಯೊಬ್ಬರಿಗೂ ಕೇಸರಿ ಶಾಲು ವಿತರಣೆ ಮಾಡುತ್ತೇನೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಹಿಜಾಬ್-ಕೇಸರಿ ಶಾಲು ವಿವಾದ ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಕೇಸರಿ ಶಾಲು ಹಾಕಿಕೊಳ್ಳಲು ನಿಷೇಧ ಹೇರಲು ಇವರಿಗೆ ಯಾರು ಅಧಿಕಾರ ಕೊಟ್ಟವರು. ಕೇಸರಿ ಶಾಲು ಹಾಕೋದು ನಮ್ಮ ಹಕ್ಕಿದೆ, ನಮ್ಮ ಧರ್ಮ ಇದೆ ಎಂದರು.

ರಾಜ್ಯದ ಎಲ್ಲ ಹಿಂದೂಗಳಿಗೆ ಕರೆ ಕೊಡುತ್ತೇನೆ, ಎಲ್ಲ ಪಾಲಕರು ಮಕ್ಕಳಿಗೆ ತಿಲಕ ಹಾಗೂ ಕೇಸರಿ ಶಾಲ್ ಹಾಕಿ ಶಾಲೆಗೆ ಕಳಿಸಿ. ಇವರು ಹೇಗೆ ವಿರೋಧ ಮಾಡುತ್ತಾರೆ ಹೇಗೆ ತಡಿತಾರೆ ನಾವು ನೋಡುತ್ತೇವೆ ಎಂದು ಗುಡುಗಿದರು.

ಇನ್ನ ಮೇಲೆ ಹಾಜರಾತಿ ವೇಳೆ ವಿದ್ಯಾರ್ಥಿಗಳು ಎಸ್ ಸರ್ ಅನ್ನೋ ಹಾಗಿಲ್ಲ ಬದಲು ಜೈ ಶ್ರೀರಾಮ ಅನ್ನಬೇಕು. ಇನ್ನು ಮೇಲೆ ಶಿಕ್ಷಕರಿಗೆ ನಮಸ್ಕರಾ ಮಾಡುವಾಗ ತಲೆ ಬಾಗಿ ಜೈ ಶ್ರೀರಾಮ ಎನ್ನಬೇಕು ಎಂದು ಕರೆ ಕೊಡುವೆ ಎಂದರು.

ರೌಡಿಶೀಟರ್ ರಾಕೇಶ್ ವಾಲೇಕರ ಬಂಧನ

ಹಳಿಯಾಳ: ಜೀವ ಬೆದರಿಕೆ ಹಾಕಿ, ಯುವಕನಿಂದ ಬೈಕ್ ಕಸಿದುಕೊಂಡ ವಂಚನೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಹಳಿಯಾಳದ ರೌಡಿಶೀಟರ್ ರಾಕೇಶ್ ವಾಲೇಕರನನ್ನು ಹಳಿಯಾಳ ಪೊಲೀಸರು ಗೋವಾ ಗಡಿಯ ಅನಮೋಡ್ ಚೆಕ್‌ಪೋಸ್ಟ್‌ನಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಟ್ಟಣದ ನಿವಾಸಿ ರೌಡಿ ಶೀಟರ್ ರಾಕೇಶ ದಿನಕರ ವಾಲೇಕರ ಈತ ಕಾನ್ವೆಂಟ್ ರೋಡ್ ನಿವಾಸಿ ರಾಹುಲ್ ವಾಣಿ ಈತನಿಗೆ ಹಣವನ್ನು ಡಬಲ್ ಮಾಡಿಕೊಡುತ್ತೇನೆ. 1 ಲಕ್ಷ ರೂ. ಅರ್ಜೆಂಟಾಗಿ ಕೊಡು ಎಂದು ಪೀಡಿಸಿದ್ದ. ಹಣ ಇಲ್ಲ ಎಂದು ರಾಹುಲ್ ಹೇಳಿದಾಗ ಹಣ ಅಥವಾ ಬೈಕ್ ಕೊಡು ಇಲ್ಲದಿದ್ದರೆ ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದ. ರೌಡಿಶೀಟರ್ ರಾಕೇಶ್ ಬಗ್ಗೆ ತಿಳಿದಿದ್ದ ರಾಹುಲ್ ಭಯಭೀತನಾಗಿದ್ದರಿಂದ ರಾಯಲ್ ಎನ್‌ಫೀಲ್ಡ್ ಬೈಕ್ ವಾಹನವನ್ನು ಆರೋಪಿ ಕಸಿದುಕೊಂಡು ಹೋಗಿದ್ದರಿಂದ ಹಳಿಯಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖೆ ಪೂರ್ಣಗೊಳಿಸಿದ ಪೊಲೀಸರು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ಆದರೆ, ವಿಚಾರಣೆ ವೇಳೆ ಆರೋಪಿ ರಾಕೇಶ ವಾಲೇಕರ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಇದರಿಂದ ನ್ಯಾಯಾಲಯ ಆರೋಪಿ ವಿರುದ್ಧ ದಸ್ತಗಿರಿ ವಾರಂಟ್ ಜಾರಿಗೊಳಿಸಿತ್ತು.

ವಿಶೇಷ ಪತ್ತೆ ತಂಡ ರಚಿಸಿಕೊಂಡ ಹಳಿಯಾಳ ಪೊಲೀಸರಿಗೆ ಮೇ 16ರಂದು ಆರೋಪಿ ಗೋವಾದ ಪೊಂಡಾದಿಂದ ಹಳಿಯಾಳಕ್ಕೆ ಬರುತ್ತಿರುವ ಖಚಿತ ಮಾಹಿತಿ ಸಿಕ್ಕಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು 4 ಗಂಟೆ ಅನಮೋಡ್ ಚೆಕ್‌ಪೋಸ್ಟ್‌ನಲ್ಲಿ ಹೊಂಚು ಹಾಕಿ ಕಾದು ಆರೋಪಿಯನ್ನು ವಶಕ್ಕೆ ಪಡೆದರು. ಬಂಧಿತ ಆರೋಪಿ ರಾಕೇಶ ವಾಲೇಕರನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಪಿಎಸ್‌ಐ ಬಸವರಾಜ ಮಬನೂರ ಹಾಗೂ ಪಿಎಸ್‌ಐ ಕೃಷ್ಣಾ ಅರಕೇರಿ ನೇತೃತ್ವದ ತಂಡದಲ್ಲಿ ಸಿಬ್ಬಂದಿಗಳಾದ ಮಹಮ್ಮದ್ ಹನೀಫ್ ಮುಲ್ಲಾ, ಸಂತೋಷ ಡಿ. ಉರ್ಮಿ ಮತ್ತು ರಾಘವೇಂದ್ರ ಕೆರವಾಡ ಭಾಗವಹಿಸಿದ್ದರು.

ಇಂದು ಕೆಕೆಆರ್‌ಡಿಬಿ ಮಂಡಳಿ ಮಹತ್ವದ ಸಭೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶಭಿವೃದ್ಧಿ ಮಂಡಳಿ ಕೆಕೆಆರ್‌ಡಿಬಿ ಮಹತ್ವದ ಸಭೆ ಮೇ 18ರ ಸೋಮವಾರ ಮಧ್ಯಾನ್ಹ 2 ಗಂಟೆಗೆ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಧರ್ಮಸಿಂಗ್ ಅಧ್ಯಕ್ಷತೆಯಲ್ಲಿ ಕಲಬುರಗಿ ಐವಾನ್ ಎ ಶಾಹಿ ಪ್ರದೇಶದಲ್ಲಿರುವ ಮಂಡಳಿಯ ಅಭಿವೃದ್ಧಿ ಭವನದ ಸಭಾಂಗಣದಲ್ಲಿ ನಡೆಯಲಿದೆ.


ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಉಸ್ತುವಾರಿ ಸಚಿವರುಗಳು ಹಾಗೂ ಮಂಡಳಿಯ ಸದಸ್ಯರಾದ ಪ್ರಿಯಾಂಕ್ ಖರ್ಗೆ, ಡಾ.ಶರಣ ಪ್ರಕಾಶ್ ಪಾಟೀಲ್, ಶರಣಬಸಪ್ಪ ದರ್ಶನಾಪುರ, ಬಿ ಝಡ್ ಝಮೀರ್ ಅಹ್ಮದ್, ಈಶ್ವರ ಖಂಡ್ರೆ ಹಾಗೂ ಸಚಿವರಾದಂತಹ ರಹೀಮ್ ಖಾನ್, ಎನ್.ಎಸ್ ಭೋಸರಾಜು, ಮಂಡಳಿಯ ಸದಸ್ಯರು ಹಾಗೂ ಹಿರಿಯ ಶಾಸಕರಾದ ಬಸ್ವರಾಜ್ ರಾಯರೆಡ್ಡಿ, ರಾಘವೇಂದ್ರ ಹಿಟ್ನಾಳ್, ತಿಪ್ಪಣ್ಣಪ್ಪ ಕಮಕನೂರ್ ಹಾಗೂ ಶಾಸಕರು ಹಾಗೂ ರಾಜ್ಯ ನೀತಿ ಆಯೋಗದ ಉಪಾಧ್ಯಕ್ಷರು ಆದ ಬಿ.ಆರ್.ಪಾಟೀಲ್ ಅವರುಗಳು ಸುಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಸಭೆಯಲ್ಲಿ ಮಂಡಳಿಯ ಯೋಜನಗಳು, ಮುಂದೆ ಕೈಗೊಳ್ಳಬೇಕಾದ ಯೋಜನೆಗಳು, ಕ್ರಮಗಳು ಹಾಗೂ ಇನ್ನೂ ಹಲವು ಮಹತ್ವದ ಸಂಗತಿಗಳನ್ನು ಚರ್ಚಿಸುವ ನಿರೀಕ್ಷೆಗಳು ಇವೆ. ಕಲಬುರಗಿ ಸೇರಿದಂತೆ ಕಲ್ಯಾಣದ 7 ಜಿಲ್ಲೆಗಳ ಅಧಿಕಾರಿಗಳು, ಕೆಕೆಆರ್‌ಡಿಬಿ ಕಾರ್ಯದರ್ಶಿ ನಲೀನ್ ಅತುಲ್ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿರಲಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಜಗಳ: ಕೊಲೆಯಲ್ಲಿ ಅಂತ್ಯ

ಕಾರವಾರ: ಸರಾಯಿ ನಶೆಯಲ್ಲಿ ನಡೆದ ಮಾತಿಗೆ ಮಾತು ಬೆಳೆದ ಜಗಳವು ವ್ಯಕ್ತಿಯೋರ್ವನನ್ನು ಕೊಲೆ ಮಾಡಿ ಅಂತ್ಯ ಕಂಡ ಘಟನೆಯು ತಾಲೂಕಿನ ಅಸ್ನೋಟಿಯಲ್ಲಿ ನಡೆದಿದೆ. ಕಟ್ಟಡ ಕೆಲಸಕ್ಕೆ ಉತ್ತರ ಕರ್ನಾಟಕ ಜಿಲ್ಲೆಯಿಂದ ಬಂದ ಮೂವರು ಕೆಲಸಗಾರರು ಅಸ್ನೋಟಿಕಯ ಕಮಲಾಕರ ಗಡಕರ ಮನೆಯಲ್ಲಿ ಕೆಲಸಕ್ಕೆ ಬಂದಿದ್ದರು.

ಬಾಗಲಕೋಟೆಯ ಶಿರೂರಿನ ಶಿವಾನಂದ ನಾಯ್ಕರ (45), ಹಾವೇರಿ ಜಿಲ್ಲೆಯ ಸವಣೂರಿನ ಮರಿಯಪ್ಪಾ ಹರಿಜನ್ (43),, ಹಾಗೂ ಗುಜರಾತಿ ದೇವೇಶ ರಾಥೋಡ (28) ಈ ಮುವರು ಕಟ್ಟಡದ ಕೆಲಸ ಮಾಡುತ್ತಿದ್ದರು. ಕೆಲಸದ ನಂತರ ಸರಾಯಿ ಕುಡಿದು ಕುಳಿತಾಗ ಮೂವರ ಮಧ್ಯೆ ಯಾವುದೋ ಮಾತೊಂದು ಸಣ್ಣ ಜಗಳಕ್ಕೆ ಕಾರಣವಾಗಿದೆ. ಶಿವಾನಂದ ನಾಯ್ಕರ ಮತ್ತು ಮರಿಯಪ್ಪಾ ಹರಿಜನ ಸೇರಿಕೊಂಡು ದೇವೇಶ್ ರಾಥೋಡ ಮೇಲೆ ಎರಗಿ ಹೊಡೆದಾಟ ನಡೆಸಿದ್ದಾರೆ. ಘಟನೆಯಲ್ಲಿ ದೇವೇಶ ಮೇಲೆ ತೀವ್ರ ಹಲ್ಲೆಯಾಗಿ ಸಾವಿಗೀಡಾಗಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ ಚಿತ್ತಾಕುಲ ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಘಟನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದಾಗ ದೇವೇಶ ರಾಥೋಡ ಇವರಿಬ್ಬರಿಂದ ಸಾವಿಗೀಡಾಗಿರುವುದು ಬೆಳಕಿಗೆ ಬಂದಿದೆ. ಪೊಲೀಸ್ ಸ್ಥಳ ಭೇಟಿ ವೇಳೆ ಶಿವಾನಂದ ನಾಯ್ಕರ ಮತ್ತು ಮರಿಯಪ್ಪಾ ಹರಿಜನ ಇಬ್ಬರು ನಶೆಯಲ್ಲಿ ಇದ್ದರೆನ್ನಲಾಗಿದ್ದು, ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್	13	8	5	0	16	+0.400
ಹೈದರಾಬಾದ್	12	7	5	0	14	+0.331
ಪಂಜಾಬ್	13	6	6	1	13	+0.227
ರಾಜಸ್ಥಾನ	11	6	5	0	12	+0.082
ಚೆನ್ನೈ	12	6	6	0	12	+0.027
ಕೆಕೆಆರ್	12	5	6	1	11	-0.038
ದಿಲ್ಲಿ	12	5	7	0	10	-0.993
ಮುಂಬೈ	12	4	8	0	8	-0.504
ಲಖನೌ	12	4	8	0	8	-0.701

ಪಂಜಾಬ್ ವಿರುದ್ಧ 23 ರನ್‌ಗಳ ಗೆಲುವು | ವೆಂಕಟೇಶ್, ಕೊಹ್ಲಿ ಅಬ್ಬರ | ರಸೀಖ್ ಕೈಚಳಕ

ಪ್ಲೇಆಫ್‌ಗೆ ಬೆಂಗಳೂರು ರಾಯಲ್ ಎಂಟ್ರಿ

ಧರ್ಮಶಾಲಾ: ಪಂಜಾಬ್ ತಂಡವನ್ನು 23 ರನ್‌ಗಳಿಂದ ಸೋಲಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಈ ಬಾರಿಯ ಐಪಿಎಲ್‌ನಲ್ಲಿ ಪ್ಲೇಆಫ್‌ಗೇರಿದ ಮೊದಲ ತಂಡ ಆನಿಸಿಕೊಂಡಿದೆ.

ಭಾನುವಾರದ ರಜೆ ಮಜೆಯಲ್ಲಿದ್ದ ಆರ್‌ಸಿಬಿ ಅಭಿಮಾನಿಗಳಿಗೆ ಬೆಂಗಳೂರು ಗೆಲುವು ಇನ್ನಷ್ಟು ಖುಷಿ ತಂದಿದೆ. ಧರ್ಮಶಾಲಾದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 222 ರನ್ ಗಳಿಸಿತು. ಇದೇ ಪಂದ್ಯದಲ್ಲಿ ಬಡ್ತಿ ಪಡೆದ ವೆಂಕಟೇಶ್ ಅಯ್ಯರ್(73*; 40ಎ, 8ಬೌ, 4ಸಿ) ಗಳಿಸಿ ಗಮನ ಸೆಳೆದರೆ, ವಿರಾಟ್ ಕೊಹ್ಲಿ(58; 37ಎ, 4 ಬೌ, 3ಸಿ) ಮತ್ತೊಮ್ಮೆ ಮಿಂಚಿನಾಟ ಪ್ರದರ್ಶಿಸಿದರು. ದೇವದತ್ತ ಪಡಿಕ್ಕಲ್ 45, ಟೀಮ್ ಡೇವಿಡ್ 28 ರನ್‌ಗಳೊಂದಿಗೆ ಸ್ಕೋರ್ ಹಿಗ್ಗಿಸಿದರು. ಪಂಜಾಬ್ ಪರ ಹರ್ಪೀತ್ ಬ್ರಾರ್ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 199 ರಬ್ ಗಳಿಸಲಷ್ಟೇ ಶಕ್ತವಾಯಿತು. ಶಶಾಂಕ್ ಸಿಂಗ್ (56; 27ಎ, 4ಬೌ, 4ಸಿ) ಗಳಿಸಿ ಹೋರಾಡಿದರು. ಇನ್ನುಳಿದಂತೆ ಮಧ್ಯಮಕ್ರಮಾಂಕದ ಬ್ಯಾಟಿಗರಾದ ಕೂಪರ್ 37, ಸೂರ್ಯಾಂಶ್ 35, ಸ್ಟೋಯಿನಿಸ್ 37 ಕೂಡ ಪ್ರಯತ್ನ ಪಟ್ಟರು. ಬೆಂಗಳೂರು ಪರ ರಸೀಖ್ ಸಲಾಂ ಧಾರ್ 3, ಭುವನೇಶ್ವರ್ ಕುಮಾರ್ 2 ವಿಕೆಟ್ ಪಡೆದರೆ, ಸುಯಶ್, ಶೇಫರ್ಡ್ ಹಾಗೂ ಹ್ಯಾಜೆಲ್ವುಡ್ ತಲಾ 1 ವಿಕೆಟ್ ಪಡೆದರು. ಈ ಗೆಲುವಿನೊಂದಿಗೆ ಆರ್‌ಸಿಬಿ ಪಂದ್ಯಾವಳಿಯ ಫೈನಲ್‌ಗೇರಿದ್ದಲ್ಲದೆ, ಅಗ್ರ ಎರಡಲ್ಲಿ ಮುಗಿಸುವ ಭರವಸೆ ಹೆಚ್ಚಿಸಿಕೊಂಡಿದೆ. ಸತತ ಆರನೇ ಸೋಲು ಕಂಡಿರುವ ಪಂಜಾಬ್ ಕಿಂಗ್ಸ್‌ಗೆ ಪ್ಲೇಆಫ್‌ಗೇರುವುದೇ ಸವಾಲಾಗಲಿದೆ. 13 ಅಂಕಗಳನ್ನು ಹೊಂದಿರುವ ಪಂಜಾಬ್ ಕೊನೆಯ ಪಂದ್ಯದಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿದ್ದು, ಆದಾಗ್ಯೂ ಬೇರೆ ತಂಡಗಳ ಗೆಲುವು-ಸೋಲುಗಳ ಮೇಲೆ ಅವಲಂಬಿತವಾಗಿರಬೇಕಿದೆ.

ರನ್ ಮಟ್ಟ: ಕೊಹ್ಲಿ ಅವರ ಕ್ಲಾಸಿಕ್ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ಪಡೆದ ಬೆಂಗಳೂರು 1 ವಿಕೆಟ್ ನಷ್ಟಕ್ಕೆ ಪವರ್‌ಪ್ಲೇನಲ್ಲಿ 61 ರನ್ ಗಳಿಸಿತು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಪಡಿಕ್ಕಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಅತ್ತ ಪಂಜಾಬ್ ಭುವನೇಶ್ವರ್ ಕುಮಾರ್ ದಾಳಿಗೆ ಮತ್ತೊಮ್ಮೆ ಸಿಲುಕಿಕೊಂಡು 6 ಓವರ್‌ನಲ್ಲಿ 49 ರನ್ ಮಾತ್ರ ಗಳಿಸಿ 3 ಪ್ರಮುಖ ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಕೊಹ್ಲಿ ಅರ್ಧಶತಕ ಬಾರಿಸಿದರೆ, ಪಡಿಕ್ಕಲ್ 45 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ವೆಂಕಟೇಶ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾದರು. ಕೊಹ್ಲಿ ವಿಕೆಟ್ ಒಪ್ಪಿಸಿದರೂ, ವೆಂಕಿ ಅಬ್ಬರ ನಿಲ್ಲಲಿಲ್ಲ. 31 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ನಂತರ ಇನ್ನಷ್ಟು ಆಕ್ರಮಣಕಾರಿಯಾಗಿ ಕಾಣಿಸಿಕೊಂಡರು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ 107 ರನ್ ಗಳಿಸಿತು.

ಅತ್ತ ಪಂಜಾಬ್ ಪರ ಕೊನೊಲಿ ಮತ್ತು ಸೂರ್ಯಾಂಶ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಆರ್‌ಸಿಬಿ ಕೊಟ್ಟಿದ್ದ ದೊಡ್ಡ ಟಾರ್ಗೆಟ್ ಮತ್ತು ಪವರ್‌ಪ್ಲೇನಲ್ಲಿ ಅನುಭವಿಸಿದ ಹಿನ್ನಡೆ ಪಂಜಾಬ್‌ಗೆ ಒತ್ತಡ ಹಾಕುತ್ತಲೇ ಇತ್ತು. ಕೊನೊಲಿ 37, ಸೂರ್ಯಾಂಶ್ 35ಕ್ಕೆ ಔಟಾದರು. ಕೊನೆಯಲ್ಲಿ ಬಂದ ಶಶಾಂಕ್ ಸಿಂಗ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಪಂದ್ಯವನ್ನು ಜಗ್ಗಿದಂತೆ ಮಾಡಿ ಪಂಜಾಬ್ ಹೋಪ್ ಜಾರಿಯಲ್ಲೇ ಇಟ್ಟರು. ಪಂಜಾಬ್ ಮಧ್ಯಮ ಓವರ್‌ಗಳಲ್ಲಿ 111 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಆರ್‌ಸಿಬಿ ಪರ ವೆಂಕಿ ಅಬ್ಬರಿಸಿದರು. ಅವರಿಗೆ ಡೇವಿಡ್ ಸಾಥ್ ಕೂಡ ಸಿಕ್ಕಿತು. 73* ರನ್ ಗಳಿಸಿದ ವೆಂಕಿ ಸ್ಕೋರ್ 220ರ ಗಡಿಗೆ ಮುಟ್ಟಿಸಿದರು. ಡೇವಿಡ್ ಕೂಡ ಅಬ್ಬರಿಸಿದರು. ಡೆತ್ ಓವರ್‌ಗಳಲ್ಲಿ ಆರ್‌ಸಿಬಿ 54 ರನ್ ಗಳಿಸಿತು. ಇತ್ತ ಪಂಜಾಬ್ ಪರ ಶಶಾಂಕ್ ಫೈಟ್ ಕೊಟ್ಟರು. ಸ್ಟೋಯಿನಿಸ್ ಸಾಥ್ ಕೊಟ್ಟ ನಂತರ ಪಂಜಾಬ್ ಗೆಲುವಿನ ಹಾದಿಗೆ ಬಂದಂತಿತ್ತು. ಆದರೆ ಡೆತ್‌ನಲ್ಲಿ ಭುವಿ ಮತ್ತು ಹ್ಯಾಜೆಲ್ವುಡ್ ಅಬ್ಬರಿಸಿದ್ದಲ್ಲದೆ, ರಸೀಕ್ ಕೂಡ ಮಿಂಚಿದರು. ಕೊನೆಯಲ್ಲಿ ಆರ್‌ಸಿಬಿ 23 ರನ್‌ಗಳಿಂದ ಗೆಲುವು ಸಾಧಿಸಿತು.



ಸತತ 3ನೇ ಬಾರಿ ಪ್ಲೇಆಫ್‌ಗೆ ಆರ್‌ಸಿಬಿ

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ಪಾರುಪತ್ಯ ಮುಂದುವರಿದಿದ್ದು, ಸತತ ಮೂರನೇ ಬಾರಿ ಪ್ಲೇಆಫ್‌ಗೇರಿದೆ. 2024ರಲ್ಲಿ ಫಾಫ್ ಡು ಪ್ಲೆಸಿಸ್ ನಾಯಕತ್ವದಲ್ಲಿ ಪ್ಲೇಆಫ್‌ಗೇರಿತ್ತು. ಕಳೆದ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದ ಆರ್‌ಸಿಬಿ ಎರಡನೇ ಬಾರಿ, ಇದೀಗ ಮೂರನೇ ಬಾರಿ ಪ್ಲೇಆಫ್‌ಗೇರಿದೆ. ಇದಲ್ಲದೆ, ಆರ್‌ಸಿಬಿ ಲೀಗ್‌ನಲ್ಲಿ ಅತಿ ಹೆಚ್ಚು ಬಾರಿ ಪ್ಲೇಆಫ್‌ಗೇರಿದ ತಂಡಗಳ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ. ಮುಂಬೈನೊಂದಿಗೆ ಜಂಟಿ ಸ್ಥಾನ ಹೊಂದಿದೆ.

ಅತಿ ಹೆಚ್ಚು ಪ್ಲೇಆಫ್

ತಂಡ	ಪ್ಲೇಆಫ್
ಚೆನ್ನೈ	12
ಆರ್‌ಸಿಬಿ, ಮುಂಬೈ	11
ಕೆಕೆಆರ್	8
ಹೈದರಾಬಾದ್	7

ಪಂದ್ಯಶ್ರೇಷ್ಠ ಪ್ರಶಸ್ತಿ
ವೆಂಕಟೇಶ್ ಅಯ್ಯರ್ (73*) ರನ್

ಸ್ಕೋರ್ ಬೋರ್ಡ್

ಆರ್‌ಸಿಬಿ 20 ಓವರ್‌ಗಳಲ್ಲಿ 22/4

ಜೇಕಬ್	ಬಿ ಬ್ರಾರ್	11
ಕೊಹ್ಲಿ	ಸಿ ಪ್ರಿಯಾಂಶ್ ಬಿ ಚಾಹಲ್	58
ಪಡಿಕ್ಕಲ್	ಸಿ ಶ್ರೇಯಸ್ ಬಿ ಬ್ರಾರ್	45
ವೆಂಕಟೇಶ್	ನಾಟೌಟ್	73
ಡೇವಿಡ್	ಸಿ ಬ್ರಾರ್ ನಿ ಅರ್ಷದೀಪ್	28
ಇತರೆ 7		

ಬೌಲಿಂಗ್ ವಿವರ

ಅರ್ಷದೀಪ್	4-0-43-1
ಓಮರ್‌ಝೈ	4-0-38-0
ಬ್ರಾರ್	4-0-35-2
ಫರ್ಗುಸನ್	3-0-43-0
ಚಾಹಲ್	3-0-42-1
ಶಶಾಂಕ್	2-0-20-0

ಪಂಜಾಬ್ 20 ಓವರ್‌ಗಳಲ್ಲಿ 199/8

ಪ್ರಿಯಾಂಶ್	ಸಿ ಶೇಫರ್ಡ್ ಬಿ ಭುವನೇಶ್ವರ್	0
ಪ್ರಭಸಿಮ್ರನ್	ಸಿ ಪಡಿಕ್ಕಲ್ ಬಿ ಭುವನೇಶ್ವರ್	2
ಕೂಪರ್	ಸಿ ಜೇಕಬ್ ಬಿ ಶೇಫರ್ಡ್	37
ಶ್ರೇಯಸ್	ಸಿ ಜಿತೇಶ್ ಬಿ ರಸೀಖ್	1
ಸೂರ್ಯಾಂಶ್	ಸಿ ಕೊಹ್ಲಿ ಬಿ ಸುಯಶ್	35
ಸ್ಟೋಯಿನಿಸ್	ಎಲ್‌ಬಿ ಬಿ ಹ್ಯಾಜೆಲ್ವುಡ್	37
ಶಶಾಂಕ್	ಸಿ ಕೊಹ್ಲಿ ಬಿ ರಸೀಖ್	56
ಓಮರ್‌ಝೈ	ಸಿ ಡೇವಿಡ್ ಬಿ ರಸೀಖ್	14
ಬ್ರಾರ್	ನಾಟೌಟ್	5
ಇತರೆ	12	

ಬೌಲಿಂಗ್ ವಿವರ

ಭುವನೇಶ್ವರ್	4-0-38-2
ಹ್ಯಾಜೆಲ್ವುಡ್	4-0-36-1
ರಸೀಖ್	4-0-36-3
ಸುಯಶ್	4-0-50-1
ಶೇಫರ್ಡ್	1-0-8-1
ಕೃಣಾಲ್	3-0-27-0

ಕಿರುಸುದ್ದಿ

ಚೆಸ್: ಪ್ರಜ್ಞಾನಂದ ಪಂದ್ಯ ಡ್ರಾ

ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೂರನೇ ಸುತ್ತಿನ ಬಳಿಕ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಜಂಟಿ ಮುನ್ನಡೆಯನ್ನು ಕಾಯ್ದುಕೊಂಡಿದ್ದಾರೆ. ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಅವರು ಡ್ರಾ ಸಾಧಿಸಿದರು. ಹಿಂದಿನ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಜಾವೋಖಿರ್ ಸಿಂದಾರೋವ್ ವಿರುದ್ಧ ಗೆಲುವು ಸಾಧಿಸಿದ್ದ ಪ್ರಜ್ಞಾನಂದ ಇದೀಗ ಮೂರು ಸುತ್ತುಗಳ ಬಳಿಕ ಎರಡು ಅಂಕಗಳನ್ನು ಕಲೆಹಾಕಿದ್ದಾರೆ.



ಅವರು ಫ್ರಾನ್ಸ್‌ನ ಮ್ಯಾಕ್ಸಿಮ್ ವಶಿಯರ್-ಲಾಗ್ರಾವ್, ನೆದರ್‌ಲ್ಯಾಂಡ್ಸ್‌ನ ಜೋರ್ಡನ್ ವಾನ್ ಫೊರೆಸ್ಟ್ ಮತ್ತು ಅನಿಶ್ ಗಿರಿ, ಜೊತೆಗೆ ಕೀಮರ್ ಅವರೊಂದಿಗೆ ಜಂಟಿ ಮುನ್ನಡೆ ಹಂಚಿಕೊಂಡಿದ್ದಾರೆ. 10 ಆಟಗಾರರ ಟೂರ್ನಿಯಲ್ಲಿ ಅರ್ಧ ಭಾಗದ ಆಟಗಾರರು ಮುನ್ನಡೆ ಹಂಚಿಕೊಂಡಿರುವುದು ಸ್ಪರ್ಧೆಯನ್ನು ಇನ್ನಷ್ಟು ರೋಚಕಗೊಳಿಸಿದೆ. ಅಮೆರಿಕದ ಫ್ಯಾಬಿಯಾನೊ ಕಾರುವಾನಾ ಮತ್ತು ವೆಸ್ಲಿ ಸೋ ತಲಾ ಎಲ್ಲಾ ಪಂದ್ಯಗಳನ್ನೂ ಡ್ರಾ ಮಾಡಿಕೊಂಡು 1.5 ಅಂಕಗಳೊಂದಿಗೆ ಇದ್ದಾರೆ. ಫ್ರಾನ್ಸ್ ಪರ ಆಡುತ್ತಿರುವ ಅಲಿರೆಝಾ ಫಿರೋಜ್ಜಾ ಮತ್ತು ಆತಿಥೇಯ ಆಟಗಾರ ಡಿಯಾಕ್ ಬೋಗ್ದಾನ್-ಡೇನಿಯಲ್ ತಲಾ ಅರ್ಧ ಅಂಕ ಹೊಂದಿದ್ದಾರೆ. ಬಿಳಿ ಕಾಯಿಯೊಂದಿಗೆ ಆಡಿದ ಪ್ರಜ್ಞಾನಂದಗೆ ಪಂದ್ಯದಲ್ಲಿ ಹೆಚ್ಚಿನ ಅವಕಾಶಗಳು ಸಿಗಲಿಲ್ಲ. ಕೀಮರ್ ಇತ್ತೀಚಿನ ವರ್ಷಗಳಲ್ಲಿ ವಿಶ್ವದ ಅಗ್ರ ಆಟಗಾರರ ನಡುವೆ ಸ್ಥಿರ ಪ್ರದರ್ಶನ ನೀಡುತ್ತಿರುವ ಆಟಗಾರನಾಗಿದ್ದು, ಈ ಪಂದ್ಯದಲ್ಲೂ ಭಾರತೀಯ ಆಟಗಾರನಿಗೆ ಹೆಚ್ಚಿನ ಅವಕಾಶ ನೀಡಲಿಲ್ಲ. ಪ್ರಜ್ಞಾನಂದ ನಿಮ್ಜೋ ಇಂಡಿಯನ್ ವಿರುದ್ಧ ಕಪಾಬ್ಲಾಂಕಾ ರೂಪಾಂತರವನ್ನು ಆಯ್ಕೆ ಮಾಡಿಕೊಂಡರು. ಆರಂಭದಲ್ಲೇ ಕೀಮರ್ ಒಂದು ಪಾನ್ ತ್ಯಾಗ ಮಾಡಿ ಸಮಬಲ ಸಾಧಿಸಿದರು. ನಂತರ ಪಂದ್ಯ ರೂಕ್ ಮತ್ತು ಸಣ್ಣ ಗೂಟಗಳ ಅಂತ್ಯಕ್ಕೆ ತಲುಪಿತು. ಪ್ರಜ್ಞಾನಂದ ಹೆಚ್ಚುವರಿ ಪಾನ್ ಹೊಂದಿದ್ದರೂ, ಕೀಮರ್ ಅದನ್ನು ಅತ್ಯುತ್ತಮ ನಿರ್ಬಂಧದ ಮೂಲಕ ನಿಯಂತ್ರಿಸಿದರು. ಕೊನೆಗೆ 64 ನಡೆಗಳ ಬಳಿಕ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು.

ಇಂದಿನಿಂದ ಎಸ್.ಎಂ. ಕೃಷ್ಣ ನೆನಪಿನ ಓಪನ್ ಟೆನಿಸ್

ಬೆಂಗಳೂರು: ಇಲ್ಲಿನ ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿ ಈ ಬಾರಿ ಹೊಸ ಅಧ್ಯಾಯ ಆರಂಭಿಸಿದೆ. ಇದುವರೆಗೆ ಐಟಿಎಫ್ ಎಂ25 ಟೂರ್ನಿಯಾಗಿ ನಡೆದಿದ್ದ ಸ್ಪರ್ಧೆ, ಇದೀಗ ಎಟಿಪಿ ಚಾಲೆಂಜರ್ 50 ಹಂತಕ್ಕೆ ಮೇಲ್ದರ್ಜೆಗೊಂಡಿದ್ದು, 63 ಸಾವಿರ ಅಮೆರಿಕನ್ ಡಾಲರ್ ಬಹುಮಾನ ಮೊತ್ತದೊಂದಿಗೆ ಸೋಮವಾರದಿಂದ ಆರಂಭವಾಗುತ್ತಿದೆ. ಈ ಮೇಲ್ದರ್ಜೆಗೇರಿಕೆಯಿಂದ ಟೂರ್ನಿಗೆ ಬಲಿಷ್ಠ ಆಟಗಾರರ ಆಗಮನವಾಗಿದ್ದು, ಭಾರತೀಯ ಆಟಗಾರರಿಗೆ ತವರಿನಲ್ಲಿ ಹೆಚ್ಚಿನ ಎಟಿಪಿ ಶ್ರೇಯಾಂಕ ಅಂಕಗಳನ್ನು ಗಳಿಸುವ ಅವಕಾಶ ಸಿಕ್ಕಿದೆ. 32 ಆಟಗಾರರ ಮುಖ್ಯ ಡ್ರಾದಲ್ಲಿ ಎಂಟು ಭಾರತೀಯರು ಈಗಾಗಲೇ ಸ್ಥಾನ ಪಡೆದಿದ್ದು, ಅರ್ಹತಾ ಸುತ್ತಿನಿಂದ ಇನ್ನೂ ಮೂವರು ಪ್ರವೇಶಿಸುವ ಸಾಧ್ಯತೆ ಇದೆ. ಸ್ಥಳೀಯ ಅಭಿಮಾನಿಗಳ ಗಮನ ಸೆಳೆದಿರುವ ಆಟಗಾರ ಕ್ರಿಶ್ ತ್ಯಾಗಿ. ಕಳೆದ ವಾರ ಕರ್ನಾಟಕ ಓಪನ್ ಚಾಲೆಂಜರ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಸಂಚಲನ ಮೂಡಿಸಿದ್ದ ಕ್ರಿಶ್, ಇದೀಗ ಚೈನೀಸ್ ತೈಪೆಯ ಕುವಾನ್-ಯಿ ಲೀ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಮತ್ತೊಬ್ಬ ಭಾರತೀಯ ಮನೀಶ್ ಸುರೇಶ್‌ಕುಮಾರ್, ಕಳೆದ ವಾರ ತಮ್ಮ ಮೊದಲ ಚಾಲೆಂಜರ್ ಕ್ವಾರ್ಟರ್ ಫೈನಲ್ ತಲುಪಿದ್ದರು. ಆದರೆ ಈ ಬಾರಿ ಮೊದಲ ಸುತ್ತಿನಲ್ಲೇ ಅಗ್ರ ಶ್ರೇಯಾಂಕಿತ ಅಮೆರಿಕದ ಕೀಗನ್ ಸ್ಮಿತ್ ಅವರನ್ನು ಎದುರಿಸಲಿದ್ದಾರೆ. ಇತ್ತೀಚೆಗೆ ಕರ್ನಾಟಕ ಓಪನ್ ಪ್ರಶಸ್ತಿ ಗೆದ್ದ ಸ್ಮಿತ್ ಭರ್ಜರಿ ಫಾರ್ಮ್‌ನಲ್ಲಿದ್ದಾರೆ.

ಮಹತ್ವದ ಪಂದ್ಯದಲ್ಲಿ ಹೈದರಾಬಾದ್ ಎದುರಾಳಿ

ಚೆನ್ನೈಗಿಂದು ಮಾಡಿ ಇಲ್ಲವೇ ಮಡಿ ಪಂದ್ಯ

ಚೆನ್ನೈ: ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಸೋಮವಾರದಂದು ಸನ್‌ರೈಸರ್ಸ್ ತಂಡವನ್ನು ಎದುರಿಸಲಿದೆ. ಪ್ಲೇಆಫ್ ರೇಸ್‌ನಲ್ಲಿ ಉಳಿಯಬೇಕಾದರೆ ಚೆನ್ನೈ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಸೋತರೆ ಪಂದ್ಯಾವಳಿಯಿಂದಲೇ ಹೊರಬೀಳಲಿದೆ. ಇತ್ತ ಸನ್‌ರೈಸರ್ಸ್ ಹೈದರಾಬಾದ್‌ಗೂ ಪಂದ್ಯಾವಳಿಯಲ್ಲಿ ಉಳಿಯಲು ಇದು ಮಹತ್ವದ ಪಂದ್ಯವಾಗಿದೆ. ಆರನೇ ಸ್ಥಾನದಲ್ಲಿರುವ ಚೆನ್ನೈ 16 ಅಂಕದೊಂದಿಗೆ ಪ್ಲೇಆಫ್‌ಗೆ ತಲುಪಲು ಗೆಲ್ಲಬೇಕಿದೆ. ಅತ್ತ ಸನ್‌ಗೂ ಇದು ಗೆಲ್ಲಲೇಬೇಕಾದ ಪಂದ್ಯವಾಗಿರಲಿದೆ.



ಲಖನೌ ಸೂಪರ್ ಜೇಂಟ್ಸ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಭಾರೀ ಸೋಲನುಭವಿಸಿದೆ. ಅತ್ತ ಗುಜರಾತ್ ವಿರುದ್ಧ ಹೀನಾಯ ಸೋಲನುಭವಿಸಿರುವ ಹೈದರಾಬಾದ್ ಕೂಡ ಒತ್ತಡದಲ್ಲಿದೆ. ಎರಡೂ ತಂಡಗಳು ಸೋಲಿನಿಂದ ಹೊರಬರಬೇಕಿರುವುದರಿಂದ ಕುತೂಹಲ ಮೂಡಿಸಿದೆ. ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಚೆನ್ನೈ ಪಂದ್ಯಾವಳಿಯ ಕೊನೆ ತವರು ಪಂದ್ಯವಾಡಲಿದೆ.

ಪುಟಿದೇಳುವುದೇ ಚೆನ್ನೈ?: ಒಬ್ಬರಾದ ಮೇಲೊಬ್ಬರು ಗಾಯಗೊಂಡು ಹೊರ ನಡೆಯುವುದು ಚೆನ್ನೈ ತಂದ ದೊಡ್ಡ ಹಿನ್ನಡೆ. ಪಂದ್ಯಗಳನ್ನು ಗೆಲ್ಲಿಸುತ್ತಿದ್ದ ಜಿಮಿ ಓವರ್‌ಟನ್ ಕೂಡ ಗಾಯದಿಂದಾಗಿ ಹೊರನಡೆದಿದ್ದಾರೆ. ಈ ನಿಟ್ಟಿನಲ್ಲಿ ಲಖನೌ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ದೊಡ್ಡ ಹಿನ್ನಡೆ ಅನುಭವಿಸಿತ್ತು. ಮುಖ್ಯವಾಗಿ ಬೌಲಿಂಗ್ ವಿಚಾರದಲ್ಲಿ ಒತ್ತಡ ಎದುರಿಸುತ್ತಿರುವ ಚೆನ್ನೈ ತಂಡದಲ್ಲಿ ಅನುಭವಿ ವೇಗಿಗಳೇ ಇಲ್ಲ. ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪೈಪೋಟಿಯಲ್ಲಿದ್ದ ಅನ್ಶುಲ್ ಕಂಬೋಜ್ ಭಾರೀ ದುಬಾರಿಯಾಗಿದ್ದಾರೆ. ಸ್ಪೆನ್ಸರ್ ಜಾನ್ಸನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಕಾಣಿಸಿಕೊಂಡಿದ್ದು, ಹೆಚ್ಚುವರಿ ಬೌಲರ್ ಆದ ಗುರ್ಜಾಪ್ನೀತ್ ಕೂಡ ದುಬಾರಿಯಾಗಿದ್ದಾರೆ. ಬ್ಯಾಟಿಂಗ್ ವಿಭಾಗದಲ್ಲಿ ಸಂಜು, ರುತುರಾಜ್‌ನಿಂದ ರನ್ ಬರಬೇಕಿದೆ.

ಸನ್‌ಗೆ ಗೆಲುವಿನ ಹಂಬಲ: ಸನ್‌ರೈಸರ್ಸ್ ಹೈದರಾಬಾದ್ ಗೆಲುವಿನ ಹಳಿಗೆ ಮರಳುವ ತವಕದಲ್ಲಿದೆ. ಹಿಂದಿನ ಪಂದ್ಯದಲ್ಲಿ ಗುಜರಾತ್ ವಿರುದ್ಧ ಭಾರೀ ಸೋಲನುಭವಿಸಿದ್ದ ಸನ್‌ರೈಸರ್ಸ್ ದೊಡ್ಡ ಬ್ಯಾಟಿಂಗ್ ವೈಫಲ್ಯ ಕಂಡಿತ್ತು. 86 ರನ್‌ಗೆ ಆಲೌಟ್ ಆಗುವಾಗ ಯಾವುದೇ ಬ್ಯಾಟರ್ ಕೂಡ ಸಾಥ್ ಕೊಟ್ಟಿರಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಎಲ್ಲರೂ ಯುವಕರೇ ಇದ್ದು ಅನುಭವದ ಕೊರತೆ ಕೂಡ ಅಲ್ಪ ಕಾಣಿಸಿಕೊಳ್ಳಲಿದೆ. ಇದೇ ಆವೃತ್ತಿಯಲ್ಲಿ ಚೆನ್ನೈ ವಿರುದ್ಧ ಗೆದ್ದಿರುವ ಹೈದರಾಬಾದ್ ಗೆದ್ದು ಪ್ಲೇಆಫ್‌ಗೇರುವ ತವಕದಲ್ಲಿದೆ.

ಪಿಚ್: ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಂಗ್ ಮತ್ತು ಬೌಲರ್ ಇಬ್ಬರಿಗೂ ಲಾಭ ಸಿಗಲಿದೆ. ಇಬ್ಬನಿ ಬೌಲರ್‌ಗಳಿಗೆ ಕಾಟ ಕೊಟ್ಟರೆ, ಹೆಚ್ಚಿನ ಬೌನ್ಸ್ ಬ್ಯಾಟಿಗರಿಗೆ ಚಿಂತೆಯಾಗಿರಲಿದೆ.

ಧೋನಿಗೆ ಕೊನೆ ಪಂದ್ಯ?

ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿಗಿದು ಕೊನೆಯ ಪಂದ್ಯವಾಗಿರಲಿದ್ದು, ಸನ್ ವಿರುದ್ಧ ಮೈದಾನಕ್ಕಿಳಿಯಲಿದ್ದಾರೆ ಎನ್ನಲಾಗುತ್ತಿದೆ. 44 ವರ್ಷದ ಧೋನಿ, ಈ ಬಾರಿ ಒಂದು ಪಂದ್ಯವನ್ನೂ ಆಡಿಲ್ಲ. ಈ ಬೆನ್ನಲ್ಲೇ ನಿವೃತ್ತಿ ವದಂತಿಗಳೂ ಹರಿದಾಡುತ್ತಿವೆ. ಹಿಂದಿನ ಅವರ ಹೇಳಿಕೆ ಪರಿಗಣಿಸಿದರೆ, ಅವರು ಚೆನ್ನೈನಲ್ಲಿ ಕೊನೆಯ ಪಂದ್ಯ ಆಡುವುದಾಗಿ ಹೇಳಿದ್ದರು. ಚೆನ್ನೈಗಿದು ಕೊನೆಯ ತವರು ಪಂದ್ಯವಾಗಿರಲಿದ್ದು ಧೋನಿ ತಮ್ಮ ಕ್ರಿಕೆಟ್ ವೃತ್ತಿಯ ಕೊನೆಯ ಪಂದ್ಯವಾಡಲಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಥೈಲ್ಯಾಂಡ್ ಓಪನ್ | ಫೈನಲ್‌ನಲ್ಲಿ ಭಾರತ ಜೋಡಿಗೆ ಸೋಲು

ಸಾತ್ವಿಕ್-ಚಿರಾಗ್ ರನ್ನರ್-ಅಪ್

ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಈ ವರ್ಷದ ತಮ್ಮ ಮೊದಲ ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಭಾರತ ಥೈಲ್ಯಾಂಡ್ ಓಪನ್ ಪಮದ್ಯಾವಳಿಯಲ್ಲಿ ಬೆಳ್ಳಿ ಮಾತ್ರ ಗೆದ್ದಿತು. ಬ್ಯಾಂಕಾಕ್‌ನಲ್ಲಿ ಭಾನುವಾರ ನಡೆದ ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೋ ಮತ್ತು ಡೇನಿಯಲ್ ಮಾರ್ತಿನ್ ಜೋಡಿ 21-12, 25-23 ನೇರ ಗೇಮ್‌ಗಳಲ್ಲಿ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು.

53 ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಭಾರತೀಯ ಜೋಡಿ ಕೊನೆಯವರೆಗೂ ಹೋರಾಟ ನಡೆಸಿದರೂ, ಇಂಡೋನೇಷ್ಯಾ ಜೋಡಿ ಐದು ಮುಖಾಮುಖಿಗಳಲ್ಲಿ ಮೊದಲ ಬಾರಿಗೆ ಸಾತ್ವಿಕ್-ಚಿರಾಗ್ ವಿರುದ್ಧ ಜಯ ಸಾಧಿಸಿತು. ಎರಡು ವರ್ಷಗಳ ಹಿಂದೆ ಇದೇ ಥೈಲ್ಯಾಂಡ್ ಓಪನ್ ಪ್ರಶಸ್ತಿ ಗೆದ್ದಿದ್ದ ಭಾರತೀಯ ಜೋಡಿ, ಮತ್ತೊಮ್ಮೆ ಚಾಂಪಿಯನ್ ಆಗುವ ಕನಸಿನೊಂದಿಗೆ ಕಣಕ್ಕಿಳಿದಿತ್ತು. ಆದರೆ ಇಂಡೋನೇಷ್ಯಾ ಜೋಡಿಯ ಆಕ್ರಮಣಾತ್ಮಕ ಆಟದ ಎದುರು ನಿರ್ಣಾಯಕ ಕ್ಷಣಗಳಲ್ಲಿ ಮುಗ್ಗರಿಸಿತು.



ಮೊದಲ ಸುತ್ತು: ಮೊದಲ ಗೇಮ್‌ನಲ್ಲಿ ಸಾತ್ವಿಕ್-ಚಿರಾಗ್ ಆರಂಭದಲ್ಲೇ 1-4 ಹಿನ್ನಡೆ ಅನುಭವಿಸಿದರು. ಕೆಲ ಹೊತ್ತಿಗೆ ಅಂತರ ಕಡಿಮೆ ಮಾಡಿದರೂ, ಕಾರ್ನಾಂಡೋ ಮತ್ತು ಮಾರ್ತಿನ್ 13-8 ಮುನ್ನಡೆ ಸಾಧಿಸಿ ಪಂದ್ಯವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡರು. ಭಾರತೀಯ ಜೋಡಿ ಸರ್ವಿಸ್ ವೇಳೆ ತಪ್ಪುಗಳನ್ನು ಮಾಡಿದ್ದು ಹಾಗೂ ಅನಗತ್ಯ ದೋಷಗಳಿಂದ ಮೊದಲ ಗೇಮ್ 21-12 ಅಂತರದಲ್ಲಿ ಕೈತಪ್ಪಿತು.

ಸೆಟ್ 2: ಎರಡನೇ ಗೇಮ್ ಮಾತ್ರ ತೀವ್ರ ಪೈಪೋಟಿಯಿಂದ ಕೂಡಿತ್ತು. ಎರಡೂ ಜೋಡಿಗಳು ಭರ್ಜರಿ ಸ್ಮ್ಯಾಷ್‌ಗಳು ಮತ್ತು ವೇಗದ ನೆಟ್ ರ್‍ಯಾಲಿಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದವು. ಸಾತ್ವಿಕ್-ಚಿರಾಗ್ ಕೆಲ ಹಂತಗಳಲ್ಲಿ ಮುನ್ನಡೆ ಪಡೆದರೂ, ಇಂಡೋನೇಷ್ಯಾ ಜೋಡಿ ಚತುರ ಸರ್ವಿಸ್ ಮತ್ತು ಬಲಿಷ್ಠ ಸ್ಮ್ಯಾಶ್‌ಗಳ ಮೂಲಕ ಮರುಹೋರಾಟ ನಡೆಸಿತು. 19-19 ಸಮಬಲದ ವೇಳೆ ಇಂಡೋನೇಷ್ಯಾ ಜೋಡಿಗೆ ಮೊದಲ ಪಂದ್ಯ ಪಾಯಿಂಟ್ ಸಿಕ್ಕಿತು. ಭಾರತೀಯರು ನಾಲ್ಕು ಪಂದ್ಯ ಪಾಯಿಂಟ್ ಉಳಿಸಿಕೊಂಡರೂ, ಕೊನೆಯಲ್ಲಿ ಮಾರ್ತಿನ್ ಬಾರಿಸಿದ ನಿರ್ಣಾಯಕ ಸ್ಮ್ಯಾಷ್ ಪಂದ್ಯಕ್ಕೆ ತೆರೆ ಎಳೆದಿತು. ಈ ಸೋಲಿನೊಂದಿಗೆ ಸಾತ್ವಿಕ್-ಚಿರಾಗ್ ಅವರ ಬಿ.ಡಬ್ಲ್ಯು.ಎಫ್ ವರ್ಲ್ಡ್ ಟೂರ್ ಪ್ರಶಸ್ತಿಗಾಗಿ ಎರಡು ವರ್ಷಗಳ ನಿರೀಕ್ಷೆ ಮುಂದುವರಿದಿದೆ. ಕಳೆದ ವರ್ಷ ಚೈನಾ ಮಾಸ್ಟರ್ಸ್ ಮತ್ತು ಹಾಂಗ್ ಕಾಂಗ್ ಓಪನ್‌ಗಳಲ್ಲೂ ಅವರು ರನ್ನರ್-ಅಪ್ ಆಗಿದ್ದರು.

ದಿಲ್ಲಿ ಕ್ಯಾಪಿಟಲ್ಸ್‌ಗೆ ಸ್ಪರ್ಧಾತ್ಮಕ ಗುರಿ

ಹೊಸದಿಲ್ಲಿ: ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ ಮತ್ತು ಧ್ರುವ್ ಜುರೇಲ್ ಅವರ ಭರ್ಜರಿ ಬ್ಯಾಟಿಂಗ್ ಪ್ರದರ್ಶನದಿಂದಾಗಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ರಾಜಸ್ಥಾನ ದೊಡ್ಡ ಸ್ಕೋರ್ ನಿರ್ಮಿಸಿತು.

ಗೆಲ್ಲಲೇಬೇಕಾದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆರ್ ಆರ್ ಆರಂಭದಲ್ಲಿ ವೈಭವ್ ನಂತರ ರಿಯಾನ್ ಆಸರೆ ಪಡೆಯಿತು. ಆದಾಗ್ಯೂ ಲುಂಗಿ(24/2), ಸ್ಟಾರ್ಕ್(40/4) ಅವರ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಕಡಿವಾಣ ಹಾಕಿದ ದಿಲ್ಲಿ ನಿರೀಕ್ಷಿತ ದೊಡ್ಡ ಸ್ಕೋರ್ ಬಿಟ್ಟುಕೊಡಲಿಲ್ಲ.

ಅಂತಿಮವರೆಗೂ ತಾಳ್ಮೆ ಪ್ರದರ್ಶಿಸಿದ ಧ್ರುವ್ 190ರ ಗಡಿ ದಾಟಿಸಿದ ನಂತರ ರಾಜಸ್ಥಾನ 20 ಓವರ್‌ಗಳಲ್ಲಿ 193 ರನ್‌ಗಳಿಸಿತು. ದಿಲ್ಲಿ 8 ವಿಕೆಟ್ ಪಡೆದುಕೊಂಡಿತು.

ವೈಭವ್-ರಿಯಾನ್ ಅಬ್ಬರ: ಟಾಸ್ ಗೆದ್ದ ದಿಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ಆಹ್ವಾನ ಕೊಟ್ಟಿತು.

ಯಥಾಪ್ರಕಾರ ಆರಂಭಿಕ ಬ್ಯಾಟರ್ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ 12 ರನ್ ಗಳಿಸಿದ ಜೈಸ್ವಾಲ್ ವಿಕೆಟ್ ಒಪ್ಪಿಸಿದರು.

ಮೂರನೇ ಕ್ರಮಾಂಕದಲ್ಲಿ ಬಂದ ಜುರೇಲ್ ಸ್ಟ್ರೈಕ್ ಕೊಡುವ ಜವಾಬ್ದಾರಿಗೆ ಬಿದ್ದರೆ, ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಪವರ್‌ಪ್ಲೇನಲ್ಲಿ ರಾಜಸ್ಥಾನ 75 ರನ್‌ಗಳಿಸಿ 1 ವಿಕೆಟ್ ಕಳೆದುಕೊಂಡಿತು.

ವೈಭವ್ ಆಟ 5 ಬೌಂಡರಿ 3 ಸಿಕ್ಸರ್ ನಂತರ 46 ರನ್‌ಗೆ ನಿಂತಿತು. ನಾಲ್ಕನೇ ಕ್ರಮಾಂಕದಲ್ಲಿ ಬಂದ ನಾಯಕ ರಿಯಾನ್ ಪರಾಗ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಜುರೇಲ್ ಹಾಗೂ ರಿಯಾನ್ ಇನ್ನಿಂಗ್ಸ್ ಕಟ್ಟಿದರು.

5 ಭರ್ಜರಿ ಸಿಕ್ಸರ್ ಬಾರಿಸಿದ ರಿಯಾನ್ 25 ಬಾಲ್‌ಗಳಲ್ಲಿ 50 ರನ್ ಬಾರಿಸಿ ಮುಂದಿನ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಬಳಿಕ ದಿಢೀರ್ ಕುಸಿತ ಕಂಡ ಆರ್‌ಆರ್ ಫೆರೀರಾ 0, ರವಿ 4, ಶುಭಂ 5 ವಿಕೆಟ್ ಕಳೆದುಕೊಂಡಿತು.

ಜುರೇಲ್ ಮತ್ತೊಂದು ಬದಿಯಲ್ಲಿ ನಿಂತುಕೊಂಡರು. ಮಧ್ಯಮ ಓವರ್‌ಗಳಲ್ಲಿ ಆರ್‌ಆರ್ 96 ರನ್‌ಗಳಿಸಿ ನಾಲ್ಕು ವಿಕೆಟ್ ಕಳೆದುಕೊಂಡಿತು. ಡೆತ್ ಓವರ್‌ನಲ್ಲಿ ಹೆಚ್ಚಿನ ರನ್‌ಗಳು ಬರಲೇ ಇಲ್ಲ. ಶಣಕ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಬಿಗಿ ದಾಳಿ ಸಂಘಟಿಸಿದ ಲುಂಗಿ ಕಡಿವಾಣ ಹಾಕಿದರು. ಧ್ರುವ್ 53 ರನ್‌ಗೆ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ನಲ್ಲಿ ರಾಜಸ್ಥಾನ ಕೇವಲ 22 ರನ್ ಮಾತ್ರ ಗಳಿಸಿತು.

ಗುಜರಾತ್ ಓಟಕ್ಕೆ ಕೋಲ್ಕತ್ತಾ ಬ್ರೇಕ್

ಕೋಲ್ಕತ್ತಾ: ಗುಜರಾತ್ ಟೈಟಾನ್ಸ್ ತಂಡದ ಐದು ಪಂದ್ಯಗಳ ಗೆಲುವಿನೋಟಕ್ಕೆ ಬ್ರೇಕ್ ಹಾಕಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಐಪಿಎಲ್ ಪಂದ್ಯಾವಳಿಯಲ್ಲಿ ತನ್ನ ಸ್ಪರ್ಧೆ ಇನ್ನಷ್ಟು ಪ್ರಬಲಗೊಳಿಸಿದ್ದು, ಪ್ಲೇಆಫ್ ಫೈಟ್‌ಗೆ ಇನ್ನಷ್ಟು ಟ್ವಿಸ್ಟ್ ಕೊಟ್ಟಿದೆ. ಆಲೆನ್-ರಘು ಅವರ ಬ್ಯಾಟಿಂಗ್ ಮತ್ತು ತಂಡದ ಸಾಂಘಿಕ ಬೌಲಿಂಗ್ ಬಲದೊಂದಿಗೆ 29 ರನ್‌ಗಳಿಂದ ಗೆದ್ದಿರುವ ರಹಾನೆ ಪಡೆ ರೇಸ್‌ನಲ್ಲಿ ಉಳಿದಿದೆ.

ಶನಿವಾರದ ಪಂದ್ಯದಲ್ಲಿ ಕೆಕೆಆರ್ ಎರಡನೇ ಸ್ಥಾನದಲ್ಲಿರುವ ಗುಜರಾತ್ ತಂಡವನ್ನು ಎದುರಿಸಿತ್ತು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಫಿನ್ ಆಲೆನ್(93), ಅಂಗ್ರಿಶ್ ರಘುವಂಶಿ(82*) ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 247 ರನ್ ಗಳಿಸಿತು. ಗುಜರಾತ್ ಪರ ಸಾಯಿ ಮತ್ತು ಸಿರಾಜ್ ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 218 ರನ್ ಗಳಿಸಿತು. ನಾಯಕ ಶುಭಮನ್ ಗಿಲ್ 85, ಬಟ್ಲರ್ 57 ಮತ್ತು ಸಾಯಿ ಸುದರ್ಶನ್ 53* ರನ್ ಗಳಿಸಿದರು. ಕೆಕೆಆರ್ ಪರ ನರೈನ್ 2, ಗ್ರೀನ್ ಮತ್ತು ಸೌರಭ್ ತಲಾ ಒಂದು ವಿಕೆಟ್ ಪಡೆದುಕೊಂಡರು.



ರನ್ ಮಟ್ಟ: ಪವರ್‌ಪ್ಲೇನಲ್ಲಿ ಕೆಕೆಆರ್ 56 ರನ್ ಮಾತ್ರ ಗಳಿಸಿತು. ಅತ್ತ ಗುಜರಾತ್ ಗಿಲ್ ಮತ್ತು ಸುದರ್ಶನ್ ಅವರ ಬ್ಯಾಟಿಂಗ್‌ನೊಂದಿಗೆ 56 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಆಲೆನ್ ಮತ್ತು ರಘು ಅಬ್ಬರಿಸಿದ ನಂತರ ಕೆಕೆಆರ್ 136 ರನ್‌ಗಳಿಸಿತು. ಅಲ್ಲೇ ಸ್ಕೋರ್ ಹಿಗ್ಗಿಸಿಕೊಂಡ ಕೆಕೆಆರ್ ಉತ್ತಮ ಸ್ಥಿತಿಯಲ್ಲಿ ಕಾಣಿಸಿಕೊಂಡಿತು. ಆಲೆನ್ 93ಕ್ಕೆ ವಿಕೆಟ್ ಒಪ್ಪಿಸಿದ ನಂತರ ಗ್ರೀನ್ ಉತ್ತಮ ಬ್ಯಾಟಿಂಗ್ ಮಾಡಿದರು. ಇತ್ತ ಗುಜರಾತ್ ಪರ ಮಧ್ಯಮ ಓವರ್‌ಗಳಲ್ಲಿ ಗಿಲ್ ಮತ್ತು ಜಾಸ್ ಬಟ್ಲರ್ ಆಸರೆಯಾದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಹೋಪ್ ಉಳಿಸಿದ ಗಿಲ್ ಮತ್ತು ಬಟ್ಲರ್ ಅರ್ಧಶತಕಗಳನ್ನೂ ಬಾರಿಸಿದರು. ಗಿಲ್ 49 ಬಾಲ್‌ಗಳಲ್ಲಿ 85 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ಗಳಲ್ಲಿ ಅಂಗ್ರಿಶ್ ರಘುವಂಶಿ ಮತ್ತು ಗ್ರೀನ್ ಸ್ಫೋಟಕ ಬ್ಯಾಟಿಂಗ್ ಮಾಡಿದ ಪರಿಣಾಮ ಕೆಕೆಆರ್ 55 ರನ್ ಗಳಿಸಿತು. ಅತ್ತ ಗುಜರಾತ್ ಬಟ್ಲರ್ ಮತ್ತು ಗಾಯದಿಂದ ಹೋಗಿ ಮರಳಿ ಬಂದ ಸುದರ್ಶನ್ ಅವರ ಅರ್ಧಶತಕಗಳ ನೆರವಿನಿಂದ 41 ರನ್ ಗಳಿಸಿದರೂ ಪಂದ್ಯವನ್ನು ಗೆಲ್ಲಲಾಗಲಿಲ್ಲ.


ಸಂಕ್ಷಿಪ್ತ ಸ್ಕೋರ್

ಕೆಕೆಆರ್ 20 ಓವರ್‌ಗಳಲ್ಲಿ 247/2: ಫಿನ್ 93, ರಘುವಂಶಿ 82; ಕಿಶೋರ್ 38/1

ಗುಜರಾತ್ 20 ಓವರ್‌ಗಳಲ್ಲಿ 218/4: ಗಿಲ್ 85, ಬಟ್ಲರ್ 57*; ನರೈನ್ 29/2

ಪದಬಂಧ

ರಾಜಾ ಸಂಗಮೇಶ ಹಿರೇಮಠ



5987

ಎಡದಿಂದ ಬಲಕ್ಕೆ
1.ಒಂದು ನಾಡಿನ ಕಾನೂನುಬದ್ಧ ಪ್ರಜೆ (4)
3.ಕೈಯಲ್ಲಿ ತಂತಿವಾದ್ಯ ಹಿಡಿದವಳು-ಶಾರದೆ (4)
5.ಶತ್ರುಗಳ ನಡುವಿನ ಹೋರಾಟ (3)
6.ವಸು ಒಳಗೊಂಡ ಆವರಿಸು-ಅಕ್ರಮಿಸುವಿಕೆ (4)
8.ಭಾರತದ ಮಗಳು ಇಲ್ಲಿ ತಿರುಗಿ ಕುಳಿತಿದ್ದಾಳೆ (4)
10.ದರಿಯ ನಡುವೆ ಮುಳ್ಳಿನ ಗಿಡವಿದೆ (3)
11.ಇದು ಮನುಷ್ಯ ನಿರ್ಮಿಸಿದ ಕೆರೆ (3)
13.ನಾಲ್ಕು ಸೇರುಗಳ ಒಟ್ಟು ಅಳತೆಯಿದು (3)
15.ತೆಗೆದುಹಾಕು-ವಜಾಗೊಳಿಸುವಿಕೆ (4)
16.ಈತ ಅರಸನ ಉತ್ತರಾಧಿಕಾರಿ (4)

ಮೇಲಿನಿಂದ ಕೆಳಕ್ಕೆ
1.ಹಳ್ಳಿಯ ಮುಖ್ಯಸ್ಥ-ಪಟೇಲ (4)
2.ಎಲ್ಲವನ್ನೂ ನುಂಗಿಹಾಕು (4)
3.ಕಲಿತನದ ಕುರಿತ ಹಾಡು (4)
4.ದಾಹ ತಣಿಸಿದ ನದಿ ತಲೆಕೆಳಗಾಗಿದೆ (4)
7.ಕೆಟ್ಟ ಉಪಕರಣ ಸರಿಮಾಡುವುದು (3)
9.ಚಾತದ ನಡುವೆ ಎಚ್ಚರಗೊಂಡವನಿದ್ದಾನೆ (3)
10.ದರ ಕೇಳದೆ ಕಾರಣದೆಡೆಗೆ ಹರಿಸಿದ ಲಕ್ಷ್ಯ (4)
12.ವಾನರನ ಲಾಂಛನವುಳ್ಳ ಬಾವುಟವುಳ್ಳವನು-ಅರ್ಜುನ (4)
13.ಇದು ಒಣಗಿದ ಮರದ ತುಂಡು (3)
14.ಕಳೆದ ಆಯಸ್ಸು-ಮುಪ್ಪಾದುದು (3)

5986 ಉತ್ತರ

ಎಡದಿಂದ ಬಲಕ್ಕೆ:
1.ಆತ್ಮಚರಿತ್ರೆ 4.ದಾವರ
5.ಪಕೋಡ 6.ಹಯ
8.ಕಂಬಿಕೀಳು
10.ಕರಡಿಗೆ 12.ತರ
14.ಬಿದಿರು 15.ಪಟಾಕಿ
16.ಬಿಚ್ಚುಮನಸ್ಸು

ಮೇಲಿನಿಂದ ಕೆಳಕ್ಕೆ:
1.ಆದಾಯ 2.ಬಿಲ್ವಪತ್ರೆ
3.ಬೇಡ 4.ರಣದವಕ
7.ಹಲಬಗೆ 8.ಕಂದಹಾರ
9.ಕಿರುಬೆರಳು
11.ಬಿರುನುಡಿ 13.ತಪಸ್ಸು
14.ಬಿಕೋ

ಕಿರುಸುದ್ದಿ

ಪ್ರತಿಬಂಧಕಾಜ್ಞೆ ಜಾರಿ

◆**ಗದಗ:** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಎಸ್ಎಸ್ಎಲ್‌ಸಿ ಪರೀಕ್ಷೆಗಳು-2 ಪರೀಕ್ಷೆಗಳನ್ನು ಮೇ 18 ರಿಂದ ಮೇ 23 ರವರೆಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1.45ರವರೆಗೆ ನಡೆಸಲಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 7 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ. ಮೇ 18 ರಿಂದ 23 ರವರೆಗೆ ಬೆಳಗ್ಗೆ 9.30 ರಿಂದ ಮಧ್ಯಾಹ್ನ 2.30ರವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚುಜನರು ಗುಂಪು ಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಬುಕ್ ಸ್ಟಾಲ್ , ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಜಾನಪದ ಉತ್ಸವ

◆**ಗದಗ:** ತಾಲೂಕಿನ ಲಕ್ಕುಂಡಿಯ ನುಲಿಚಂದಯ್ಯ ಜಾನಪದ ಕಲಾ ಮೇಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ಮಾರುತಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮೇ 18 ರಂದು ಸಂಜೆ 5ಕ್ಕೆ ಜಾನಪದ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹರ್ಲಾಪೂರ ಕೊಟ್ಟೂರೇಶ್ವರ ಮಠದ ಡಾ.ಕೊಟ್ಟೂರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಸಿ.ಸಿ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಚನ್ನಬಸಪ್ಪ ಭಜಂತ್ರಿ ಅಧ್ಯಕ್ಷತೆ ವಹಿಸುವರು. ಶಂಕ್ರಯ್ಯ ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ, ತಾಪಂ ಮಾಜಿ ಸದಸ್ಯ ಮಹೇಶ ಮುಸ್ಕಿನಭಾವಿ, ಬಿಜೆಪಿ ಲಕ್ಕುಂಡಿ ಮಂಡಲದ ಅಧ್ಯಕ್ಷ ಪ್ರಕಾಶ ಅರಹುಣಶಿ, ಬಸವರಾಜ ಮುಳ್ಳಾಳ, ಶಿವಪ್ಪ ಬಳಿಗೇರ, ಲಕ್ಷ್ಮಣ ಗುಡಸಲಮನಿ, ಮಹಾಂತೇಶ ಗುರಿಕಾರ, ಕುಬೆರಪ್ಪ ಬಡಿಗೇರ, ಸಿದ್ದಣ್ಣ ಮಂಗಳೂರು, ಶಶಿಕಲಾ ದೇಶಿಹಳ್ಳಿ, ಚನ್ನಬಸಪ್ಪ ಹಡಗಲಿ, ವಿನಾಯಕ ಡಿಗ್ಗಾವಿ ಉಪಸ್ಥಿತರಿರುವರು. ನೂತನ ಪಿಎಸ್‌ಐ ಆಗಿ ನೇಮಕಗೊಂಡ ಗ್ರಾಮದ ಅಂದಪ್ಪ ಬಳಿಗೇರ, ಪಿಕೆಪಿಎಸ್ ಅಧ್ಯಕ್ಷ ದೇವಪ್ಪ ಖಂಡು, ಕುಶ ಕವಲೂರು ಅವರನ್ನು ಸನ್ಮಾನಿಸಲಾಗುವುದು. ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸುವ 15ಕ್ಕೂ ಹೆಚ್ಚು ತಂಡಗಳು ಭಕ್ತಿ ಸಂಗೀತ, ದೀಪ ನೃತ್ಯ, ಸುಗಮ ಸಂಗೀತ, ಡೊಳ್ಳಿನ ಪದ, ಕೋಲಾಟ, ಜೂಗುತಿ ನೃತ್ಯ, ಮಲ್ಲಕಂಬ, ಗೀ ಗೀ ಪದ, ಹಾಸ್ಯ ಸಂಜೆ ಸೇರಿದಂತೆ ವಿವಿಧ ಜಾನಪದ ಕಾರ್ಯಕ್ರಮಗಳು ನಡೆಯುವವು ಎಂದು ನುಲಿ ಚಂದಯ್ಯ ಜಾನಪದ ಕಲಾ ಮೇಳದ ಅಧ್ಯಕ್ಷ ಶಿವಪ್ಪ ಭಜಂತ್ರಿ ತಿಳಿಸಿದ್ದಾರೆ.

ಸಮಾವೇಶ ಇಂದು

◆**ಗದಗ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಪದವಿ ಮಹಾವಿದ್ಯಾಲಯದ ಸಹಯೋಗದಲ್ಲಿ ಯುವ ಸಾಹಿತ್ಯ ಸಮಾವೇಶ ಮೇ 18ರಂದು ಎಎಸ್ಎಸ್ ವಾಣಿಜ್ಯ ಮಹಾವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 9.30ಕ್ಕೆ ಗಾಂಧಿನಗರ ಕ್ರೀಡಾಂಗಣದಿಂದ ಕಾಲೇಜಿನ ವರೆಗೆ ತಾಯಿ ಭುವನೇಶ್ವರಿ ಭಾವಚಿತ್ರದ ಮೆರವಣಿಗೆಹಾಗೂ ಸಾಮರಸ್ಯ ನಡಿಗೆ ಜರುಲಿದೆ. ಮೆರವಣಿಗೆ ಕೆ.ವಿ. ಕುಷ್ಟಗಿ ಚಾಲನೆ ನೀಡುವರು. ಸುರೇಶ ಕಟ್ಟಿಮನಿ, ಡಾ.ಬಸವರಾಜ ಬಳ್ಳಾರಿ, ಪಿ. ಆರ್. ಅಡವಿ, ಗಣೇಶಸಿಂಗ ಬ್ಯಾಳಿ, ಅನಿಲ ತೆಂಬದಮನಿ, ಶಂಕರಣ್ಣ ಸಂಕಣ್ಣವರ, ಅಶೋಕ ಸುತಾರ ಪಾಲ್ಗೊಳ್ಳುವರು. ಬೆಳಗ್ಗೆ 10.30ಕ್ಕೆ ಸಮಾವೇಶ ಸ್ವಾಮಿ ಶಿವಪ್ರಿಯಾನಂದಜಿ ಮಹಾರಾಜ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆ ಆನಂದ ಪೋತ್ನಿಸ್ ವಹಿಸುವರು. ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಕಿರಣ ಭೂಮಾ, ರಾಜು ಗುಡಿಮನಿ, ಡಾ.ವಿ.ಟಿ.ನಾಯ್ಕರ ಭಾಗವಹಿಸುವರು. ಮಧ್ಯಾಹ್ನ 12ಕ್ಕೆ ಜರುಗುವ ಸಮಾನಾಂತರ ಗೋಷ್ಠಿ-1 ಕಲೆ, ಮಾಧ್ಯಮ, ಚಲನಚಿತ್ರ ಗೋಷ್ಠಿಯಲ್ಲಿ ಮೌನೇಶ ಬಡಿಗೇರ ಆಶಯ ನುಡಿಗಳನ್ನಾಡುವರು. ಡಾ.ಬಿ.ಎಲ್. ಚವ್ಹಾಣ ಅಧ್ಯಕ್ಷತೆ ವಹಿಸುವರು. ವಿ.ವಿ. ಗೊಟಗೋಡಿ ಮಾತನಾಡುವರು. ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜು ಹೆಬ್ಬಳ್ಳಿ, ಡಾ.ಸಿ.ವಿ. ಬಡಿಗೇರ, ಕೆ.ಎಂ. ಕೃಷ್ಣಾ, ಎಸ್. ಬಿ. ಜಾಧವ ಭಾಗವಹಿಸುವರು. ಸಮಾವೇಶದ ಅಂಗವಾಗಿ ಜೆ.ಎನ್. ಕಲಾ ಕಾಲೇಜು ಹಾಗೂ ವಿಜಯ ಚಿತ್ರಕಲಾ ಮಹಾವಿದ್ಯಾಲಯದಿಂದ ಚಿತ್ರಕಲಾ ಪ್ರದರ್ಶನ ನಡೆಯಲಿದೆ. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಪ್ರದರ್ಶನ ಜರುಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದಗ: ನಗರದ ಪಂ. ಭೀಮಸೇನ್ ಜೋಶಿ ರಂಗಮಂದಿರದಲ್ಲಿ ನಟರಂಗ ಕಲ್ಚರಲ್ ಅಕಾಡೆಮಿ ಮತ್ತು ಟ್ರಸ್ಟ್ ನಿಂದ ನಡೆದ ಮಕ್ಕಳ ಕಲರವ-2026 ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ. ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಕೃಷ್ಣಗೌಡ ಪಾಟೀಲ, ಪ್ರೀತಿ ಹೊನಗುಡಿ, ಅಡ್ನೂರು-ರಾಜೂರ-ಗದಗ ಬೃಹನ್ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ನಂದಾ ಹಣಬರಹಟ್ಟಿ, ರಂಗಕರ್ಮಿ ಮಹಾಂತೇಶ ಗಜೇಂದ್ರಗಡ, ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟರ್, ನಟರಂಗ ಅಕಾಡೆಮಿಯ ಅಧ್ಯಕ್ಷ ಸೋಮಶೇಖರ ಚಿಕ್ಕಮಠ ಇತರರಿದ್ದರು.

ಯೂರಿಯಾ ಬಳಕೆ ಮಿತವಾಗಿರಲಿ: ಕುಲಕರ್ಣಿ

◆**ನರಗುಂದ:** ಅತಿಯಾದ ಯೂರಿಯಾ ರಸಗೊಬ್ಬರದ ಬಳಕೆ ಯಾವುದಕ್ಕೂ ಆರೋಗ್ಯಕರವಲ್ಲ, ಯೂರಿಯಾ ಮಿತ ಬಳಕೆಯಲ್ಲಿರಲಿ. ಅತಿಯಾದ ಯೂರಿಯಾ ಬಳಕೆಯಿಂದ ಭೂಮಿ ಫಲವತ್ತತೆ ಹಾಳಾಗಲಿದೆ. ಹೀಗಾಗಿ ರಾಸಾಯನಿಕ ರಸಗೊಬ್ಬರದ ಬಳಕೆ ಮಿತವಾಗಿರಲೆಂದು ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಕುಲಕರ್ಣಿ ಹೇಳಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ 2026-27 ನೇ ಸಾಲಿನ ಆತ್ಮ ಯೋಜನೆಯ ಅಡಿಯಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ರೈತರ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದರು. ಪ್ರಗತಿಪರ ಕೃಷಿಕ ದುಂಡಯ್ಯ ಹಿರೇಮಠ ಮಾತನಾಡಿ, ಯುವಕರನ್ನು ಕೃಷಿಯತ್ತ ಸೆಳೆಯುವುದು ಇಂದಿನ ಅತಿಮುಖ್ಯ ಕಾರ್ಯವಾಗಿದೆ. ಈ ದಿಸೆಯಲ್ಲಿ ಆತ್ಮ ಯೋಜನೆಯಡಿ ಯುವ ಕೃಷಿಕರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು. ಕೃಷಿಕ ನಾಗನಗೌಡ ಕಗದಾಳ ಮಾತನಾಡಿ, ರೈತರು ಸಾವಯವ ಕೃಷಿಯನ್ನು ಅನುಸರಿಸುವುದು ಅವಶ್ಯಕವಾಗಿದೆ. ಈ ದಿಸೆಯಲ್ಲಿ ಇಲಾಖೆಯ ಸಹಯೋಗದಲ್ಲಿ ಸಾವಯವ ಗೊಬ್ಬರಗಳ ತಯಾರಿಕೆ ಮತ್ತು ಅವುಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳ ಬಗ್ಗೆ ತಾಂತ್ರಿಕ ಮಾಹಿತಿಯನ್ನು ಒದಗಿಸಲು ವಿನಂತಿಸಿದರು. ಸಂಕದಾಳ ಗ್ರಾಮದ ರೈತ ರುದ್ರಗೌಡ ಲಿಂಗನಗೌಡ್ರ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಬೇಕು. ಈ ದಿಸೆಯಲ್ಲಿ ಗೋ ಆಧಾರಿತ ಕೃಷಿಯನ್ನು ಅನುಸರಿಸಿ ಎಂದರು. ವೆಂಕಟೇಶ ಗುಡಿಸಾಗರ ಮಾತನಾಡಿ, ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ತಾಲೂಕಿನಲ್ಲಿ ಅಗತ್ಯಕ್ಕೆ ಅನುಗುಣವಾಗಿ ಯೂರಿಯಾ ರಸಗೊಬ್ಬರವನ್ನು ಬಳಸಬೇಕು ಮತ್ತು ಇದರ ಜೊತೆಗೆ ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಬಳಕೆ ಮಾಡಬೇಕೆಂದರು.



ನರಗುಂದ: ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ 2026-27 ನೇ ಸಾಲಿನ ಆತ್ಮ ಯೋಜನೆಯ ಅಡಿಯಲ್ಲಿ ತಾಲೂಕು ಮಟ್ಟದ ರೈತರ ಸಲಹಾ ಸಮಿತಿ ಸಭೆ ನಡೆಯಿತು. ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಶಿವಾಜಿ ಸಾಠೆ, ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕಾ ಅಧಿಕಾರಿ ತೇಜಸ್ವಿನಿ ಸಿರಿಯಪ್ಪಗೌಡ್ರ, ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ, ಬಸಪ್ಪ ಭಜಂತ್ರಿ, ಮಲ್ಲಿಕಾರ್ಜುನಗೌಡ ಪಾಟೀಲ ಮತ್ತು ಕಲ್ಮೇಶ್ ಬನ್ನಪ್ಪನವರ ಮಾತನಾಡಿದರು. ತಾಲೂಕು ಮಟ್ಟದ ರೈತರ ಸಲಹಾ ಸಮಿತಿಯ ಸದಸ್ಯರುಗಳಾದ ಮಲ್ಲಿಕಾರ್ಜುನ ಪಾಟೀಲ, ವೀರಣ್ಣ ಹಡಗಲಿ, ಪ್ರವೀಣ ಶಿವನಗೌಡರ, ಸತೀಶ್ ಪಾಟೀಲ, ಶಿವಾನಂದ ಸಣಕಲ್ ಹಾಗೂ ರೈತರು ಇದ್ದರು.

ಚರಂಡಿಯಾದ ರಸ್ತೆಗಳು | ಸೊಳ್ಳೆಗಳದ್ದೇ ಸಾಮ್ರಾಜ್ಯ | ದುರ್ವಾಸನೆ

ಸೌಲಭ್ಯ ವಂಚಿತ ಪುರ್ತಗೇರಿ ಗ್ರಾಮ



▸ ಪುರ್ತಗೇರಿಗ್ರಾಮದ ಬಹುತೇಕ ಕಡೆ ಚರಂಡಿ ವ್ಯವಸ್ಥೆಯಿಲ್ಲದೆ ರಸ್ತೆ ಮೇಲೆ ಕೊಳಚೆ ನೀರು ನಿಂತು ಸಾಂಕ್ರಾಮಿಕ ಕಾಯಿಲೆಗಳ ತಾಣವಾಗಿ ಮಾರ್ಪಟ್ಟಿದೆ

▸ ಮನವಿಗೂ ಸ್ಪಂದಿಸದ ಗ್ರಾಪಂ ಎನ್ನುವ ಗ್ರಾಮಸ್ಥರು

▸ **ಸೀತಲ ಓಲೇಕಾರ**

◆**ಗಜೇಂದ್ರಗಡ:** ಹಳ್ಳಿಗಳು ಅಭಿವೃದ್ಧಿಯಾದರೆ, ರಾಷ್ಟ್ರವೂ ಅಭಿವೃದ್ಧಿಗೊಂಡಂತೆ. ಆದರೆ ನೂರಾರು ಹಳ್ಳಿಗಳು ಇಂದಿಗೂ ಮೂಲ ಸೌಲಭ್ಯಗಳಿಂದ ವಂಚಿತಗೊಂಡು ನರಳುತ್ತಿರುವುದು ಸಾಮಾನ್ಯವಾಗಿದೆ ಎಂಬುದಕ್ಕೆ ಈ ಗ್ರಾಮ ಸಾಕ್ಷಿಯಾಗಿದೆ ಎಂದು ಪುರ್ತಗೇರಿ ಗ್ರಾಮಸ್ಥರು ಅಸಮಾಧಾನಗೊಂಡಿದ್ದಾರೆ.

ಗಜೇಂದ್ರಗಡದಿಂದ ಕೂಗಳತೆಯ ಅಂತರದಲ್ಲಿರುವ ಈ ಗ್ರಾಮಕ್ಕೆ ಈ ವರೆಗೂ ಸರ್ಕಾರಿ ಬಸ್‌ಗಳ ಸಂಚಾರವಿಲ್ಲ, ಆಗೊಮ್ಮೆ ಈಗೊಮ್ಮೆ ಓಡಾಡುವ ಖಾಸಗಿ ಬಸ್‌ಗಳನ್ನೇ ಜನ ಆಶ್ರಯಿಸಿದ್ದಾರೆ. ಅವು ಸಿಗದಿದ್ದರೆ ಕಾಲ್ನಡಗೆಯೇ ಗತಿ ಎಂದು ಅಲ್ಲಿನ ಜನ ಹೇಳುತ್ತಿದ್ದಾರೆ.

ರಸ್ತೆಗಳು ಚರಂಡಿಯಂತಾಗಿದ್ದು, ಸೊಳ್ಳೆಗಳದ್ದೇ ಸಾಮ್ರಾಜ್ಯವೆನ್ನುವಷ್ಟು ಸೊಳ್ಳೆಗಳು ಬರುತ್ತದೆ. ಅಲ್ಲದೇ ಇಲ್ಲಿ ದುರ್ವಾಸನೆಯೂ ಮಿತಿ ಮೀರಿದ್ದು, ಓಡಾಟವು ಕಷ್ಟಕರವಾಗಿದೆ ಎನ್ನುತ್ತಿದ್ದಾರೆ ಗ್ರಾಮಸ್ಥರು.

> ಪುರ್ತಗೇರಿಯಲ್ಲಿ ರಸ್ತೆ ಮೇಲೆ ನೀರು ನಿಂತಿದ್ದರ ಮಾಹಿತಿ ಪಡೆದು 1-2 ದಿನಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು. ಪಂಚಾಯತಿ ಸಿಬ್ಬಂದಿಗೂ ಗ್ರಾಮದಲ್ಲಿ ಮೂಲಸೌಕರ್ಯ ಒದಗಿಸುವೆ.
> ■ **ಚಂದ್ರಶೇಖರ ಕಂದಕೂರ,** ಕಾರ್ಯನಿರ್ವಾಹಕ ಅಧಿಕಾರಿ, ತಾಪಂ, ಗಜೇಂದ್ರಗಡ

> ಪುರ್ತಗೇರಿ ಗ್ರಾಮದಲ್ಲಿ 15 ದಿನಗಳ ಹಿಂದೆಯೇ ಸ್ವಚ್ಛತೆ ಮಾಡಲಾಗಿದೆ. ಆದರೆ ರಸ್ತೆಯ ಮೇಲಿನ ನೀರು ನಿಂತಿದ್ದು ಮುಂದಿನ 3-4 ದಿನಗಳಲ್ಲಿ ಸ್ವಚ್ಛತೆಗೊಳಿಸಲಾಗುವುದು. ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.
> ■ **ಬಸಯ್ಯ ಇಟಗಿಮಠ,** ರಾಂಪೂರು ಗ್ರಾಪಂ ಅಭಿವೃದ್ಧಿ ಅಧಿಕಾರಿ

ಗ್ರಾಮದಲ್ಲಿ ಅಭಿವೃದ್ಧಿಯಾಗಲಿ

ಸುವರ್ಣಗ್ರಾಮ ಯೋಜನೆಯಡಿ ಗ್ರಾಮಕ್ಕೆ ಅಗತ್ಯ ರಸ್ತೆ, ಚರಂಡಿ, ಮಹಿಳಾ ಶೌಚಾಲಯ, ಮುಂತಾದ ಮೂಲ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರ ಹಣ ವ್ಯಯಮಾಡುತ್ತಿದೆ. ಆದರೆ ಯಾವುದೇ ಸರ್ಕಾರಿ ಯೋಜನೆ ಪುರ್ತಗೇರಿಯಲ್ಲಿ ಸಮರ್ಪಕ ಜಾರಿಗೊಂಡಿಲ್ಲ. ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯ ಅವಶ್ಯ ಎಂದು ಕ್ರಾಂತಿಸೂರ್ಯ ಜೈ ಭೀಮ ಸೇನೆ ರಾಜ್ಯಾಧ್ಯಕ್ಷ ಮಂಜುನಾಥ ಎಸ್. ರಾಠೋಡ ಆಗ್ರಹಿಸಿದ್ದಾರೆ.

ಗ್ರಾ.ಪಂ ನಿರ್ಲಕ್ಷ್ಯ

ರಾಮಾಪೂರ ಗ್ರಾಮ ಪಂಚಾಯಿತಿಗೆ ಸೇರಿದ ಪುರ್ತಗೇರಿಗೆ ಮೂಲ ಸೌಲಭ್ಯಗಳಿಲ್ಲ, ವ್ಯವಸ್ಥಿತ ಚರಂಡಿಗಳಿಲ್ಲದೆ ಎಲ್ಲೆಂದರಲ್ಲಿ ಕೊಳಚೆ ನೀರು ನಿಲ್ಲುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತೀವ್ರ ತೊಂದರೆಯಾಗುತ್ತಿದೆ. ಕುಡಿಯುವ ನೀರಿನ ಟ್ಯಾಂಕ್ ಬಳಿಯೇ ತಿಪ್ಪೆಗುಂಡಿ, ಕಸ-ಕಂಟಿ ಬೆಳೆದು ನಿಂತಿವೆ. ಶುದ್ಧ ಕುಡಿಯುವ ನೀರಂತೂ ಇಲ್ಲಿ ಇಲ್ಲವೇ ಇಲ್ಲ, ತಗ್ಗು-ದಿನ್ನೆಯಂತಹ ರಸ್ತೆಗಳು. ಹೀಗೆ ನಾನಾ ಕಾರಣಗಳಿಂದ ಗ್ರಾಮವು ಸ್ವಚ್ಛತೆ ಕಾಣದೇ ಗ್ರಾಮದ ಜನತೆ ಪರದಾಡುತ್ತಿದ್ದಾರೆ. ಗ್ರಾಮದ ಮುಖ್ಯರಸ್ತೆಯಲ್ಲಿ ಚರಂಡಿ ನೀರು ವ್ಯಾಪಕವಾಗಿ ನಿಂತಿರುವುದರಿಂದ ಈ ರಸ್ತೆ ಮೇಲೆ ಸಂಚರಿಸುವ ಪಾದಚಾರಿಗಳು ನಿತ್ಯ ಹರಸಾಹಸಪಡುವಂತಾಗಿದೆ. ವೃದ್ಧರು, ಮಹಿಳೆಯರು, ಮಕ್ಕಳು ರಾತ್ರಿ ಈ ರಸ್ತೆಯಲ್ಲಿ ಸಂಚರಿಸುವಾಗ ಅವಘಡಗಳು ಜರುಗಿದರೂ ಗ್ರಾ.ಪಂ. ಆಡಳಿತ ನಿರ್ಲಕ್ಷ್ಯ ವಹಿಸಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ದಿಗಂತ ವಿಶೇಷ

ಶೌಚಾಲಯವಾದ ಕಚೇರಿ ಸ್ಥಳ: ಸಾರ್ವಜನಿಕರ ಆಕ್ರೋಶ

▸ **ಸಿ.ಎಸ್.ಅರಸನಾಳ**

◆**ಮುಂಡರಗಿ:** ಇಲ್ಲಿಯ ಗದಗ ರಸ್ತೆಯ ಪಕ್ಕದಲ್ಲಿರುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯ ಕಚೇರಿ ಯಾವುದೇ ಕಾರ್ಯಚಟುವಟಿಕೆ ಇಲ್ಲದೆ ಮುಳ್ಳುಕಂಟಿಗಳು ಬೆಳೆದುಮಲವಿಸರ್ಜನೆಯಸ್ಥಳವಾಗಿಮಾರ್ಪಟ್ಟಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

14 ಎಕರೆಯ ಈ ಜಾಗದಲ್ಲಿ ಇಲಾಖೆಯ ಕಚೇರಿ, ಸಿಬ್ಬಂದಿ ವಾಸಿಸಲು 14 ಕ್ವಾಟರ್ಸ್‌ಗಳು ಮತ್ತು ಸುತ್ತಲೂ ಕಂಪೌಂಡ್ ಮುಂತಾದ ಸೌಕರ್ಯಗಳನ್ನು ಹೊಂದಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿತ್ತು. ತುಂಗಭದ್ರಾ ನದಿಯಿಂದ ಬಂದ ನೀರು ಇಲ್ಲಿ ಫಿಲ್ಟರಾಗಿ ಮುಂಡರಗಿ ಪಟ್ಟಣಕ್ಕೆ ಸರಬರಾಜು ಆಗುತ್ತಿತ್ತು. ಆದರೆ ಈ ಇಲಾಖೆಯನ್ನು ಗದಗ ನಗರಕ್ಕೆ ಸ್ಥಿಫ್ಟಮಾಡಿದ್ದರಿಂದ ಇಲ್ಲಿಯ ಕಾರ್ಯ ತಕ್ಕಮಟ್ಟಿಗೆ ಕಡಿಮೆಯಾಯಿತು. ನದಿಯ ನೀರನ್ನು ಫಿಲ್ಟರಮಾಡಿ, ಪುರಸಭೆಯ ಟ್ಯಾಂಕಿಗೆ ಏರಿಸಲು ಇಬ್ಬರೂ ಸಿಬ್ಬಂದಿ ಕಾರ್ಯನಿರ್ವಹಿಸುವ ಮಟ್ಟಿಗೆ ಬಂತು. ಈಗ ಫಿಲ್ಟರ್ ನಿಂತಿರುವುದರಿಂದ ಕೇವಲ ಓರ್ವ ಸಿಬ್ಬಂದಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರಿಯಾಗಿ ಕಾಳಜಿ ಇಲ್ಲದೆ ಈಗ ಸಾರ್ವಜನಿಕರ ಬಯಲು ಶೌಚಾಲಯವಾಗಿ ಮಾರ್ಪಟ್ಟಿರುವುದು ವಿಷಾದದ ಸಂಗತಿ. ಇರುವ ವಸತಿ ಮನೆಗಳು ಬಿದ್ದು ಮತ್ತು ಜಾಲಿಕಂಟಿಗಳು ಬೆಳೆದು ಹಾಳಾಗಿವೆ. ಕಳೆದ 5-6 ವರ್ಷದಿಂದ ಈ ಪ್ರದೇಶ ಸಂಪೂರ್ಣ ಹಾಳಾಗಿದೆ. ಈ ಪ್ರದೇಶದಲ್ಲಿ ಮಾರುತಿಯ ದೇವಸ್ಥಾನವಿದ್ದು, ಜನರು ದೇವರ ದರ್ಶನಕ್ಕೆ ಬರಬೇಕಾದರೆ ಶೌಚಮಾಡುವವರ ದರ್ಶನವೇ ಮೊದಲೇ ಆಗುವಷ್ಟು ಹೀನಾಯ ಸ್ಥಿತಿ ತಲುಪಿದೆ ಎಂದು ಜನರು ಆಕ್ರೋಶಿಸುತ್ತಿದ್ದಾರೆ. ಮುಂಡರಗಿ ಪಟ್ಟಣದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಉದ್ಯಾನವನಗಳಿಲ್ಲ, ಈಗಾಗಲೇ ಕಂಪೌಂಡ್ ಹೊಂದಿರುವ ಈ ಸ್ಥಳವನ್ನು ಪುರಸಭೆಯು ತನ್ನ ಅಧೀನಕ್ಕೆ ತಗೆದುಕೊಂಡು ಇಲ್ಲೊಂದು ಉದ್ಯಾನವನ್ನು ನಿರ್ಮಿಸಬೇಕು. ಈಗಾಗಲೇ ಈ ಜಾಗದಲ್ಲಿ 50ಕ್ಕೂ ಹೆಚ್ಚು ಬೇವಿನಗಿಡ ,ಕೆಲವು ಶ್ರೀಗಂಧದ ಗಿಡ ಹಾಗೂ ಇನ್ನಿತರ ಸಣ್ಣ ಪುಟ್ಟ ಗಿಡಗಳಿವೆ. ಇವುಗಳನ್ನು ಕಾಳಜಿ ಮಾಡುತ್ತಾ ಮತ್ತಷ್ಟು ಸಸಿಗಳನ್ನು ಹಚ್ಚಿ ಬೆಳೆಸಿದರೆ ಇಲ್ಲೊಂದು ಉತ್ತಮ ಉದ್ಯಾನವನ ನಿರ್ಮಾಣವಾಗುತ್ತದೆ ಎಂಬುದು ಮುಂಡರಗಿಯ ಸಾರ್ವಜನಿಕ ಹೋರಾಟ ವೇದಿಕೆ ಸಂಚಾಲಕ ಬಸವರಾಜ ನವಲಗುಂದ ಸೇರಿದಂತೆ ಅನೇಕರ ಆಶಯ.

> ನಾನು ಈಗಷ್ಟೇ ಮುಂಡರಗಿ ಪುರಸಭೆ ಬಂದಿದ್ದೇನೆ. ಈ ಜಾಗ ಮುಂಡರಗಿ ಪುರಸಭೆಗೆ ಪಡೆದುಕೊಳ್ಳುವ ಪ್ರಕ್ರಿಯೆ ಎಲ್ಲಿಗೆ ಬಂತು ಅನ್ನುವುದನ್ನು ತಿಳಿದುಕೊಳ್ಳುವೆ. ಪುರಸಭೆ ಕಮಿಟಿ ಬಂದ ನಂತರ ಸಾಮಾನ್ಯ ಸಭೆಯಲ್ಲಿ ಸದಸ್ಯರ ಒಪ್ಪಿಗೆ ಪಡೆದು ಇಲ್ಲೊಂದು ಸುಂದರ ಉದ್ಯಾನವನ್ನು ನಿರ್ಮಿಸುವ ಯೋಜನೆ ಮಾಡಲಾಗುವುದು.
> ■ **ಶ್ರೀ ಕಟ್ಟಿಮನಿ,** ಮುಖ್ಯಾಧಿಕಾರಿ, ಪುರಸಭೆ, ಮುಂಡರಗಿ



ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ: ಡಾ.ಚಂದ್ರು ಲಮಾಣಿ

◆**ಲಕ್ಷ್ಮೇಶ್ವರ:** ತೀವ್ರಗತಿಯಲ್ಲಿ ಬೆಳೆಯುತ್ತಿರುವ ಪಟ್ಟಣದಲ್ಲಿ ಪೌರ ಕಾರ್ಮಿಕರ ಕೊರತೆಯಿಂದ ಸ್ವಚ್ಛತೆ ವಿಷಯದಲ್ಲಿ ಸಾಕಷ್ಟು ಸಮಸ್ಯೆಗಳು ತಲೆದೋರಿವೆ. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಭಾನುವಾರ ಪಟ್ಟಣದಲ್ಲಿ ಪುರಸಭೆಯ 15ನೇ ಹಣಕಾಸು ಯೋಜನೆಯಡಿ ಖರೀದಿಸಲಾದ ಕಸ ವಿಲೇವಾರಿಗಾಗಿ ಖರೀದಿಸಿದ ಮಿನಿ ಲೈಲ್ಯಾಂಡ್ ಲಾರಿ ಮತ್ತು 2 ಟ್ರ್ಯಾಕ್ಟರ್‌ಗಳ ಟೇಲರ್ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಸ್ವಚ್ಛತೆಯ ಕೊರತೆಯಿಂದ ಚರಂಡಿಗಳೆಲ್ಲ ತ್ಯಾಜ್ಯದಿಂದ ತುಂಬಿಕೊಂಡಿವೆ. ರಸ್ತೆ ಬದಿಗಳಲ್ಲಿ ಕಸದ ರಾಶಿ ಕಂಡು ಬರುತ್ತಿದೆ. ಅಲ್ಲದೇ ಮಳೆಗಾಲ ಪ್ರಾರಂಭವಾಗಿದ್ದು ಪಟ್ಟಣದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಪ್ರತೀ ಶನಿವಾರ ಅಥವಾ ಭಾನುವಾರ ನಾನೂ ಸಹ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದ ಅವರು, ಈ ಕಾರ್ಯದಲ್ಲಿ ಪುರಸಭೆಯೊಂದಿಗೆ ಸಾರ್ವಜನಿಕರು ಕೈಜೋಡಿಸಿ ಸ್ವಚ್ಛ ಸುಂದರ ಪಟ್ಟಣಕ್ಕಾಗಿ ಸಹಕರಿಸಬೇಕು. ಪುರಸಭೆಯ ಅಧಿಕಾರಿಗಳು ಕೆಟ್ಟು ನಿಂತಿರುವ ಕಸ ಸಂಗ್ರಹದ ವಾಹನಗಳ ರಿಪೇರಿ ಮಾಡಿಸಿ ಲಭ್ಯ ಇರುವ ಎಲ್ಲ ಸಂಪನ್ಮೂಲ ಬಳಸಿಕೊಂಡು ಸ್ವಚ್ಛತೆಗೆ ಆದ್ಯತೆ ನೀಡಬೇಕು. ಪುರಸಭೆಯಿಂದ ನಿರ್ವಹಣೆ ಮಾಡುತ್ತಿರುವ ಶವಾಗಾರ ಬಹಳಷ್ಟು ಹಳೆಯದಾಗಿದ್ದರಿಂದ 8/10 ದಿನಗಳಲ್ಲಿ ಹೊಸ ಶವಾಗಾರ ಬರಲಿದೆ ಎಂದರು.

ಬಳಿಕ ಅವರು ಪಟ್ಟಣದ ಸೋಮೇಶ್ವರ ನಗರ ವಾರ್ಡ್‌ನಲ್ಲಿ ಕಾರ್ಯಕರ್ತರು, ಸಾರ್ವಜನಿಕರು, ಪೌರ ಕಾರ್ಮಿಕರೊಡಗೂಡಿ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು. ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡಾದರಿ, ಸುನೀಲ ಮಹಾಂತಶೆಟ್ಟರ, ವಿಜಯ ಹತ್ತಿಕಾಳ, ಎಂ.ಆರ್. ಪಾಟೀಲ, ಗಂಗಾಧರ ಮೆಣಸಿನಕಾಯಿ, ಅನಿಲ ಮುಳಗುಂದ ಮಂಜುನಾಥ ಹೊಗೆಸೊಪ್ಪಿನ, ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ. ಮುದಗಲ್, ಇಂಜಿನಿಯರ್ ಈರಣ್ಣ ದುರಗಣ್ಣವರ, ಗಿರೀಶ ಚೌರಡ್ಡಿ, ರುದ್ರಪ್ಪ ಉಮಚಗಿ, ರಾಮು ನಾಯಕ, ವೀರೇಶ ಸಾಸಲವಾಡ, ಮಂಜುನಾಥ ಗದಗ, ಸಾಗರ ಪಾಟೀಲ, ಶಿವಾನಂದ ಉಮಚಗಿ, ರಮೇಶ ಹಾಳದೋಟದ, ಮಂಜುನಾಥ ಗಜಿ ಾಕೋಶ, ಪ್ರವೀಣ ಮುದಗಲ್, ಹನುಮಂತಪ್ಪ ನಂದೆಣ್ಣವರ ಮುತ್ತಣ್ಣ ದೊಡ್ಡಮನಿ ಇತರರಿದ್ದರು.



ಮೇ 30ರಿಂದ ಐಪಿಎಲ್ ಮಾದರಿಯಲ್ಲಿ ತಾಲೂಕು ಪ್ರಿಮಿಯರ್ ಲೀಗ್ ಕ್ರಿಕೆಟ್

◆**ನರಗುಂದ:** ನರಗುಂದದಲ್ಲಿ ಪ್ರಥಮ ಬಾರಿಗೆ ಐಪಿಎಲ್ ಮಾದರಿಯಲ್ಲಿ ತಾಲೂಕು ಪ್ರಿಮಿಯರ್ ಲೀಗ್ ಕ್ರಿಕೆಟ್ ಟ್ರೋಪಿ ನಡೆಯುತ್ತಿದೆ ಎಂದು ಮುತ್ತು ಸ್ ಫೌಂಡೇಶನ್ ಅಧ್ಯಕ್ಷ ಡಾ.ಮುತ್ತು ಸುರಕೋಡ ಹೇಳಿದರು.

ಪಟ್ಟಣದ ಬಾಬಾಸಾಹೇಬ ಭಾವೆ ಕಲಾ ಭವನದಲ್ಲಿ ಭಾನುವಾರ ಸುರಕೋಡದ ಮುತ್ತು ಸ್ ಫೌಂಡೇಶನ್ ವತಿಯಿಂದ ನಡೆದ 2026ರ ತಾಲೂಕು ಪ್ರೀಮಿಯರ್ ಲೀಗ್ ಮುತ್ತುಸ್ ಟ್ರೋಪಿಯ ಬಿಡ್ಡಿಂಗ್ ಪ್ರಕ್ರಿಯೆಗೆ ಟೀ ಶರ್ಟ್ ಗಳನ್ನು ಪ್ರದರ್ಶಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಮೇ 30ರಿಂದ ತಾಲೂಕು ಕ್ರೀಡಾಂಗಣದಲ್ಲಿ ವಾರಗಳ ಕಾಲ ನಡೆಯಲಿವೆ ಎಂದರು.

ರವಿ ಚಿಂತಾಲ ಮಾತನಾಡಿ, ಕ್ರೀಡಾಕೂಟಗಳಲ್ಲಿ ತಂಟೆ, ತಕರಾರು, ಜಗಳಗಳು ನಡೆಯಬಾರದು. ಶಾಂತಿ, ಸಮಾಧಾನ, ತಾಳ್ಮೆ ಜೊತೆಗೆ ಇಲ್ಲಿ ಅನುಶಾಸನ ಪಾಲನೆ ಬಹಳ ಮುಖ್ಯವಾಗಿದೆ. ಆಟಗಾರರಲ್ಲಿ ಒಗ್ಗಟ್ಟು ಇರಬೇಕು. ಜೊತೆಗೆ ಗೌರವ ಕೊಡುವ ಸ್ವಭಾವವು ಇರಬೇಕೆಂದು ಹೇಳಿದರು. ಮುತ್ತು ಸ್ ಟ್ರೋಪಿಯ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ 8 ತಂಡಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿತ್ತು ಎಂದರು. ಈ ಸಂತೋಷ ಮೇಟಿ, ಫೈಜಲ್ ಕುರಹಟ್ಟಿ, ಗುರು ಕೆಂಹಾರಕರ, ದತ್ತು ಜೋಗಣ್ಣವರ, ಶಿವಾನಂದ ಸುರಕೋಡ, ಮಂಜು ಭಾಂಗಿ, ಮಂಜು ಭೋವಿ, ಬಸು ಕಾಶಿನಕುಂಟಿ, ಅಜೀತ್ ಹಾಗೂ ಇತರರಿದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ-2: ವ್ಯವಸ್ಥಿತ ಪರೀಕ್ಷೆಗೆ ಕ್ರಮ ವಹಿಸಿ: ಅಪರ ಜಿಲ್ಲಾಧಿಕಾರಿ

◆**ಗದಗ:** ಜಿಲ್ಲೆಯಲ್ಲಿ ಮೇ 18 ರಿಂದ 25 ರವರೆಗೆ ಜರುಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಯನ್ನು ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಡೆಸಲು ಕ್ರಮವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು, ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಒಟ್ಟು 7 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು ಅಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು ಪರೀಕ್ಷಾ ಅವಧಿಯಲ್ಲಿ ಯಾವುದೇ ಲೋಪ ದೋಷಗಳಾಗದಂತೆ ಕ್ರಮ ವಹಿಸಬೇಕು ಎಂದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಮೇ 18 ರಿಂದ 25 ರವರೆಗೆ ಜಿಲ್ಲೆಯ 7 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು ಒಟ್ಟು 1905 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಜಿಲ್ಲಾ ನೋಡಲ್ ಅಧಿಕಾರಿ ಎಚ್.ಬಿ.ರಡ್ಡೇರ್, ಡಿವೈಪಿಸಿ ಎಂ.ಎಸ್.ಕಂಬಳಿ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಇದ್ದರು. ಮೇ 18 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಪ್ರಥಮ ಭಾಷೆ -ಕನ್ನಡ, ತೆಲಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ , ಇಂಗ್ಲಿಷ್ (ಎನ್ ಸಿ ಇ ಆರ್ ಟಿ) ಸಂಸ್ಕೃತ, ಮೇ 19 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15 ರವರೆಗೆ ಕೋರ್ ಸಬ್ಜೆಕ್ಟ್ -ವಿಜ್ಞಾನ , ರಾಜ್ಯಶಾಸ್ತ್ರ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಮೇ 20ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ, ಮೇ 21ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಕೋರ್ ಸಬ್ಜೆಕ್ಟ್; ಗಣಿತ, ಸಮಾಜ ಶಾಸ್ತ್ರ, ಮೇ.22 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ತೃತೀಯ ಭಾಷೆ - ಹಿಂದಿ (ಎನ್ ಸಿ ಇ ಆರ್ ಟಿ), ಕನ್ನಡ, ಇಂಗ್ಲಿಷ್ , ಅರೇಬಿಕ್ , ಉರ್ದು, ಸಂಸ್ಕೃತ, ಕೊಂಕಣಿ, ತುಳು, ಮರಾಠಿ, ಬೆಳಗ್ಗೆ 10 ರಿಂದ ಮಧ್ಯಾಹ್ನ 12.15 ರವರೆಗೆ ಎನ್.ಎಸ್.ಕ್ಯೂ ಎಫ್ ವಿಷಯಗಳು - ಮಾಹಿತಿ ತಂತ್ರಜ್ಞಾನ, ರಿಟೇಲ್ , ಆಟೋಮೊಬೈಲ್, ಬ್ಯೂಟಿ ಅಂಡ್ ವೆಲ್‌ನೆಸ್, ಅಪರೆಲ್ ಮೇಡ್ ಅಪ್ಸ್ ಹೋಮ್ ಫರ್ನಿಷಿಂಗ್ , ಎಲೆಕ್ಟ್ರಾನಿಕ್ಸ್ ಹಾರ್ಡವೇರ್, ಮೇ 23 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.15 ರವರೆಗೆ ಕೋರ್ ಸಬ್ಜೆಕ್ಟ್ -ಸಮಾಜ ವಿಜ್ಞಾನ, ಮೇ 25 ರಂದು 10 ರಿಂದ ಮಧ್ಯಾಹ್ನ 1.15 ರವರೆಗೆ ಜೆ.ಟಿ.ಎಸ್.ವಿಷಯಗಳು: ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಪ್ರೋಗ್ರಾಮಿಂಗ್ ಇನ್, ಅರ್ಥಶಾಸ್ತ್ರ ನಡೆಯಲಿದೆ.



ಮರು ಮೌಲ್ಯಮಾಪನದಲ್ಲಿ ಸೌಮ್ಯ ಜಿಲ್ಲೆಗೆ ಪ್ರಥಮ: ಸನ್ಮಾನ



◆**ಗಜೇಂದ್ರಗಡ:** 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯ ಮರು ಮೌಲ್ಯಮಾಪನ ಪ್ರಕ್ರಿಯೆ ಮುಗಿದಿದ್ದು ಫಲಿತಾಂಶ ಹೊರಬಿದ್ದಿದೆ. ಉತ್ತರ ಪತ್ರಿಕೆಯ ಮರು ಮೌಲ್ಯಮಾಪನದ ನಂತರ ಪಟ್ಟಣದ ಜಗದಂಬ ವಿದ್ಯಾವರ್ಧಕ ಸಂಘದ ಶ್ರೀ ವಿ ಟಿ ರಾಯಬಾಗಿ ಆಂಗ್ಲ ಮಾಧ್ಯಮ ಶಾಲೆಯ ಸೌಮ್ಯ ಸಾರಂಗಮಠ ಹೆಚ್ಚುವರಿ 625 ಕ್ಕೆ 623 ಅಂಕ ಗಳಿಸಿ 99.68 ಪ್ರತಿಶತದೊಂದಿಗೆ ಗದಗ ಜಿಲ್ಲೆಗೆ ಪ್ರಥಮಸ್ಥಾನ ಪಡೆದಿದ್ದಾಳೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯ ಪದಾಧಿಕಾರಿಗಳು ಸೌಮ್ಯಳಿಗೆ ಸನ್ಮಾನಿಸಿದರು.

ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಸುರೇಂದ್ರಸಾ ರಾಯಬಾಗಿ, ಎಸ್. ಕೆ.ರಾಯಬಾಗಿ, ಶಂಕರ ರಾಯಬಾಗಿ, ಗೋವಿಂದ ದಂಡಿನ, ರಾಘು ಕೊಣ್ಣೂರಕರ, ಅನಿಲ ಮಹೇಂದ್ರಕರ, ಎಸ್.ಬಿ.ಬೇವಿನಮರದ, ಸುಮಾ ಲಕ್ಕುಂಡಿ ಓಂ ಪ್ರಕಾಶ ಸಾರಂಗಮಠ ಸೇರಿದಂತೆ ಇತರರಿದ್ದರು.

> ಪ್ರತಿದಿನ ನಿರಂತರ ಅಭ್ಯಾಸ ಮಾಡುತ್ತಿದ್ದೆ. ಪ್ರಥಮ ಬಾರಿಗೆ ಫಲಿತಾಂಶ ಬಂದಾಗ ನನಗೆ ಅಚ್ಚರಿಯಾಗಿತ್ತು. ಕಡಿಮೆ ಅಂಕಗಳಿಂದ ಗೊಂದಲಕ್ಕೊಳಗಾಗಿದ್ದೆ. ನಾನು ನಮ್ಮ ಪಾಲಕರು ಹಾಗೂ ಮುಖ್ಯೋಪಾಧ್ಯಯರು, ಶಿಕ್ಷಕರು ಹೇಳಿದಂತೆ ಮರು ಮೌಲ್ಯಮಾಪನಕ್ಕೆ ಹಾಕಿದ್ದು ಇಂದು ಬಂದ ಫಲಿತಾಂಶ ನನಗೆ ಖುಷಿ ನೀಡಿದೆ. ಐಎಎಸ್ ಆಗುವ ಗುರಿ ಹೊಂದಿದ್ದೇನೆ.
> ■ **ಸೌಮ್ಯ ಸಾರಂಗಮಠ,** ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ

> ನಮ್ಮ ಮಗಳು ಬೆಳಗ್ಗೆ ಮತ್ತು ಸಂಜೆ ನಿರಂತರ ಅಭ್ಯಾಸ ಮಾಡುತ್ತಿದ್ದಳು. ನಾವು ಅವಳಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ನೀಡಿದ್ದೆವು. ಪ್ರಥಮ ಫಲಿತಾಂಶ ಬಂದಾಗ 618 ಅಂಕಗಳು ಬಂದಿದ್ದು ನಮಗೆ ಬೇಜಾರ್ ಆಗಿತ್ತು. ಅದಕ್ಕೆ ಅವಳಿಗೆ ಮೌಲ್ಯಮಾಪನಕ್ಕೆ ಹಾಕಲು ಹೇಳಿದ್ದೆವು. ಈಗ ಮರು ಮೌಲ್ಯಮಾಪನ ಫಲಿತಾಂಶದಲ್ಲಿ ಮಗಳು ಜಿಲ್ಲೆಗೆ ಪ್ರಥಮ ಬರುವ ಮೂಲಕ ನಮ್ಮ ನಂಬಿಕೆಯನ್ನು ಉಳಿಸಿಕೊಂಡಿದ್ದಾಳೆ.
> ■ **ಪೂರ್ಣಿಮಾ ಸಾರಂಗಮಠ,** ವಿದ್ಯಾರ್ಥಿನಿ ತಾಯಿ

ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆ: ಅನ್ನದಾತರಲ್ಲಿ ಹರ್ಷ



◆**ಗದಗ:** ಗದಗ-ಬೆಟಗೇರಿ ಅವಳಿ ನಗರ ಸೇರಿದಂತೆ ಜಿಲ್ಲಾದ್ಯಂತ ಭಾನುವಾರ ಗುಡುಗು-ಸಿಡಿಲಿನ ಮಧ್ಯೆ ಇಡೀ ದಿನ ಧಾರಾಕಾರ ಮಳೆ ಸುರಿಯಿತು. ಪರಿಣಾಮ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಜಿಲ್ಲೆಯ ಗಜೇಂದ್ರಗಡ, ರೋಣ, ಮುಂಡರಗಿ, ಶಿರಹಟ್ಟಿ ಸೇರಿದಂತೆ ವಿವಿಧೆಡೆ ಮಳೆ ಸುರಿತು. ಕೆಲವೆಡೆ ಮೋಡ ಕವಿದ ವಾತಾವರಣ ಜತೆಗೆ ಭರ್ಜರಿ ಮಳೆ ಸುರಿಯಿತು. ಮಳೆಯ ಪರಿಣಾಮ ತಗ್ಗು ಪ್ರದೇಶದಲ್ಲಿರುವ ರಸ್ತೆಗಳು ಜಲಾವೃತಗೊಂಡಿದ್ದವು. ಬೈಕ್ ಹಾಗೂ ವಾಹನ ಸವಾರರು ರಸ್ತೆಯಲ್ಲಿ ಸಂಚರಿಸಲು ಹರಸಾಹಸ ಪಡುವಂತಾಯಿತು. ಇಡೀ ದಿನ ಮೋಡ ಕವಿದ ವಾತಾವಣರದಿಂದ ಜನರಿಗೆ ಸಮಾಧಾನ ಪಡುವಂತಾಗಿದೆ. ಮುಂಗಾರು ಆರಂಭಕ್ಕೆ ಉತ್ತಮ ಮಳೆಯಾಗುವ ಲಕ್ಷಣಗಳು ಗೋಚರಿಸಿದೆ.

ಸಂಚರಿಸಲು ಪರದಾಟ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಸುರಿದ ಧಾರಾಕಾರ ಮಳೆಗೆ ಪ್ರಮುಖ ರಸ್ತೆ, ಉಪ ರಸ್ತೆಗಳು, ತಗ್ಗು ಪ್ರದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ನೀರು ನಿಂತಿದ್ದರಿಂದ ಬೈಕ್ ಸವಾರರು ರಸ್ತೆ ಸಂಚರಿಸಲು ಪರದಾಡುವಂತಾಯಿತು. ಭಾರೀ ಮಳೆಯಿಂದಾಗಿ ಇನ್ನು ಸಾರ್ವಜನಿಕರು ತಮ್ಮ ನಿವಾಸಕ್ಕೆ ಹೋಗಲು ಸಾಕಷ್ಟು ತೊಂದರೆ ಅನುಭವಿಸಿದರು. ಕೆಲವು ಮುಖ್ಯ ರಸ್ತೆಗಳಲ್ಲಿ ಆಳ ಎತ್ತರದ ಗುಂಡಿಯಲ್ಲಿ ನೀರು ನಿಲ್ಲುವ ಮೂಲಕ ವಾಹನ ಸವಾರರು ರಸ್ತೆ ದಾಟಲು ತೊಂದರೆ ಪಡುವಂತಾಯಿತು. ಅವಳಿ ನಗರದ ವಿವಿಧ ಭಾಗಗಳಲ್ಲಿ ಜೋರು ಮಳೆಗೆ ಗಿಡ ಹಾಗೂ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಹಲವು ಅವಾಂತರ

ರೋಣ ಪಟ್ಟಣ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಭಾನುವಾರ ಸಂಜೆ ಬೀಸಿದ ಭಾರೀ ಗಾಳಿ ಮತ್ತು ಮಳೆಗೆ ಅನೇಕ ರೀತಿಯ ಅವಾಂತರಗಳನ್ನು ಸೃಷ್ಟಿಮಾಡಿದೆ. ಗಿಡ ಮರಗಳು ಸೇರಿ ಹತ್ತಾರು ವಿದ್ಯುತ್ ಕಂಬಗಳು ಧರೆಗೆರುಳಿದ್ದು, ಇದರಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಇನ್ನು ಪಟ್ಟಣದ ಮುಗುಳಿ ರಸ್ತೆಯಲ್ಲಿನ ಟಿಸಿಗೂ ಕೂಡಾ ಹನಿಯಾಗಿದೆ. ಭಾರೀ ಪ್ರಮಾಣದ ಗಾಳಿ ಬೀಸಿದ ಪರಿಣಾಮ ಜನರು ಭಯದಲ್ಲಿ ಕಾಲ ಕಳೆಯುವಂತಾಯಿತು. ಅಲ್ಲದೆ ಪಟ್ಟಣದ ಮುಲ್ಲಾನ ಭಾವಿ, ಸೂಡಿ ವೃತ್ತದಲ್ಲಿ ಟ್ರಾಫಿಕ್ ಸಮಸ್ಯೆ ಕೂಡ ಉದ್ಭವಿಸಿ ವಾಹನ ಸವಾರರು ಪರದಾಡುವಂತಯಿತು.

ರಾಜ್ಯ ಮಹಿಳಾ ಅಧಿವೇಶನ | ನಾಗಲಕ್ಷ್ಮೀ ಚೌಧರಿ ಅಭಿಮತ

ಸದೃಢ ರಾಷ್ಟ್ರಕ್ಕೆ ನಾರಿಶಕ್ತಿ ಅಗತ್ಯ

ಧಾರವಾಡ: ಸಂಘಟಿತ ಹಾಗೂ ಅಸಂಘಟಿತ ವಲಯದ ಶ್ರಮಿಕ ಮಹಿಳೆಯರಿಗೆ ನ್ಯಾಯಯುತ ವೇತನ, ಸುರಕ್ಷತೆ ಮತ್ತು ಸಮಾಜನ ಅವಕಾಶಗಳನ್ನು ಕಲ್ಪಿಸಲು ಕರ್ನಾಟಕ ಮಹಿಳಾ ಆಯೋಗ ಬದ್ಧವಿದೆ ಎಂದು ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಹೇಳಿದರು.

ರಾಜ್ಯ ಭಾರತೀಯ ಮಜ್ದೂರ್ ಸಂಘ ನಗರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡ 'ರಾಜ್ಯ ಮಹಿಳಾ ಅಧಿವೇಶನ'ದಲ್ಲಿ ಮಾತನಾಡಿದ ಅವರು, ದುಡಿಯುವ ಮಹಿಳೆಯರ ಹಕ್ಕುಗಳ ರಕ್ಷಣೆ ತುರ್ತು ಅಗತ್ಯವಿದೆ ಎಂದು ತಿಳಿಸಿದರು. ಆಧುನಿಕ ಮಹಿಳೆಯರು ಮನೆಗೆಲಸಕ್ಕೆ ಸೀಮಿತವಾಗದೆ, ಎಲ್ಲ ರಂಗದಲ್ಲೂ ತಮ್ಮ ಛಾಪು ಮೂಡಿಸಿ, ಸದೃಢ ಭಾರತಕ್ಕೆ ನಾರಿಶಕ್ತಿ ಸಾಮರ್ಥ್ಯ ತೋರಿಸಿದ್ದಾರೆ. ಮಹಿಳೆ ಎದುರಿಸುವ ಸವಾಲು ಮತ್ತು ಕಾನೂನು ಬದ್ಧ ಪರಿಹಾರದ ಕುರಿತು ಮಾಹಿತಿ ನೀಡಿದರು.

ಮಹಿಳಾ ಪರ ಧ್ವನಿ: ಮಜ್ದೂರ್ ಸಂಘದ ದಕ್ಷಿಣ-ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ವಿ. ರಾಧಾಕೃಷ್ಣನ್, ದುಡಿಯುವ ಮಹಿಳಾ ಕಾರ್ಮಿಕರ ಹಕ್ಕುಗಳಿಗೆ ಭಾರತೀಯ ಮಜ್ದೂರ್ ಸಂಘ ಶ್ರಮಿಸುತ್ತಿದೆ. ಈ ಸಂಘವು ಮಹಿಳಾ ಕಾರ್ಮಿಕರ ಧ್ವನಿಯಾಗಿದೆ ಎಂದರು.

ಮುಂಚೂಣಿಗೆ ಬರಲು ಕರೆ: ಭವಿಷ್ಯದಲ್ಲಿ ಮಹಿಳೆಯರ ಸಾಮಾಜಿಕ ಭದ್ರತೆಗೆ ಹೋರಾಟ ರೂಪಿಸಲಿದೆ ಎಂದ ರಾಧಾಕೃಷ್ಣನ್, ಕೇವಲ ಆರ್ಥಿಕ ಸ್ವಾವಲಂಬನೆ ಮಾತ್ರವಲ್ಲದೆ, ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲೂ ಮಹಿಳೆಯರು ಮುಂಚೂಣಿಗೆ ಬರುವಂತೆ ಸಲಹೆ ನೀಡಿದರು.



ಸಂಸ್ಕಾರ ಕಲಿಸಿ: ಅಧಿವೇಶನ ಉದ್ಘಾಟಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಸುಭದ್ರ ಹಾಗೂ ಸಶಕ್ತ ದೇಶ ಕಟ್ಟುವಲ್ಲಿ ಮಹಿಳೆಯರ ಪಾತ್ರ ಪ್ರಮುಖ. ಹೀಗಾಗಿ ಮಕ್ಕಳಲ್ಲಿ ಸಂಸ್ಕಾರದ ಜೊತೆಗೆ ನೈತಿಕ ಮೌಲ್ಯಗಳು ಬೆಳೆಸುವ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೂ ಸಲಹೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ಮಜ್ದೂರ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಎಲ್. ವಿಶ್ವನಾಥ, ಮಹಿಳೆಯರನ್ನು ಪೂಜ್ಯ ಭಾವನೆಯಿಂದ ನೋಡುವ ಭಾರತದಲ್ಲಿ ದೌರ್ಜನ್ಯ, ಅತ್ಯಾಚಾರ, ಶೋಷಣೆ ನಡೆಯುವುದು ನಾಚಿಗೇಡು ಎಂದರು.

ವೇದಿಕೆಯಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಅಖಿಲ ಭಾರತೀಯ ಸಹ ಕಾರ್ಯವಾಹಿಕಾ ಅಲಕಾ ಇನಾಮದಾರ, ಭಾರತೀಯ ಮಜ್ದೂರ್ ಸಂಘದ ರಾಜ್ಯಾಧ್ಯಕ್ಷ ಎನ್.ಕೆ.ಪ್ರಕಾಶ, ಭೂಲೋಕೇಶ್ವರಿ, ತಾಯಿರಾ ಮುಲ್ಲಾ, ಸುರೇಶ ನಾಡಗೇರ, ನರೇಂದ್ರ ಜಾಧವ ಇದ್ದರು.

> ದೇಶದ ಜಿಡಿಪಿಯಲ್ಲಿ ಶೇ.18ರಷ್ಟು ಮಹಿಳೆಯರ ಕೊಡುಗೆ ಇದೆ. ಇದು ಇನ್ನೂ ಹೆಚ್ಚಬೇಕಿದೆ. ಮಹಿಳೆಯರು ಶಿಕ್ಷಣ, ಉದ್ಯೋಗ, ರಾಜಕೀಯದಲ್ಲೂ ಮುಂದೆ ಇದ್ದಾರೆ. ದೇಶದ ಆರ್ಥಿಕ ಪ್ರಗತಿಗೂ ಕೊಡುಗೆ ನೀಡುತ್ತಿದ್ದಾರೆ.
>
> ■ **ಎಚ್.ಎಲ್.ವಿಶ್ವನಾಥ,** ಮಜ್ದೂರ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ

ಬೆಂಗಳೂರು-ಮುಂಬೈ ನಡುವೆ ಹೊಸ ರೈಲು ಸೇವೆ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಜನರಿಗೆ ಬಹಳ ವರ್ಷಗಳ ಬೇಡಿಕೆ ರೈಲು ಇಂದು ಆರಂಭಗೊಂಡಿದೆ. ಬೆಂಗಳೂರು ಮತ್ತು ಮುಂಬೈ ನಡುವೆ ಹೊಸ ರೈಲು ಸೇವೆ ಇಂದಿನಿಂದ ಆರಂಭವಾಗಿದೆ ಎಂದು ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಭಾನುವಾರ ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿ ರೈಲು ನಿಲ್ದಾಣದಲ್ಲಿ ಬೆಂಗಳೂರು ಮತ್ತು ಮುಂಬೈ ನಡುವೆ ಆರಂಭವಾದ ಹೊಸ ರೈಲನ್ನು ಸ್ವಾಗತಿಸಿ, ಬಳಿಕ ಮಾತನಾಡಿದ ಅವರು, ಬೆಂಗಳೂರಿನಿಂದ ಹೊರಡುವ ಈ ರೈಲು ದಾವಣಗೆರೆ, ಹುಬ್ಬಳ್ಳಿ, ಧಾರವಾಡ ಮೂಲಕ ಮುಂಬೈಗೆ ತೆರಳಲಿದೆ.

ಈ ಮಾರ್ಗ ತುಂಬಾ ದೂರವಾದರೂ ಸಹ 24 ಗಂಟೆಯಲ್ಲಿ ಪ್ರಯಾಣವನ್ನು ಮುಕ್ತಾಯಗೊಳಿಸಬಹುದು. ಧಾರವಾಡದಿಂದ ಬೆಳಗಾವಿಗೆ ನೇರ ಸಂಪರ್ಕ ರೈಲು ಆರಂಭಿಸಲು ಈಗಾಗಲೇ ಕೇಂದ್ರ ಸರ್ಕಾರ ರೂ.1000 ಸಾವಿರ ಕೋಟಿ ಹಣವನ್ನು ಒದಗಿಸಲು ಮುಂದಾಗಿದೆ. ಅಲ್ಲದೇ ಧಾರವಾಡ ಬೆಳಗಾವಿ ಹಾಗೂ ದಾವಣಗೆರೆ ತುಮಕೂರು ನಡುವಿನ ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ತುರ್ತಾಗಿ ಪೂರ್ಣಗೊಳಿಸಬೇಕು. ಇದರಿಂದ ಹುಬ್ಬಳ್ಳಿ ಬೆಂಗಳೂರು ನಡುವೆ ರೈಲು ಸಂಚಾರ ಸಮಯದಲ್ಲಿ ಕಡಿಮೆಯಾಗುವುದು ಎಂದು ತಿಳಿಸಿದರು.

ಜಗತ್ತಿನಲ್ಲಿ ರೈಲ್ವೆ ವಿದ್ಯುದ್ದೀಕರಣದಲ್ಲಿ ಭಾರತ 2ನೇ ಸ್ಥಾನದಲ್ಲಿದೆ. ಭಾರತದಲ್ಲಿ ಸುಮಾರು 160 ಕ್ಕೂ ಅಧಿಕ ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಮೆಟ್ರೋದಲ್ಲಿ ಸಹ ಸಾಕಷ್ಟು ಪ್ರಗತಿ ಸಾಧಿಸಲಾಗುತ್ತಿದೆ.



ಅಳ್ನಾವರ ರೈಲು ನಿಲ್ದಾಣವನ್ನು ಶೀಘ್ರದಲ್ಲೇ ಉದ್ಘಾಟಿಸಲಾಗುವುದು. ರಾಜ್ಯದಲ್ಲಿ ಸುಮಾರು 3,700 ಕಿ.ಮೀ. ರೈಲ್ವೆ ವಿದ್ಯುದ್ದೀಕರಣ ಮುಕ್ತಾಯಗೊಂಡಿದೆ.

ಪ್ರಯಾಣಿಕರ ಓಡಾಟದ ಸಮಯವನ್ನು ಕಡಿಮೆ ಮಾಡುವುದು ಬಹಳ ಅವಶ್ಯಕವಿದೆ ಎಂದು ಹೇಳಿದರು.

ರೈಲ್ವೆ ಇಲಾಖೆಯಲ್ಲಿ ಹೊಸ ಯೋಜನೆಗಳು ಕಾರ್ಯಗತವಾಗುತ್ತಿವೆ. ಹುಬ್ಬಳ್ಳಿ ಅಂಕೋಲಾ ರೈಲು ಮಾರ್ಗಕ್ಕೆ ಪ್ರಯತ್ನಿಸಲಾಗುತ್ತಿದೆ. ಅಂಕೋಲಾ ಬಂದರು ಅಭಿವೃದ್ಧಿಗೆ ಈ ರೈಲು ಮಾರ್ಗ ಸಹಕಾರಿಯಾಗಲಿದೆ. ಅಲ್ಲದೇ ಕೈಗಾರಿಕೆಗಳು ಅಭಿವೃದ್ಧಿ ಹೊಂದಲಿವೆ. ಭಾರತ ಮ್ಯಾನುಫ್ಯಾಕ್ಚರಿಂಗ್ ಹಬ್ ಆಗಬೇಕು. ಎಲೆಕ್ಟ್ರಾನಿಕ್ ವಸ್ತುಗಳ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸಿದೆ. ನವೀಕರಿಸಬಹುದಾದ ಇಂಧನದಲ್ಲಿ ಭಾರತ ಪ್ರಪಂಚದಲ್ಲಿ 3ನೇ ಸ್ಥಾನದಲ್ಲಿದೆ. ಯುದ್ಧದ ಬಿಕ್ಕಟ್ಟಿನ ನಡುವೆ ಪೆಟ್ರೋಲ್, ಡಿಸೇಲ್ ಪೂರೈಕೆಯಲ್ಲಿ ಕೊರತೆಯಾಗಿದೆ. ಮುಂದಿನ ದಿನಗಳಲ್ಲಿ ಇಂಧನಗಳ ಸಮಸ್ಯೆಗಳು ದೂರವಾಗಲಿವೆ. ವಿಕಸಿತ ಭಾರತದ ಕನಸು ನನಸಾಗಲಿದೆ ಎಂದು ಅವರು ತಿಳಿಸಿದರು.

ಶಾಸಕ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎಫ್.ಎಚ್.ಜಕ್ಕಪ್ಪನವರ, ಪ್ರದೀಪ ಶೆಟ್ಟರ್, ಮಾಜಿ ಮೇಯರ್ ರಾಮಣ್ಣ ಬಡಿಗೇರ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷರಾದ ಜಿ.ಕೆ.ಆದಪ್ಪಗೌಡರ ಸೇರಿದಂತೆ ರೈಲ್ವೆ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಕಾಂಗ್ರೆಸ್‌ಗೆ ಅಧಿಕಾರ ಬೇಕು, ದೇಶ ಬೇಕಿಲ್ಲ: ಶ್ರೀರಾಮುಲು

ಗದಗ: ಕಾಂಗ್ರೆಸ್‌ನವರು ಮೋದಿ ಬಗ್ಗೆ ಹಾಗೂ ಹಿಂದೂಗಳ ಬಗ್ಗೆ ಬರೀ ಟೀಕೆ ಮಾಡುತ್ತಲೇ ಇರುತ್ತಾರೆ. ಕಾಂಗ್ರೆಸ್‌ನವರಿಗೆ ಅಧಿಕಾರ ಬೇಕು, ದೇಶ ಬೇಕಿಲ್ಲ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರಿಗೆ ಗಾಂಧಿ ಕುಟುಂಬ ಮುಖ್ಯ ದೇಶ ಮುಖ್ಯವಲ್ಲ, ಆದರೆ, ನಮಗೆ ಕುಟುಂಬ ಮುಖ್ಯವಲ್ಲ, ದೇಶ ಮೊದಲು. ಅವರ ಪಾಲಿಗೆ ಗಾಂಧಿ ಕುಟುಂಬ ಚನ್ನಾಗಿದ್ದರೆ ದೇಶ ಚನ್ನಾಗಿದ್ದಂತೆ ಎಂದು ರಾಮುಲು ಹೇಳಿದರು.ಮೆಟ್ರೋ, ಬೈಕ್, ಸೈಕಲ್ ಹತ್ತುವುದು ಬಿಜೆಪಿಯವರ ಒಂದು ದಿನದ ನಾಟಕ ಎಂದಿದ್ದ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಮಾತಿನ ತಿರುಗೇಟು ನೀಡಿದ ಬಿ. ಶ್ರೀರಾಮುಲು ಅವರು ಕಾಂಗ್ರೆಸ್ ಪಾರ್ಟಿ ನಾಯಕರು ದಪ್ಪ ಚರ್ಮದ ರಾಜಕಾರಣಿಗಳು. ಒಬ್ಬರು ಅಧಿಕಾರಿ, ಜನಪ್ರತಿನಿಧಿ ನಡೆದು, ಸೈಕಲ್, ಬೈಕ್ ನಲ್ಲಿ ಹೋದ್ರೆ ಮಾದರಿಯಾಗುತ್ತದೆ. ಅಷ್ಟೋ, ಇಷ್ಟೋ ಉಳಿತಾಯ ಆದಂತಾಗುತ್ತದೆ. ಜಾಗೃತಿ ಮೂಡಿಸುವುದು ಮುಖ್ಯ.ದಪ್ಪ ಚರ್ಮದ ಕಾಂಗ್ರೆಸ್ ನಾಯಕರಿಗೆ ಆತ್ಮ ಸಾಕ್ಷಿಯಾಗಿ ಮಾತನಾಡುವ ಧೈರ್ಯವಿಲ್ಲ. ಜನರಿಗೆ ಸಕಾರಾತ್ಮ ಜಾಗೃತಿ ಮೂಡಿಸುವುದು, ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು ಎಂದರು.

ಸಿಡಿಲು ಬಡಿದು ಮೀನುಗಾರ ಸಾವು

ಕಾರವಾರ: ಸಿಡಿಲು ಬಡಿದು ಮೀನುಗಾರ ಮೃತಪಟ್ಟ ಘಟನೆ ಜಿಲ್ಲೆಯ ಹೊನ್ನಾವರ ತಾಲೂಕಿನ ಅಪ್ಸರಕೊಂಡ ಕಡಲ ತೀರದಲ್ಲಿ ಸಂಭವಿಸಿದೆ.ಅಪ್ಸರಕೊಂಡದ ಖಾರ್ವಿಕೇರಿಯ ನಿವಾಸಿ ವಿನಾಯಕ ಗಣೇಶ ಖಾರ್ವಿ(35) ಮೃತ ದುರ್ದೈವಿಯಾಗಿದ್ದು, ಸಾಂಪ್ರದಾಯಿಕ ಮೀನುಗಾರಿಕೆ ಮುಗಿಸಿಕೊಂಡು ದಡಕ್ಕೆ ಬಂದು ತಲುಪಿ ದೋಣಿ ಎಳೆಯುತ್ತಿರುವ ಸಂದರ್ಭದಲ್ಲಿ ಸಿಡಿಲು ಬಡಿದಿದ್ದು, ಸಿಡಿಲಿನ ಆಘಾತದಿಂದ ಗಂಭೀರವಾಗಿ ಗಾಯಗೊಂಡ ಮೀನುಗಾರ ಸ್ಥಳದಲ್ಲೇ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.ಸಿಡಿಲಿನ ಆಘಾತದಿಂದ ಕುಸಿದು ಬಿದ್ದವನನ್ನು ಹೊನ್ನಾವರದ ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆತ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು.ಇದೇ ಕಡಲತೀರದಲ್ಲಿದ್ದ ಕೆಲವು ಪ್ರವಾಸಿಗರೂ ಸಿಡಿಲಿನ ಆಘಾತಕ್ಕೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದು, ಹೊನ್ನಾವರದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಂಕಿ ಪಿ.ಎಸ್.ಐ ಕುಮಾರ ಕಾಂಬ್ಳೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಮಂಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿವಂ ಅಸೋಸಿಯೇಟ್ಸ್‌ನಿಂದ ವಂಚನೆ ಪ್ರಕರಣ

ಸಿಐಡಿ ತನಿಖೆಯಿಂದ ಸ್ಪಷ್ಟ ಮಾಹಿತಿ: ಜಾರಕಿಹೊಳಿ

ಬೆಳಗಾವಿ: ಬಹುಕೋಟಿ ರೂ. ವಂಚನೆ ಆರೋಪ ಎದುರಿಸುತ್ತಿರುವ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮಾಲೀಕ ಶಿವಾನಂದ ನೀಲಣ್ಣವರ ಪ್ರಕರಣವನ್ನು ಸರ್ಕಾರ ಅಧಿಕೃತವಾಗಿ ಸಿಐಡಿ ತನಿಖೆಗೆ ವಹಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಬೆಳಗಾವಿ ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಐಡಿ ಅಧಿಕಾರಿಗಳು ತಮ್ಮ ತನಿಖೆ ಪೂರ್ಣಗೊಳಿಸಿ ವರದಿ ನೀಡಿದ ನಂತರವೇ ಈ ಹಗರಣದ ಸಂಪೂರ್ಣ ಸತ್ಯಾಸತ್ಯತೆ ಮತ್ತು ನಿಖರವಾದ ಮಾಹಿತಿ ಹೊರಬರಲಿದೆ ಎಂದು ಸ್ಪಷ್ಟಪಡಿಸಿದರು.

ಪ್ರಕರಣಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ:

ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಬಹುಕೋಟಿ ವಂಚನೆ ಪ್ರಕರಣಕ್ಕೂ ರಾಜಕೀಯಕ್ಕೂ ಯಾವುದೇ ಸಂಬಂಧವಿಲ್ಲ, ಇದು ಸಂಪೂರ್ಣವಾಗಿ ಸಾರ್ವಜನಿಕರ ಹಣಕಾಸು ವಂಚನೆಗೆ ಸಂಬಂಧಿಸಿದ ವಿಷಯವಾಗಿದೆ. ಕಾನೂನು ಬಾಹಿರವಾಗಿ ಹಣ ಸಂಗ್ರಹಿಸಿ ಸಾರ್ವಜನಿಕರಿಗೆ ಮೋಸ ಮಾಡಿರುವ ಹಿನ್ನೆಲೆಯಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಇಲ್ಲ ಎಂದು ಸಚಿವರು ತಿಳಿಸಿದರು.



ಹೆಚ್ಚಿನ ಬಡ್ಡಿಯ ಆಮಿಷಕ್ಕೆ ಒಳಗಾಗಿ ಸಾರ್ವಜನಿಕರು ಕಷ್ಟಪಟ್ಟು ದುಡಿದ ಹಣವನ್ನು ಅನಧಿಕೃತ ಸಂಸ್ಥೆಗಳಲ್ಲಿ ಹೂಡಿಕೆ ಮಾಡಬಾರದು. ಹಣ ಹೂಡಿಕೆ ಮಾಡುವಾಗ ಸಾರ್ವಜನಿಕರು ಎಚ್ಚರಿಕೆ ಹೆಜ್ಜೆ ಇಡಬೇಕು ಎಂದು ತಿಳಿಸಿದರು.

ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಸಂದೀಪ್ ಪಾಟೀಲ್ ಅವರನ್ನು ಬೆಳಗಾವಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದು, ಬೆಳಗಾವಿ ಉತ್ತರ ವಲಯದ ನೂತನ ಪೊಲೀಸ್ ಮಹಾನಿರೀಕ್ಷಕರಾಗಿ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ್ ಅವರು ಶೀಘ್ರದಲ್ಲೇ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಚುನಾವಣೆಗಳು ಮುಗಿದ ತಕ್ಷಣವೇ ಕೇಂದ್ರ ಸರ್ಕಾರವು ಗ್ಯಾಸ್, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವುದು ಹೊಸದೇನಲ್ಲ, ಇದು ಅವರ ಹಳೆಯ ಚಾಳಿಯೇ ಆಗಿದೆ.ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ತೈಲ ಮತ್ತು ಅಗತ್ಯ ವಸ್ತುಗಳ ನಿರಂತರ ಬೆಲೆ ಏರಿಕೆಯನ್ನು ಬಿಜೆಪಿಯವರು ಜಾಗತಿಕ ಬಿಕ್ಕಟ್ಟು ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಸಮರ್ಥಿಸಿಕೊಳ್ಳುತ್ತಿರುವುದು ಸಂಪೂರ್ಣ ತಪ್ಪು ಮತ್ತು ಜನವಿರೋಧಿ ನೀತಿ ಎಂದು ಆಕ್ಷೇಪಿಸಿದ ಸಚಿವರು, ಬೆಲೆ ಏರಿಕೆಯಿಂದ ಬಡ ಮತ್ತು ಮಧ್ಯಮ ವರ್ಗದವರ ಬದುಕು ದುಸ್ತರವಾಗಿದ್ದರೂ ಅದನ್ನು ಸಮರ್ಥಿಸಿಕೊಳ್ಳುವುದು ಅವರ ಜನವಿರೋಧಿ ಧೋರಣೆ ತೋರಿಸುತ್ತದೆ ಎಂದು ತಿಳಿಸಿದರು.

ಗ್ಯಾರಂಟಿ ಅನುಷ್ಠಾನದ ಅಧ್ಯಕ್ಷ ವಿನಯ್ ನಾವಲಗಟ್ಟಿ, ಶಾಸಕ ಆಸೀಫ್ ಸೇಠ್, ಹಾಗೂ ಕಾಂಗ್ರೆಸ್ ಮುಖಂಡರು ಸೇರಿದಂತೆ ಇತರರು ಇದ್ದರು.

19.50 ಲಕ್ಷ ರೂ. ವಂಚನೆ

ಬೆಳಗಾವಿ: ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು, ಇದೀಗ ಬೆಳಗಾವಿ ತಾಲೂಕಿನ ಮುತಗಾ ಗ್ರಾಮದಲ್ಲಿ ಸೈಬರ್ ವಂಚನೆಗೆ ಒಳಗಾಗಿ ಬರೋಬ್ಬರಿ 19.50 ಲಕ್ಷ ರೂ. ಕಳೆದುಕೊಂಡಿರುವ ಘಟನೆ ನಡೆದಿದೆ.



ಆನ್‌ಲೈನ್ ಮೂಲಕ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ, ದುಪ್ಪಟ್ಟು ಲಾಭ ಸಿಗಲಿದೆ ಎಂದು ನಂಬಿಸಿ ವ್ಯಕ್ತಿಯೊಬ್ಬರಿಗೆ ಬರೊಬ್ಬರೊ 19.50 ಲಕ್ಷ ರೂ. ವಂಚನೆಯಾಗಿರುವ ಬಗ್ಗೆ ನಗರ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಪ್ರಕರಣ ಬಳಕಿಗೆ ಬಂದಿದೆ.

ವಂಚನೆಗೊಳಗಾದವ್ಯಕ್ತಿ ಬೆಳಗಾವಿ ತಾಲೂಕಿನ ಮುತಗಾ ಗ್ರಾಮದ ಭೂಷಣ ಪಾಟೀಲ ಇವರು, ಡಿ85 ಅಷ್ಟಾ ಟ್ರೇಡ್ ಮಾರ್ಕೆಟ್ ಥಿಂಕಿಂಗ್ ಅಲಾಯನ್ಸ್ ಎಂಬ ವಾಟ್ಸ್ಯಾಪ್ ಗ್ರೂಪ್‌ಗೆ ಸೇರಿಸಿದ್ದರು. ಆ ಗ್ರೂಪ್‌ನಲ್ಲಿ ಷೇರು ಮಾರುಕಟ್ಟೆ ಮತ್ತು ಐಪಿಒಗಳಲ್ಲಿ ಹಣ ಹೂಡಿಕೆ ಮಾಡಿದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಗಳಿಸಬಹುದು ಎಂದು ನಂಬಿಸಿ, ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡುವಂತೆ ಸೂಚಿಸಿದ್ದಲ್ಲದೇ, ಆರೋಪಿಗಳು ಆ್ಯಪ್‌ನಲ್ಲಿ ಹೂಡಿಕೆ ಮಾಡಿದ ಹಣ ಹಾಗೂ ಲಾಭದ ಮೊತ್ತ ತೋರಿಸಿದ್ದರು.

ಅದನ್ನು ಭೂಷಣ ಅವರು, 2025ರ ಅಕ್ಟೋಬರ್ ತಿಂಗಳಲ್ಲಿ ವಿವಿಧ ಹಂತಗಳಲ್ಲಿ ಒಟ್ಟು 19.50 ರೂ. ಲಕ್ಷ ಹಣವನ್ನು ಆರೋಪಿಗಳು ತಿಳಿಸಿದ ಖಾತೆಗಳಿಗೆ ವರ್ಗಾವಣೆ ಮಾಡಿದ್ದರು. ಆದರೆ, ಅಲ್ಲಿಂದ ಈ ವರೆಗೂ ಹೂಡಿಕೆಯ ಮೂಲ ಹಣ ಹಾಗೂ ಲಾಭದ ಮೊತ್ತವನ್ನು ಮರಳಿ ನೀಡದೇ ವಂಚಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಆನ್‌ಲೈನ್ ಔಷಧಿ ವ್ಯಾಪಾರಕ್ಕೆ ವಿರೋಧ

ಮೇ 20ರಂದು ರಾಷ್ಟ್ರಾದ್ಯಂತ ಮುಷ್ಕರ: ಪ್ರಭು

ಅಂಕೋಲಾ: ಆನ್‌ಲೈನ್ ಔಷಧಿ ವ್ಯಾಪಾರ ನಿಲುಗಡೆ ಸಹಿತ ವಿವಿಧ ಬೇಡಿಕೆಗಳನ್ನು ಮುಂದಿರಿಸಿಕೊಂಡು ಅಖಿಲ ಭಾರತೀಯ ಔಷಧಿ ವ್ಯಾಪಾರಿಗಳ ಸಂಘದ ಕರೆಯ ಮೇರೆಗೆ ಮೇ 20ರಂದು ರಾಷ್ಟ್ರಾದ್ಯಂತ ಒಂದು ದಿನದ ಮುಷ್ಕರ ನಡೆಯಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ದೇವಿದಾಸ ಪ್ರಭು ತಿಳಿಸಿದ್ದಾರೆ.

ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆನ್‌ಲೈನ್ ಮೂಲಕ ಅನಧಿಕೃತವಾಗಿ ಔಷಧಿ ವ್ಯಾಪಾರ ನಡೆಯುತ್ತಿದ್ದು, ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲ. ನಮಗೆ ವೈದ್ಯರ ಸಲಹಾ ಚೀಟಿಯಿಲ್ಲದೇ ಔಷಧಿ ನೀಡುವಂತಿಲ್ಲ, ಆದರೆ, ಆನ್‌ಲೈನ್‌ನಲ್ಲಿ ಇಂತಹ ಯಾವುದೇ ನಿರ್ಬಂಧಗಳಿಲ್ಲ. ಹೀಗಾಗಿ ಯುವಕರು ನಿಷೇಧಿತ ಮತ್ತು ಮತ್ತು ಬರುವ ಔಷಧಿಯನ್ನು ಆನ್‌ಲೈನ್ ಮೂಲಕ ತರಿಸುತ್ತಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ. ಹೀಗಾಗಿ ಸರ್ಕಾರ ತಕ್ಷಣ ಆನ್‌ಲೈನ್ ಔಷಧಿ ವ್ಯಾಪಾರಕ್ಕೆ ತಡೆ ಮಾಡಬೇಕು ಎಂದವರು ಒತ್ತಾಯಿಸಿದರು.



ಔಷಧಿ ವ್ಯಾಪಾರಿಗಳಿಗೆ ಎನ್‌ಪಿಪಿಎ ಸಂಸ್ಥೆ ಗರಿಷ್ಠ ಬೆಲೆ ಮತ್ತು ಲಾಭಾಂಶ ಮಿತಿಯನ್ನು ನಿರ್ಧರಿಸುತ್ತದೆ. ನಮಗೆ ಲಾಭಾಂಶ ಶೇ.16 ರಷ್ಟಿದೆ. ಆದರೆ, ಆನ್‌ಲೈನ್ ವ್ಯಾಪಾರಿಗಳು ಶೇ.30ರವರೆಗೆ ಲಾಭಾಂಶ ನೀಡುತ್ತಿದ್ದು, ಇದು ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿದೆ. ಕೋವಿಡ್ ಸಂದರ್ಭದಲ್ಲಿ ಮನೆ ಮನೆಗೆ ಔಷಧಿ ತಲುಪಿಸಬಹುದು ಎಂದು ತಂದಿದ್ದ ತಿದ್ದುಪಡಿಯನ್ನು ಈಗ ಆನ್‌ಲೈನ್ ಮಾರಾಟಗಾರರು ದುರುಪಯೋಗಪಡಿಸಿಕೊಂಡು ನಿಷೇಧಿತ ಔಷಧಿಯನ್ನು ಮನೆಗೆ ತಲುಪಿಸುವಂತಹ ಮಾರಕವಿದ್ಯಮಾನ ನಡೆಯುತ್ತಿದೆ. ಹೀಗಾಗಿ ಸರ್ಕಾರ ತಕ್ಷಣ ಮಧ್ಯ ಪ್ರವೇಶ ಮಾಡಿ ನಮಗೆ ನ್ಯಾಯ ಒದಗಿಸಬೇಕು ಎಂದರು. ಒಂದು ದಿನದ ಮುಷ್ಕರ ಗ್ರಾಹಕರ ಆರೋಗ್ಯದ ದೃಷ್ಟಿಯಿಂದ ನಡೆಯುತ್ತಿದ್ದು ಎಲ್ಲರೂ ಸಹಕಾರ ನೀಡಬೇಕೆಂದು ಅವರು ವಿನಂತಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಮುಖರಾದ ಸಂಜಯ ಕಾಮತ್, ಸುಬೋಧ ನಾಯಕ, ಭಾಸ್ಕರ ರಾಯ್ಕರ್, ಸುಧೀರ ನಾಯ್ಕ, ವಿನೋದ ಪ್ರಭು ಇದ್ದರು.

ಗೀರ್ ತಳಿಯ ಎರಡು ಎತ್ತುಗಳ ರಕ್ಷಣೆ: ಇಬ್ಬರ ಬಂಧನ

ಅಂಕೋಲಾ: ಅಕ್ರಮವಾಗಿ ಗೀರ್ ತಳಿಯ ಎತ್ತುಗಳನ್ನು ಸಾಗಿಸುತ್ತಿದ್ದ ಬೊಲೇರೊ ವಾಹನ ತಾಲೂಕಿನ ಗುಂಡಬಾಳ ಮಂಗನಕಾನದ ಬಳಿ ಪಲ್ಟಿಯಾಗಿದ್ದು, ವೆಜಿಟೆಬಲ್ ಕ್ವೀನ್ ಹೆಸರಿನ ವಾಹನದಲ್ಲಿ ಮಂಡಕ್ಕಿ ಚೀಲಗಳನ್ನು ಮೇಲ್ನೋಟಕ್ಕೆ ಕಾಣುವಂತೆ ಮಾಡಿ ಭಾರೀ ಗಾತ್ರದ ಹೋರಿಗಳನ್ನು ವಧಾಲಯಕ್ಕೆ ಸಾಗಿಸುವ ತಂತ್ರಗಾರಿಕೆ ಬೆಳಕಿಗೆ ಬಂದಿದೆ.

ಕೆ.ಎ22 ಎಎ3132 ನೋಂದಣಿ ಸಂಖ್ಯೆಯ ಬೊಲೇರೊ ವಾಹನದಲ್ಲಿ ಮಂಡಕ್ಕಿ ಚೀಲಗಳ ಹಿಂಬದಿಗೆ ಹಿಂಸಾತ್ಮಕ ರೀತಿಯಲ್ಲಿ ಎತ್ತುಗಳನ್ನು ಸಾಗಿಸಲಾಗುತಿತ್ತು. ಬೊಲೇರೊ ವಾಹನ ಮಂಗನಕಾನಬಳಿ ಅಪಘಾತಕ್ಕೀಡಾಗಿ ರಸ್ತೆಯ ಪಕ್ಕ ಸರಿದು ನಿಂತಾಗ ಸಹಾಯಕ್ಕೆ ಬಂದ ಸ್ಥಳೀಯರಿಗೆ ಮಂಡಕ್ಕಿ ತುಂಬಿದೆ ಎನ್ನಲಾದ ವಾಹನದ ಭಾರ ಸಂಶಯ ಮೂಡಿಸಿದ್ದು, ಒಳಗಡೆ ಶಬ್ದ ಬರುತ್ತಿರುವುದರಿಂದ ಪರಿಶೀಲನೆ ನಡೆಸಿದಾಗ ಎರಡು ಎತ್ತುಗಳನ್ನು ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ.ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ ಪಿಎಸ್‌ಐ ಗುರುನಾಥ ಹಾದಿಮನಿ ಸ್ಥಳಕ್ಕೆ ಭೇಟಿ ನೀಡಿ ವಾಹನ ಮತ್ತು ಆರೋಪಿತರನ್ನು ವಶಕ್ಕೆ ಪಡೆದು ಹೋರಿಗಳನ್ನು ರಕ್ಷಣೆ ಮಾಡಿದ್ದಾರೆ. ಬೆಳಗಾವಿಯ ಕಿತ್ತೂರ ನಿವಾಸಿ ಅಪ್ಪಿಸಾಬ್ ಮತ್ತು ಬೈಲಹೊಂಗಲ ನಿವಾಸಿ ಸಚಿನ ಗಡ್ಡೇದ ಬಂಧಿತ ಆರೋಪಿಗಳಾಗಿದ್ದು, ವಶಪಡಿಸಿಕೊಂಡ ಗೀರ್ ತಳಿಯ ಹೋರಿಗಳು ಪ್ರತಿ ಹೋರಿ 1 ಟನ್ ಗಿಂತ ಹೆಚ್ಚಿನ ತೂಕ ಹೊಂದಿವೆ. ಸಂತಾನಾಭಿವೃದ್ಧಿ ಉದ್ದೇಶಕ್ಕೆ ಬಳಸಿ ಕೋಟ್ಯಂತರ ರೂಪಾಯಿ ಹಣಗಳಿಸಿ ಇದೀಗ ವಯಸ್ಸಾಗಿರುವುದರಿಂದ ಕಸಾಯಿಖಾನೆಗೆ ಮಾರಾಟ ಮಾಡಲಾಗಿದ್ದು ಹಿಂಸಾತ್ಮಕವಾಗಿ ಸಾಗಿಸಲಾಗುತಿತ್ತು.



ಭಾರೀ ಗಾತ್ರದ ಹೋರಿಗಳನ್ನು ಸ್ಥಳೀಯ ಕೆಲವು ಯುವಕರು ಪೊಲೀಸ್ ಇಲಾಖೆಯ ಸಹಾಯದಲ್ಲಿದ್ದ ಗೃಹರಕ್ಷಕ ಸಿಬ್ಬಂದಿಗಳು ವಾಹನದಿಂದ ಕೆಳಗಡೆ ಇಳಿಸಿ ಸಹಕರಿಸಿದ್ದು, ಪಶು ವೈದ್ಯಕೀಯ ಸಂಚಾರಿ ಅಂಬ್ಯುಲೆನ್ಸ್ ವೈದ್ಯರು ಮತ್ತು ಸಿಬ್ಬಂದಿಗಳು ಗಾಯಗೊಂಡು ಚರ್ಮ ಸುಲಿದ ಸ್ಥಿತಿಯಲ್ಲಿದ್ದ ಹೋರಿಯನ್ನು ಉಪಚರಿಸಿ ಔಷಧಿಗಳನ್ನು ನೀಡಿದ್ದು ಗೃಹರಕ್ಷಕ ದಳ ಸಿಬ್ಬಂದಿ ನಿರಂತರವಾಗಿ ನೀರು ನೀಡಿ ದಾಹ ನೀಗಿಸಿದರು.

> **ಗೋಶಾಲೆಗೆ ಹಸ್ತಾಂತರಿಸಲು ಸೂಚನೆ**
>
> ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಅವರು ಭೇಟಿ ನೀಡಿ ರಕ್ಷಿತ ಹೋರಿಗಳಿಗೆ ಆಹಾರ ನೀಡಿ ಹೋರಿಗಳಿಗೆ ಸರಿಯಾದ ಚಿಕಿತ್ಸೆ ನೀಡಿ ಗುಣಮುಖ ಆದ ನಂತರ ಗೋಶಾಲೆಗೆ ಹಸ್ತಾಂತರ ಮಾಡುವಂತೆ ಸೂಚಿಸಿದರು.

ಕಾಂಗ್ರೆಸ್ ಮುಸ್ಲಿಂ ಲೀಗ್ ಇದ್ದಂತೆ: ಜೋಶಿ

ಬಾಗಲಕೋಟೆ: ದೇಶ ವಿಭಜನೆಗಾಗಿ ಜನ್ಮ ತಾಳಿರುವುದು ಮುಸ್ಲಿಂ ಲೀಗ್. ಈಗ ಕಾಂಗ್ರೆಸ್ ಮುಸ್ಲಿಂ ಲೀಗ್ ಇದ್ದಂತೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮುಸ್ಲಿಂ ಲೀಗ್‌ನ ಮುಖ್ಯಸ್ಥರು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.



ಬಾದಾಮಿ ತಾಲೂಕಿನ ಮಹಾಕೂಟದಲ್ಲಿ ಭಾನುವಾರ ಬಿಜೆಪಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಪಂ. ದೀನದಯಾಳ್ ಉಪಾಧ್ಯಾಯ ಮಹಾಭಿಯಾನದ ಪ್ರಶಿಕ್ಷಣ ವರ್ಗ ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಮುಸ್ಲಿಂ ಲೀಗ್ ಇದ್ದಂತೆ. ಮುಸ್ಲಿಂ ಲೀಗ್ ಕೇವಲ ಮುಸ್ಲಿಂರಿಗಾಗಿ ಹುಟ್ಟಿಕೊಂಡಿರುವ ಪಕ್ಷವಲ್ಲ, ದೇಶ ಇಬ್ಭಾಗ ಮಾಡುವುದು ಅದರ ಮುಖ್ಯ ಉದ್ದೇಶ. ರಾಹುಲ್ ಗಾಂಧಿ ಮೊಹಮ್ಮದ್ ಅಲಿ ಜಿನ್ನಾ ಇದ್ದಂತೆ ಅಂತ ಟೀಕಿಸಿದರು.

ಕೇರಳದಲ್ಲಿ ಮುಸ್ಲಿಂ ಲೀಗ್‌ನ ಬೆಂಬಲದೊಂದಿಗೆ ಕಾಂಗ್ರೆಸ್ ಸರ್ಕಾರ ರಚಿಸುತ್ತಿದೆ. ಆ ಪಕ್ಷದಿಂದ ಗೆದ್ದವರೆಲ್ಲ ಮುಸ್ಲಿಂರು ಅವರನ್ನೆಲ್ಲ ಸಚಿವರನ್ನಾಗಿ ಮಾಡಲು ಕಾಂಗ್ರೆಸ್ ಹೊರಟಿದೆ. ಅಸ್ಸಾಂನಲ್ಲಿ 19 ಜನರ ಪೈಕಿ 18 ಮುಸ್ಲಿಂರು ಗೆದ್ದಿದ್ದಾರೆ. ಅಬ್ದುಲ್ ಬದ್ರುದ್ದಿನ್ ಅವರೇ ಕಾಂಗ್ರೆಸ್ ಪಕ್ಷ ಮತ್ತೊಂದು ಮುಸ್ಲಿಂ ಆಗಿದೆ ಎಂದಿದ್ದಾರೆ. ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ ಸೇರಿ 90 ಜನ ಗೆದ್ದಿದ್ದಾರೆ. ತಮಿಳುನಾಡಿನಲ್ಲಿ 5 ಜನರ ಪೈಕಿ 4 ಮುಸ್ಲಿಂರು ಗೆದ್ದಿದ್ದಾರೆ. ಮುಸ್ಲಿಂ ಲೀಗ್‌ನವರು ಪ್ರತ್ಯೇಕ ಬಜೆಟ್ ಕೇಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೂ ಕಾಂಗ್ರೆಸ್ ಬಾಂಗ್ಲಾ ನುಸುಳುಕೋರರ ಬಗ್ಗೆ ಮಾತನಾಡುವುದಿಲ್ಲ, ಡಿಸಿಎಂ ಡಿ.ಕೆ. ಶಿವಕುಮಾರ ಅವರನ್ನೆಲ್ಲ ತಮ್ಮ ಬ್ರದರ್ ಎಂದು ಹೇಳಿಕೊಳ್ಳುತ್ತಾರೆ. ರಾಹುಲ್ ಗಾಂಧಿ ಅಪ್ರಬುದ್ಧ ತಂಡ ರಾಜಕಾರಣಿ ಎಂದು ಟೀಕಾ ಪ್ರಹಾರ ನಡೆಸಿದರು.

ಸಂಸದ ಪಿ.ಸಿ.ಗದ್ದಿಗೌಡರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಶಾಸಕರಾದ ಸಿದ್ದು ಸವದಿ, ಪಿ.ಎಚ್.ಪೂಜಾರ, ಹಣಮಂತ ನಿರಾಣಿ, ಮಾಜಿ ಶಾಸಕರಾದ ದೊಡ್ಡನಗೌಡ ಪಾಟೀಲ, ವೀರಣ್ಣ ಚರಂತಿಮಠ, ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತರ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ವಿಭಾಗ ಸಹಪ್ರಭಾರಿ ಬಸವರಾಜ ಯಂಕಂಚಿ ಮತ್ತಿತರರು ಇದ್ದರು.

ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ

ಧಾರವಾಡ: ತಂಪಾದ ಹವಾಮಾನಕ್ಕೆ ಹೆಸರಾದ ಧಾರವಾಡ ಜಿಲ್ಲೆಯಲ್ಲಿ ಮಧ್ಯಾಹ್ನ ದಿಢೀರ್ ಹವಾಮಾನ ವೈಪರೀತ್ಯ ಉಂಟಾಗಿ, ಜೀವರಾಶಿಗೆ ತಂಪು ಎರೆಯುವ ಬದಲು ಜನಜೀವನವನ್ನೇ ಅಸ್ತವ್ಯಸ್ತಗೊಳಿಸುವ ಧಾರಾಕಾರ ಮಳೆ ಭಾನುವಾರ ಸುರಿದಿದೆ.

ಸುಡು ಬಿಸಿಲಿನಿಂದ ಕಂಗಾಲಾಗಿದ್ದ ಧಾರವಾಡಿಗರಿಗೆ ಈ ಮಳೆ ಆರಂಭದಲ್ಲಿ ತಂಪು ನೀಡಿದರೂ, ಸುಮಾರು ಒಂದು ಗಂಟೆಗೂ ಅಧಿಕ ಹೊತ್ತು ನಿರಂತರ ಸುರಿದ ಗುಡುಗು, ಮಿಂಚು ಹಾಗೂ ಬಿರುಗಾಳಿ ಮಿಶ್ರಿತ ಮಳೆಯು ಜನರಿಗೆ ಸಂಕಷ್ಟ ತಂದೊಡ್ಡಿತು.

ಮಳೆಯಿಂದ ಚರಂಡಿಗಳು ತುಂಬಿ ನೀರು ರಸ್ತೆಯ ಮೇಲೆ ಹರಿಯಿತು. ನಗರದ ಎನ್‌ಟಿಟಿಎಫ್, ಟೋಲ್ ನಾಕಾ, ಕೆಎಂಎಫ್, ಕೋರ್ಟ್ ಸರ್ಕಲ್ ಹತ್ತಿರದ ರಸ್ತೆ ಜಲಾವೃತವಾಗಿ ವಾಹನ ಸಂಚಾರ ಸ್ಥಗಿತಗೊಂಡ ಪರಿಣಾಮ ಸವಾರರು ಪೇಚೆಗೆ ಸಿಲುಕಿದರು.



ಈ ಅಕಾಲಿಕ ಮಳೆಯಿಂದ ಸುಭಾಷ ರಸ್ತೆ ಮತ್ತು ಟೀಕಾರೆ ರೋಡ್ ರಸ್ತೆಯ ಮಳಿಗಳಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ ಕಾಣಿಸಿತು. ತರಕಾರಿ ಮಾರುಕಟ್ಟೆ ಮತ್ತು ನೆಹರು, ಸೂಪರ್ ಮಾರ್ಕೆಟ್ ವ್ಯಾಪಾರಸ್ಥರು ಮಳೆಯಲ್ಲಿ ತೋಯ್ದು ವಹಿವಾಟು ನಡೆಸಿದರು.

ಕೆಲವು ಬಡಾವಣೆಗಳಲ್ಲಿ ಬೆಳಗ್ಗೆಯಿಂದಲೇ ವಿದ್ಯುತ್ ಸಂಪರ್ಕ ಕಡಿಗೊಳಿಸಿತ್ತು. ಮಧ್ಯಾಹ್ನದ ವೇಳೆಗೆ ಮೋಡ ಕವಿದ ವಾತಾವರಣ ಮತ್ತು ಗುಡುಗು-ಸಿಡಿಲಿನ ಅಬ್ಬರಕ್ಕೆ ವಿದ್ಯುತ್ ಕಣ್ಣಾಮುಚ್ಚಾಲೆ ಮುಂದುವರೆದು, ಸಾರ್ವಜನಿಕರು ತೊಂದರೆ ಅನುಭವಿಸಿದರು. ಮಳೆಯ ಬಿರುಗಾಳಿಗೆ ಹಲವಡೆ ಮರಗಳು, ಇನ್ನೂ ಕೆಲವು ಕಡೆಗಳಲ್ಲಿ ಮರದ ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು, ತಾಂತ್ರಿಕ ದೋಷ ಉಂಟಾಗಿ ಧಾರಾನಗರಿ ಸಾರ್ವಜನಿಕರು ಕತ್ತಲಲ್ಲಿಯೇ ಕಾಲ ಕಳೆಯುವ ಸಂದಿಗ್ಧತೆ ಕೂಡ ಎದುರಾಯಿತು.

ಕಬ್ಬಿಣದ ರಾಡ್‌ನಿಂದ ಹೊಡೆದು ಸೆಕ್ಯೂರಿಟಿ ಗಾರ್ಡ್ ಬರ್ಬರ ಹತ್ಯೆ

ಕಲಬುರಗಿ: ಸೆಕ್ಯೂರಿಟಿ ಗಾರ್ಡ್ ಒಬ್ಬರನ್ನು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಭಾನುವಾರ ಕಲಬುರಗಿ ನಗರದ ರಾಮ ಮಂದಿರದ ಬಳಿ ನಡೆದಿದೆ.



ನಗರದ ರಾಣೇಶಪೀರ್ ದರ್ಗಾ ಬಳಿ ನಿವಾಸಿ ರವಿಚಂದ್ರ ಖೇಡ್ (45) ಕೊಲೆಯಾದ ದುರ್ದೈವಿಯಾಗಿದ್ದು, ಇವರು ಇಲ್ಲಿನ ರಾಮ ಮಂದಿರದ ಸಮೀಪವಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ನಿರ್ವಹಿಸುತ್ತಿದ್ದರು ಎನ್ನಲಾಗಿದೆ.

ಘಟನೆಯ ವಿವರ: ಯಾರೋ ದುಷ್ಕರ್ಮಿಗಳು ರವಿಚಂದ್ರ ಅವರ ತಲೆಗೆ ಕಬ್ಬಿಣದ ರಾಡ್‌ನಿಂದ ಬಲವಾಗಿ ಜಜ್ಜಿ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಹತ್ಯೆಗೆ ನಿಖರವಾದ ಕಾರಣ ಏನೆಂಬುದು ಇನ್ನು ತಿಳಿದುಬಂದಿಲ್ಲ. ವೈಯಕ್ತಿಕ ದ್ವೇಷ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿದೆಯೇ ಅಥವಾ ಬೇರೆನಾದರೂ ಕಾರಣವಿದೆಯೇ ಎಂಬ ಕೋನದಲ್ಲಿ ತನಿಖೆ ಆರಂಭವಾಗಿದೆ.

ಪೊಲೀಸ್ ಭೇಟಿ ಮತ್ತು ಪರಿಶೀಲನೆ: ಘಟನಾ ಸ್ಥಳಕ್ಕೆ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಸದ್ಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆಯನ್ನು ಕೈಗೆತ್ತಿಕೊಂಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಸಮುದ್ರಕ್ಕೆ ಇಳಿಯದಂತೆ ಹವಾಮಾನ ಇಲಾಖೆ ಎಚ್ಚರಿಕೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಮೇ 18ರಂದು ಭಾರೀ ವೇಗದಲ್ಲಿ ಗಾಳಿ ಬೀಸಲಿದ್ದು ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಹವಾಮಾನ ಇಲಾಖೆಯಿಂದ ಎಚ್ಚರಿಕೆ ನೀಡಲಾಗಿದೆ.ಗಂಟೆಗೆ 40 ರಿಂದ 60 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದ್ದು ಸಮುದ್ರ ಪ್ರಕ್ಷುಬ್ಧಗೊಳ್ಳುವ ಸಾಧ್ಯತೆ ಇದ್ದು, ಮೀನುಗಾರರ ಸುರಕ್ಷತೆಯ ದೃಷ್ಟಿಯಿಂದ ಸಮುದ್ರದ ನೀರಿಗೆ ಇಳಿಯದಂತೆ ಸೂಚನೆ ನೀಡಲಾಗಿದೆ.ಮೇ 19 ರಿಂದ 21 ರವರೆಗೆ ಕರಾವಳಿಯಲ್ಲಿ ಮಳೆ ಸುರಿಯುವ ಸಾಧ್ಯತೆ ಕುರಿತು ಹವಾಮಾನ ಇಲಾಖೆ ಸೂಚನೆ ನೀಡಿದೆ.

ಶೇ.100ರಷ್ಟು ಫಲಿತಾಂಶ

ಮುಂಡಗೋಡು: 2025 26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಒಂದರ ಮರು ಮೌಲ್ಯಮಾಪನ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕ ಪಬ್ಲಿಕ್ ಸ್ಕೂಲ್ ಮಳಗಿ ಪ್ರೌಢಶಾಲಾ ವಿಭಾಗವು ಶೇಕಡಾ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ಪಡೆದು ಅತ್ಯುತ್ತಮ ಸಾಧನೆಯನ್ನು ಪ್ರದರ್ಶಿಸಿದೆ. ಒಟ್ಟು 101 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದು ಒಬ್ಬ ವಿದ್ಯಾರ್ಥಿಯು ಅನುತ್ತೀರ್ಣನಾಗಿದ್ದ ಕಾರಣದಿಂದಾಗಿ ಶಾಲೆಯ ಫಲಿತಾಂಶವು 99 ಆಗಿತ್ತು ಮರುಮೌಲ್ಯ ಮಾಪನದಲ್ಲಿ ಈ ವಿದ್ಯಾರ್ಥಿ ಉತ್ತೀರ್ಣನಾಗುವ ಮೂಲಕ ಶಾಲೆಯ ಫಲಿತಾಂಶವು ನೂರಕ್ಕೆ ನೂರು ಆಗಿ ಹೊರಹೊಮ್ಮಿದೆ.ಉಪ ಪ್ರಾಂಶುಪಾಲರ ಮಾರ್ಗದರ್ಶನದಲ್ಲಿ ಶಾಲೆಯ ಶಿಕ್ಷಕ ವರ್ಗವು ವಿದ್ಯಾರ್ಥಿಗಳ ಸಮಗ್ರ ಪ್ರಗತಿಗೆ ನಿರಂತರವಾಗಿ ವಿಶೇಷ ಕಾಳಜಿಯನ್ನು ವಹಿಸಿದ್ದು ಮತ್ತು ಪಾಲಕರ ಸಹಕಾರದ ಮೂಲಕ ಈ ಸಾಧನೆ ಸಾಧ್ಯವಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಸುಮಾ ಅವರು ಶಾಲೆಯ ಈ ಸಾಧನೆಯನ್ನು ಮುಕ್ತ ಕಂಠದಿಂದ ಪ್ರಶಂಶಿಸಿ ಅಭಿನಂದಿಸಿದ್ದಾರೆ. ಎಸ್ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮತ್ತು ಊರ ನಾಗರಿಕರು ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಅವರಿಗೆ ಬೆನ್ನೆಲುಬಾಗಿ ನಿಂತ ಶಾಲೆಯನ್ನು ಮುಕ್ತ ಕಂಠದಿಂದ ಅಭಿನಂದಿಸಿದರು.

ವ್ಯಕ್ತಿ ಆತ್ಮಹತ್ಯೆ

ಮುಂಡಗೋಡ: ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿದರೂ ಸರಿಯಾಗಿ ಗುಣಮುಖರಾಗದೆ ಅದೇ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೃತ ವ್ಯಕ್ತಿಯನ್ನು ಶಿರಸಿ ರಸ್ತೆಯ ವಡ್ಡರ ಓಣಿಯ ರಾಜಪ್ಪ ಬಸಪ್ಪ ಭೋವಿವಡ್ಡರ(67) ಎಂದು ತಿಳಿದು ಬಂದಿದ್ದುಇವರು ಕಳೆದ 7-8 ವರ್ಷಗಳಿಂದ ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿದರೂ ಸಹಾ ಅವರಿಗೆ ಸರಿಯಾಗಿ ಗುಣಮುಖರಾಗದೆ ಅದೇ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ಪಟ್ಟಣದ ಶಿರಸಿ ರಸ್ತೆಯ ವಡ್ಡರ ಓಣಿಯಲ್ಲಿರುವ ಹಳೆಯ ಮನೆಯ ಹತ್ತಿರ ಯಾವುದೋ ಕ್ರಿಮಿನಾಶಕವನ್ನು ಸೇವಿಸಿದವರಿಗೆ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ ಮುಂಡಗೋಡದಲ್ಲಿ ದಾಖಲಿಸಿ ಹೆಚ್ಚಿನ ಚಿಕಿತ್ಸೆಗೆ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿ ಹೋಗುತ್ತಿದ್ದಾಗ ಮಾರ್ಗದ ಮದ್ಯ ಪಟ್ಟಣದ ಎ.ಪಿ.ಎಮ್.ಸಿ ಹತ್ತಿರ ಸಾವನ್ನಪ್ಪಿದ್ದಾರೆ ಎಂದು ಮೃತನ ಮಗ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಭಾವನಾಬಾಯಿ ಹಜಾರೆ

ದಾಂಡೇಲಿ: ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಆಜಾದ್ ನಗರದ ನಿವಾಸಿ ಭಾವನಾಬಾಯಿ ಶಂಕರಸಿಂಗ್ ಹಜಾರೆ (92) ಭಾನುವಾರ ಸಂಜೆ ವಿಧಿವಶರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದ ಭಾವನಾಬಾಯಿ ಶಂಕರಸಿಂಗ್ ಹಜಾರೆ ಅವರು ನೇರ ನಡೆ-ನುಡಿಯ ಶಿಸ್ತಿನ



ಸಿಪಾಯಿಯಾಗಿದ್ದರು. ಸರಳ ಸಜ್ಜನಿಕೆಯ ಹಾಗೂ ಪರೋಪಕಾರಿ ಗುಣವಂತಿಕೆಯನ್ನು ಹೊಂದಿದ್ದ ಮೃತರು ದಾಂಡೇಲಿಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿಯವರ ದೊಡ್ಡಮ್ಮನಾಗಿದ್ದಾರೆ. ಮೃತರ ನಿಧನಕ್ಕೆ ಶಾಸಕ ಆರ್.ವಿ.ದೇಶಪಾಂಡೆ ಸೇರಿದಂತೆ ತಾಲೂಕಿನ ಗಣ್ಯರನೇಕರು ಕಂಬನಿಯನ್ನು ಮಿಡಿದು ಸಂತಾಪವನ್ನು ಸೂಚಿಸಿದ್ದಾರೆ.



ಸಿದ್ದಾಪುರ: ಇಲ್ಲಿಯ ಶಂಕರಮಠದಲ್ಲಿ ಬೊಮ್ಮೇಶ್ವರ ಕಲಾಕೇಂದ್ರ ಹಾಗೂ ಯಕ್ಷತರಂಗಿಣಿ ಹಾರ್ಸಿಕಟ್ಟಾ ಇವರ ಸಹಯೋಗದಲ್ಲಿ ಸಂಸ್ಥೆಯ 3ನೇ ವಾರ್ಷಿಕೋತ್ಸವದ ಪ್ರಯುಕ್ತ ಪ್ರದರ್ಶನಗೊಂಡ ಯಕ್ಷಗಾನ ಆಖ್ಯಾನಗಳಾದ ಲವ-ಕುಶ ಹಾಗೂ ಜಗನ್ಮಾತೆ ಪುಣ್ಯಕೋಟಿ ಕಲಾತ್ಮಕತೆಯಿಂದ ಮೆರೆದವು.

ಪ್ರಗತಿ ಪರಿಶೀಲನಾ ಸಭೆ: ಆಕ್ರೋಶ

ಶಿರಸಿ: ಇಲ್ಲಿನ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಜರುಗಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯು ಅಧಿಕಾರಿಗಳ ಬೇಜವಾಬ್ದಾರಿತನದ ವಿರುದ್ಧದ ಆಕ್ರೋಶಕ್ಕೆ ಸಾಕ್ಷಿಯಾಯಿತು.

ಸಭೆಯ ಅಧ್ಯಕ್ಷತೆವಹಿಸಿದ್ದ ಸುಮಾ ಉಗ್ರಾಣಕರ ಅವರು, ಬೇರೆಯವರ ಸಾಲಕ್ಕೆ ಜಾಮೀನುದಾರರಾದ ಬಡ ಮಹಿಳೆಯರ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಬ್ಯಾಂಕುಗಳು ಅಕ್ರಮವಾಗಿ ತಡೆಹಿಡಿಯುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಹೆಸ್ಕಾಂ ಇಲಾಖೆಯ ಕಾರ್ಯವೈಖರಿ ಕುರಿತು ಸದಸ್ಯ ಕಿರಣ ಮರಾಠೆ ಮಾತನಾಡಿ, ಅಪಾಯಕಾರಿ ವಿದ್ಯುತ್ ತಂತಿಗಳ ಸ್ಥಳಾಂತರಕ್ಕೆ ಗುತ್ತಿಗೆದಾರರು ಹಣ ಬೇಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ವಿದ್ಯುತ್ ಸಮಸ್ಯೆ ಮಿತಿಮೀರಿದ್ದು, ಅಧಿಕಾರಿಗಳು ದೂರವಾಣಿ ಕರೆ ಸ್ವೀಕರಿಸುವ ಸೌಜನ್ಯ ತೋರುತ್ತಿಲ್ಲ ಎಂದು ಶ್ರೀಧರ ಭಟ್ ವಾನಳ್ಳಿ ಅಸಮಾಧಾನ ಹೊರಹಾಕಿದರು.ಇಲಾಖೆಗಳ ಮುಖ್ಯ ಅಧಿಕಾರಿಗಳ ಗೈರು ಹಾಜರಿಯನ್ನು ತರಾಟೆಗೆ ತೆಗೆದುಕೊಂಡ ಪ್ರಸನ್ನ ಶೆಟ್ಟಿ, ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಮುಂದುವರಿದರೆ ಸಮಿತಿಗೆ ಸಾಮೂಹಿಕ ರಾಜೀನಾಮೆ ನೀಡುವುದಾಗಿ ಎಚ್ಚರಿಸಿದರು. ಸಭೆಯಲ್ಲಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ನಾಗರಾಜ ಮುರುಡೇಶ್ವರ, ಯೋಜನಾಧಿಕಾರಿ ಅಶೋಕ ನಾಯ್ಕ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಶಿರಸಿ: ಇಲ್ಲಿನ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಜರುಗಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯು ಅಧಿಕಾರಿಗಳ ಬೇಜವಾಬ್ದಾರಿತನದ ವಿರುದ್ಧದ ಆಕ್ರೋಶಕ್ಕೆ ಸಾಕ್ಷಿಯಾಯಿತು.

ಅಕಾಲಿಕ ಮಳೆಯಿಂದ ಬೆಳೆಗೆ ಹಾನಿ | ಆತಂಕದಲ್ಲಿ ಬೆಳೆಗಾರರು

ಮಾವು ಇಳುವರಿ ಕುಸಿತ

ಸಂತೋಷ ರಾಯ್ಕರ

ದಿಗಂತ ವಿಶೇಷ

ಮುಂಡಗೋಡ: ಮಳೆಗಾಲ ಆರಂಭವಾಗುವ ಮುನ್ನವೆ ಕಳೆದ ಒಂದು ತಿಂಗಳಲ್ಲಿ 2-3 ಬಾರಿಗೆ ಅಕಾಲಿಕವಾಗಿ ಆಲಿಕಲ್ಲು ಮಳೆಯಿಂದ ತಾಲೂಕಿನ ಮಾವು ಬೆಳೆಗಾರರ ಹತ್ತು ಹಲವು ವರ್ಷಗಳಲ್ಲಿ ಈ ಭಾರಿ ಇಳುವರಿಯು ಕಡಿಮೆಯಾಗಿ ಬೆಳೆಯ ಬೆಲೆಯಲ್ಲಿ ಕುಸಿತ ಕಂಡಿದ್ದು ನಷ್ಟ ಅನುಭವಿಸುತ್ತರುವುದರ ಜೊತೆಗೆ ಆಲಿಕಲ್ಲು ಮಳೆಯಿಂದ ಮಾವಿನ ಕಾಯಿಗಳು ಮರದಲ್ಲೆ ಕೊಳೆತು ಮಾವು ಬೆಳೆಗಾರರಲ್ಲಿ ಬೇಸರ ಮೂಡಿಸಿದೆ.

ಪ್ರಸಕ್ತ ಸಾಲಿನಲ್ಲಿ ತಾಲೂಕಿನಲ್ಲಿ ಒಟ್ಟು 545 ಹೆಕ್ಟೇರ್ ಪ್ರದೇಶದಲ್ಲಿ ರೈತರು ಮಾವು ಬೆಳೆದಿದ್ದು ಸಾಮಾನ್ಯವಾಗಿ ಎಲ್ಲ ಕಡೆ ಮಾವಿನ ಗಿಡಗಳು ಹೂವು ಬಿಟ್ಟು ಕಾಯಿಗಳಿಂದ ಕಂಗೊಳಿಸಿದ್ದವು. ಆದರೆ ಈ ವರ್ಷ ಮಾವಿನ ಹೂವು ಬಿಟ್ಟು ಕಾಯಿಯಾಗಿ, ಕಾಯಿ ಬೆಳೆಯುವ ಸಂದರ್ಭದಲ್ಲಿ ಅಕಾಲಿಕ ಮಳೆಯಾಗಿದ್ದರಿಂದ ಇಳುವರಿಯಲ್ಲಿ ಕಡಿಮೆಯಾಗಿದೆ.

ತಾಲೂಕಿನಲ್ಲಿ ಪಾಳಾ ಹೋಬಳಿಯಲ್ಲಿ ಹೆಚ್ಚು ಮಾವು ಬೆಳೆಯ ಪ್ರಮುಖ ತಾಣವಾಗಿದ್ದು ಈ ಗ್ರಾಮವೊಂದರಲ್ಲಿಯೇ ಸುಮಾರು 40-50 ಹೆಕ್ಟರ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ತಾಲೂಕಿನಲ್ಲಿ ಈ ಭಾರೀ ಪ್ರಮಾಣದಲ್ಲಿ ಮಾವು ಬೆಳೆ ರೈತರಿಗೆ ಆತಿ ಹೆಚ್ಚು ನಷ್ಟ ಉಂಟಾಗುವ ಸ್ಥಿತಿಗೆ ತಂದೊಡ್ಡಿದೆ.

ಕಳೆದ ವರ್ಷ ಈ ಸಮಯದಲ್ಲಿ ಕೆ.ಜಿಗೆ 200 ರೂಪಾಯಿ ಇದ್ದರೆ ಈ ಬಾರಿ 70-80 ರೂ ಇದೆ ಇದು



ಮಾವು ಬೆಳೆಗಾರರಿಗೆ ಚಿಂತೆಗೆ ಇಡುಮಾಡಿದೆ.

ಮಾವಿನ ತಳಿಗಳು: ತಾಲೂಕಿನಲ್ಲಿ ಶೇ.90ರಷ್ಟು ರೈತರು ಆಪೂಸ್ ತಳಿಯ ಮಾವು ಬೆಳೆಯುತ್ತಾರೆ. ಪಾಳಾ ಭಾಗದ ಮಣ್ಣಿನ ಗುಣ ಮತ್ತು ಹವಾಮಾನದ ಪೂರಕ ವಾತಾವರಣದಿಂದ ಆತಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಇಲ್ಲಿ ಆಪೂಸ್, ರಸಪೂರಿ, ತೋತಾಪೂರಿ ಹಣ್ಣುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇನ್ನುಳಿದಂತೆ ನೀಲಂ, ಸಿಂಧೂರಾ, ಬಿನಶಾ, ಮಲಗೋವಾ, ಮಾಂಕುರ, ಮಲ್ಲಿಕಾ, ಕೇಸರ ತಳಿಯ ಮಾವು ಬೆಳೆಯುತ್ತಾರೆ.

ವಿಶೇಷವಾಗಿ ಪಾಳಾ ಭಾಗದಿಂದ ರಫ್ತಾಗುವ ಮಾವು ಮಹಾರಾಷ್ಟ್ರ ರಾಜ್ಯದ ಮಾರುಕಟ್ಟೆಯಲ್ಲಿ ಒಳ್ಳೆಯ ಬೇಡಿಕೆ ಇತ್ತು. ಇದಲ್ಲದೆ ಹೊರದೇಶಗಳಾದ ಯುರೋಪ್ ಮತ್ತು ಗಲ್ಫ್ ದೇಶಗಳಿಗೂ ಮಾವು ರಫ್ತಾಗುತ್ತಿತ್ತು. ಪಾಳಾ ಗ್ರಾಮದ ಮಾವಿನ ಹಣ್ಣುಗಳಿಗೆ ಇಡೀ ಏಷ್ಯಾದಲ್ಲಿಯೇ ಹೆಚ್ಚಿನ ಬೇಡಿಕೆ ಇತ್ತು. ಆದರೆ ಈ ವರ್ಷ ಮಾವು ಬೆಳೆ ಸಮರ್ಪಕವಾಗಿ ಬೆಳೆಯಲಾಗದೆ. ಬೆಲೆಯಲ್ಲಿ ಕುಸಿತ ಕಂಡಿದ್ದರಿಂದ ವಿದೇಶಕ್ಕೆ ಹಾಗೂ ಬೇರೆ ರಾಜ್ಯಗಳಿಗೆ ಕಳುಹಿಸಲಾಗಿಲ್ಲ ಎಂದು ಮಾವು ಬೆಳೆಗಾರ ಜಾಪರ ಹೇಳಿದರು.

> ಕಳೆದ ಹತ್ತು ವರ್ಷಗಳಿಂದ ಮಾವಿನ ಹಣ್ಣಿನ ವ್ಯಾಪಾರ ಮಾಡುತ್ತಿದ್ದೇವೆ. ವರ್ಷಕ್ಕೆ ಮೂರು ಎಕರೆ ಜಮಿನುಗಳಲ್ಲಿ 100 ಗಿಡಗಳಿದ್ದು ಅದರಲ್ಲಿ ಎಲ್ಲ ತರಹದ ಮಾವಿನ ಹಣ್ಣುಗಳು ಇವೆ. ಈ ವರ್ಷ ಹೊರದೇಶಕ್ಕೆ ನಮ್ಮ ಹಣ್ಣುಗಳು ಹೋಗದೆ ಬೆಲೆಯಲ್ಲಿ ಕುಸಿತಗೊಂಡಿದೆ . ಮೊದಲು ಎಲ್ಲಾ ಎರಡು ನೂರುಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದೇವು. ಈಗ 70, 80 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ.
>
> ■ ಮೇಹಬುಬ ಅಲಿ ಪಾಟೀಲ, ಹಣ್ಣಿನ ವ್ಯಾಪಾರಿ

> ಪಾಳಾ ಹೋಬಳಿಯಲ್ಲಿ ಮಾವು ಉತ್ತಮವಾಗಿದೆ. ಈ ಬಾರಿ ಬಂಪರ್ ಫಲ ನಿರೀಕ್ಷೆ ಇತ್ತು. ಆದರೆ ಈ ವರ್ಷ ಅಕಾಲಿಕ ಮಳೆ ಹಾಗೂ ಹವಾಮಾನದ ಹೆರುಪೇರಿನಿಂದ ತಾಲೂಕಿನ ಎಂಬತರಷ್ಟು ಇಳುವರಿ ಕಡಿಮೆಯಾಗಿದೆ. ನಷ್ಟವಾದ ಮಾವು ಬೆಳೆಗಾರರಿಗೆ ಈಗಾಗಲೇ ಹಾನಿಯಾದ ಬೆಳೆಗಾರರಿಗೆ ವಿಮೆ ಪಡೆಯುವಂತೆ ತಿಳಿಸಲಾಗಿದೆ. ಸದ್ಯ ಬೇರೆ ಬೇರೆ ತಾಲೂಕಿನಿಂದ ನಮ್ಮ ತಾಲೂಕಿಗೆ ಹಣ್ಣುಗಳು ಮಾರುಕಟ್ಟೆಗೆ ಆಗಮಿಸದ್ದರಿಂದ ಬೆಲೆಯಲ್ಲಿಯು ಸಹ ಕುಸಿತ ಕಂಡಿದೆ.
>
> ■ ಕೃಷ್ಣ ಕುಳ್ಳೂರ, ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕ

ಸ್ವಸ್ಥ ಸಮಾಜ ನಿರ್ಮಾಣಕ್ಕೆ ಭಗವದ್ಗೀತೆ ಅವಶ್ಯ

ಯಲ್ಲಾಪುರ: ಇಂದು ಪ್ರತಿಯೊಬ್ಬರಲ್ಲೂ ಆತಂಕ, ಉದ್ವೇಗ ಸದಾ ಚಡಪಡಿಕೆ ಅಧಿಕವಾಗಿ ಮನೋಶಕ್ತಿ ಪಾತಾಳಕ್ಕಿಳಿದಿದೆ. ಇದಕ್ಕೆ ಪರಿಹಾರವೆಂದರೆ ಭಗವದ್ಗೀತೆಯ ಪಠಣ, ಚಿಂತನೆ, ಸಂದೇಶ ಮಕ್ಕಳ,ಹದಿಹರೆಯದವರ ಜೀವನಕ್ಕೆ ಉತ್ತಮ ಬೋಧನೆ ನೀಡುತ್ತದೆ. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಭಗವದ್ಗೀತೆ ಮಹತ್ವದ ಪಾತ್ರವಹಿಸುತ್ತದೆ ಎಂದು ತಾಲೂಕಾಸ್ಪತ್ರೆಯ ವೈದ್ಯೆ ಡಾ ಸೌಮ್ಯಾ ಕೆ.ವಿ ಹೇಳಿದರು.

ಅವರು ಭಾನುವಾರ ಪಟ್ಟಣದ ಕಾರ್ಮಿಕ ಭವನದಲ್ಲಿ ಗೀತಾಜ್ಞಾನ ಯಜ್ಞ ಸಮಿತಿ ಹಾಗೂ ವಿವಿಧ ಗೀತಾ ಪಾರಾಯಣ ತಂಡಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 11ನೇ ರಾಜ್ಯಮಟ್ಟದ ಸ್ನೇಹಸಮ್ಮೀಲನ ಹಾಗೂ ಗೀತಾಜ್ಞಾನ ಯಜ್ಞದ ನೂತನ ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಭಗವದ್ಗೀತೆ ಕೆಲವರಿಗೆ ಓದಿದ ತಕ್ಷಣವೇ ಅರ್ಥವಾಗದಿದ್ದರೂ ಆ ಪ್ರಕ್ರಿಯೆಯಿಂದ ನಮ್ಮ ಮನಸ್ಸು ಶುದ್ಧವಾಗುತ್ತದೆ. ಕೊಳಲಿನ ಚಿತ್ರವಿರುವ ಕೃತಿಗಳ ಮುಖಪುಟವೇ ತುಂಬಾ ಆಪ್ತವಾಗಿದ್ದು ನೋವಿನ ಹಿಂದೆ ನಲಿವು ಇದೆ ಎಂಬುದನ್ನು ಸಾಂಕೇತಿಸುತ್ತದೆ ಎಂದರು.

ಆಕಾಶವಾಣಿಯ ನಿವೃತ್ತ ಕಲಾವಿದ ದಿವಾಕರಕೆರೆಹೊಂಡ ಮುಖ್ಯವಕ್ತಾರರಾಗಿ ಮಾತನಾಡಿ, ಭಗವದ್ಗೀತೆ ಮತೀಯ ಪುಸ್ತಕವಲ್ಲ ಇದು ಜೀವನ ಧರ್ಮ. ಗೀತೆಯಲ್ಲಿ ಸರ್ವಸ್ವವೂ ಅಡಗಿದೆ. ನಮ್ಮ ದೇಶಕ್ಕೆ ದೇಶ-ವಿದೇಶದ ಗಣ್ಯರು ಬಂದಾಗ ವಿಶೇಷ ವಸ್ತುವಿನ ನೆನಪಿನ ಕಾಣಿಕೆ ಕೊಡುವ ಸಂಪ್ರದಾಯವಿದೆ. ಭಗವದ್ಗೀತೆ ಎಂಬುದು ಪಾಠವಲ್ಲ, ಶ್ರದ್ಧೆ ತಿಳುವಳಿಕೆ ಮೂಡಿಸುವಂತ ಗೀತೆ ಎಲ್ಲರಲ್ಲೂ ಬಿತ್ತುವ ಸಂಗತಿ ಹೊರತು ಬಚ್ಚಿಡುವದಲ್ಲ, ಪಠಣಕ್ಕೆ ದಿನದಲ್ಲಿ 1 ತಾಸು ಮೀಸಲಿಟ್ಟು ಆಸಕ್ತರೆಲ್ಲರಿಗೂ ಹೇಳಿಕೊಡಬೇಕು ಎಂದರು.

ಪ್ರಧಾನ ಗುರುಗಳಾದ ಸುಬ್ರಾಯ ನಂದೋಡಿ ಮಾತನಾಡಿ, ಸಮಿತಿಯಿಂದ ಅಸಾಹಾಯಕರಿಗೆ ಆಸರೆ ಆರೋಗ್ಯ, ಶಿಕ್ಷಣ ನೀಡುವದಕ್ಕಾಗಿ ಸೇವಾನಿಧಿ ಸ್ಥಾಪಿಸಲಾಗುವದು. ಮುಂದಿನ 12ನೇ ಸ್ನೇಹ ಸಮ್ಮೀಲನ ಕಾಸರಗೋಡು ಜಿಲ್ಲೆಯಲ್ಲಿ ನಡೆಸಲಾಗುವದು ಎಂದು ತಿಳಿಸಿದರು. ವಿದ್ವಾನ ಶಂಕರಭಟ್ಟ ಬಾಲಿಗದ್ದೆ ದಂಪತಿ ಕಾರ್ಯಕ್ರಮ ಉದ್ಘಾಟಿಸಿದರು. ಶಾಸಕ ಶಿವರಾಮ ಹೆಬ್ಬಾರ ಉಪಸ್ಥಿತರಿದ್ದರು. ವಿನುತಾ ಕೋಟೆಮನೆ ಸ್ವಾಗತಿಸಿದರು. ಮಹಾದೇವಿ ಭಟ್ಟ, ಮಮತಾ ಭಟ್ಟ ನಿರೂಪಿಸಿದರು. ರಚನಾ ಹೆಗಡೆ ಸೋಂದಾ ಸ್ವರ್ಣವಲ್ಲಿ ಶ್ರೀಗಳ ಸಂದೇಶವನ್ನು ವಾಚಿಸಿದರು. ಸಂಧ್ಯಾ ಹೆಗಡೆ ಕೊಡದಕುಳಿ ವಂದಿಸಿದರು. ಶಕುಂತಲಾ ಹೆಗಡೆ ಹಿರೇಸರ ಹಾಗು ಸಂಗಡಿಗರು ಧ್ಯೇಯಗೀತೆ ಹಾಡಿದರು. ರಾಜ್ಯದ ವಿವಧೆಡೆಯಿಂದ ಆಗಮಿಸಿದ್ದ ಸಾವಿರಾರು ಮಾತೆಯರು ಸಾಮೂಹಿಕವಾಗಿ ಭಗವದ್ಗೀತೆಯನ್ನು ಪಠಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ಎನ್‌ಎಸ್‌ಎಸ್‌ನಿಂದ ಸೇವಾ ಮನೋಭಾವ ವೃದ್ಧಿ



ಅಂಕೋಲಾ: ವಿದ್ಯಾರ್ಥಿಗಳಲ್ಲಿ ಶ್ರಮ ಜೀವನದಿಂದಶಿಸ್ತು ರೂಪುಗೊಳ್ಳುತ್ತದೆ.ಎನ್‌ಎಸ್‌ಎಸ್ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಮೂಡಿಸುತ್ತವೆ. ಮುಖ್ಯವಾಗಿ ತಂದೆ-ತಾಯಿಗಳನ್ನು ಗೌರವಿಸುವುದು ಗುರು ಹಿರಿಯರ ವಿಚಾರಗಳನ್ನು ಪಾಲಿಸುವುದು ಇಂದಿನ ಯುವ ಜನತೆಯ ಕರ್ತವ್ಯವಾಗಿದೆ ಎಂದು ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್ ಹೇಳಿದರು.

ಕಳೆದ ಒಂದು ವಾರದಿಂದ ಕವಿವಿ ಮಟ್ಟದ ನಾಯಕತ್ವ ಶಿಬಿರ ನಡೆಯುತ್ತಿರುವ ಪಟ್ಟಣದ ಜಿ. ಸಿ.ಕಾಲೇಜಿಗೆ ಭಾನುವಾರ ಭೇಟಿ ನೀಡಿದ ಸಂದರ್ಭದಲ್ಲಿ ಸ್ವಯಂ ಸೇವಕರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕವಿವಿ ಎನ್‌ಎಸ್‌ಎಸ್ ಅಧಿಕಾರಿ ಡಾ.ಎಂ.ಬಿ. ದಳಪತಿ, ಸಿಂಡಿಕೇಟ್ ಸದಸ್ಯ ಶಿವಾನಂದ ನಾಯಕ ಉಪಸ್ಥಿತರಿದ್ದರು.

ಅಧ್ಯಾಪಕರಾದ ಆರ್.ಪಿ.ಭಟ್, ಆರ್. ಅಶ್ವಿನ್, ಕೆ.ಬಿ.ಮಹಾಲೆ, ಸಿಬ್ಬಂದಿ, ಎಸ್. ಎಂ.ಸಜ್ಜನ, ಸಚಿನ್ ಶೆಟ್ಟಿ ಮಂಜು ಆಗೇರ ಸಹಕರಿಸಿದರು.ಶಿಬಿರಾಧಿಕಾರಿ ನಂಜುಂಡಯ್ಯ ಸ್ವಾಗತಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಸಿದ್ದಲಿಂಗಸ್ವಾಮಿ ವಸ್ತ್ರದ ಎನ್.ಎಸ್.ಎಸ್. ಸ್ವಯಂಸೇವಕರ ರಚನಾತ್ಮಕ ಚಟುವಟಿಗಳನ್ನು ಶ್ಲಾಘಿಸಿದರು. ಶಿಬಿರಾರ್ಥಿಗಳಾದ ಕವಿತಾ ಅಂಬಿಗ ಪ್ರಾರ್ಥಿಸಿದರು. ಐಶ್ವರ್ಯ ಗೊಂಡಳ್ಳಿ ನಿರೂಪಿಸಿದರು. ವಿಜಯಕುಮಾರ ಹಂಡಿ ವಂದಿಸಿದರು.



ಭಟ್ಕಳ : ಪಟ್ಟಣದಲ್ಲಿ ಗುಡುಗು ಮಿಂಚಿನೊಂದಿಗೆ ಗಾಳಿ ಸಹಿತ ಭಾರೀ ಮಳೆ ಸುರಿದ ಭಾರೀ ಮಳೆಗೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಪ್ರದೇಶವಾದ ಸಂಶುದ್ದೀನ ವೃತ್ತ, ರಂಗೀನಕಟ್ಟೆ ಮುಂತಾದ ಕಡೆ ಮಳೆ ನೀರು ರಸ್ತೆ ಮೇಲೆ ನಿಂತು ಜನ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು ಜನರು ಆಕ್ರೋಶ ವ್ಯಕ್ತಪಡಿಸಿದರು.

ವಿಜೃಂಭಣೆಯ ತಲಗೋಡಿನ ಯಕ್ಷಿ ಚೌಡೇಶ್ವರಿ ಜಾತ್ರಾಮಹೋತ್ಸವ

ಕುಮಟಾ: ತಾಲೂಕಿನ ಊರಕೇರಿ ವ್ಯಾಪ್ತಿಯ ಪ್ರಸಿದ್ಧ ಕ್ಷೇತ್ರ ತಲಗೋಡಿನ ಸ್ವರ್ಣ ಮಹಾಸತಿ ಯಕ್ಷಿ ಚೌಡೇಶ್ವರಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಆಯೋಜಿಸಲಾಗಿದ್ದ ದೇವರ ವಾರ್ಷಿಕ ಪೂಜೆ, ಜಾತ್ರಾ ಮಹೋತ್ಸವ ಹಾಗೂ ಬಂಡಿಹಬ್ಬ ಶ್ರದ್ಧಾಭಕ್ತಿ, ಧಾರ್ಮಿಕ ವೈಭವ ವಿಜೃಂಭಣೆಯಿಂದ ನಡೆಯಿತು.

ಮೂರು ದಿನಗಳ ಕಾಲ ನಡೆದ ಉತ್ಸವದಲ್ಲಿ ವೈದಿಕ ಸಂಪ್ರದಾಯದಂತೆ ವಿವಿಧ ಹೋಮ-ಹವನ, ಪೂಜೆ, ಬಲಿ, ಉತ್ಸವ ಹಾಗೂ ವಿಶೇಷ ಸೇವೆಗಳು ಶಾಸ್ತ್ರೋಕ್ತವಾಗಿ ಜರುಗಿದವು. ಕ್ಷೇತ್ರದ ಸುತ್ತಮುತ್ತಲಿನ ಭಾಗಗಳಷ್ಟೇ ಅಲ್ಲದೆ ದೂರದ ಊರುಗಳಿಂದಲೂ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದೇವಿಯ ದರ್ಶನ ಪಡೆದರು.


ಉತ್ಸವದ ಮೊದಲದಿನ ಬೆಳಿಗ್ಗೆ ಗಣಪತಿ ಪೂಜೆ,



ದೇವತಾ ಪ್ರಾರ್ಥನೆ, ಪುಣ್ಯಾಹ, ನಾಂದಿ, ಕೌತುಕ ಬಂಧನಹಾಗೂಶುದ್ಧಿ ಹವನಗಳುನಡೆದವು. ಎರಡನೇ ದಿನ ಪ್ರಾತಃಕಾಲ ಬಲಿ, ದೇವರ ಮೂಲಮಂತ್ರ ಹೋಮ, ಅಧಿವಾಸ ಹೋಮ, ಕಲಾವೃದ್ಧಿ ಬಲಿಪೂಜೆ ಹಾಗೂ ಮಹಾಪೂಜೆ ಜರುಗಿತು. ಸಮಾರೋಪದ ದಿನ ಶಾಂತಿಹೋಮ, ಪ್ರಾಯಶ್ಚಿತ್ತ ಹೋಮ, ಸರ್ವರಕ್ಷಾರ್ಥ ಮೃತ್ಯುಂಜಯ ಹೋಮ, ಪ್ರಸನ್ನ ಚಂಡಿಕಾ ಹೋಮ, ಹೂಕಳಬಲಿ, ತೀರ್ಥಸ್ನಾನ, ಮಹಾಪೂರ್ಣಾಹುತಿ ಹಾಗೂ ಮಹಾಪೂಜೆಗಳು ನಡೆದವು. ಸಂಜೆ ನಡೆದ ದೇವರ ಕಲಶೋತ್ಸವ (ಬಂಡಿಹಬ್ಬ) ಕಾರ್ಯಕ್ರಮವು ಭಕ್ತರಲ್ಲಿ ವಿಶೇಷ ಭಕ್ತಿ ಸಂಭ್ರಮ ಮೂಡಿಸಿತು. ಉತ್ಸವದ ಅವಧಿಯಲ್ಲಿ ಅನ್ನದಾನ, ಹೂವಿನ ಪೂಜೆ ಹಾಗೂ ಅಲಂಕಾರ ಸೇವೆಗಳು ನಿರಂತರವಾಗಿ ನಡೆದವು.ದೇವಸ್ಥಾನದ ಪ್ರಧಾನ ಅರ್ಚಕರಾದ ಪರಮೇಶ್ವರ ಸ್ವಾಮಿ, ಸ್ವಯಂಸೇವಾ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹಾಗೂ ತಲಗೋಡು ಕ್ಷೇತ್ರದ ಭಕ್ತವೃಂದದ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಭಾರೀ ಮಳೆ: ಅಪಾರ ಪ್ರಮಾಣದ ಹಾನಿ

ಮುಂಡಗೋಡ: ತಾಲೂಕಿನಾದ್ಯಂತ ಭಾನುವಾರ ಒಂದು ಗಂಟೆಗೂ ಅಧಿಕ ಗುಡುಗು,ಮಿಂಚು, ಗಾಳಿ ಸಹಿತ ಭಾರೀ ಮಳೆಯಾಗಿದ್ದರಿಂದ ತಾಲೂಕಿನ ವಿವಿಧ ಕಡೆಗಳಲ್ಲಿ ವಿದ್ಯುತ್ ಕಂಬಗಳು ಮರಗಳು ನೆಲಕ್ಕೂರುಳಿ ಅಪಾರ ಪ್ರಮಾಣದ ಹಾನಿ ಸಂಭವಿಸಿದ ಘಟನೆ ಜರುಗಿದೆ.



ಚವಡಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯ ಕ್ಯಾಸಿನಕೇರಿ ಗ್ರಾಮದ ಅಜ್ಜಯ್ಯನ ಗುಡಿಯ ಹತ್ತಿರ ಪಟ್ಟಣದಿಂದ ಗ್ರಾಮೀಣ ಭಾಗಗಳಿಗೆ ಹಾದೂ ಹೋಗುವ 11 ಕೆವಿ ವಿದ್ಯುತ ತಂತಿಗೆ ಸಿಡಿಲು ಬಡಿದು ತುಂಡಾಗಿ ಬಿದ್ದಿದೆ. ಇದರಿಂದ ಗ್ರಾಮೀಣ ಭಾಗಗಳಾದ ಚವಡಳ್ಳಿ, ಬ್ಯಾನಳ್ಳಿ, ಟಿಬೆಟಿಯನ್ ಕ್ಯಾಪ, ಮಲವಳ್ಳಿ ಸೇರಿದಂತೆ ಅನೇಕ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯ ಆಗಬಹುದಾಗಿದೆ.ಟಿಬೆಟಿಯನ ಕ್ಯಾಂಪಗಳಲ್ಲಿ 10 ಕ್ಕೂ ಹೆಚ್ಚು ಕಂಬಗಳು ನೆಲಕ್ಕೂರುಳಿವೆ. ಹಾಗೂ ಬೃಹತ್ ಗಾತ್ರದ ಮರಗಳು ನೆಲಕ್ಕೂರುಳಿ ಸಂಚಾರ ಕೂಡ ಕೆಲವು ಹೊತ್ತು ಬಂದಾಗಿತ್ತು. ನಂತರ ಹೆಸ್ಕಾಂ ಸಿಬ್ಬಂದಿಗಳ ಸಾರ್ವಜನಿಕರ ಸಹಾಯದಿಂದ ಮರಗಳನ್ನು ತೆರವುಗೊಳಿಸಲಾಯಿತು.

ಸಿಡಿಲು ಬಡಿದು ಜಾನುವಾರುಗಳ ಸಾವು

ಹಳಿಯಾಳ: ತಾಲೂಕಿನಾದ್ಯಂತ ಮತ್ತು ಪಟ್ಟಣದಲ್ಲಿ ಭಾರಿ ಬಿರುಗಾಳಿ ಮಳೆ, ಗುಡುಗು- ಸಿಡಿಲಿಗೆ ಭಾರೀ ಹಾನಿ ತಾಲೂಕಿನಾದ್ಯಂತ ಸಂಭವಿಸಿದೆ.ಮಧ್ಯಾಹ್ನದ ನಂತರ ಪ್ರಾರಂಭವಾದ ಬಿರುಗಾಳಿಗೆ



ಹಳಿಯಾಳ ಪಟ್ಟಣ ಸಂಪರ್ಕಿಸುವ ಎಲ್ಲಾ ರಸ್ತೆಗಳ ಮೇಲೆ ಭಾರಿ ಮರಗಳು ಉರುಳಿ ಬಿದ್ದ ಪರಿಣಾಮ ತಾತ್ಕಾಲಿಕವಾಗಿ ಸಂಪರ್ಕ ರಸ್ತೆ ಬಂದ್ ಆಗಿದ್ದವು. ತಕ್ಷಣವೇ ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಕಂದಾಯ ಇಲಾಖೆ ಸಿಬ್ಬಂದಿ ರಸ್ತೆ ತೆರವು ಗೊಳಿಸಿ ಸಂಚಾರ ಸುಗಮಗೊಳಿಸಿದರು.ಪಟ್ಟಣದ ಇಂದಿರಾನಗರದ ಕೆಲ ಮನೆಗಳಿಗೆ ಮಳೆ ನೀರು ನುಗ್ಗಿದ ವರದಿ ಕೂಡ ದೊರೆತಿದೆ. ತಾಲೂಕಿ ನ ಮಂಗಳವಾಡ ದ ರೋಮನ್ ಬಾವತಿಸ್ ಡಾಲಮೇತ್ ಇವರ 2 ಎತ್ತು 1 ಆಕಳು ಭಾನುವಾರ ಸಂಜೆ ಸಿಡಿಲು ಬಡಿದು ಮೃತಪಟ್ಟಿವೆ.

ಮನೆ ಹಂಚಿಕೆ ದಿನಾಂಕ ನಿಗದಿಪಡಿಸಿ: ಸೋಮೇಶ್ವರ ನಾಯ್ಕ

ಯಲ್ಲಾಪುರ: ಕೊಳಚೆ ನಿರ್ಮೂಲನಾ ಮಂಡಳಿಯಿಂದ 7 ವರ್ಷಗಳ ಹಿಂದೆ ಪಟ್ಟಣದ ಹೆಬ್ಬಾರ ನಗರದಲ್ಲಿ ಜಿ+2 ಮನೆಯ ಹಂಚಿಕೆಗಾಗಿ 350 ಫಲಾನುಭವಿಗಳಿಂದ ತಲಾ 50 ಸಾವಿರ ರೂ. ಪಡೆಯಲಾಗಿತ್ತು. ಆದರೆ, ಈವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ, ಮನೆಯೂ ಹಂಚಿಕೆಯಾಗಿಲ್ಲ. ಯೋಜನೆಯ ಹೆಸರಿನಲ್ಲಿ ನಡೆಯುತ್ತಿರುವ ಹಗಲು ದರೋಡೆ ಎಂದು ಬಿಜೆಪಿಯ ನಗರ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸೋಮೇಶ್ವರ ನಾಯ್ಕ ಆರೋಪಿಸಿದರು.

ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

ಎರಡು ತಿಂಗಳುಗಳ ಹಿಂದೆ ಬಿಜೆಪಿ ಈ ಕುರಿತು ಪ್ರತಿಭಟನೆ ನಡೆಸಿದಾಗ ತಹಶೀಲ್ದಾರರು ಕೆಲವೇ ದಿನಗಳಲ್ಲಿ ಮನೆ ಹಂಚಿಕೆ ಮಾಡುವ ಭರವಸೆಯನ್ನೇ ನೀಡಿದ್ದರು. ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ಇದರ ನಡುವೆಯೇ ಕೆಲವರು ಜಿ+2 ಮನೆಗಳ ಫಲಾನುಭವಿಗಳು ಮತ್ತೆ ಕೊಳಚೆ ನಿರ್ಮೂಲನಾ ಮಂಡಳಿಗೆ 50 ಸಾವಿರರೂ ಹಾಗೂ ಹೆಬ್ಬಾರ್ ನಗರ ನಿವಾಸಿಗಳ ಒಕ್ಕೂಟಕ್ಕೆ 25 ಸಾವಿರ ರೂ. ಸೇರಿ ಒಟ್ಟು 75 ಸಾವಿರ ರೂ. ಪಾವತಿಸಬೇಕು. ಹಣ ನೀಡಿದವರಿಗೆ ಮಾತ್ರ ಮನೆ ಹಂಚಿಕೆ ಮಾಡಲಾಗುತ್ತದೆ ಎಂದು ಪ್ರಚಾರ ಮಾಡುತ್ತಿದ್ದಾರೆ.

ಯಾವುದೇ ಅಧಿಕೃತ ಹೆಸರು ಅಥವಾ ವಿಳಾಸವಿಲ್ಲದ ಅರ್ಜಿ ನಮೂನೆಗಳನ್ನು ಪಟ್ಟಣದಲ್ಲಿ ಹಂಚಲಾಗುತ್ತಿದ್ದು,



ಪಪಂ ಅಥವಾ ಕೊಳಚೆ ನಿರ್ಮೂಲನಾ ಮಂಡಳಿ ಇದರಲ್ಲಿ ಭಾಗಿಯಾಗಿಲ್ಲ. ಸಂಬಂಧವಿಲ್ಲದ ಕೆಲವರು ಬಡ ಫಲಾನುಭವಿಗಳಿಂದ ಹಣ ವಸೂಲಿ ಮಾಡಿ ಮೋಸ ಮಾಡುವದಂಥೆ ಆರಂಭಿಸಿದ್ದಾರೆ ಎಂದು ಆರೋಪಿಸಿದರು.

ಶಾಸಕರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಜೊತೆಗೆ ಬಡಫಲಾನುಭವಿಗಳಿಗೆ ಮನೆ ಹಂಚಿಕೆ ಮಾಡುವ ದಿನಾಂಕವನ್ನು ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮಂಡಲಾಧ್ಯಕ್ಷ ಪ್ರಸಾದ ಹೆಗಡೆ ಮಾತನಾಡಿ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಜಿ ಸಚಿವ ಶಿವರಾಮ ಹೆಬ್ಬಾರ್ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಯಲ್ಲಾಪುರಕ್ಕೆ ತಂದಿದ್ದರೂ, ಯಾವುದೇ ಯೋಜನೆ ಸಂಪೂರ್ಣವಾಗಿ ಮುಗಿದಿಲ್ಲ. 24★7 ಕುಡಿಯುವ ನೀರಿನ ಯೋಜನೆ, ಕೆರೆ ತುಂಬಿಸುವ ಯೋಜನೆ, ರಸ್ತೆ ಕಾಮಗಾರಿಗಳು, ಜಿ+2 ಮನೆ ಹಂಚಿಕೆ ಸೇರಿದಂತೆ ಹಲವು ಯೋಜನೆಗಳು ಸರಿಯಾಗಿ ಜಾರಿಯಾಗಿಲ್ಲ ಎಂದು ಆರೋಪಿಸಿದರು.

ಬಿಜೆಪಿ ಪ್ರಮುಖ ನ್ಯಾಯವಾದಿ ಗಣೇಶ ಪಾಟಣಕ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಕೆ.ಟಿ. ಹೆಗಡೆ, ರವಿದೇವಾಡಿಗ, ರಜತಬದ್ದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೇಸರಿ ಶಾಲು ವಿತರಣೆ ಅಭಿಯಾನ

ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿರುವ ರಾಜ್ಯ ಸರ್ಕಾರ ಖಂಡನೀಯ. ಯಲ್ಲಾಪುರದಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ ಧರಿಸಿ ಶಾಲೆ-ಕಾಲೇಜುಗಳಿಗೆ ಬಂದರೆ, ಹಿಂದೂ ವಿದ್ಯಾರ್ಥಿಗಳಿಗೆ ಬಿಜೆಪಿ ವತಿಯಿಂದ ಕೇಸರಿ ಶಾಲು ವಿತರಿಸುವ ಅಭಿಯಾನ ನಡೆಸಲಾಗುವುದು ಎಂದರು.

ರೈಲು ನಿಲುಗಡೆಗೆ ಶಾಸಕ ದಿನಕರ್ ಶೆಟ್ಟಿ ಆಗ್ರಹ

ಕುಮಟಾ: ಇತ್ತೀಚೆಗೆ ಕುಮಟಾ ಶಾಸಕ ದಿನಕರ್ ಶೆಟ್ಟಿಯವರ ಸತತ ಪ್ರಯತ್ನದಿಂದ ಮುರುಡೇಶ್ವರದಿಂದ ಕುಮಟಾವರೆಗೆ ವಿಸ್ತರಣೆಗೊಂಡ ಕಾಚಿಗುಡ ತಿರುಪತಿ ಮುರುಡೇಶ್ವರ ರೈಲು ಹೊನ್ನಾವರದಲ್ಲಿ ನಿಲುಗಡೆಯಾಗದು ಎಂಬ ವರದಿಯ ಹಿನ್ನೆಲೆಯಲ್ಲಿ, ರೈಲಿಗೆ ಹೊನ್ನಾವರ ನಿಲುಗಡೆ ಕೊಡಲೇ ಬೇಕು ಎಂದು ಕೊಂಕಣ ರೈಲ್ವೆಗೆ ಶಾಸಕ ದಿನಕರ್ ಶೆಟ್ಟಿ ಆಗ್ರಹಿಸಿದ್ದಾರೆ.



ಉತ್ತರ ಕನ್ನಡ ಜಿಲ್ಲೆಯಿಂದ ತಿರುಪತಿಗೆ ವಾರಕ್ಕೆರಡು ದಿನ ಸಂಚರಿಸುವ ಈ ರೈಲಿನಿಂದ ಕರೂರ್ ಕೊಯಂಬೋತ್ತೂರು ತಿರುಪತಿ ಮತ್ತು ಹೈದರಾಬಾದ್ ನಗರಗಳಿಗೆ ನೇರ ಸಂಪರ್ಕ ಸಾಧ್ಯವಾಗಲಿದೆ.

ಇದುವರೆಗೂ ಮುರುಡೇಶ್ವರದವರೆಗೆ ಮಾತ್ರ ಬರುತಿದ್ದ ರೈಲಿನಿಂದಾಗಿ ಉತ್ತರ ಕನ್ನಡದ ಮುಕ್ಕಾಲು ಭಾಗದ ಪ್ರಯಾಣಿಕರು ವಂಚಿತರಾಗಿದ್ದರು.

ಈಗ ಕುಮಟಾ ವರೆಗೆ ಈ ರೈಲು ವಿಸ್ತರಣೆಯಾಗಿದ್ದು ಇದರಿಂಗ ಕರಾವಳಿ ಭಾಗವಲ್ಲದೇ ಘಟ್ಟದ ಮೇಲಿನವರಿಗೂ ತಿರುಪತಿ ರೈಲು ಸೇವೆ ಲಭ್ಯವಾದಂತಾಗಿದೆ. ಆದರೆ ಮುರುಡೇಶ್ವರದಿಂದ ಕುಮಟಾವರೆಗೆ ಓಡುವ ರೈಲಿಗೆ ಮಧ್ಯದಲ್ಲಿ ಬರುವ ಪ್ರಮುಖ ತಾಲೂಕು ಕೇಂದ್ರ ಹೊನ್ನಾವರದಲ್ಲಿ ನಿಲುಗಡೆ ಇಲ್ಲದೇ ಇದ್ದರೆ, ದೊಡ್ಡ ಸಂಖ್ಯೆಯ ತಿರುಪತಿ ಯಾತ್ರಿಕರಿಗೆ ಗೊಂದಲ ಉಂಟಾಗಲಿದ್ದು ಈ ಸಮಸ್ಯೆ ನಿವಾರಣೆಗಾಗಿ ಹೊನ್ನಾವರ ನಿಲ್ದಾಣದಲ್ಲಿ ತಿರುಪತಿ ರೈಲಿಗೆ ನಿಲುಗಡೆ ಕೊಡುವಂತೆ ಕೊಂಕಣ ರೈಲ್ವೆಯ ಹಿರಿಯ ಅಧಿಕಾರಿಗಳಿಗೆ ಶಾಸಕ ದಿನಕರ್ ಶೆಟ್ಟಿ ಸೂಚಿಸಿದ್ದಾರೆ.

ಕೊಂಕಣ ರೈಲ್ವೆಯ ಸಲಹಾ ಸಮಿತಿಯ ಸದಸ್ಯ ಆಗಿದ್ದಾಗ ನಡೆಸಿದ ಸತತ ಪ್ರಯತ್ನದಿಂದಾಗಿ ಇದೀಗ ಕುಮಟಾ ನಿಲ್ದಾಣದಲ್ಲಿ ಎರಡನೇ ಪ್ಲಾಟ್ ಪಾರಂ ಸಿದ್ಧವಾಗಿದ್ದು, ಸಂಸದರು ಮತ್ತು ಸಚಿವರ ಸಮಯ ನೋಡಿಕೊಂಡು ತಿರುಪತಿ ರೈಲಿನ ಕುಮಟಾ ವಿಸ್ತರಣೆ ಹಾಗೂ ಎರಡನೇ ಪ್ಲಾಟ್ ಪಾರಂ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಸಮಸ್ಯೆ ನಿವಾರಣೆಗೆ ಜನರ ಆಗ್ರಹ

ಗೋಕರ್ಣ: ಇಲ್ಲಿನ ಗಂಜೀಗದ್ದೆ ಮುಖ್ಯ ರಸ್ತೆಯಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಕ್ಕೆ ಸಾಗುವ ತಿರುವಿನಲ್ಲಿ ಚರಂಡಿಗೆ ಸಿಮೆಂಟ್ ಹಲಗೆ ಮುಚ್ಚದ ಪರಿಣಾಮ ವಾಹನಗಳು ಬೀಳುತ್ತಿದ್ದು, ಇದನ್ನ ಸರಿಪಡಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಭಾನುವಾರ ಏಖಮುಖಿ ಸಂಚಾರ ನಿಯಮ ಮುರಿದು ಬಸ್ ನಿಲ್ದಾಣದಿಂದ ಗಂಜೀಗದ್ದೆ ಮಾರ್ಗಕ್ಕೆ ತಿರುಗುವ ವೇಳೆ ಈ ಅಪಾಯಕಾರಿ ಚರಂಡಿ ಬಾಯಿ ತೆರೆದಿರುವುದು ಚಾಲಕನಿಗೆ ತಿಳಿಯದೆ ಕಾರು ಹೊಂಡಕ್ಕೆ ಬಿದ್ದಿತ್ತು. ಅದೃಷ್ಟವಶಾತ್ ಪ್ರಯಾಣಿಕರಿಗೆ ಯಾವುದೇ ಅಪಾಯವಾಗಿಲ್ಲ. ನಂತರ ಸುತ್ತಲಿನ ಅಂಗಡಿಯವರು ಮತ್ತಿತರ ಜನರು ಬಂದು ವಾಹನ ಮೇಲೆ ಎತ್ತಲು ಸಹಕರಿಸಿ. ಸರಿಯಾದ ಮಾಹಿತಿ ನೀಡಿ ಕಳುಹಿಸಿದ್ದಾರೆ. ಕಳೆದ ಒಂದು ವರ್ಷದಿಂದ ಹಲಗೆ ಮುಚ್ಚಿ ಸರಿಪಡಿಸದೆ ನಿರ್ಲಕ್ಷಿಸಲಾಗಿದ್ದು, ಈ ಹಿಂದೆ ಬೈಕ್ ಸವಾರರು ಬಿದ್ದು ಗಾಯಗೊಂಡಿದ್ದರು. ಇದರಂತೆ ಅನೇಕ ಬಾರಿ ದೊಡ್ಡವಾಹನ ಸಹ ಚರಂಡಿಗೆ ಇಳಿದಿದೆ. ಇದನ್ನ ಸರಿಪಡಿಸುವಂತೆ ಹಲವು ಬಾರಿ ಪಂಚಾಯತಕ್ಕೆ ಮನವಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಇಲ್ಲಿ ನಿವಾಸಿಗಳು ಹೇಳಿದ್ದಾರೆ. ಒಟ್ಟಾರೆ ಪ್ರವಾಸಿ ತಾಣದ ಸಣ್ಣ ಸಮಸ್ಯೆಯನ್ನ ಸಹ ಪರಿಹರಿಸಲಾಗದಿರುವುದು ದುರಂತವಾಗಿದೆ.

ಕಿರುಸುದ್ದಿ

ವಿಶೇಷ ಪೂಜೆ



ಹಾವೇರಿ: ನಗರದ ಪಿಡಬ್ಲ್ಯೂಡಿ ವಸತಿ ಗೃಹಗಳ ಸಮೀಪದ ಶ್ರೀ ಆಂಜನೇಯ ಹಾಗೂ ಶನೇಶ್ವರ ದೇವಸ್ಥಾನದಲ್ಲಿ ಶನಿವಾರ ಶನಿ ಜಯಂತಿ ಹಿನ್ನಲೆಯಲ್ಲಿ ಶನೇಶ್ವರ ಹಾಗೂ ಆಂಜನೇಯ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಕೆರೆ ಕಟ್ಟೆಗಳು ರೈತರ ಜೀವನಾಡಿ: ಶಾಸಕ ಶಿವಣ್ಣನವರ



ಬ್ಯಾಡಗಿ: ಗ್ರಾಮಗಳಲ್ಲಿ ಕೆರೆ ಕಟ್ಟೆಗಳು ರೈತರ ಜೀವನಾಡಿಗಳಾಗಿದ್ದು, ರೈತರಿಗೆ ಹೊಲಗಳಿಗೆ ಸಕಾಲಕ್ಕೆ ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ದನಕರಗಳ ನೀರು ಕುಡಿಯಲು ಕೆರೆಗಳು ಅಭಿವೃದ್ಧಿ ಹೊಂದಿದರೆ ರೈತರು ಅಭಿವೃದ್ಧಿ ಹೊಂದಿದಂತಾಗುತ್ತದೆ ಎಂದು ಶಾಸಕ ಬಸವರಾಜ್ ಶಿವಣ್ಣನವರು ಅಭಿಪ್ರಾಯಪಟ್ಟರು.

ತಾಲೂಕಿನ ಬುಡಪನಹಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗದ ಅನುದಾನದಲ್ಲಿ ಸುಮಾರು 83 ಲಕ್ಷ ರೂ. ವೆಚ್ಚದಲ್ಲಿ ಕೆರೆಯ ಅಭಿವೃದ್ಧಿ ಯೋಜನೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಈ ಭಾಗದ ಅಂತರ್ಜಲ ಮಟ್ಟ ವೃದ್ಧಿಗೆ ಕೆರೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಇದರಿಂದ ಮಳೆ ನೀರು ಕೆರೆಗಳಲ್ಲಿ ಸಂಗ್ರಹಿಸುವ ಮೂಲಕ ಅಂತರ್ಜಲ ಪ್ರಮಾಣ ವೃದ್ಧಿಸಲಿದೆ ಮತ್ತು ಕೆರೆ ನೀರು ಸಂರಕ್ಷಣೆ ಮಾಡುವುದು ಮತ್ತು ಪ್ರತಿಯೊಬ್ಬರು ಮುಂದಿನ ಪೀಳಿಗೆಗಾಗಿ ನೀರನ್ನು ಸಂರಕ್ಷಣೆ ಮಾಡುವುದು ಕಲಿಯಬೇಕು ಎಂದು ಹೇಳಿದರು. ಕಾಂಗ್ರೆಸ್ ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ನಾಗರಾಜ ಆನ್ವೇರಿ, ಡಾ. ಪುಟ್ಟಯ್ಯ ಬಿಕ್ಷಾವರ್ತಿ ಮಠ, ಹನುಮಂತಪ್ಪ ಹಾದಿಮನಿ, ಹುಚ್ಚಪ್ಪ ಪೂಜಾರ್, ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ರೇವಣಪ್ಪ ಟಿ ಆರ್, ಗುತ್ತಿಗೆದಾರದ ಕರಿಯಪ್ಪ ನಡುವಿನ ಮನಿ, ಅಭಿವೃದ್ಧಿ ಅಧಿಕಾರಿ ಪ್ರವೀಣ್ ಸೇರಿದಂತೆ ಗ್ರಾಮದ ಅನೇಕ ಹಿರಿಯರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಹಾನಗಲ್ಲ: ತಾಲೂಕು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಹಾಗೂ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಆಸಕ್ತ ಪ.ಜಾತಿ, ಪ.ಪಂಗಡ ಹಾಗೂ ಇತರೆ ಜಾತಿಯ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಜೂ.30ರ ಒಳಗಾಗಿ ಹಾಗೂ ಮೆಟ್ರಿಕ್ ನಂತರದ ವಸತಿನಿಲಯಗಳಿಗೆ ಜು. 31ರ ಒಳಗಾಗಿ ಸಮಾಜ ಕಲ್ಯಾಣ ಇಲಾಖೆಯ www.swd.kar.nic.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ 1ರಿಂದ 5ನೇ ತರಗತಿಗಳಿದ್ದು, 1ನೇ ತರಗತಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಅರ್ಹ ಪ.ಜಾತಿ/ಪ.ಪಂಗಡ ಹಾಗೂ ಇತರೆ ಜಾತಿಯ ವಿದ್ಯಾರ್ಥಿಗಳು ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಹಾನಗಲ್ಲ ಕಚೇರಿಯಲ್ಲಿ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಮೇ 29ರ ಒಳಗಾಗಿ ಸಲ್ಲಿಸಬೇಕು. ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಹಾನಗಲ್ಲ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹಾವೇರಿ : ಬಣಜಿಗ ಕ್ಷೇಮಾಭಿವೃದ್ಧಿ ಸಂಘ ಹಾವೇರಿ ಶಹರ ಘಟಕದಿಂದ 2025–26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳಿಸಿದ ಹಾವೇರಿ ನಗರದ ಬಣಜಿಗ ಸಮಾಜದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಉದ್ದೇಶಿಸಲಾಗಿದೆ. ಹಾವೇರಿ ನಗರದ ಅರ್ಹ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಹಾಗೂ ಫೋಟೋವನ್ನು ಮೇ 25ರ ಒಳಗಾಗಿ ಹಾವೇರಿ ನಗರದ ಗುರುಭವನದ ಬಳಿ ಇರುವ ಲತಾ ಬುಕ್ ಸ್ಟಾಲ್, ಸುಭಾಸ ಸರ್ಕಲ್ ನಲ್ಲಿರುವ ಮಾತೋಶ್ರೀ ಟ್ರೇಡರ್ಸ್ ಹಾಗೂ ಮುನ್ಸಿಪಲ್ ಹೈಸ್ಕೂಲ್ ಎದುರಿನ ಮಹದೇವ ತಾತಾ ಕೂಲ್ ಪಾಯಿಂಟ್ ಇಲ್ಲಿ ಖುದ್ದಾಗಿ ಸಲ್ಲಿಸಲು ಕೋರಿದೆ.



ಶಿಗ್ಗಾವಿ: ತಾಲೂಕಿನ ಹಿರೇಮಣಕಟ್ಟಿ ಗ್ರಾಮದಲ್ಲಿ ಹಮ್ಮಿಕೊಂಡ ಹೋನಲು ಬೆಳಕಿನ ಟಗರಿನ ಕಾಳಗಕ್ಕೆ ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಬಾಬರ್ ಭೋವಾಜಿ ಚಾಲನೆ ನೀಡಿದರು.

ವಿವಿಧ ಕಾಮಗಾರಿಗಳಿಗೆ ಶಾಸಕ ಭೂಮಿಪೂಜೆ

ಹಾನಗಲ್ಲ: ಸ್ಥಳೀಯ ಪುರಸಭೆ ವ್ಯಾಪ್ತಿಯ ನವನಗರದಲ್ಲಿ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಒಂದು ಕೋಟಿ ರೂ. ವೆಚ್ಚದಲ್ಲಿ ವಿವಿಧ ರಸ್ತೆಗಳ ನಿರ್ಮಾಣ ಕಾಮಗಾರಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು. ಹಾನಗಲ್ಲ ಪುರಸಭೆಗೆ ಇದೇ ಮೊದಲ ಬಾರಿಗೆ ದಾಖಲೆ ಪ್ರಮಾಣದ ಅನುದಾನ ಒದಗಿಸಲಾಗಿದೆ. 38 ಕೋಟಿ ರೂ. ವೆಚ್ಚದಲ್ಲಿ ಧರ್ಮಾ ಜಲಾಶಯದಿಂದ ಪೈಪ್‌ಲೈನ್ ಮೂಲಕ ನೀರು ತರುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನಗರೋತ್ಥಾನ ಯೋಜನೆಯಡಿ 6.50 ಕೋಟಿ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. 5.50 ಕೋಟಿ ರೂ. ವೆಚ್ಚದಲ್ಲಿ ವಿವಿಧ ಬಡಾವಣೆಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ. ಚರಂಡಿ ನೀರು ನದಿ ಮತ್ತು ಕೆರೆಗಳಿಗೆ ಹರಿಯದಂತೆ ತಡೆಯುವ ಕಾಮಗಾರಿಗೆ 5 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಹೇಳಿದರು. ಪುರಸಭೆ ಮಾಜಿ ಅಧ್ಯಕ್ಷೆ ಮಮತಾ ಆರೆಗೊಪ್ಪ, ಮುಖ್ಯಾಧಿಕಾರಿ ವೈ.ಕೆ.ಜಗದೀಶ, ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಮುಖಂಡರಾದ ಉಮೇಶ ಮಾಳಗಿ, ಶ್ರೀನಿವಾಸ ಭದ್ರಾವತಿ, ಸಿಕಂದರ್ ವಾಲಿಕಾರ, ವಿರುಪಾಕ್ಷಪ್ಪ ಕಡಬಗೇರಿ, ಗುರುರಾಜ್ ನಿಂಗೋಜಿ, ರವಿ ದೇಶಪಾಂಡೆ, ಇರ್ಫಾನ್ ಮಿಠಾಯಿಗಾರ, ಶಿವು ಭದ್ರಾವತಿ, ರಾಜಕುಮಾರ ಶಿರಪಂಥಿ, ಶಂಶಿಯಾ ಬಾಳೂರ, ಮುನ್ನಾ ನಾಯ್ಕ, ಮೌನೇಶ ಕಲಾಲ, ಸುರೇಶ ನಾಗಣ್ಣನವರ, ಬಾಬಾಜಾನ ಕೊಂಡೇವಾಡ, ಖುರ್ಷಿದ್ ಹುಲ್ಲತ್ತಿ, ನಿಯಾಜ್ ಸರ್ವಿಕೇರಿ, ಜಾಫರ್ ಬಾಳೂರ ಸೇರಿದಂತೆ ಮತ್ತಿತರರಿದ್ದರು.



ಹಾನಗಲ್ಲ: ಸ್ಥಳೀಯ ಪುರಸಭೆ ವ್ಯಾಪ್ತಿಯ ನವನಗರದಲ್ಲಿ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಒಂದು ಕೋಟಿ ರೂ. ವೆಚ್ಚದಲ್ಲಿ ವಿವಿಧ ರಸ್ತೆಗಳ ನಿರ್ಮಾಣ ಕಾಮಗಾರಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಧಾರಾಕಾರ ಮಳೆ: ಅಪಾರ ಹಾನಿ

ಹಾವೇರಿ: ನಗರ ಸೇರಿದಂತೆ ಜಿಲ್ಲಾದ್ಯಂತ ಶನಿವಾರ ಸಂಜೆಯಿಂದ ತಡರಾತ್ರಿವರೆಗೂ ಸುರಿದ ಗುಡುಗು, ಸಿಡಿಲು, ಮಿಂಚು ಸಹಿತ ಮುಂಗಾರು ಪೂರ್ವ ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. ರಭಸದ ಗಾಳಿ ಮಳೆಗೆ ಶಾಲೆಗೆ ಹಾಗೂ ರೇಷ್ಮೆ ಮನೆಗೆ ಹೊದಿಸಿದ್ದ ತಗಡಿನ ಶೀಟ್‌ಗಳು ಹಾರಿ ಹೋಗಿದ್ದು, ಹಂಸಭಾವಿಯಲ್ಲಿ ಬೆಲೆಬಾಳುವ ಎತ್ತಿಗೆ ಸಿಡಿಲು ಬಡಿದು ಜೀವ ಹಾನಿಯಾಗಿದೆ. ಇನ್ನುಳಿದಂತೆ ಕೆಲವಡೆ ವಿದ್ಯುತ್ ಕಂಬ, ಗಿಡಮರಗಳು ಧರೆಗುರುಳಿವೆ.

ಶನಿವಾರ ಸಂಜೆ ಸುರಿದ ಭಾರಿ ಮಳೆಗೆ ಸ್ಥಳೀಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಎದುರಿನ ಹಳೆಯ ಪಿ.ಬಿ. ರೋಡ್, ಕೇಂದ್ರ ಬಸ್ ನಿಲ್ದಾಣ ಸಮೀಪದ ಹಾನಗಲ್ಲ ರಸ್ತೆಗಳು ಕೆರೆಯಂತೆ ಭಾಸವಾದವು. ಧಾರಾಕಾರವಾಗಿ ಸುರಿದ ಮಳೆಗೆ ರಸ್ತೆಯ ತುಂಬೆಲ್ಲ ಚರಂಡಿ ನೀರು ನುಗ್ಗಿ ವಾಹನಗಳ ಸಂಚಾರಕ್ಕೆ ಸಮಸ್ಯೆ ಎದುರಾಯಿತು. ನಗರದ ಕೆಲ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರವನ್ನು ಸೃಷ್ಟಿಸಿತು. ಎಲ್‌ಬಿಎಸ್ ತರಕಾರಿ ಮಾರುಕಟ್ಟೆಯಲ್ಲಿ ಹಣ್ಣು, ತರಕಾರಿಗಳು ನೀರು ಪಾಲಾಗಿವೆ.

ಹಾವೇರಿ, ಬ್ಯಾಡಗಿ, ರಾಣೇಬೆನ್ನೂರ, ಹಿರೇಕೆರೂರ, ರಟ್ಟಿಹಳ್ಳಿ, ಹಾನಗಲ್, ಶಿಗ್ಗಾವಿ, ಸವಣೂರ ಸೇರಿದಂತೆ ಜಿಲ್ಲೆಯ ಹಲವೆಡೆ ರಭಸದಿಂದ ಬೀಸಿದ ಗಾಳಿಗೆ ನೂರಾರು ಗಿಡ ಮರಗಳು ಧರೆಗುರುಳಿವೆ. ವಿದ್ಯುತ್ ಕಂಬಗಳು ಸಹ ನೆಲಕ್ಕುರುಳಿದ್ದು, ರಾತ್ರಿಯಿಡೀ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು ಕಂಡುಬಂತು.

ಹಾನಿಯಾದ ವಿವರ: ಹಾವೇರಿ ತಾಲೂಕು ಕಾಟೇನಹಳ್ಳಿಯ ಶೇಖಪ್ಪ ಮುದಕಪ್ಪ ಕಳ್ಳಿಹಾಳ ಎಂಬುವವರಿಗೆ ಸೇರಿದ ರೇಷ್ಮೆ ಸಾಕಾಣಿಕೆ ಮನೆಯ ಶೀಟ್, ಆಂಗ್ಲರ್ ಪಟ್ಟಿಗಳು ಹಾರಿ ಹೋಗಿದ್ದು, 250 ಲಿಂಕ್ಸ್ ರೇಷ್ಮೆ ಹುಳುಗಳಿಗೆ ನೀರು ಬಿದ್ದು ಹಾನಿಗೀಡಾಗಿವೆ. ಒಟ್ಟಾರೆ ಸುಮಾರು 4–5 ಲಕ್ಷ ರೂ.ಹಾನಿ ಸಂಭವಿಸಿದೆಂದು ಅಂದಾಜಿಸಲಾಗಿದೆ.



ಅದೆ ರೀತಿ ರಾಣೇಬೆನ್ನೂರ ತಾಲೂಕು ಗೋಡಿಹಾಳ ಗ್ರಾಮದ ಕೃಷ್ಣಪ್ಪ ಸಣ್ಣಪ್ಪನವರ ಮನೆಯ ಶೀಟ್‌ಗಳು ಹಾರಿ ಹೋಗಿವೆ. ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಶ್ರೀಕಾಂತ ವಿರೂಪಾಕ್ಷಪ್ಪ ಎಂಬುವವರ ಮನೆಗೂ ಹಾನಿಯಾಗಿದೆ. ಸವಣೂರ ತಾಲೂಕು ಚಿಲ್ಲೂರಬಡ್ನಿಯ ಮೈಲಾರಪ್ಪ ಹುರಳಿಕುಪ್ಪಿ ಮನೆ ಮೇಲೆ ಮರ ಬಿದ್ದು, ಭಾಗಶಃ ಮನೆ ಹಾನಿಯಾಗಿದೆ. ಶಿಗ್ಗಾವಿ ತಾಲೂಕು ಶಿಡ್ಲಾಪುರ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮೇಲ್ಛಾವಣಿ ಹಾರಿ ಹೋಗಿದೆ. ಹಿರೇಕೆರೂರು ತಾಲೂಕು ಕೋಡ ಗ್ರಾಮದಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿದ್ದ ಒಂದು ಜಾನುವಾರು ಸಿಡಿಲು ಬಡಿದು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ಮಾಹಿತಿ ಪ್ರಕಾರ ಕಳೆದ ಇಪ್ಪತ್ನಾಲ್ಕು ಗಂಟೆಯಲ್ಲಿ ಜಿಲ್ಲೆಯಲ್ಲಿ 13.50ಮಿಮೀ ಮಳೆಯಾಗಿದೆ. ಈ ಪೈಕಿ ಬ್ಯಾಡಗಿ ತಾಲೂಕಿನಲ್ಲಿ ಅತೀಹೆಚ್ಚು 30.21 ಮಿಮೀ.ನಷ್ಟು ಮಳೆಯಾದರೆ, ರಾಣೇಬೆನ್ನೂರ ತಾಲೂಕಿನಲ್ಲಿ ಅತೀಕಡಿಮೆ 3.44 ಮಿಮೀ ಮಳೆಯಾಗಿದೆ. ಇನ್ನುಳಿದಂತೆ ಹಾನಗಲ್ 20.85 ಮಿಮೀ., ಹಾವೇರಿ 19.44 ಮಿಮೀ., ಹಿರೇಕೆರೂರ 17.36 ಮಿಮೀ., ಸವಣೂರ 7.56 ಮಿಮೀ., ಶಿಗ್ಗಾವಿ 7.19 ಮಿಮೀ ಹಾಗೂ ರಟ್ಟೀಹಳ್ಳಿ 5.35 ಮಿಮೀ ಮಳೆಯಾಗಿದೆ.

> ಮುಂಬರುವ ಮಳೆಗಾಲದ ಸಂದರ್ಭದಲ್ಲಿ ಬಾರಿ ಮಳೆ, ಗಾಳಿ, ಗುಡುಗು, ಮಿಂಚು ಸಂಭವಿಸುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಪತ್ತು ನಿರ್ವಹಣೆಗಾಗಿ ಜಿಲ್ಲಾಕಾರಿಗಳ ಹಾಗೂ ತಹಸೀಲ್ದಾರರ ಪಿಡಿ ಖಾತೆಯಲ್ಲಿ ಒಟ್ಟು 1,872ಲಕ್ಷ ರೂ.ಗಳ ಅನುದಾನ ಲಭ್ಯವಿದೆ.
> ■ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ

2026–27ನೇ ಸಾಲಿನ ಪೂರ್ವ ಮುಂಗಾರಿನಲ್ಲಿ ಮೇ ತಿಂಗಳು ಆರಂಭದಿಂದ ಇಲ್ಲಿಯವರೆಗೆ 1,696 ರೈತರ 1,181.0 ಹೆಕ್ಟೇರ್ ಕೃಷಿ ಬೆಳೆ, 125 ರೈತರ 54.79 ಹೆಕ್ಟೇರ್ ತೋಟಗಾರಿಕೆ ಬೆಳೆ ಸೇರಿ ಒಟ್ಟು 1,721 ರೈತರ 1,235.8 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದ್ದರ ಬಗ್ಗೆ ವರದಿಯಾಗಿದೆ. ರಟ್ಟಿಹಳ್ಳಿ ತಾಲೂಕಿನಲ್ಲಿ 173 ಹೆ., ಹಿರೇಕೆರೂರ ತಾಲೂಕಿನಲ್ಲಿ 3 ಹೆ. ಹಾಗೂ ರಾಣೇಬೆನ್ನೂರ ತಾಲೂಕಿನಲ್ಲಿ 1,005 ಹೆಕ್ಟೇರ್ ಸೇರಿ 1,181 ಹೆಕ್ಟೇರ್ ಭತ್ತದ ಕೃಷಿ ಬೆಳೆ ಹಾನಿ ಸಂಭವಿಸಿದೆ.

ಜನನ–ಮರಣ ನೋಂದಣಿ ವಿಳಂಬವಾಗದಿರಲಿ

ಹಾವೇರಿ: ಇ–ತಂತ್ರಾಂಶದಲ್ಲಿ ಜನನ–ಮರಣಗಳ ತಡ ನೋಂದಣಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ತಡ ನೋಂದಣಿಗೆ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು ಹಾಗೂ ಜನನ–ಮರಣಗಳ ನೋಂದಣಿ ಕಾರ್ಯವನ್ನು ನಿಗದಿತ ಕಾಲಮಿತಿಯೊಳಗೆ ಮಾಡಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನನ–ಮರಣ ನೋಂದಣಿ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನನ– ಮರಣ ನೋಂದಣಿ ಪ್ರಕ್ರಿಯೆಯನ್ನು ನಿಯಮಿತವಾಗಿ ಕೈಗೊಳ್ಳಬೇಕು, ನೋಂದಣಾಧಿಕಾರಿಗಳು ಮಾಹಿತಿ ಫಲಕ ಅಳವಡಿಸಬೇಕು ಹಾಗೂ ಜನನ–ಮರಣ ನೋಂದಣಿಯಲ್ಲಿ ಯಾವುದೇ ನ್ಯೂನ್ಯತೆ ಆಗದಂತೆ ಅಗತ್ಯ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಡಾಟಾ ಎಂಟ್ರಿ ಮಾಡಿದ ನಂತರ ನೋಂದಣಿದಾರರು, ಉಪನೋಂದಣಿದಾರರು ಪರಿಶೀಲನೆ ಮಾಡಿ ಅನುಮೋದನೆ ನೀಡಬೇಕು. ಇದರಿಂದ ಜನನ–ಮರಣಗಳ ನೋಂದಣಿಯಲ್ಲಿ ಆಗುವ ತಪ್ಪುಗಳನ್ನು ತಡೆಯಬಹುದು ಎಂದರು. ಜನನ–ಮರಣ ನೋಂದಣಾಧಿಕಾರಿಗಳು ಹಾಗೂ ಉಪ ನೋಂದಣಾಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಘಟಿಸುವ ಜನನ–ಮರಣಗಳ ನೋಂದಣಿಗೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಆರ್.ಎಂ. ಭುಜಂಗ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಪಂಚಾಯತಿ ಕಾರ್ಯದರ್ಶಿಗಳು ಉಪ ನೋಂದಣಾಧಿಕಾರಿ, ಗ್ರಾಮ ಆಡಳಿತಾಧಿಕಾರಿಗಳು, ನೋಂದಣಾಧಿಕಾರಿಗಳು, ನಗರ ಪ್ರದೇಶದಲ್ಲಿ ಆರೋಗ್ಯ ನಿರೀಕ್ಷಕರು ಹಾಗೂ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಉಪ ನೊಂದಣಾಧಿಕಾರಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಗ್ರಾಮೀಣ ಹಾಗೂ ನಗರ ಸೇರಿ 793 ಜನನ–ಮರಣ ನೋಂದಣಿ ಘಟಕಗಳಿವೆ ಎಂದು ಮಾಹಿತಿ ನೀಡಿದರು.

ಸೇವಾಸಿಂಧು ತಂತ್ರಾಂಶದಲ್ಲಿ ಸಾರ್ವಜನಿಕರು ಜನನ–ಮರಣ ನೋಂದಣಿಗೆ ಅರ್ಜಿ ಸಲ್ಲಿಸಲು 2021 ಜುಲೈ 5ರಿಂದ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರು ಆನ್ ಲೈನ್ ಮೂಲಕ ಅಥವಾ ಸೇವಾ ಸಿಂಧು ಕೇಂದ್ರಕ್ಕೆ ಭೇಟಿ ನೀಡಿ ಜನನ–ಮರಣ ನೋಂದಣಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಸಭೆಯಲ್ಲಿ ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆ ಡಿಎಸ್ಪಿ ಶಮಿವುಲ್ಲಾ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ ಸಹಾಯಕ ನಿರ್ದೇಶಕ ಜೆ.ಆರ್. ಪಾಟೀಲ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಜನನ–ಮರಣ ನೋಂದಣಿ

ಇ–ಜನ್ಮ ತಂತ್ರಾಂಶದಲ್ಲಿ ಜಿಲ್ಲೆಯಲ್ಲಿ 2025ನೇ ಸಾಲಿನಲ್ಲಿ 19,691 ಹಾಗೂ 2026ರ ಮಾರ್ಚ್ ಮಾಹೆವರೆಗೆ 5,349 ಜನನ ಮಾಹಿತಿ ನೋಂದಣಿ ಮಾಡಲಾಗಿದೆ. 2025ನೇ ಸಾಲಿನಲ್ಲಿ 12,935 ಹಾಗೂ 2026ರ ಮಾರ್ಚ್ ಮಾಹೆವರೆಗೆ 3022 ಮರಣದ ಮಾಹಿತಿ ನೋಂದಣಿಯಾಗಿದೆ ಎಂದರು.

ಮನೆ ಮಾಲೀಕತ್ವದ ಹಕ್ಕುಪತ್ರ ವಿತರಿಸಿದ ಶಾಸಕ

ಹಾನಗಲ್ಲ: ಒಂದೆಡೆ ರಾಜ್ಯ ಸರ್ಕಾರ ಬೆಲೆ ಏರಿಕೆ ಬಿಸಿಯಿಂದ ತತ್ತರಿಸಿರುವ ಜನರ ನೆರವಿಗೆ ಗ್ಯಾರಂಟಿ ಯೋಜನೆಗಳ ಮೂಲಕ ಸಹಾಯದ ಹಸ್ತ ಚಾಚಿದ್ದರೆ ಇನ್ನೊಂದೆಡೆ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ, ಜನಸಾಮಾನ್ಯರ ಗಾಯದ ಮೇಲೆ ಬರೆ ಎಳೆಯುತ್ತಿದೆ. ಪ್ರತಿಯೊಂದಕ್ಕೂ ನಿರ್ಬಂಧ ಹೇರುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಬಮ್ಮನಹಳ್ಳಿ ಗ್ರಾಮದ ವಿರಕ್ತಮಠದ ಆವರಣದಲ್ಲಿ ವಿವಿಧ ಕಂದಾಯ ಗ್ರಾಮ, ಉಪ ಗ್ರಾಮಗಳ ಒಟ್ಟು 680 ಫಲಾನುಭವಿ ಕುಟುಂಬಗಳಿಗೆ ಶಾಶ್ವತ ಮನೆ ಮಾಲೀಕತ್ವದ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗಿ ಜೀವನ ನಡೆಸುವುದು ದುಸ್ತರವಾಗಿತ್ತು. ಅಂಥ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಕುಟುಂಬಗಳಿಗೆ ಪ್ರತಿ ತಿಂಗಳು ಕನಿಷ್ಠ 5 ಸಾವಿರ ರೂ. ಆರ್ಥಿಕ ನೆರವು ನೀಡುತ್ತಿದೆ. ಆರ್ಥಿಕವಾಗಿ ಸಂಕಷ್ಟಕ್ಕೀಡಾಗಿದ್ದ ಜನಸಾಮಾನ್ಯರಿಗೆ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ತಾಲೂಕಿನಲ್ಲಿ ಸರ್ಕಾರಿ ಮತ್ತು ಖಾಸಗಿ ಸರ್ವೆ ನಂಬರ್ ಆಸ್ತಿಯಲ್ಲಿ ದಾಖಲೆ ಇಲ್ಲದೇ ಮನೆ ಕಟ್ಟಿಕೊಂಡು ಎರಡು, ಮೂರು ತಲೆಮಾರುಗಳಿಂದ ವಾಸಿಸುತ್ತಿದ್ದ ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವ ನೀಡುವ ಭರವಸೆ ನೀಡಲಾಗಿತ್ತು. ಅದನ್ನು ಈಡೇರಿಸಲಾಗಿದೆ ಎಂದರು.

ಶಿಗ್ಗಾಂವಿ, ಸವಣೂರು ಕ್ಷೇತ್ರದ ಶಾಸಕ ಯಾಸೀರ್‌ಖಾನ ಪಠಾಣ, ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿದರು. ಈ ಸಂದರ್ಭದಲ್ಲಿ ಯಳ್ಳೂರ ಗ್ರಾಮದ 191, ಯಳವಟ್ಟಿ 156, ಬಾದಾಮಗಟ್ಟಿ 128, ಹೊಸಪೇಟೆ 112 ಹಾಗೂ ಬಮ್ಮನಹಳ್ಳಿ ಗ್ರಾಮದ 93 ಫಲಾನುಭವಿ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಯಿತು. ಕಾಂಗ್ರೆಸ್ ಪದಾಧಿಕಾರಿಗಳು, ಮುಖಂಡರು, ಅಧಿಕಾರಿಗಳು, ಗ್ರಾಮಸ್ಥರು ಇದ್ದರು.



ಕಾರ್ಮಿಕರ ಸಮಸ್ಯೆಗೆ ಸ್ಪಂದಿಸಿ: ಶಾಸಕ ಪಠಾಣ್

ಶಿಗ್ಗಾವಿ : ಜಿಲ್ಲಾ ಮಟ್ಟದ ಅಧಿಕಾರಿಗಳು ವಾರಕ್ಕೊಮ್ಮೆಯಾದರೂ ತಾಲೂಕಿನ ಕಾರ್ಮಿಕರ ಸಮಸ್ಯೆಗಳನ್ನ ಆಲಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಆಡಳಿತ ಭವನದ ಸಂಕೀರ್ಣದ ಸಭಾಭವನದಲ್ಲಿ ಶಿಗ್ಗಾವಿ–ಸವಣೂರು ವಿಧಾನಸಭಾ ಕ್ಷೇತ್ರದ ತರಬೇತಿ ಪಡೆದ ಕಾರ್ಮಿಕರಿಗೆ ಆರ್‌ಪಿಎಲ್ ಕಿಟ್ ಹಾಗೂ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಕಾರ್ಮಿಕರು ಸುರಕ್ಷತೆಯಿಂದ ಇರಬೇಕು. ಯಾಕೆಂದರೆ ಅವರನ್ನೇ ಅವರ ಕುಟುಂಬ ಅವಲಂಬಿಸಿರುತ್ತದೆ. ಕುಟುಂಬದ ಕಾರ್ಮಿಕ ಯಜಮಾನ ಆರೋಗ್ಯವಾಗಿದ್ದರೆ ಆ ಕುಟುಂಬದ ನಿರ್ವಹಣೆ ಸಾಧ್ಯವಿದೆ. 33 ಕೋಟಿ ವೆಚ್ಚದಲ್ಲಿ ಬಂಕಾಪೂರದಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಸುಸಜ್ಜಿತ ಶಾಲೆ ತೆರೆಯಲಾಗುತ್ತಿದೆ. ಅವರ ಉನ್ನತ ಶಿಕ್ಷಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ನಿಜವಾದ ಕಾರ್ಮಿಕರಿಗೆ ಅತೀ ಶೀಘ್ರದಲ್ಲಿ ಕಾರ್ಮಿಕ ಕಾರ್ಡ್ ತಲುಪಬೇಕು. ಕಾರ್ಮಿಕರ ಮಕ್ಕಳೂ ಸಹಿತ ದೇಶವನ್ನಾಳುವ ವ್ಯಕ್ತಿಗಳಾಗಬೇಕು. ಆ ನಿಟ್ಟಿನಲ್ಲಿ ಕಾರ್ಮಿಕರ ಮಕ್ಕಳೂ ಸಹಿತ ಶಿಕ್ಷಣವಂತರಾಗಬೇಕು ಎಂದರು. ಹಾವೇರಿ ಜಿಲ್ಲಾ ಕಾರ್ಮಿಕ ಇಲಾಖೆಯ ಅಧಿಕಾರಿ ತರನ್ನಂ ಬೆಂಗಾಲಿ ಮಾತನಾಡಿದರು.



ಈ ಸಂದರ್ಭದಲ್ಲಿ ತಾಲೂಕು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುಡ್ಡಪ್ಪ ಜಲದಿ, ವಿವಿಧ ಮುಖಂಡರಾದ ಗೌಸಖಾನ್ ಮುನಶಿ, ಭಾಬರ್ ಭೋವಾಜಿ, ಮಹಾಂತೇಶ ಸಾಲಿ, ಮಹ್ಮದ್ ಖಾಲೆಬಾಗ್, ಮಂಜುನಾಥ ಕಚವಿ, ಮುನ್ನಾ ಲಕ್ಷ್ಮೇಶ್ವರ, ಚಂದ್ರು ಕೊಡ್ಲಿವಾಡ, ಎ.ಎಂ.ಪಟವೇಗಾರ, ಅಶೋಕ ಓಲೇಕಾರ, ಆಶಿಫ್ ಕಣವಿ, ಲಕ್ಷ್ಮಿ ಮಾಳಗಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಅಧಿಕಾರಿಗಳು ಹಾಗೂ ತರಬೇತಿ ಪಡೆದ ಕಾರ್ಮಿಕರು ಇದ್ದರು.

ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳಿ: ಹೊನ್ನಣ್ಣವರ

ಶಿಗ್ಗಾವಿ: ಶಿಗ್ಗಾವಿ ತಾಲೂಕಿನ 2025–26 ನೇ ಸಾಲಿನಲ್ಲಿ ಬಂಕಾಪುರ ಹೋಬಳಿಯಲ್ಲಿ ಭತ್ತ ಮಳೆಯಾಶ್ರಿತ ಬೆಳೆಗೆ ಯಾವುದೇ ಬೆಳೆವಿಮೆ ಘೋಷಣೆಯಾಗದೇ ನೀರಾವರಿ ಭತ್ತಕ್ಕೆ ಮಾತ್ರ ಬೆಳೆವಿಮೆ ಘೋಷಣೆಯಾಗಿದ್ದು ಮಧ್ಯವರ್ತಿಗಳ ಮತ್ತು ವಿವಿದ ಇಲಾಖೆಗಳ ಅಧಿಕಾರಿಗಳ ಹೊಂದಾಣಿಕೆ ಇರುವುದು ಎದ್ದು ಕಾಣುತ್ತಿದೆ ಎಂದು ಮಾಜಿ ಜಿಪಂ ಸದಸ್ಯ ಹಾಗೂ ರೈತ ಮುಖಂಡ ಶಶಿಧರ ಹೊನ್ನಣ್ಣವರ ಆರೋಪಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಗಾರು ಹಂಗಾಮಿನ ಮೆಕ್ಕೆಜೋಳ, ಭತ್ತ ಹಾಗೂ ಸೋಯಾಬೀನ್ ಬಹುಪಾಲು ಮಳೆಯಾಶ್ರಿತ ಬೆಳೆಯಾಗಿದ್ದು ಆದರೆ ಬೆಳೆವಿಮೆಯಲ್ಲಿ ಮಳೆಯಾಶ್ರಿತ ಮೆಕ್ಕೆಜೋಳಕ್ಕೆ ಕೇವಲ 7 ಪಂಚಾಯತಿ, ಮಳೆಯಾಶ್ರಿತ ಭತ್ತಕ್ಕೆ 1 ಪಂಚಾಯತಿಗೆ ಮಾತ್ರ ಬೆಳೆವಿಮೆ ಘೋಷಣೆಯಾಗಿದೆ ಎಂದರು.



ಪ್ರಸಕ್ತ ಸಾಲಿನಲ್ಲಿ ಈ ರೀತಿ ಬೆಳೆಹಾನಿಯಿಂದ ಹಾಗೂ ಬೆಳೆ ವಿಮೆಯಿಂದ ವಂಚಿತರಾದ ಸುಮಾರು 9 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮುಂದಿನ ದಿನಮಾನದಲ್ಲಿ ಸರಣಿ ರೈತ ಆತ್ಮಹತ್ಯ ಆಗುವ ಸಂಬವವಿದ್ದು ಇದಕ್ಕೆ ಹೊಣೆಗಾರು ಯಾರು? ಆದ್ದರಿಂದ ಜಿಲ್ಲಾಧಿಕಾರಿಗಳು ಹಾಗೂ ತಾಲೂಕಿನ ದಂಡಾಧಿಕಾರಿಗಳು ಈ ಕುರಿತು ಗಮನಹರಿಸಿ ಪ್ರಾಮಾಣಿಕ ರೈತರ ಬದುಕಿನ ಮೇಲೆ ಆಟವಾಡುತ್ತಿರುವ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ವಿಶೇಷ ತಂಡವನ್ನು ರಚಿಸಿ ಮಧ್ಯವರ್ತಿಗಳೊಂದಿಗೆ ಹೊಂದಾಣಿಕೆಯಾದ ಅಧಿಕಾರಿಗಳನ್ನು ಪತ್ತೆಹಚ್ಚಿ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಬೆಳೆ ವಿಮೆಯನ್ನು ಮಧ್ಯವರ್ತಿಗಳಿಂದ ಮುಕ್ತವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.ಈ ಸಂದರ್ಭದಲ್ಲಿ ಕೆಎಂಎಫ್ ನಿರ್ದೇಶಕ ತಿಪ್ಪಣ್ಣ ಸಾತಣ್ಣವರ ಇದ್ದರು.

ಮಧ್ಯಂತರ ಪರಿಹಾರ ನೀಡಲಿ: ಪಾಟೀಲ

ರಾಣೇಬೆನ್ನೂರ: ತಾಲೂಕಿನಲ್ಲಿ ಅಕಾಲಿಕವಾಗಿ ಸುರಿದ ಮಳೆಗಾಳಿಯಿಂದಾಗಿ ಅಪಾರ ಹಾನಿ ಸಂಭವಿಸಿ ರೈತಾಪಿ ವರ್ಗಕ್ಕೆ ತುಂಬಲಾರದ ನಷ್ಟವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಮಧ್ಯಂತರ ಪರಿಹಾರ ನೀಡಬೇಕು ಎಂದು ಬಿಜೆಪಿ ಮುಖಂಡ ಸಂತೋಷ ಕುಮಾರ ಪಾಟೀಲ ಹೇಳಿದರು.

ತಾಲೂಕಿನ ಮೇಡ್ಲೇರಿ ಹೋಬಳಿಯ ಹಿರೇಬಿದರಿ, ಐರಣಿ ಹಾಗೂ ಮೇಡ್ಲೇರಿ ಗ್ರಾಮಗಳಲ್ಲಿ ಅಕಾಲಿಕ ಮಳೆಯಿಂದಾಗಿ ಹಾನಿಯಾದ ಪ್ರದೇಶಗಳಿಗೆ ಶನಿವಾರದಂದು ಭೇಟಿ ನೀಡಿ ಪರಿಶೀಲನೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದರು. ಕಳೆದ ತಿಂಗಳು ಕುಪ್ಪೇಲೂರು ಹೋಬಳಿ ತೋಟಗಾರಿಕೆ ಬೆಳೆ ಸಾಕಷ್ಟು ಪ್ರಮಾಣದಲ್ಲಿ ಹಾಳಾಗಿದೆ. ಈ ಕುರಿತು ಸರ್ಕಾರಕ್ಕೆ ನೈಜ ವರದಿ ಕೊಡುವಲ್ಲಿ ತಾಲೂಕ ಆಡಳಿತ ವಿಫಲವಾಗಿದೆ. ರೈತರಿಗೆ ಯಾವುದೇ ರೀತಿಯ ಪರಿಹಾರ ಬಂದಿಲ್ಲ. ಈಗ ಬಾರಿ ಗಾಳಿ ಮಳೆಯಿಂದಾಗಿ ಮೇಡ್ಲೇರಿ, ಐರಣಿ ಹಾಗೂ ಹಿರೇಬಿದರಿ ಗ್ರಾಮಗಳಲ್ಲಿ 250ಎಕರೆ ಅಡಿಕೆ ಹಾಳಾಗಿದೆ. 2500ಸಾವಿರ ಎಕರೆ ಭತ್ತ ಸಂಪೂರ್ಣ ಹಾಳಾಗಿ ಹೋಗಿ ಶೇ.95 ಫಸಲು ನೆಲಕಚ್ಚಿವೆ. ರೈತರು ಖರ್ಚು ಮಾಡಿದ ಹಣವನ್ನಾದರೂ ಸರ್ಕಾರ ನೀಡಿದರೆ ರೈತರಿಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಮಧ್ಯಂತರ ಪರಿಹಾರ ನೀಡಬೇಕು. ಅಡಿಕೆ 1ಲಕ್ಷ, ಭತ್ತಕ್ಕೆ 50ಸಾವಿರ ಪರಿಹಾರ ನೀಡಬೇಕು ಎಂದರು.

ಯುವರಾಜ ಬಾರಟಕ್ಕಿ, ಸಿದ್ದನಗೌಡ ಪಾಟೀಲ, ರಾಮಣ್ಣ ಹೂನ್ನಾಳಿ, ಸೋಮಣ್ಣ ಹಲಗೇರಿ, ಹನುಮಂತಪ್ಪ ಚಂದಾಪುರ್, ನಾಗನಗೌಡ ಕೊಂಬೇವು, ವಿರುಪಾಕ್ಷಪ್ಪ ಮಳವಳ್ಳಿ, ಉಮೇಶ್ ಮಳವಳ್ಳಿ, ತಿಪ್ಪೇಶ್ ಮಗನವರ್, ಉಮೇಶ್ ಚಿಕ್ಕಲವರ್, ವಿಶ್ವನಾಥ್ ಚನ್ನಪ್ಪನವರ್, ಬಸವರಾಜ ಕುರುವತ್ತಿ, ಬಸವರಾಜ್ ಹರಕ್ನಾಳ್, ದಿಳ್ಳಪ್ಪ ಕಂಬಳಿ, ಗುಡ್ಡಪ್ಪ ಕಂಬಳಿ, ಸುಭಾಷ್ ಮೇಡ್ಲೇರಿ, ಚಂದ್ರಪ್ಪ ಚಂದಾಪುರ್ ಸೇರಿದಂತೆ ಮತ್ತಿತರಿದ್ದರು.



ಮೇ 29ರಂದು ಪುಣ್ಯಾರಾಧನೆ ಕಾರ್ಯಕ್ರಮ

ಮೇ 28ರೊಳಗಾಗಿ ರೈತರಿಗೆ ಪರಿಹಾರ ನೀಡಬೇಕು. ಇಲ್ಲವಾದರೆ ಮೇ 29ರಂದು ತಹಶೀಲ್ದಾರ ಕಚೇರಿ ಎದುರು ಸರ್ಕಾರದ ಪುಣ್ಯಾರಾಧನೆ ಕಾರ್ಯಕ್ರಮ ಮಾಡಲಾಗುವುದು. ಇದಕ್ಕೂ ಮುನ್ನ ತಾಲೂಕಿನ ಹಿರೇಬಿದರಿ ಗ್ರಾಮದಿಂದ ಬಿಜೆಪಿ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳ ನೇತೃತ್ವದಲ್ಲಿ ಪಾದಯಾತ್ರೆ ಮೂಲಕ ರಾಣೇಬೆನ್ನೂರು ನಗರಕ್ಕೆ ಆಗಮಿಸಿ ಚೌಡೇಶ್ವರಿ ದೇವಸ್ಥಾನದಿಂದ ಚಕ್ಕಡಿ ಮುಖಾಂತರ ಮೆರವಣಿಗೆ ಮೂಲಕ ತಹಶೀಲ್ದಾರರ ಕಚೇರಿಗೆ ಬಂದು, ನಂತರ ಕಚೇರಿ ಎದುರು ಸರ್ಕಾರದ ಪುಣಾರಾಧ್ಯನೆ ಕಾರ್ಯಕ್ರಮ ಮಾಡಿ ವಡೆ ವಿತರಣೆ ಮಾಡಲಾಗುವುದು ಎಂದರು.

ತಾಲೂಕಿನಲ್ಲಿ 29737 ಹೆಕ್ಟೇರ್ ಬಿತ್ತನೆ ಗುರಿ

ಬ್ಯಾಡಗಿ: ತಾಲೂಕಿನಲ್ಲಿ ಕಳೆದ ಎರಡು ಮೂರು ದಿನಗಳಿಂದ ಉತ್ತಮವಾಗಿ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳಿಗೆ ಚಾಲನೆ ಸಿಕ್ಕಿದ್ದು ರೈತರು ಭೂಮಿ ಹದಗೊಳಿಸಲು ಮುಂದಾಗಿದ್ದಾರೆ.

ತಾಲೂಕಿನಲ್ಲಿ ಮೇ ತಿಂಗಳಲ್ಲಿ ಇಲ್ಲಿಯವರೆಗೆ 17.3 ಮೀ ಮೀ ಮಳೆಯಾಗಿದ್ದು ವಾಡಿಕೆ ಮಳೆ (26.1ಮೀ ಮೀ) ಗಿಂತ ಶೇ 34 ಕಡಿಮೆಯಾಗಿದೆ. ತಾಲೂಕಿನಲ್ಲಿ ಒಟ್ಟು 29737 ಹೆಕ್ಟೇರ್ ಮುಂಗಾರು ಕ್ಷೇತ್ರ ಬಿತ್ತನೆ ಮಾಡುವ ಗುರಿ ಹೊಂದಲಾಗಿದೆ. ಈ ಪೈಕಿ 26500 ಹೆಕ್ಟೆರ್ ಭೂಮಿಯಲ್ಲಿ ಹೈಬ್ರಿಡ್ ಮೆಕ್ಕೆಜೋಳ ಬಿತ್ತನೆ ಗುರಿ ಹೊಂದಲಾಗಿದೆ.

ಉಳಿದಂತೆ 950 ಹೆಕ್ಟೇರ್ ನಲ್ಲಿ ಶೇಂಗಾ, 580 ಹೆಕ್ಟೆರ್ ಪ್ರದೇಶದಲ್ಲಿ ಸೋಯಾ ಅವರೆ, 850 ಹೆಕ್ಟೇರ್ ಹತ್ತಿ ಹಾಗೂ 300 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯುವ ಗುರಿ ಹೊಂದಲಾಗಿದೆ. ತಾಲೂಕಿನ ರೈತ ಸಂಪರ್ಕ ಕೇಂದ್ರ ಬ್ಯಾಡಗಿ ಮತ್ತು ಕಾಗಿನೆಲೆ ಹಾಗೂ ಹೆಚ್ಚುವರಿ ಬೀಜ ವಿತರಣಾ ಕೇಂದ್ರ, ಮೋಟೆಬೆನ್ನೂರು ಮತ್ತು ಚಿಕ್ಕಬಾಸೂರು ನಾಲ್ಕು ಕೇಂದ್ರಗಳ ಮೂಲಕ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳ ಮಾರಾಟ ವ್ಯವಸ್ಥೆ ಕಲ್ಪಿಸಲಾಗಿದೆ.

845 ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳಿಗೆ ಬೇಡಿಕೆ ಸಲ್ಲಿಸಿದ್ದು, ಬೇಡಿಕೆಗಳಿಗೆ ಅನುಗುಣವಾಗಿ ಬಿತ್ತನೆ ಬೀಜ ಪೂರೈಕೆ ಆಗುತ್ತಿದ್ದು, ಗೋವಿನ ಜೋಳ, ಶೇಂಗಾ, ಸೋಯಾಬೀನ್ ಸೇರಿದಂತೆ ಒಟ್ಟಾರೆ 475 ಕ್ವಿಂಟಲ್ ಬಿತ್ತನೆ ಬೀಜ ವಿತರಣಾ ಕೇಂದ್ರಗಳಲ್ಲಿ ದಾಸ್ತಾನು ಇರುತ್ತದೆ.ಸುಮಾರು 40 ಖಾಸಗಿ ರಸಗೊಬ್ಬರ ಮಾರಾಟಗಾರರು, 11 ಕೃಷಿ ಪತ್ತಿನ ಸಹಕಾರ ಸಂಘಗಳು ರಸಗೊಬ್ಬರ ಮಾರಾಟದಲ್ಲಿ ಸಕ್ರಿಯವಾಗಿದ್ದು, ರೈತರು ಸೊಸೈಟಿಗಳಲ್ಲಿ ಮಾತ್ರವಲ್ಲದೆ, ಹತ್ತಿರದ ಖಾಸಗಿ ವ್ಯಾಪಾರಸ್ಥರಿಂದಲೂ ಅಗತ್ಯಕ್ಕೆ ತಕ್ಕಂತೆ ಕೆ– ಕಿಸಾನ್ ವೆಬ್ ಹಾಗೂ ಪಿಓಎಸ್ ಮುಖಾಂತರ ರಸಗೊಬ್ಬರ ಖರೀದಿಸಬಹುದಾಗಿದೆ.



> ಪ್ರಸ್ತುತ ಮುಂಗಾರು ಹಂಗಾಮಿಗೆ ಯೂರಿಯಾ 6500 ಟನ್, ಡಿ ಎ ಪಿ 2500 ಟನ್, ಕಾಂಪ್ಲೆಕ್ಸ್ 3000 ಟನ್ ಮೊಟ್ಯಾಶ್ 500 ಟನ್ ರಸಗೊಬ್ಬರದ ಬೇಡಿಕೆಯನ್ನು ಸಲ್ಲಿಸಲಾಗಿದ್ದು, ಇದುವರೆಗೆ ಆರಂಭಿಕ ಶಿಲ್ಕಿನ ಜೊತೆಗೆ 705 ಟನ್ ಯೂರಿಯ, 219 ಟನ್ ಡಿ ಎ ಪಿ, 612 ಟನ್ ಕಾಂಪ್ಲೆಕ್ಸ್ ರಸಗೊಬ್ಬರ ಸರಬರಾಜು ಹಾಗೂ ವಿತರಣೆಯಾಗಿ ಸದ್ಯ ಯೂರಿಯಾ 1184 ಟನ್, ಡಿಎಪಿ 540 ಟನ್, ಕಾಂಪ್ಲೆಕ್ಸ್ 1931 ಟನ್ ದಾಸ್ತಾನು ಇದೆ.
> ■ ಗಣೇಶ ಜಿ.ಕಮ್ಮಾರ ಸಹಾಯಕ ಕೃಷಿ ನಿರ್ದೇಶಕರು, ಬ್ಯಾಡಗಿ

ಕಿರುಸುದ್ದಿ

ಜಾತಿ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ಖಂಡಿಸಿ ಪ್ರತಿಭಟನೆ

ಬೆಳಗಾವಿ: ಜಾತಿ ಪ್ರಮಾಣ ಪತ್ರದಲ್ಲಿ ದಾಖಲಾದ ಮಾಹಿತಿಯನ್ನು ತಿದ್ದುಪಡಿ ಮಾಡಿ ರಪ್ಪು ಸಂದೇಶವನ್ನು ನೀಡಿರುವ ಅಧಿಕಾರಿಗಳ ನಡೆಯನ್ನು ಖಂಡಿಸಿ ಶ್ರೀನಾಮದೇವ ದೈವಿಕ ಸಂಸ್ಥೆಯ ಸದಸ್ಯರು ಹಾಗೂ ಕಾರ್ಯಕರ್ತರಿಂದ ಪತ್ರಿಭಟನೆ ನಡೆಸಿದರು.

ಶ್ರೀನಾಮದೇವಿ ಸಂಸ್ಥೆಯ ಸದಸ್ಯರು ಹಾಗೂ ಕಾರ್ಯಕರ್ತರು ಜಿಲಾಧಿಕಾರಿಗಳ ಕಛೇರಿಗೆ ಆಗಮಿಸಿ, ಭಾರತೀಯ ಪ್ರತಿಯೊಬ್ಬ ನಾಗರಿಕನೂ ತನ್ನ ಧರ್ಮ, ಜಾತಿ ಸಂಸ್ಕೃತಿ ಹಾಗೂ ಸಾಮಾಜಿಕ ಗುರುತಿನೊಂದಿಗೆ ಬದುಕುವ ಹಕ್ಕಿದೆ. ಸರ್ಕಾರಿ ಅಧಿಕಾರಿಗಳು ಜವಾಬ್ದಾರಿಯಿಂದ ಸಾರ್ವಜನಿಕರ ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕು. ಆದರೆ ಆದ್ವಿಕ್ ಸುಜಿತ್ ಖಟಾವಕರ ಅವರ, ಜಾತಿ ಪ್ರಮಾಣ ಪತ್ರದಲ್ಲಿ ತಪ್ಪಾದ ದಾಖಲಾದ ಮಾಹಿತಿಯನ್ನು ತಿದ್ದುಪಡಿ ಮಾಡಿ ನಮ್ಮ ಸಮಾಜಕ್ಕೆ ಹಾಗೂ ಆದ್ವಕ್ ಸುಜಿತ್ ಖಟಾವಕರ ಅವರಿಗೆ ಅವಮಾನ ಮಾಡಿದ್ದಾರೆಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು ಅಸಮಾಧಾನವನ್ನು ಹೊರ ಹಾಕಿ ಪ್ರತಿಭಟಿಸಿದರು.

ಬೆಳಗಾವಿ ನಗರದ ತಹಶೀಲ್ದಾರ್ ಕಚೇರಿಯಲ್ಲಿ ಸರ್ಕಾರಿ ಅಧಿಕಾರಿಗಳು ನಿಷ್ಠೆಯಿಂದ ಸಾರ್ವಜನಿಕರ ಕೆಲಸಗಳನ್ನು ಮಾಡಿಬೇಕು, ಆದರೆ ಕಾಟಾಚಾರಕ್ಕೆ ಕೆಲಸವನ್ನು ಮಾಡುತ್ತಿದ್ದಾರೆಂದು ಆರೋಪಿಸಿ ದಾಖಲಾತಿಗಳ ಮಾಹಿತಿಯನ್ನು ತಿದ್ದುಪಡಿ ಮಾಡಿ ದಾರಿ ತಪ್ಪಿಸುವ ಕೆಲಸ ಮಾಡಿರುವ ಅಧಿಕಾರಿಗಳ ವಿರುದ್ಧ ಕೂಡಲೇ ಕಾನೂನಿನ ಕ್ರಮ ಕೈಗೊಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಮಾಡಿಕೊಂಡರು. ಒಂದು ವೇಳೆ ತಪ್ಪು ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದೆ ಇದ್ದಲ್ಲಿ ತಹಶಿಲ್ದಾರ ಕಛೇರಿಯ ಎದರು ಧರಣಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಚ್ಚರಿಸಿದರು.

ಈ ವೇಳೆ ಶ್ರೀನಾಮದೇವ ದೈವಿಕ ಸಂಸ್ಥೆಯ ಸದಸ್ಯರುಗಳು ಕಾರ್ಯರ್ತರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಬೆಳಗಾವಿ: ಬೆಳಗಾವಿ ಗ್ರಾಮೀಣ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 14 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 81 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಂದ ಆಫ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಿಂದ ಅರ್ಜಿ ನಮೂನೆಯನ್ನು ಪಡೆದುಕೊಂಡು ಜೂನ್ 16 ರ ಸಂಜೆ 5.30 ಗಂಟೆಯೊಳಗಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಬಹುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ, ನಿಗದಿತ ದಿನಾಂಕ ಮತ್ತು ಸಮಯದೊಳಗೆ ಎಲ್ಲಾ ದಾಖಲಾತಿಗಳನ್ನೊಳಗೊಂಡ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಬೆಳಗಾವಿ ತಾಲ್ಲೂಕು ಗ್ರಾಮೀಣ ಸುವರ್ಣ ವಿಧಾನಸೌಧ ನೆಲ ಮಹಡಿ ಬಿ(4)ಬಿ(5) ಬೆಳಗಾವಿ ತಾಲ್ಲೂಕು ಈ ಕಛೇರಿಗೆ ಖುದ್ದಾಗಿ ಅಥವಾ ಅಂತಿಮ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ ತಲುಪುವಂತೆ ನೊಂದಾಯಿತ ಅಂಚೆ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ.ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಪರ್ಕಿಸಬಹುದು ಎಂದು ಬೆಳಗಾವಿ ಗ್ರಾಮೀಣ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್ಮೆಂಟ್ ತರಬೇತಿಗಾಗಿ ಅರ್ಜಿಗಾಗಿ ಆಹ್ವಾನಿಸಲಾಗಿದೆ.ಎಸ್ಸೆಸ್ಸೆಲ್ಸಿ ಮೇಲ್ಪಟ್ಟವರಿಗೆ ಅವಕಾಶವಿದೆ. ತರಬೇತಿ ಅವಧಿ 6 ತಿಂಗಳುಗಳಾಗಿದೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು ಅಂಗ ಸಂಸ್ಥೆಯಾದ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಬೆಳಗಾವಿ ಸಹಕಾರ ತರಬೇತಿ ಸಂಸ್ಥೆಯು ಜೂಲೈ 1 ರಿಂದ 6 ತಿಂಗಳ ಅವಧಿಯ 'ರೆಗ್ಯೂಲರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್ಮೆಂಟ್' ಸಹಕಾರ ತರಬೇತಿ ಹಾಗೂ 'ದೂರ ಶಿಕ್ಷಣ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್ ಮೆಂಟ್' ಸಹಕಾರ ತರಬೇತಿಯನ್ನು ಪ್ರಾರಂಭಿಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳು ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್ಮೆಂಟ್, ಸಿ.ಟಿ.ಎಸ್. ನಂ.4371, ಕಣಬರ್ಗಿ ರೋಡ್, 2.ನೇ ಕ್ರಾಸ್, ರಾಮತೀರ್ಥನಗರ, ಬೆಳಗಾವಿ ಸಂಪರ್ಕಿಸಬಹುದು ಎಂದು ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್ಮೆಂಟ್ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಜಾತಿ ಪ್ರಮಾಣ ಪತ್ರದಲ್ಲಿ ದಾಖಲಾದ ಮಾಹಿತಿಯನ್ನು ತಿದ್ದುಪಡಿ ಮಾಡಿ ರಪ್ಪು ಸಂದೇಶವನ್ನು ನೀಡಿರುವ ಅಧಿಕಾರಿಗಳ ನಡೆಯನ್ನು ಖಂಡಿಸಿ ಶ್ರೀನಾಮದೇವ ದೈವಿಕ ಸಂಸ್ಥೆಯ ಸದಸ್ಯರು ಹಾಗೂ ಕಾರ್ಯಕರ್ತರಿಂದ ಪತ್ರಿಭಟನೆ ನಡೆಸಿದರು. ನಂತರ ಮನವಿ ಸಲ್ಲಿಸಲಾಯಿತು.

ಶಿಕ್ಷಣದೊಂದಿಗೆ ಸಂಸ್ಕಾರ ಪಡೆದುಕೊಳ್ಳಿ: ಡಾ. ಶಾಗೋಟಿ

ಗೋಕಾಕ: ಯುವ ಪೀಳಿಗೆ ದೇಶದ ಭವಿಷ್ಯವಾಗಿದ್ದು, ಶಿಕ್ಷಣದೊಂದಿಗೆ ಸಂಸ್ಕಾರ ಪಡೆದು ಒಳ್ಳೆಯ ನಾಗರಿಕರಾಗಿರೆಂದು ಇಲ್ಲಿಯ ಜೆಎಸ್ಎಸ್ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಯು.ಎಂ. ಶಾಗೋಟಿ ಹೇಳಿದರು.

ಅವರು, ಭಾನುವಾರದಂದು ನಗರದ ಶ್ರೀಲಕ್ಷ್ಮಣರಾವ ಜಾರಕಿಹೊಳಿ ಪದವಿ ಮಹಾವಿದ್ಯಾಲಯದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳು ಭಾರತೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಆಚರಣೆಯೊಂದಿಗೆ ಅವುಗಳನ್ನು ಬೆಳೆಸಬೇಕು. ದೇಶದ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಜಗತ್ತಿನಾದ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗವಕಾಶಗಳಿವೆ. ಕಠಿಣ ಪರಿಶ್ರಮದಿಂದ ಧನಾತ್ಮಕ ಚಿಂತನೆಯೊಂದಿಗೆ ಪ್ರಯತ್ನಶೀಲರಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು. ವೇದಿಕೆಯ ಮೇಲೆ ಪ್ರಾಚಾರ್ಯ ಡಾ.ಐ.ಎಸ್. ಪವಾರ, ಉಪನ್ಯಾಸಕರಾದ ಎಸ್.ಎಲ್. ಬಯ್ಯಾರ, ಆರ್.ಎ. ಜಮಾದಾರ, ಸಿ.ಆರ್. ಕಮ್ಮಾರ, ವಿದ್ಯಾರ್ಥಿ ಪ್ರತಿನಿಧಿಗಳಾದ ಭೀಮವ್ವ ಕಾಳಿ, ಶಾರದಾ ಹುಲಿಕಟ್ಟಿ ಜಯಶ್ರೀಹುಣಶ್ಯಾಳ ಇದ್ದರು. ಉಪನ್ಯಾಸಕರಾದ ಎಸ್.ವೈ. ಖಾನಟ್ಟಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಕಂಗನಾಳ ಮತ್ತು ಐಶ್ವರ್ಯಾ ಕೆ ನಿರೂಪಿಸಿದರು. ಡಾ.ಮನೀಷಾ ಪೂಜಾರಿ ವಂದಿಸಿದರು.



ಗೋಕಾಕ: ನಗರದ ಶ್ರೀಲಕ್ಷ್ಮಣರಾವ ಜಾರಕಿಹೊಳಿ ಪದವಿ ಮಹಾವಿದ್ಯಾಲಯದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. ಜೆಎಸ್ಎಸ್ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಯು.ಎಂ. ಶಾಗೋಟಿ, ಪ್ರಾಚಾರ್ಯ ಡಾ.ಐ.ಎಸ್. ಪವಾರ, ಉಪನ್ಯಾಸಕರಾದ ಎಸ್.ಎಲ್. ಬಯ್ಯಾರ, ಆರ್.ಎ. ಜಮಾದಾರ, ಸಿ.ಆರ್. ಕಮ್ಮಾರ, ವಿದ್ಯಾರ್ಥಿ ಪ್ರತಿನಿಧಿಗಳಾದ ಭೀಮವ್ವ ಕಾಳಿ ಮತ್ತಿತರರು ಇದ್ದರು.

ಉದ್ಯೋಗಾರ್ಥಿಗಳು, ವ್ಯಾಪಾರಸ್ಥರು, ಸಾಮಾನ್ಯ ಪ್ರಯಾಣಿಕರಿಗೆ ಅನುಕೂಲ

ಎರಡು ನೂತನ ರೈಲುಗಳಿಗೆ ಹಸಿರು ನಿಶಾನೆ

ಬೆಳಗಾವಿ: ಉತ್ತರ ಕರ್ನಾಟಕದ ಪ್ರಮುಖ ನಗರವಾದ ಬೆಳಗಾವಿಗೆ ಮತ್ತೊಂದು ಮಹತ್ವದ ರೈಲ್ವೆ ಕೊಡುಗೆ ಲಭಿಸಿದ್ದು, ಭಾನುವಾರ ನಗರದ ರೈಲು ನಿಲ್ದಾಣದಲ್ಲಿ ಎರಡು ನೂತನ ರೈಲು ಸೇವೆಗಳಿಗೆ ಅದ್ದೂರಿಯಾಗಿ ಚಾಲನೆ ನೀಡಲಾಯಿತು.

ಸಂಸದ ಜಗದೀಶ ಶೆಟ್ಟರ ಅವರು ಹಸಿರು ನಿಶಾನೆ ತೋರಿಸುವ ಮೂಲಕ ರೈಲು ಸೇವೆಗಳಿಗೆ ಅಧಿಕೃತ ಚಾಲನೆ ನೀಡಿದರು. ರೈಲು ನಿಲ್ದಾಣದಲ್ಲಿ ಸಾವಿರಾರು ಪ್ರಯಾಣಿಕರು, ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸೇರಿ ಸಂಭ್ರಮಾಚರಣೆ ನಡೆಸಿದ ದೃಶ್ಯ ವಿಶೇಷ ಗಮನ ಸೆಳೆಯಿತು.

ಮಧ್ಯಾಹ್ನ 1 ಗಂಟೆಗೆ ಬೆಳಗಾವಿ ಚಾರ್ಲಪಲ್ಲಿ ನೂತನ ಸಾಪ್ತಾಹಿಕ ರೈಲು ಸೇವೆಗೆ ಚಾಲನೆ ನೀಡಲಾಯಿತು. ರೈಲು ಸಂಖ್ಯೆ 17076ರ ಈ ಹೊಸ ಸೇವೆಯಿಂದ ಉತ್ತರ ಕರ್ನಾಟಕ ಹಾಗೂ ತೆಲಂಗಾಣ ನಡುವಿನ ರೈಲು ಸಂಪರ್ಕ ಮತ್ತಷ್ಟು ಬಲವಾಗಲಿದ್ದು, ವಿದ್ಯಾರ್ಥಿಗಳು, ಉದ್ಯೋಗಾರ್ಥಿಗಳು, ವ್ಯಾಪಾರಸ್ಥರು ಹಾಗೂ ಸಾಮಾನ್ಯ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ.

ವಿಶೇಷವಾಗಿ ಹೈದರಾಬಾದ್ ಭಾಗಕ್ಕೆ ತೆರಳುವ ಪ್ರಯಾಣಿಕರಿಗೆ ಈ ರೈಲು ಹೊಸ ಆಯ್ಕೆಯಾಗಿ ಪರಿಣಮಿಸಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಇದೇ ವೇಳೆ ಭಾನುವಾರ ರಾತ್ರಿ 9.30ಕ್ಕೆ ಬೆಂಗಳೂರು ಬೆಳಗಾವಿ ಲೋಕಮಾನ್ಯ ತಿಲಕ್ ಆರಂಭಿಕ ವಿಶೇಷ ರೈಲಿಗೂ ಚಾಲನೆ ನೀಡಲಾಗುತ್ತಿದೆ. ಈ ವಿಶೇಷ ರೈಲು ಸೇವೆಯಿಂದ ಮುಂಬೈ ಸಂಪರ್ಕ ಇನ್ನಷ್ಟು ಸುಗಮವಾಗಲಿದ್ದು, ಕೈಗಾರಿಕೆ, ವ್ಯಾಪಾರ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ ಎಂದು ಹೇಳಲಾಗುತ್ತಿದೆ. ಮುಂಬೈ ಹಾಗೂ ಉತ್ತರ ಕರ್ನಾಟಕದ ನಡುವೆ ಪ್ರಯಾಣಿಸುವ ಸಾವಿರಾರು ಮಂದಿಗೆ ಈ ರೈಲು ಸೇವೆ ಅನುಕೂಲಕರವಾಗಲಿದೆ.

ರೈಲು ನಿಲ್ದಾಣದಲ್ಲಿ ಹಬ್ಬದ ವಾತಾವರಣ; ಹೊಸ ರೈಲು ಸೇವೆಗಳ ಚಾಲನಾ ಕಾರ್ಯಕ್ರಮದ ಹಿನ್ನೆಲೆ ಬೆಳಗಾವಿ ರೈಲು ನಿಲ್ದಾಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಬಿಜೆಪಿ ಕಾರ್ಯಕರ್ತರು ಘೋಷಣೆ ಕೂಗಿ ಸಂಭ್ರಮ ವ್ಯಕ್ತಪಡಿಸಿದರು. ರೈಲು ನಿಲ್ದಾಣವನ್ನು ವಿಶೇಷವಾಗಿ ಅಲಂಕರಿಸಲಾಗಿದ್ದು, ಸಾರ್ವಜನಿಕರ ಭಾರೀ ಜಮಾವಣೆ ಕಂಡುಬಂತು.

ಸಂಸದ ಜಗದೀಶ ಶೆಟ್ಟರ, ಮರಾಠ ಸಮಾಜ ಪ್ರಮುಖರಾದ ಕಿರಣ್ ಜಾದವ್ ಹಾಗೂ ಬಿಜೆಪಿ ಮುಖಂಡರು ಮಾಜಿ ಶಾಸಕ ಅನಿಲ ಬೆನಕೆ, ಗೀತಾ ಸುತಾರ್, ಪ್ರೀತಿ ಕಾಮಕರ್, ಮಹಾಪೌರ ಹನುಮಂತ್ ಕೊಂಗಾಲಿ, ಉಪ ಮಹಾಪೌರರು, ಬಿಜೆಪಿ ಜಿಲ್ಲಾಧ್ಯಕ್ಷರು, ಸ್ಥಳೀಯ ಮುಖಂಡರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



ಕೇಂದ್ರದಿಂದ ಬೆಳಗಾವಿಗೆ ವಿಶೇಷ ಆದ್ಯತೆ

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಗದೀಶ ಶೆಟ್ಟರ, "ಬೆಳಗಾವಿ ನಗರದ ರೈಲ್ವೆ ಅಭಿವೃದ್ಧಿಗೆ ಕೇಂದ್ರ ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ. ಜನರ ಬಹುಕಾಲದ ಬೇಡಿಕೆಯಾಗಿದ್ದ ಹಲವು ರೈಲು ಸೇವೆಗಳು ಇದೀಗ ಒಂದೊಂದಾಗಿ ಈಡೇರುತ್ತಿವೆ. ಹೊಸ ರೈಲುಗಳಿಂದ ವ್ಯಾಪಾರ, ಉದ್ಯೋಗ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದೆ," ಎಂದು ಹೇಳಿದರು. ಭವಿಷ್ಯದಲ್ಲಿ ಬೆಳಗಾವಿಯಿಂದ ದೆಹಲಿ, ಪುಣೆ, ಚೆನ್ನೈ ಸೇರಿದಂತೆ ಇನ್ನಷ್ಟು ನಗರಗಳಿಗೆ ನೇರ ರೈಲು ಸೇವೆಗಳನ್ನು ಆರಂಭಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ. ಬೆಳಗಾವಿ ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಶಿಕ್ಷಣ ಕೇಂದ್ರವಾಗಿದ್ದು, ಕಳೆದ ಕೆಲವು ವರ್ಷಗಳಿಂದ ರೈಲ್ವೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಬೇಡಿಕೆಗಳು ಕೇಳಿಬರುತ್ತಿದ್ದವು. ಇದೀಗ ಎರಡು ಹೊಸ ರೈಲು ಸೇವೆಗಳ ಆರಂಭದಿಂದ ಉತ್ತರ ಕರ್ನಾಟಕದ ಜನರಿಗೆ ಮಹತ್ವದ ಸೌಲಭ್ಯ ಲಭಿಸಿದಂತಾಗಿದೆ.

ಬಡ ವಿದ್ಯಾರ್ಥಿಗಳಿಗೆ ಉಚಿತ ಶಾಲಾ ಪರಿಕರ ವಿತರಿಸಿದ ಶಾಸಕ ಸೇಠ್

ಬೆಳಗಾವಿ: ಇಲ್ಲಿನ ಲಿಂಗಾಯತ ಸಂಘಟನೆ ಬೆಳಗಾವಿ ಆಶ್ರಯದಲ್ಲಿ ಕಳೆದ 15 ವರ್ಷಗಳಿಂದ ಸರ್ಕಾರಿ ಶಾಲೆಯಲ್ಲಿ 10ನೇ ತರಗತಿಗೆ ಹೋಗುವ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲ ಸಲಕರಣೆಗಳೊಂದಿಗೆ ಉತ್ತಮ ಶಿಕ್ಷಕರಿಂದ ಬಸವ ಜ್ಞಾನ ಕೇಂದ್ರ ಹೆಸರಿನಲ್ಲಿ ಉಚಿತ ಶಿಕ್ಷಣ ಕೊಡುತ್ತಿರುವೆವು ಇಂದು ಡಾ. ಫ.ಗು, ಹಳಕಟ್ಟಿ ಭವನದಲ್ಲಿ ಬಡ ವಿದ್ಯಾರ್ಥಿಗಳಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಉತ್ತರ ಬೆಳಗಾವಿ ಶಾಸಕ ಆಸಿಫ್ ಸೇಠ್ ಅವರ ಸ್ಕೂಲ್ ಬ್ಯಾಗ್, ಪುಸ್ತಕ, ಪೆನ್, ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ವಸ್ತುಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು.

ಸಮಾರಂಭದಲ್ಲಿ ಅತಿಥಿಗಳಾಗಿ ಶಂಕರ ಕುಂದ್ರಾಳ, ಪ್ರವೀಣ್ ಹುಲಜಿ, ವಿದ್ಯಾ ಹುಂಡೇಕರ, ಸುರೇಶ ಖರಾಯಿ, ಪ್ರಸಾದ ಹಿರೇಮಠ, ವೀಣಾ ನಾಗಮೋತಿ, ರಾಜು ಪಾಟೀಲ, ಆಗಮಿಸಿದ್ದರು, ಪ್ರಾಸ್ತಾವಿಕವಾಗಿ, ಶಶಿಭೂಷಣ ಪಾಟೀಲ ಬಸವ ಜ್ಞಾನ ಕೇಂದ್ರ ನಡೆದು ಬಂದ ದಾರಿ, ಇಲ್ಲಿ ಕಲಿತ ವಿದ್ಯಾರ್ಥಿಗಳು ಮುಂದೆ ಉತ್ತಮ ಶಿಕ್ಷಣ ಪಡೆದು ತಮ್ಮ ಜೀವನ್ ರೂಪಿಸಿಕೊಂಡ ಬಗ್ಗೆ ಮಾತನಾಡಿದರು.

ವಿದ್ಯಾರ್ಥಿಗಳನ್ನು ಉದೇಶಿಸಿ ಮಾತನಾಡಿದ ಶಾಸಕ ಆಸೀಫ್ ಸೇಠ್ ಅವರು ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಹರಿಸಿದರು, ಸಂಘಟನೆ ಅಧ್ಯಕ್ಷರಾದ ಈರಣ್ಣಾ ದಯಣ್ಣವರ ಅಧ್ಯಕ್ಷೀಯ ಮಾತುಗಳನ್ನಾಡಿದರು, ಆನಂದ ಕರ್ಕಿ ನಿರೂಪಿಸಿದ್ದರು, ಶಿವಾನಂದ್ ನಾಯಿಕ ವಂದಿಸಿದರು.

ಈ ವೇಳೆ ಸಂಘಟನೆಯ ಎಲ್ಲ ಪದಾಧಿಕಾರಿಗಳು, ಸದಸ್ಯರು, ವಿದ್ಯಾರ್ಥಿಗಳು ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ರಾಯಲ್ ಸಿ.ಸಿ. ಸೋಲಾಪೂರ ತಂಡಕ್ಕೆ ಗೆಲುವು

ಗೋಕಾಕ: ಮಹಾರಾಷ್ಟ್ರದ ರಾಯಲ್ ಸಿ.ಸಿ. ಸೋಲಾಪೂರ ಕ್ರಿಕೆಟ್ ತಂಡವು ಶುಕ್ರವಾರದಂದು ರಾಹುಲ್ ಟ್ರೋಫಿ ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಾವಳಿಯ ಸಿಜನ್ -2 ಫೈನಲ್ ಪಂದ್ಯವನ್ನು ಗೆದ್ದು ಇತಿಹಾಸ ನಿರ್ಮಿಸಿದೆ.

ಪಾಂಡುರಂಗ ಸಿ.ಸಿ ರಾಯಗಡ್ ಉಸಮಾನ ಪಟೇಲ ನೇತೃತ್ವದ ತಂಡದ ಎದುರು 2 ರನ್ ಅಂತರದ ರೋಮಾಂಚನಕಾರಿ ಗೆಲುವು ಸಾಧಿಸಿದೆ. ಇಲ್ಲಿನ ಮಹರ್ಷಿ ಶ್ರೀವಾಲ್ಮೀಕಿ ಕ್ರೀಡಾಂಗಣದಲ್ಲಿ ನಡೆದ 2026ನೇ ಸಾಲಿನ ರಾಹುಲ್ ಟ್ರೋಫಿ ಸಿಜನ್ -2 ಫೈನಲ್ ಪಂದ್ಯದಲ್ಲಿ ರಾಯಗಡ್ ತಂಡವನ್ನು ಬಗ್ಗುಬಡಿಯುವ ಮೂಲಕ ಚೊಚ್ಚಲ ಬಾರಿಗೆ ರಾಹುಲ್ ಟ್ರೋಫಿ ಜಯಿಸಿ ಸಂಭ್ರಮಿಸಿದೆ.

ಗೆಲ್ಲಲು 73 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ರಾಯಗಡ್ ತಂಡಕ್ಕೆ ಸೋಲಾಪೂರ ತಂಡದ ಬಾಲರಗಳಾದ ಸಮೀರ ಬಿರಾದಾರ, ಪ್ರತಮೇಶ, ಆಶೀಶ ದಾಸ ಉತ್ತಮ ಬಾಲಿಂಗ ಪ್ರದರ್ಶನ ಮಾಡಿ ಕಟ್ಟಿ ಹಾಕಿದರು. ಪಂದ್ಯದ ಕೊನೆಯ ಓವರನ ಕೊನೆಯ ಚಂಡಿನಲ್ಲಿ 3 ರನ್ ಬೇಗಿರುವಾಗ ಬ್ಯಾಟ್ಸಮನ್ ಕೇವಲ ಒಂದು ರನ ಪಡೆಯಲು ಮಾತ್ರ ಸಾಧ್ಯವಾಯಿತು. ಅತ್ಯಂತ ರೋಮಾಂಚನಕಾರಿ ನಡೆದ ಈ ಪಂದ್ಯದಲ್ಲಿ ಸೋಲಾಪೂರ ತಂಡ 2 ರನ್ ನಿಂದ ಪಂದ್ಯವನ್ನು ಗೆದ್ದುಕೊಂಡು ಟ್ರೋಫಿ ತನ್ನದಾಗಿಸಿಕೊಂಡಿತು.

ವಿಜೇತ ತಂಡಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತು ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ ಅವರು ಪ್ರಶಸ್ತಿಗಳನ್ನು ವಿತರಿಸಿ ಶುಭ ಕೋರಿದರು. ಫೈನಲ್ ಪಂದ್ಯ ಗೆದ್ದ ರಾಯಲ್ ಸಿ.ಸಿ ಸೋಲಾಪೂರ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 3 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ ಮತ್ತು ಎರಡನೇ ಬಹುಮಾನ ಪಡೆದ ಪಾಂಡುರಂಗ ಸಿ.ಸಿ ರಾಯಗಡ್ ತಂಡಕ್ಕೆ ದ್ವಿತೀಯ ಬಹುಮಾನದ ರೂಪದಲ್ಲಿ 2 ಲಕ್ಷ ರೂ ನಗದು ಮತ್ತು ಆಕರ್ಷಕ ಟ್ರೋಫಿಯನ್ನು ವಿತರಿಸಲಾಯಿತಲ್ಲದೆ ಉತ್ತಮ ಬ್ಯಾಟ್ಸಮನ್, ಉತ್ತಮ ಬಾಲರ್, ಪಂದ್ಯ ಶ್ರೇಷ್ಠ, ಸರಣಿ ಶ್ರೇಷ್ಠ ಸೇರಿದಂತೆ ಅನೇಕ ವೈಯಕ್ತಿಕ ಬಹುಮಾನಗಳನ್ನು ವಿತರಿಸಲಾಯಿತು.

ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ಅಪ್ಪಸಾಬ ಕುಲಗೋಡೆ, ಸಂಘಟಕ ರಿಯಾಜ ಚೌಗಲಾ, ಡಾ.ಘೋಡಗೇರಿ, ಡಾ.ಗಿರೀಶ್ ಸೋನವಾಲಕರ, ಹನೀಫ ಶಾಬಾಶಖಾನ, ಸಂತೋಷ ಭಟ್ ಇತರರು ಉಪಸ್ಥಿತರಿದ್ದರು.



ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ



ಅಥಣಿ: ಸ್ಥಳೀಯ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ 1 ಕೋಟಿ ರೂ ವೆಚ್ಚದ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾರ್ಯಕ್ಕೆ ಶಾಸಕ ಲಕ್ಷ್ಮಣ ಸವದಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸನ್ 2025-26ನೇ ಸಾಲಿನ ಯೋಜನೆಯಡಿ ಈ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಈ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ ಅತ್ಯಂತ ಸಹಕಾರಿಯಾಗಲಿದ್ದು, ಈ ಯೋಜನೆಯ ನಿರ್ಮಾಣ ಜವಾಬ್ದಾರಿಯನ್ನು 'ಕೆ.ಆರ್.ಐ.ಡಿ.ಎಲ್. ಅಥಣಿ' ಸಂಸ್ಥೆಗೆ ವಹಿಸಲಾಗಿದೆ.

ಗುಣಮಟ್ಟದ ಕಾಮಗಾರಿಯೊಂದಿಗೆ ನಿಗದಿತ ಅವಧಿಯಲ್ಲಿ ಕೊಠಡಿಗಳ ನಿರ್ಮಾಣವನ್ನು ಪೂರ್ಣಗೊಳಿಸಿ ವಿದ್ಯಾರ್ಥಿಗಳ ಬಳಕೆಗೆ ಮುಕ್ತಗೊಳಿಸುವಂತೆ ಶಾಸಕರು ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಶಿವಲೀಲಾ ಬೂಟಾಳಿ, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ಸದಸ್ಯರು ರಾಜಶೇಖರ ಗುಡ್ಡೋಡಗಿ, ಪ್ರಮೋದ ಬಿಳ್ಳೂರ,ದಿಲೀಪ ಲೋನಾರೆ,ರಾವಸಾಬ ಐಹೊಳೆ, ಕಲ್ಲೇಶ ಮಡ್ಡಿ, ಮಲ್ಲು ಹುದ್ದಾರ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಪರಶುರಾಮ ಪತ್ತಾರ, ಕೆ.ಆರ್.ಡಿ.ಎಲ್. ಜೆ.ಇಲಾಖೆಯ ಸಂತೋಷ ಶೇಗುಣಸಿ, ಗಿರಿರಾಜ ಹೋಮಕರ, ಅಡಿವೆಪ್ಪ ಉಳ್ಳಾಗಡ್ಡಿ, ಗುತ್ತಿಗೆದಾರ, ಪುರಸಭೆ ಸದಸ್ಯರು, ವಸತಿ ನಿಲಯದ ಮೇಲ್ವಿಚಾರಕರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಅರಿಹಂತ ಸಕ್ಕರೆ ಕಾರ್ಖಾನೆಗೆ ಅತ್ಯುತ್ತಮ ತಾಂತ್ರಿಕ ಸಕ್ಕರೆ ಕಾರ್ಖಾನೆ ಪ್ರಶಸ್ತಿ

ಚಿಕ್ಕೋಡಿ: ಅರಿಹಂತ ಸಕ್ಕರೆ ಕಾರ್ಖಾನೆಯು ಆಧುನಿಕ ತಂತ್ರಜ್ಞಾನದ ಸರಿಯಾದ ಬಳಕೆ ಮತ್ತು ದಕ್ಷ ನಿರ್ವಹಣೆಯಿಂದ ಮಾದರಿಯಾಗಿದೆ. ಸಕ್ಕರೆ ಉತ್ಪಾದನೆ, ಇಂಧನ ಉಳಿತಾಯ ಮತ್ತು ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ಕಾರ್ಖಾನೆ ಅತ್ಯುತ್ತಮ ಕೆಲಸ ಮಾಡಿದ್ದರಿಂದ ಇಂತಹದೊಂದು ಪ್ರಶಸ್ತಿ ಬರಲು ಸಾಧ್ಯವಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲೂಕಿನ ಜೈನಾಪೂರ ಗ್ರಾಮದ ಅರಿಹಂತ ಸಕ್ಕರೆ ಕಾರ್ಖಾನೆಗೆ 2025ನೇ ಸಾಲಿನ ಅತ್ಯುತ್ತಮ ತಾಂತ್ರಿಕ ಸಕ್ಕರೆ ಕಾರ್ಖಾನೆ ಪ್ರಶಸ್ತಿಯನ್ನು ಬೆಳಗಾವಿ ನಗರದ ಎಸ್. ನಿಜಲಿಂಗಪ್ಪ ಶುಗರ್ ಇನ್ಸಿಟಿಟ್ಯೂಟ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಿ ಮಾತನಾಡುತ್ತಾ, ಆಧುನಿಕ ಯಂತ್ರೋಪಕರಣಗಳ ಬಳಕೆ, ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಗುಣಮಟ್ಟದ ಸಕ್ಕರೆ ಉತ್ಪಾದನೆಯಿಂದ ಹೆಸರು ಮಾಡಿದೆ ಎಂದರು.

ಕಾರ್ಖಾನೆಯ ಅಧ್ಯಕ್ಷ ಉತ್ತಮ ಪಾಟೀಲ, ವ್ಯವಸ್ಥಾಪಕ ನಿರ್ದೇಶಕ ಅಭಿನಂದನ ಪಾಟೀಲ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಜಮಖಂಡಿ ಶಾಸಕ ಜಗದೀಶ ಗುಡಗುಂಟಿ, ಕಬ್ಬು ಆಯುಕ್ತ ಗೋವಿಂದ ರೆಡ್ಡಿ, ನಿರ್ದೇಶಕ ಗೋಪಾಲ ರಾಜು, ಗೊಬ್ಬರ ಇಲಾಖೆ ನಿರ್ದೇಶಕ ರಾಮಣ್ಣಾ ಕಟ್ಟಿ, ಕಾರ್ಖಾನೆ ಸಿಇಒ ಮಹಾವೀರ ಪಾಟೀಲ, ಸಚಿನ ಹಂಚಿನಾಳೆ, ಅಪ್ಪಾಸಾಹೇಬ ಕೇಸ್ತೆ ಇತರರು ಇದ್ದರು.



ಪೊಲೀಸ್ ಕಾರ್ಯಾಚರಣೆ: 14 ಬೈಕ್‌ಗಳ ವಶ

ಸಂಕೇಶ್ವರ: ಸಂಕೇಶ್ವರ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣದಲ್ಲಿ 6 ಜನ ದ್ವಿಚಕ್ರ ವಾಹನ ಕಳ್ಳರನ್ನು ಬಂಧಿಸಿದ್ದು ಅವರಿಂದ 6,10,000 ಮೌಲ್ಯದ 14 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಹುಕ್ಕೇರಿ ತಾಲೂಕಿನ ಹೊಸುರ ಗ್ರಾಮದ ಅಮಿತ ಬಸವರಾಜ ಕೋಳಿ, ಮಹಾರಾಷ್ಟ್ರದ ಗಡಹಿಂಗ್ಲಜ್ ತಾಲೂಕಿನ ಆನಂದ ಯಲ್ಲಪ್ಪಾ ಘಸ್ತಿ, ಹುಕ್ಕೇರಿ ತಾಲೂಕಿನ ನಿಡಸೋಸಿಯ ಸುಮೀತ ಗಂಗಾರಾಮ ಕಮ್ಮಾರ, ಕಮತನೂರದ ಶಿವರಾಜ ನಿಂಗೌಡ ಪಾಟೀಲ, ಗಡಹಿಂಗ್ಲಜ್ ತಾಲೂಕಿನ ಕಡಲಗೆ ಓಂಕಾರ ಮೋಹನ ಕಡಲಗಿಕರ, ನಿಡಸೋಸಿಯ ಕಿರಣ ಹಣುಮಂತ ಕಮ್ಮಾರ ಅವರನ್ನು ಸಂಕೇಶ್ವರ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನದಲ್ಲಿ ಇರಿಸಿದ್ದಾರೆ.



ಹಾಗೂ ಸಿ.ಇ.ಐ.ಆರ್.ಪೋರ್ಟಲ್ ಸಹಾಯದಿಂದ ಒಟ್ಟು14 ಮೊಬೈಲ್ ಗಳನ್ನು ಪತ್ತೆ ಮಾಡಲಾಗಿದೆ.

ಈ ಕಳ್ಳರನ್ನು ಹಿಡಿಯುವ ಪತ್ತೆ ಕಾರ್ಯದಲ್ಲಿ ಸಿಪಿಐ ಗಣಪತಿ ಕೊಂಗನೊಳ್ಳಿ, ಪಿಎಸ್‌ಐಗಳಾದ ವಿಠ್ಠಲ ನಾಯಿಕ, ಯು.ಎಸ್. ಶೆಟ್ಟೆಣ್ಣವರ, ಎಎಸ್‌ಐಗಳಾದ ಸಿ.ಜೆ. ಸಾರಾಪೂರೆ ಹಾಗೂ ಎಸ್.ಎಸ್. ಖೋತ ಹಾಗೂ ಸಿಬ್ಬಂದಿಗಳಾದ ಬಿ.ಕೆ.ನಾಗನೂರೆ, ಎಸ್.ಎಲ್. ಗಳತಗಿ, ವ್ಹಿ.ಬಿ.ಮುರ್ಕಿಬಾವಿ, ಎಸ್. ಎಮ್.ಯಕ್ಸಂಬಿ, ಕೆ.ಡಿ.ಹಿರೇಮಠ, ಎಸ್.ಬಿ.ಪೂಜಾರಿ, ಎಸ್.ಎಸ್. ಕುದುರೆ, ಬೆಳಗಾವಿಯ ಟೆಕ್ನಿಕಲ್ ಸೆಲ್ ಸಿಬ್ಬಂದಿಗಳಾದ ವಿನೋದ ಠಕ್ಕನ್ನವರ, ಸಚೀನ ಪಾಟೀಲ ಇವರ ಕಾರ್ಯಕ್ಕೆ ಬೆಳಗಾವಿಯ ಎಸ್.ಪಿ. ಕೆ.ರಾಮರಾಜನ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮುಂದಿನ ಜೀವನಕ್ಕೆ ಶುಭ ಕೋರುವುದೇ ಬೀಳ್ಕೊಡುಗೆ: ಕಡಲಾಸ್ಕರ್

ಮುಗಳಖೋಡ: ಬೀಳ್ಕೊಡುಗೆ ಎಂದರೆ ಕಾಲೇಜಿನಿಂದ ಹೊರ ಹೋಗುವುದು ಅಲ್ಲ, ತಾವು ಮುಂದೆ ಸಮಾಜದಲ್ಲಿ ಕಾಲಿಟ್ಟು ಜೀವನದ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಹೊರಟಿರುವಾಗ ತಮಗೆ ಶುಭ ಕೋರಲು ಇರುವ ಒಂದು ವೇದಿಕೆಯೇ ಬೀಳ್ಕೊಡುವ ಸಮಾರಂಭ ಎಂದು ಸಸಾಲಟ್ಟಿ ಗ್ರಾಮದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶಂಕರಾಚಾರ್ಯ ಕಡಲಾಸ್ಕರ್ ಹೇಳಿದರು.

ಅವರು ಪಟ್ಟಣದ ಶ್ರೀ ಚವಿವ ಸಂಘದ ಡಾ. ಸಿ.ಬಿ. ಕುಲಿಗೋಡ ಪದವಿ ಮಹಾವಿದ್ಯಾಲಯದ 2025-26 ನೇ ಸಾಲಿನ ಎಲ್ಲ ಘಟಕಗಳ ಸಮಾರೋಪ ಸಮಾರಂಭ ಹಾಗೂ ಕಲಾ ಮತ್ತು ವಾಣಿಜ್ಯ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ಎಸ್.ಎಲ್. ಬೈರಪ್ಪ, ಕೆಎಎಸ್ ತೇಜಸ್ವಿನಿ ಅವರ ಓದು ಬರಹದ ಪುಸ್ತಕಗಳನ್ನ ಉದಾಹರಣೆಯನ್ನಾಗಿ ತೆಗೆದುಕೊಂಡು ವಿದ್ಯಾರ್ಥಿಗಳಮುಂದಿನಭವಿಷ್ಯ ರೂಪಿಸಿಕೊಳ್ಳಲು ಯಾವ ರೀತಿ ಅಭ್ಯಾಸ ಮಾಡಬೇಕು ಮತ್ತು ಸಮಾಜದಲ್ಲಿ ಹೇಗೆ ಗುರುತಿಸಿಕೊಳ್ಳಬೇಕು ಎಂಬುದನ್ನು ಕುರಿತು ಮಾತನಾಡಿದರು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಳ್ಳೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವೈ. ಬಿ. ಕಳ್ಳಿಗುದ್ದಿ, ವಿದ್ಯಾರ್ಥಿಗಳು ಕಾಲೇಜಿನ ಮೆಟ್ಟಿಲೇರುವಾಗ ಕಾಲಿ ಬಂದು, ಹೋಗುವಾಗ ಎಲ್ಲ ತರಹದ ಕೌಶಲ್ಯಗಳನ್ನು ರೂಪಿಸಿಕೊಂಡು ಹೆಚ್ಚಿನ ವಿಷಯ ಸಂಗ್ರಹಿಸಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಕುಟುಂಬಕ್ಕೆ ನೆರವಾಗಿ ಎಲ್ಲರಿಗೂ ಬೆಳಕಾಗಿ ಕುಟುಂಬವನ್ನು ನಿರ್ವಹಿಸುವ ಶಕ್ತಿ ಹೊಂದುವುದೇ ವಿದ್ಯಾರ್ಥಿಗಳ ಲಕ್ಷಣ ಎಂದು ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಪ್ರಾಚಾರ್ಯ ಪಿ. ಸಿ. ಕಂಬಾರ್ ಮಾತನಾಡಿ, ಪದವಿ ಮುಗಿಸಿಕೊಂಡು ಸಮಾಜದಲ್ಲಿ ಕಾಲಿಡುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಬೆಳೆಯಲಿ ಎಂದು ಶುಭ ಕೋರಿ ಕಾರ್ಯಕ್ರಮ ಕುರಿತು ಪ್ರಸ್ತಾಪಿಕವಾಗಿ ಮಾತನಾಡಿದರು.

ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳು ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಪುಷ್ಪವೃಷ್ಟಿಯೊಂದಿಗೆ ಕಾರ್ಯಕ್ರಮದ ಸಭಾಂಗಣಕ್ಕೆ ಬರಮಾಡಿಕೊಂಡು ವಿಶೇಷತೆಯ ಕಾರ್ಯಕ್ರಮಗಳೊಂದಿಗೆ ಬೀಳ್ಕೊಟ್ಟರು.

ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಸಂಗಮೇಶ ಹಿರೇಮಠ ಎಲ್ಲರನ್ನು ಸ್ವಾಗತಿಸಿ, ಪರಿಚಯಿಸಿ ಕಾಲೇಜಿನ ವಿಶೇಷತೆಯನ್ನು ತಿಳಿಸಿದರು. ಕುಮಾರಿ ಸೀಮಾ ಕಾಡಶೆಟ್ಟಿ, ಪೂಜಾ ಮಾಳಿ ನಿರೂಪಿಸಿ, ಕಾವ್ಯಾ ಹಂದಿಗುಂದ ವಂದಿಸಿದರು.

ಉಪನ್ಯಾಸಕರಾದ ಡಾ. ಪಿ. ಬಿ. ಕೊರವಿ, ಆರ್. ಎಸ್. ಶೇಗುಣಸಿ, ರೆಡ್ ಕ್ರಾಸ್ ಘಟಕದ ಸಂಯೋಜಕ ಪ್ರದೀಪ್ ನಾಯಕ, ವಾಣಿಜ್ಯ ವಿಭಾಗದ ಉಪನ್ಯಾಸಕ ಬಿ.ಎಸ್. ಸವಸುದ್ದಿ, ಎಚ್. ಎಂ. ಕಂಕಣವಾಡಿ, ಮಲ್ಲಿಕಾರ್ಜುನ್ ಮರಡಿ, ಕುಮಾರಿ ರತ್ನಾ ಖೇತಗೌಡರ, ಅಶ್ವಿನಿ ಗುರವ, ಕಚೇರಿ ಅಧೀಕ್ಷಕ ಹುಸೇನ್ ಎಲಿಗಾರ್, ಗ್ರಂಥ ಪಾಲಕ ಸಂಗಣ್ಣ ತೇಲಿ, ಸೇರಿದಂತೆ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದದವರು ಇದ್ದರು.

> 2025 - 26ನೇ ಸಾಲಿನ ಅಂತಿಮ ವರ್ಷದ ಪದವಿ ಪರೀಕ್ಷೆಯಲ್ಲಿ ಡಾ. ಸಿ ಬಿ ಕುಲಿಗೋಡ ಪದವಿ ಮಹಾವಿದ್ಯಾಲಯಕ್ಕೆ ಪ್ರಥಮ ದ್ವಿತೀಯ ತೃತೀಯ ಸ್ಥಾನ ಪಡೆದ ಮೂರು ಜನ ವಿದ್ಯಾರ್ಥಿಗಳಿಗೆ ದತ್ತುತಾಯಿ ಲಿಂಗೈಕ್ಯ ಗುರುಶಾಂತವ್ವ ಮುಪ್ಪಯ್ಯ ಹಿರೇಮಠ್ ಇವರ ಸ್ಮರಣಾರ್ಥವಾಗಿ 3000, 2000, 1000 ನಗದು ಬಹುಮಾನ ನೀಡುತ್ತೇನೆ.
>
> ■ ಚನವೀರಯ್ಯ ಹಿರೇಮಠ. ಹಿರಿಯ ಪತ್ರಕರ್ತರು

ಕಿರುಸುದ್ದಿ

ನೂತನ ಕಳಸದ ಮೆರವಣಿಗೆಗೆ ಚಾಲನೆ

ಯಮಕನಮರಡಿ: ಸಮೀಪದ ದಾದಬಾನ ಹಟ್ಟಿ ಗ್ರಾಮದ ಶ್ರೀಲಕ್ಷ್ಮೀದೇವಿ ಮಂದಿರದ ನೂತನ ಕಳಸ ಮೆರವಣಿಗೆಯು ಮೇ 17ರಂದು ಪೂಜ್ಯರ ಸಮ್ಮುಖದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಪೂಜಾ ಸಮಾರಂಭದಲ್ಲಿ ಹತ್ತರಗಿ ಕಾರಿ ಮಠದ ಪೂಜಾ ರಾಧ ಗುರುಸಿದ್ಧ ಮಹಾ ಸ್ವಾಮಿಗಳು ಮತ್ತು ಯಮಕನ ಮರಡಿ ಹತ್ತರಗಿ ಹರಿ ಮಂದಿರದ ಡಾ. ಆನಂದ ಮಹಾರಾಜ್ ಗೋಸಾವಿ ಅವರು ಉಪಸ್ಥಿತರಿದ್ದು ಮೆರವಣಿಗೆಗೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಸುಮಾರು ಐದುನೂರು ಸುಮಂಗಲಿಯರ ಕುಂಭ ಮೇಳವನ್ನು ಆಯೋಜಿಸಲಾಗಿತ್ತು. ಮೆರವಣಿಗೆಯಲ್ಲಿ ವಿವಿಧ ಕಲಾ ಮೇಳಗಳು ತಮ್ಮ ಕಲಾ ಪ್ರದರ್ಶನ ನೀಡುವಲ್ಲಿ ಯಶಸ್ವಿಯಾದರು. ಮೇ 18ರಂದು ನೂತನ ಶಿಖರಕ್ಕೆ ಕಳಸಾ ರೋಹನಸಮಾರಂಭ ಜರುಗಲಿದೆ. ಎರಡು ದಿನಗಳ ಕಾಲ ಮಹಾಪ್ರಸಾದ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥರು ತಿಳಿಸಿದ್ದಾರೆ.

ಸಂಕಪ್ಪಜ್ಜನವರು ಲಿಂಗೈಕ್ಯ: ಅಧಿಕಾರ ಹಸ್ತಾಂತರ



ಯಮಕನಮರಡಿ: ಹುಕ್ಕೇರಿ ತಾಲೂಕಿನ ಶಾಹಬಂದರ ಗ್ರಾಮದ ಹೋರವಲಯದಲ್ಲಿರುವ ಬಾಳಯ್ಯಜ್ಜನವರ ಭಕ್ತಿಮಠದ ಪೂಜ್ಯರಾಗಿದ್ದ ಶ್ರೀಸಂಕಪ್ಪಜ್ಜನವರು ಮೇ 16ರಂದು ಲಿಂಗೈಕ್ಯರಾಗಿದ್ದು ಅವರ ಅಂತ್ಯಕ್ರಿಯ ಕಾರ್ಯಕ್ರಮವು ಸಂಜೆ 5 ಗಂಟೆಗೆ ಹಿಂದೂ ಧರ್ಮದ ಪ್ರಕಾರ ಪಾದಪೂಜೆ ಇತ್ಯಾದಿ ಕಾರ್ಯಕ್ರಮಗಳು ಜರುಗಿ ಅವರ ದ್ವಿತಿಯ ಸುಪುತ್ರರಾದ ಸದಾಶಿವರವರಿಗೆ ರುದ್ರಾಕ್ಷೀ ಕಿರೀಟಧಾರಣೆ ಮಾಡಿ ಶ್ರೀಮಠದ ಸಂಪೂರ್ಣ ಅಧಿಕಾರವನ್ನು ಸದರಿರವರಿಗೆ ವಹಿಸಿ ಕೊಡಲಾಯಿತು.

ಪೂಜಾ ಸಮಾರಂಭದಲ್ಲಿ ಯಮಕನಮರಡಿ ಶೂನ್ಯ ಸಂಪಾದನಾ ಹುಣಸಿಕೊಳ್ಳಮಠದ ಸಿದ್ದಬಸವದೇವರು ಇವರು ಮಂತ್ರೋಪದೇಶ ಮಾಡಿದರು ನಂತರ ತವಗದ ಬಾಳಯ್ಯಜ್ಜನವರ ಮಠದ ಪೂಜ್ಯರು ಸದರಿ ರವರಿಗೆ ಕಿರೀಟಧಾರಣೆ ಮಾಡಿದರು. ಈ ಸಂದರ್ಭದಲ್ಲಿ ಚಿಕ್ಕಲದಿನ್ನಿ ಮಠದ ಅದೃಶ್ಯಾನಂದ ಮಠದ ಪೂಜ್ಯರು ದತ್ತವಾಡದ ಬಾಲಚಂದ್ರ ಬಾಬಾ ಮಹಾರಾಜರು ಹಾಗೂ ಯುವ ನಾಯಕರಾದ ರಾಹುಲ ಜಾರಕಿಹೋಳಿ, ಮಾಜಿ ಮಂತ್ರಿಶಶಿಕಾಂತ ನಾಯಿಕ, ಬಸವರಾಜ ಹುಂದ್ರಿ, ರಾಜು ನಾಶಿಮಡಿ, ಗುಟಗುದ್ದಿ ಬಾಳಯ್ಯಜ್ಜನ ಮಠದ ಶಿವಾನಂದ ಮಹಾಸ್ವಾಮಿಗಳು, ಕೆ ಇ ಬಿ ಅಧ್ಯಕ್ಷರು ಸೇರಿದಂತೆ ಅಪಾರ ರಾಜಕೀಯ ಮುಖಂಡರು ಕುಂದರನಾಡಿನ ಅಪಾರ ಭಕ್ತಾದಿಗಳು ಉಪಸ್ಥಿತರಿದ್ದು,ಪೂಜ್ಯರ ಅಂತಿಮ ದರ್ಶನ ಪಡೆದುಕೊಂಡರು.

ಅಂತರ್ ರಾಜ್ಯ ಕಳ್ಳಿಯರಿಬ್ಬರ ಬಂಧನ

ಬೆಳಗಾವಿ: ಬಸ್ ಹತ್ತುವಾಗ, ಇಳಿಯುವಾಗ ಉಂಟಾಗುವ ಜನಜಂಗುಳಿಯ ಉಂಟಾಗುವ ಸಮಯದಲ್ಲಿ ತಮ್ಮ ಚಾಲಾಕಿಯನ್ನು ತೊರಿಸಿದ ಸಾರ್ವಜನಿಕರ ಚಿನ್ನಾಭರಣ ಎಗರಿಸುತ್ತಿದ್ದ ಅಂತರ್ ರಾಜ್ಯ ಕಳ್ಳಿಯರಿಬ್ಬರನ್ನು ಬೆಳಗಾವಿಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಮಹಾರಾಷ್ಟ್ರ ಮೂಲದ ಹೇಮಾ ಕಸಬೇಕರ ಹಾಗೂ ನಿಲಂ ಕಾಂಬಳೆ ಎಂದು ಗುರುತಿಸಲಾಗಿದೆ. ಅಥಣಿ ಪಟ್ಟಣದ ಕೇಂದ್ರ ಬಸ್ ನಿಲ್ದಾಣದಲ್ಲಿ ಈ ಕಳ್ಳಿಯರು ಮಹಿಳೆಯರು ಪೊಲೀಸರು ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ.ಬಳಿಕ ಪೊಲೀಸ್ ಠಾಣೆಗೆ ಕರೆತಂದು ತೀವ್ರ ವಿಚಾರಣೆಯ ವೇಳೆ ಆರೋಪಿಗಳು ನಡೆಸಿರುವ ಸರಣಿ ಕಳ್ಳತನದ ಪ್ರಕರಣದ ಬಗ್ಗೆ ಬಾಯಿ ಬಿಟ್ಟಿದ್ದಾರೆ. ವಿವಿಧ ಕಡೆಗಳಲ್ಲಿ ಈ ಇಬ್ಬರು ಮಹಿಳೆಯರು ಭಾಗಿಯಾಗಿದ್ದ ಒಟ್ಟು ನಾಲ್ಕು ಕಳ್ಳತನ ಪ್ರಕರಣಗಳು ಸದ್ಯ ಬಯಲಾಗಿವೆ. ಬಂಧಿತರಿಂದ ಸುಮಾರು 68 ಲಕ್ಷ ರೂ. ಒಟ್ಟು ಮೌಲ್ಯದ 42.5 ಗ್ರಾಂ ಚಿನ್ನಾಭರಣಗಳನ್ನು ಪೊಲೀಸರು ಯಶಸ್ವಿಯಾಗಿ ವಶಪಡಿಸಿಕೊಂಡಿದ್ದಾರೆ.

ಕಳ್ಳಿಯರು ಬಸ್ ನಿಲ್ದಾಣದಲ್ಲಿ ಸಾಮಾನ್ಯ ಪ್ರಯಾಣಿಕರಂತೆ ಓಡಾಡುತ್ತಿದ್ದರು. ಬಸ್ ಬಂದು ನಿಂತಾಗ ಜನರು ಒಮ್ಮೆಲೇ ಹತ್ತುವ ಮತ್ತು ಇಳಿಯುವ ಸಮಯದಲ್ಲಿ ಉಂಟಾಗುವ ಗದ್ದಲ, ಜನದಟ್ಟಣೆ ಹಾಗೂ ತಳ್ಳಾಟವನ್ನೇ ಕಾಯುತ್ತಿದ್ದರು. ಇದನ್ನೇ ಆಸರೆಯಾಗಿಸಿಕೊಂಡು ಮಹಿಳಾ ಪ್ರಯಾಣಿಕರನ್ನು ಟಾರ್ಗೆಟ್ ಮಾಡಿ, ಯಾರಿಗೂ ಸಂಶಯ ಬಾರದಂತೆ ಕ್ಷಣಾರ್ಧದಲ್ಲಿ ಅವರ ಕತ್ತಿನಲ್ಲಿದ್ದ ಚಿನ್ನದ ಸರ ಹಾಗೂ ಬ್ಯಾಗ್‌ಗಳಲ್ಲಿದ್ದ ಒಡವೆಗಳನ್ನು ದೋಚುತ್ತಿದ್ದರು. ಯಾರಿಗೂ ಅನುಮಾನ ಬಾರದಂತೆ ಸಭ್ಯ ಗೃಹಸ್ಥರಂತೆ ಬಂದು ಕೈಚಳಕ ತೋರುತ್ತಿದ್ದ ಈ ಅಂತರ್ ರಾಜ್ಯ ಮಹಿಳಾ ಕಳ್ಳಿಯರು ಸಿಕ್ಕಿಬಿದ್ದಿರುವುದರಿಂದ ಸಾರ್ವಜನಿಕರು ಹಾಗೂ ಮಹಿಳಾ ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ.



ಯಮಕನಮರಡಿ: ಸಮೀಪದ ದಾದಬಾನ ಹಟ್ಟಿ ಗ್ರಾಮದ ಶ್ರೀಲಕ್ಷ್ಮೀದೇವಿ ಮಂದಿರದ ನೂತನ ಕಳಸ ಮೆರವಣಿಗೆಯು ಮೇ 17ರಂದು ಪೂಜ್ಯರ ಸಮ್ಮುಖದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಶಿಷ್ಯರ ಉಜ್ವಲ ಭವಿಷ್ಯವೇ ಗುರುಗಳ ಆಶಯ

ಗೋಕಾಕ: ಗುರು-ಶಿಷ್ಯರ ಪರಂಪರೆಯನ್ನು ಜಗತ್ತಿಗೆ ನೀಡಿದ ಕೀರ್ತಿ ನಮ್ಮ ದೇಶದ್ದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಬಿ. ಬಳಗಾರ ಹೇಳಿದರು.

ಭಾನುವಾರದಂದು ನಗರದಲ್ಲಿ ಇಲ್ಲಿಯ ಜಿಎಸ್‌ಎಸ್ ಶಾಲೆಯ 2002-03ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುಸ್ಮೃತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಶಿಷ್ಯರ ಉಜ್ವಲ ಭವಿಷ್ಯವೇ ಗುರುಗಳ ಗುರಿ ಹಾಗೂ ಆಶಯವಾಗಿದೆ. ಶಿಷ್ಯರು ಸಾಧಕರಾದರೆ ಗುರುಗಳು ಸಂತೋಷ ಪಡುತ್ತಾರೆ. ಇಂದಿನ ಸಾಂಸ್ಕೃತಿಕ ದಿವಾಳಿ ಸಂದರ್ಭದಲ್ಲಿ ಗುರುಗಳನ್ನು ನೆನೆದು ಅವರನ್ನು ಗೌರವಿಸುವಂತಹ ಈ ಕಾರ್ಯ ಮಾದರಿಯಾಗಿದೆ. ನಮ್ಮ ಪರಂಪರೆಯನ್ನು ತಾವು ಮುಂದುವರೆಸುತ್ತಿದ್ದು ತಮ್ಮ ಮಕ್ಕಳಲ್ಲೂ ಇಂತಹ ಸಂಸ್ಕಾರ ಬೆಳೆಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಎ.ಎ. ಸನದಿ, ಎಸ್.ಸಿ. ಕರಿಕಟ್ಟಿ, ಎಂ.ಪಿ. ಗಾಣಗಿ, ಅಶೋಕ ಬೆಣ್ಣಿ, ಸಿ.ಎಸ್. ಮೇಗಲಮನಿ, ಎ.ಎಂ. ಮೋಡಿ, ಎಚ್.ಡಿ. ಬೇಗ, ಎಂ.ಎ. ಬಾಗೇವಾಡಿ, ಎಂ.ಎಸ್. ವಕ್ಕುಂದ, ಬಿ.ಎಸ್. ಸೊಲಬನ್ನವರ, ಎಸ್.ವಿ. ಕರಿಕಟ್ಟಿ, ಎಂ.ಎಂ. ಹಾದಿಮನಿ, ಎಸ್.ಎಸ್. ಮುನವಳ್ಳಿ, ಆರ್.ಕೆ. ಹಂದಿಗುಂದ, ಎಸ್.ಎಂ. ಕಲಗುಡಿ, ಡಿ.ಸಿ. ಜುಗಳಿ, ಎಂ. ಆರ್. ಹರಿದಾಸ, ಬಿ.ಡಿ. ಸೊಗಲಿ, ರಾಯಪ್ಪ ಖಾನಪ್ಪನವರ, ಆರ್.ಎಲ್. ಬಬಲಿ, ಎಚ್.ಎಂ. ಕಾಲೆಬಾಯಿ ಇವರನ್ನು ಸತ್ಕರಿಸಲಾಯಿತು.



ಗೋಕಾಕ: ನಗರದಲ್ಲಿ ಭಾನುವಾರ ಇಲ್ಲಿಯ ಜಿಎಸ್ ಎಸ್ ಶಾಲೆಯ 2002-03ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುಸ್ಮೃತಿ ಕಾರ್ಯಕ್ರಮ ನಡೆಯಿತು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಅತ್ಯುತ್ತಮ ಸಾಧನೆ; ಸನ್ಮಾನ

ಯುಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ದೆಹಲಿಯಲ್ಲಿ ತರಬೇತಿ ಕೇಂದ್ರದ ಭವನ ನಿರ್ಮಾಣ: ಸಚಿವ

ಬೆಳಗಾವಿ: ಯುಪಿಎಸ್‌ಸಿ ಪರೀಕ್ಷೆ ಬರೆಯುವ ಬಡ ಹಾಗೂ ಗ್ರಾಮೀಣ ಭಾಗದ ಅಭ್ಯರ್ಥಿಗಳ ಅನುಕೂಲಕ್ಕಾಗಿ ದೆಹಲಿಯಲ್ಲಿ ತರಬೇತಿ ಕೇಂದ್ರದ ಭವನ ನಿರ್ಮಿಸಲಾಗುವುದು. ಜಿಲ್ಲೆಯ ಪ್ರತಿ ತಾಲೂಕಿನಿಂದ ಇಬ್ಬರು ಅಭ್ಯರ್ಥಿಗಳಿಗೆ ಭವನದಲ್ಲಿ ಪರೀಕ್ಷಾ ತಯಾರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಭಾನುವಾರ ಜಿಲ್ಲಾಡಳಿತ ಹಾಗೂ ಜಿಪಂ ವತಿಯಿಂದ ಸುವರ್ಣ ವಿಧಾನಸೌಧದಲ್ಲಿ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಯೋಜಿಸಲಾದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

''ಬೆಳಗಾವಿ ಬೆಳಕು'' 2025-26ನೇ ಸಾಲಿನ ಬೆಳಗಾವಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಸಾಧಕರಿಗೆ ಅಭಿನಂದನಾ ಸಮಾರಂಭ ಆಯೋಜಿಸಿರುವುದು ಸಂತಸದ ವಿಷಯವಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಇಡೀ ರಾಜ್ಯ ಬೆಳಗಾವಿ ಜಿಲ್ಲೆಯನ್ನು ಹೊಗಳುತ್ತಿದೆ. ಒಟ್ಟು 280 ಸಾಧಕರಿಗೆ ಸನ್ಮಾನ ಮಾಡುತ್ತಿದ್ದು, ಇಲ್ಲಿನ ಐಎಎಸ್ ಐಪಿಎಸ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಸ್ಥಾನವನ್ನು ಮುಂದಿನ ದಿನಗಳಲ್ಲಿ ನೀವು ಪಡೆದುಕೊಳ್ಳುವಂತೆ ಸಾಧಿಸಬೇಕು ಎಂದು ತಿಳಿಸಿದರು. ಜಿಲ್ಲೆಯ ಯಮಕನಮರಡಿ, ಹಾರೂಗೇರಿ ಹಾಗೂ ಗೋಕಾಕದಲ್ಲಿ ಅಂದಾಜು 3 ರಿಂದ 4 ಕೋಟಿ ವೆಚ್ಚದಲ್ಲಿ ಹೈಟೆಕ್ ಗ್ರಂಥಾಲಯ ನಿರ್ಮಾಣ ಮಾಡಲಾಗುತ್ತಿದೆ. ಸರ್ಕಾರಿ ಶಾಲೆಗಳು ಸಂಪೂರ್ಣವಾಗಿ ಹೈಟೆಕ್ ಶಾಲೆಗಳನ್ನಾಗಿ ಪರಿವರ್ತಿಸುವುದು ಸರ್ಕಾರದ ಗುರಿಯಾಗಿದೆ. ಯಮಕನಮರಡಿ ಕ್ಷೇತ್ರದಲ್ಲಿ 150 ಸರ್ಕಾರಿ ಶಾಲೆ ನಿರ್ಮಾಣ ಮಾಡಲಾಗಿದ್ದು, ಅದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಇನ್ನೂ 100 ಶಾಲೆಗಳ ನಿರ್ಮಾಣಕ್ಕೆ ಯೋಜನೆಯಿದೆ ಎಂದು ತಿಳಿಸಿದರು.

ಜಿಪಂ ಸಿಇಒ ರಾಹುಲ್ ಶಿಂಧೆ ಮಾತನಾಡಿ, ಈ ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಯಲ್ಲಿ ಅತ್ಯುನ್ನತಸಾಧನೆಮಾಡಿದವಿದ್ಯಾರ್ಥಿಗಳುಹಾಗೂ ಯುಪಿಎಸ್‌ಸಿ ಸಾಧಕರನ್ನು ಸನ್ಮಾನಿಸಲಾಗಿದೆ. ತಾವು ಮುಂದೆಯೂ ಕೂಡ ಇದೇ ರೀತಿ ಸಾಧನೆ ಮಾಡಬೇಕು. ಸಮಾಜಕ್ಕೆ ಪ್ರೇರಣೆಯಾಗಬೇಕು ಎಂದು ಹೇಳಿದರು.

ಈ ವೇಳೆ ಶಾಸಕ ಮಹಾಂತೇಶ ಕೌಜಲಗಿ, ಆಸೀಫ್ ಸೇಠ್, ವಿಪ ಸದಸ್ಯ ಪ್ರಕಾಶ ಹುಕ್ಕೇರಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ವಾಯುವ್ಯ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ಸುನೀಲ ಹನುಮನ್ನವರ, ನಗರ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ, ಜಿಪಂ ಅಧಿಕಾರಿಗಳಾದ ರವಿ ಬಂಗಾರೆಪ್ಪನವರ್, ಬಸವರಾಜ ಅಡವಿಮಠ, ಗಂಗಾಧರ ದಿವಟರ್, ಶಾಲಾ ಸಾಕ್ಷರತಾ ಇಲಾಖೆ ಉಪ ನಿರ್ದೇಶಕಿ ಲೀಲಾವತಿ ಹಿರೇಮಠ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಬಸವರಾಜ ಕುರಿಹುಲಿ ಉಪಸ್ಥಿತರಿದ್ದರು.



ಸಾಧಕರಿಗೆ ಸನ್ಮಾನ

ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಸಾಧನೆಗೈದ ಬಸವರಾಜ ಕೆಂಪವಾಡ, ಕಿರಣ್ ಕಮತೆ, ರಾಹುಲ್ ಪಾಟೀಲ, ಬಸವರಾಜ ಎಂ. ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಅದೇ ರೀತಿಯಲ್ಲಿ ಎಸ್ ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಅತ್ಯುತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಕಾರ್ಯಕರ್ತರ ವ್ಯಕ್ತಿತ್ವ ರೂಪಿಸಲು ಪ್ರಶಿಕ್ಷಣ ಮಹಾಭಿಮಾನ ಸಹಕಾರಿ

ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನ ಜಾಂಬೋಟಿ ಹತ್ತಿರದ ಕೈವಲ್ಯಂ ಯೋಗಾ ರಿಟ್ರೀಟ್ ಸೆಂಟರ್‌ದಲ್ಲಿ ನಡೆಯುತ್ತಿರುವ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಮಾನ 2026ರ ಬೆಳಗಾವಿ ಗ್ರಾಮಾಂತರ ಜಿಲ್ಲಾ ಮಟ್ಟದ ಪ್ರಶಿಕ್ಷಣವರ್ಗದ ಮೊದಲನೇ ದಿನದ ಉದ್ಘಾಟನಾ ಸಮಾರಂಭವನ್ನು ಸಂಸದ ಜಗದೀಶ ಶೆಟ್ಟರ, ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಉದ್ಘಾಟಿಸಿದರು.

ಭಾನುವಾರ ಜಾಂಬೋಟಿ ಹತ್ತಿರದ ಕೈವಲ್ಯಂ ಯೋಗಾ ರಿಟ್ರೀಟ್ ಸೆಂಟರ್ ದಲ್ಲಿಆಯೋಜಿಲಾಗಿರುವ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಮಾನ 2026ರ ಕಾರ್ಯಕ್ರಮವನ್ನು ಉದ್ಘಾಟಿಸಿದ ಬಳಿಕ ಸಂಸದ ಜಗದೀಶ ಶೆಟ್ಟರ ಅವರು ಮಾತನಾಡಿ, ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಪ್ರಶಿಕ್ಷಣವರ್ಗವು ಮಂಡಲ ಮಟ್ಟದಲ್ಲಿ ಈಗಾಗಲೇ ಮುಗಿದಿದ್ದು ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ವರೆಗೂ ಪ್ರಶಿಕ್ಷಣವರ್ಗಗಳು ನಡೆಯಲಿದ್ದು ಕಾರ್ಯಕರ್ತರ ವ್ಯಕ್ತಿತ್ವ ರೂಪಿಸಲು,ಶಿಸ್ತು ಮೂಡಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್.ರವಿಕುಮಾರ್ ಮತ್ತು ಶಾಸಕ ವಿಠ್ಠಲ ಹಲಗೇಕರ ಮಾತನಾಡಿ, ಪಶ್ಚಿಮ ಬಂಗಾಳದಲ್ಲಿನ ಬಿಜೆಪಿ ಕಾರ್ಯಕರ್ತರು ನಕಲಿ ಮತದಾರರನ್ನು ಹುಡುಕಿ ಅವರ ಮತದಾನದ ಹಕ್ಕನ್ನು ರದ್ದುಪಡಿಸಿದ ಕಾರಣ ಸ್ವತಂತ್ರ್ಯ ಭಾರತದ ನಂತರ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರವನ್ನು ಹಿಡಿಯಲು ಸಾಧ್ಯವಾಗಿದೆ. ಆದರಂತೆಯೇ ಕಾರ್ಯಕರ್ತರು ಮನಸ್ಸು ಮಾಡಿದರೆ ಯಾವುದು ಅಸಾಧ್ಯವಿಲ್ಲ ಎಂಬುದಕ್ಕೆ ಪಶ್ಚಿಮ ಬಂಗಾಳದ ಚುನಾವಣೆಯೇ ಸಾಕ್ಷಿ ಎಂದು ಹೇಳಿದರು.

ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡ್ರ, ಜಗದೀಶ್ ಮೆಟಗುಡ್ಡ, ಡಾ.ವಿಶ್ವನಾಥ ಪಾಟೀಲ, ಅರವಿಂದ ಪಾಟೀಲ, ಮಹಾದೇವಪ್ಪ ಯಾದವಾಡ, ಜಿಲ್ಲಾ ಪ್ರಕೋಷ್ಠಗಳ ಸಂಯೋಜಕ ಮಹೇಶ್ ಮೋಹಿತೆ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಮಾದಮ್ಮನವರ, ಸಂದೀಪ ದೇಶಪಾಂಡೆ, ಧನಶ್ರೀದೇಸಾಯಿ, ಜಿಲ್ಲಾ ಉಪಾಧ್ಯಕ್ಷಪ್ರಮೋದ್ ಕೊಚೇರಿ, ಖಾನಾಪೂರ ಮಂಡಲ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.



ಮನುಷ್ಯ ಬದುಕಿನ ಹಿತ ಬಯಸುವ ಕಥೆ, ಕಾವ್ಯ



ಗೋಕಾಕ: ಅಧ್ಯಯನದ ಅನುಭವದಲ್ಲಿ ಹುಟ್ಟಿದ ಸಾಹಿತ್ಯದೊಳಗಿನ ಕಥೆ ಕಾವ್ಯಗಳು ಮನುಷ್ಯ ಬದುಕಿನ ಹಿತವನ್ನು ಬಯಸುತ್ತವೆ ಎಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಉಪನಿರ್ದೇಶಕ ಬಸವರಾಜ ವ್ಹಿ. ಹಿರೇಮಠ ಹೇಳಿದರು.

ಜಾನಪದ ಕಲೆ, ಸಾಹಿತ್ಯ ಸಾಂಸ್ಕೃತಿಕ ಕೂಟದ ಗೋಕಾವಿ ಗೆಳೆಯರ ಬಳಗ ನಗರದ ಕೆ.ಎಲ್.ಇ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡ ಕಥೀ ಕಥೀ..ಕಾರಣ ವಿನೂತನ ಸಾಹಿತ್ಯ ಚಿಂತನ ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಇಂದಿನ ಮಕ್ಕಳು ಮತ್ತು ಯುವ ಜನಾಂಗವನ್ನು ಸಾಹಿತ್ಯದ ಕಡೆಗೆ ಸೆಳೆಯಬೇಕಾದ ಅಗತ್ಯವಿದೆ ಎಂದರು.

ಮಡಿಕೇರಿಯ ಜವಾಹರ ನವೋದಯ ವಿದ್ಯಾಲಯದ ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ ಮಾರುತಿ ದಾಸನ್ನವರ ಕಥೆ ಮತ್ತು ಕಾವ್ಯದ ಕುರಿತು ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಅಕ್ಕಿ ಆದಿಕವಿ ಪಂಪ, ರನ್ನ ಬರೆದ ಹಳಗನ್ನಡ ಸಾಹಿತ್ಯವನ್ನು ಮರು ಓದು ಮತ್ತು ಚಿಂತನೆ ಮಾಡುವ ಕಾರ್ಯಗಳಾಗಲಿ ಎಂದು ಅಭಿಪ್ರಾಯಿಸಿದರು.

ಕಥೆಗಾರ ಸುರೇಶ ಮುದ್ದಾರ. ಕವಿ ಈಶ್ವರ ಮಮದಾಪೂರ, ರಜನಿ ಜೀರಗ್ಯಾಳ ಚಿಂತನೆ ಮಾತನಾಡಿದರು. ಕಸಾಪ ತಾಲೂಕಾಧ್ಯಕ್ಷ ಭಾರತಿ ಮದಭಾವಿ, ಕೌಜಲಗಿ ಹಿರಿಯ ಸಾಹಿತಿ ಪ್ರಕಾಶ ಕೋಟಿನತೋಟ, ವಾಗ್ಮಿ ರಾಮಚಂದ್ರ ಕಾಕಡೆ, ಬಸವಜ್ಯೋತಿ ಐಟಿಐ ಕಾಲೇಜ ಚೇರಮನ್ ಅಶೋಕ ಲಗಮಪ್ಪಗೋಳ,ಹಿರಿಯ ಸಾಹಿತಿ ಎಸ್. ಆರ್. ನಲವಡೆ, ಕವಿ ಶಿಕ್ಷಕ ಆನಂದ ಮಾಳವದೆ ಉಪಸ್ಥಿತರಿದ್ದರು.

ಸಾಹಿತಿ ಜಯಾನಂದ ಮಾದರ ಪ್ರಾಸ್ತಾವಿಕ ಮಾತನಾಡಿದರು. ವಿಶ್ವದಾಖಲೆ ಕಲಾವಿದ ಜಿ.ಕೆ.ಕಾಡೇಶಕುಮಾರ ಪ್ರಾರ್ಥಿಸಿದರು, ಸಾಹಿತಿ ವಿದ್ಯಾ ರೆಡ್ಡಿ ಸ್ವಾಗತಿಸಿದರು. ಯೋಗ ಶಿಕ್ಷಕ ಆನಂದ ಸೋರಗಾಂವಿ ನಿರೂಪಿಸಿ ವಂದಿಸಿದರು.

ಯರಗಟ್ಟಿ: ಸ್ವಚ್ಛ ಶನಿವಾರ ಅಭಿಯಾನ

ಯರಗಟ್ಟಿ: ಜಿಪಂ ಸಿಇಒ ರಾಹುಲ ಶಿಂಧೆ ರವರ ನಿರ್ದೇಶನದಂತೆ ಯರಗಟ್ಟಿ ತಾಪಂ ಕಾರ್ಯಾಲಯದಲ್ಲಿ ಹಾಗೂ ಸವದತ್ತಿ ತಾಲೂಕಿನ 32 ಹಾಗೂ ಯರಗಟ್ಟಿ ತಾಲೂಕಿನ 12 ಗ್ರಾಪಂಗಳಲ್ಲಿ ಸ್ವಚ್ಛ ಶನಿವಾರ ಅಭಿಯಾನದ ಶನಿವಾರದಂದು ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಬಡಕುಂದ್ರಿರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ತಾಪಂ ಆವರಣದಲ್ಲಿ ಹಾಗೂ ಸವದತ್ತಿ ತಾಲೂಕಿನ 32 ಹಾಗೂ ಯರಗಟ್ಟಿ ತಾಲೂಕಿನ 12 ಗ್ರಾಪಂಗಳಲ್ಲಿ ಸ್ವಚ್ಛ ಶನಿವಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳ ಸ್ವಚ್ಛತೆ ಹಾಗೂ ನಮ್ಮ ಸುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂಬುದು ಕಾರ್ಯಕ್ರಮದ ಉದ್ದೇಶವಾಗಿದೆ. ತಾಪಂನ ಅಧೀನದ ಎಲ್ಲ ಸರ್ಕಾರಿ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಾಲಯದ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕಾರ್ಯಾಲಯಗಳ ಆವರಣದಲ್ಲಿ ಪರಿಸರಸ್ನೇಹಿ ವಾತಾವರಣ ನಿರ್ಮಿಸಬೇಕು ಎಂದು ತಿಳಿಸಿದರು.

ಬಳಿಕ ಯರಗಟ್ಟಿ ತಾಪಂನಿಂದ ಸತ್ತಿಗೇರಿ ಆವರಣದಲ್ಲಿ ತಾಪಂ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಾಪಂ ಆವರಣವನ್ನು ಸ್ವಚ್ಛಗೊಳಿಸಿದರು. ತಮ್ಮ ವಿಭಾಗದ ದಾಖಲಾತಿಗಳನ್ನು ಕೂಡ ಸೂಕ್ತ ರೀತಿಯಲ್ಲಿ ಹೊಂದಿಸಿಕೊಂಡರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ ಆರ್. ಎ. ಪಾಟೀಲ, ಅಕ್ಷರ ದಾಸೋಹ ಅಧಿಕಾರಿ ಮೈತ್ರಾದೇವಿ ವಸ್ತ್ರದ, ತಾಪಂವ್ಯವಸ್ಥಾಪಕ ಮಲ್ಲಿಕಾರ್ಜುನ ಕಂಬಿ, ಸತ್ತಿಗೇರಿ ಪಿಡಿಓ ಎ. ಬಿ. ಬಂಗಾರಿ, ಸಿದ್ದಪ್ಪ ಬೆಕ್ಕನ್ನವರ, ಚಂದ್ರಗೌಡ ಪಾಟೀಲ, ರಮೇಶ ಕೊಟ್ರಶೆಟ್ಟಿ, ಹಾಗೂ ತಾಪಂ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಶಾಸಕ ಡಿ.ಎಂ. ಐಹೊಳೆಗೆ ಆಹ್ವಾನ



ರಾಯಬಾಗ: ಪಟ್ಟಣದ ಸಾಯಿ ನಗರದಲ್ಲಿರುವ ಶಾಸಕ ಡಿ.ಎಂ. ಐಹೊಳೆ ಅವರ ಗೃಹ ಕಚೇರಿಯಲ್ಲಿ ಚಿಕ್ಕೋಡಿ ಜಿಲ್ಲೆಯ ಬಿಜೆಪಿ ವತಿಯಿಂದ ಮೇ 18, 19ರಂದು ನಡೆಯಲಿರುವ ಎರಡು ದಿನಗಳ ಅಭ್ಯಾಸ ವರ್ಗದ ಕರಪತ್ರ ನೀಡಿ ಆಮಂತ್ರಿಸಿದರು.

ಈ ಅಭ್ಯಾಸ ವರ್ಗದಲ್ಲಿ ರಾಜ್ಯ ಮಟ್ಟದ ನಾಯಕರು ಆಗಮಿಸಿ ಪಕ್ಷದ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಬಿಜೆಪಿ ಚಿಕ್ಕೋಡಿ ಜಿಲ್ಲೆ ಪ್ರಧಾನ ಕಾರ್ಯದರ್ಶಿ ಸದಾನಂದ ಹಳ್ಳಿಗಳಿ, ಚಿಕ್ಕೋಡಿ ಜಿಲ್ಲಾ ಕಾರ್ಯದರ್ಶಿ ಬಸವರಾಜ್ ಡೊಣವಾಡೆ, ಚಿಕ್ಕೋಡಿ ಜಿಲ್ಲೆ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಾರುತಿ ಮಾಂಗ, ರಾಯಬಾಗ ಮಂಡಲದ ಎಸ್ಸಿ ಮೋರ್ಚಾ ಅಧ್ಯಕ್ಷರಾದ ಸಂಜಯ ಮೈಶಾಳೆ, ಬಿಜೆಪಿ ಮುಖಂಡರಾದ ಅನಿಲ ಹಂಜಿ ಹಾಗೂ ವಿನೋದ ಹಿರೇಮಠ ಉಪಸ್ಥಿತರಿದ್ದರು.

ರಾಜ್ಯಪಾಲರ ಭೇಟಿಗೆ ಅವಕಾಶ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ಕುರಿತು ಚರ್ಚಿಸಲು ರಾಜ್ಯಪಾಲರು ಮೇ 19 ಮತ್ತು 20ರಂದು ಭೇಟಿಗೆ ಅವಕಾಶ ನೀಡಿದ್ದು, ಈ ಕುರಿತು ಬಂದ ಪತ್ರ, ಬಿಜೆಪಿ ಮುಖಂಡರು ಭಾನುವಾರ ಪ್ರತ್ಯೇಕ ಪಾಲಿಕೆ ಹೋರಾಟಗಾರರಿಗೆ ತಲುಪಿಸಿದರು.

ರಾಜ್ಯಪಾಲರ ಭೇಟಿ ಪತ್ರವನ್ನು ಬಿಜೆಪಿ ಮುಖಂಡರಾದ ಮೋಹನ ರಾಮದುರ್ಗ, ಶಿವಾನಂದ ಕವಳಿ ಹಾಗೂ ಅನೇಕರು ಹೋರಾಟಗಾರ ಬಿ.ಡಿ.ಹಿರೇಮಠ, ಕವಿತಾ ಕಬ್ಬೇರ, ರಾಜು ಕಮತಿ, ಬಸವರಾಜ ಜಾಧವ, ವಿಠ್ಠಲ ಕಮ್ಮಾರ ಅವರ ಕೈಗೆ ನೀಡಿದರು.

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ: ಡಿವೈಎಸ್‌ಪಿ ಲೋಕಾಪೂರ

ಮೂಡಲಗಿ: ಜೀವನದಲ್ಲಿ ಅಸಾಧಾರಣ ಸಾಧನೆಗಳನ್ನು ಮಾಡಬೇಕಾದರೆ ಕಠಿಣ ಪರಿಶ್ರಮ ಪಡಬೇಕು ಮತ್ತು ಸದಾ ಗುರು-ಹಿರಿಯರ ಮಾರ್ಗದರ್ಶನ ದಲ್ಲಿ ಮುನ್ನಡೆಯಬೇಕು ಎಂದು ಬೆಳಗಾವಿಯ ಡಿವೈಎಸ್‌ಪಿ ಬಿ. ಎಸ್. ಲೋಕಾಪುರ ಸಲಹೆ ನೀಡಿದರು.

ಕಲ್ಲೋಳಿ ಪಟ್ಟಣದ ಶ್ರೀರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಸನ್ 2025-26ನೇ ಸಾಲಿನ ಕ್ರೀಡೆ, ಸಾಂಸ್ಕೃತಿಕ, ಎನ್‌ಎಸ್‌ಎಸ್ ಹಾಗೂ ವಿವಿಧ ವೇದಿಕೆಗಳ ಕಾರ್ಯಚಟುವಟಿಕೆಗಳ ಸಮಾರೋಪ, ಬಹುಮಾನ ವಿತರಣೆ ಹಾಗೂ ಬಿ.ಎ. ಮತ್ತು ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ 'ನಿನ್ನ ಬಾಳಿನ ಶಿಲ್ಪಿ ನೀನೇ' ಎಂಬ ಧ್ಯೇಯವಾಕ್ಯದಂತೆ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಬೇಕು. ಗೋಕಾಕ ತಾಲೂಕಿನ ಹೆಮ್ಮೆಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರ ಸಾಧನೆಯನ್ನು ವಿದ್ಯಾರ್ಥಿಗಳು ಮಾದರಿಯಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಚಾರ್ಯ ಡಾ. ಸುರೇಶ ಭೀ. ಹನಗಂಡಿ ಅವರು ಮಾತನಾಡಿ, ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಸನ್ಮಾರ್ಗದಲ್ಲಿ ನಡೆದು ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಸಗೌಡ ಶಿವಗೌಡ ಪಾಟೀಲ ಅವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ದಿವಗಂತ ಬಸಪ್ಪ ಬಾಳಪ್ಪ ಬೆಳಕೂಡ ಅವರ ಸ್ಮರಣಾರ್ಥವಾಗಿ ಸಂಸ್ಥೆಯ ನಿರ್ದೇಶಕ ಬಾಳಪ್ಪ ಬೆಳಕೂಡ ಅವರು ನೀಡಿರುವ ದತ್ತಿ ನಿಧಿ ಪುರಸ್ಕಾರವನ್ನು 2024-25 ಸಾಲಿನಲ್ಲಿ ಬಿ.ಎ ವಿಭಾಗದಲ್ಲಿ ಅತೀ ಹೆಚ್ಚು ಅಂಕಪಡೆದ ಮಹಾಂತೇಶ ಚಿಗಡೊಳ್ಳಿ, ನಿಸರ್ಗ ಪಾಲಕಿ ಹಾಗೂ ಬಿ.ಕಾಂ. ವಿಭಾಗದಲ್ಲಿ ಪ್ರವೀಣ ಬೀರಗೌಡ್ರ, ಕೀರ್ತಿ ಕಡಾಡಿ ಅವರನ್ನು, ವಿವಿಧ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳನ್ನು ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಸತ್ಕರಿಸಲಾಯಿತು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಬಿ.ಎಸ್. ಗೋರೋಶಿ, ಬಿ.ಎಸ್. ಕಡಾಡಿ, ಎಸ್.ಎಂ. ಖಾನಾಪೂರ, ಎಂ.ಡಿ. ಕುರಬೇಟ, ಬಿ.ಕೆ. ಗೋರೋಶಿ, ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿ ಸೌಖ್ಯಾ ಸಕ್ರೆಪ್ಪಗೋಳ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಡಿ. ಎಸ್. ಹುಗ್ಗಿ ಸ್ವಾಗತಿಸಿದರು. ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಎಸ್. ಎಂ. ನಿಂಗನೂರ ಅವರು ಪ್ರತಿಭಾ ಪುರಸ್ಕಾರ ನಡೆಸಿಕೊಟ್ಟರು. ಡಾ. ಕೆ.ಎಸ್. ಪರವ್ವಗೋಳ ನಿರೂಪಿಸಿದರು. ಬಿ.ಸಿ. ಮಾಳಿ ವಂದಿಸಿದರು.



ಆರ್‌ಡಿಎಸ್ ಪಿಯು ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಅಕಾಡೆಮಿ ಪ್ರಾರಂಭ

ಮೂಡಲಗಿ: ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಆರ್.ಡಿ.ಎಸ್. ಪಿಯು ಕಾಲೇಜಿನಲ್ಲಿ ನುರಿತ ಅನುಭವಿಕ ಐಐಟಿ ಎನ್‌ಐಟಿಯಲ್ಲಿ ತರಬೇತಿ ಹೊಂದಿರುವ ವಿದ್ವತ್ ಅಕಾಡೆಮಿಯ ಉಪನ್ಯಾಸಕರ ಮೂಲಕ ಕಾಲೇಜಿನ ಸೈನ್ಸ್ ವಿಭಾಗದಲ್ಲಿ ನೀಟ್, ಜೆಇಇ, ಕೆಸಿಇಟಿ, ಎನ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ತರಬೇತಿಯನ್ನು ಮೂಡಲಗಿ ತಾಲೂಕಿನಲ್ಲಿಯೇ ಪ್ರಥಮ ಬಾರಿಗೆ ನಡೆಸಲಾಗುತ್ತಿದೆ ಎಂದು ಆರ್.ಡಿ.ಎಸ್. ಅಧ್ಯಕ್ಷ ಸಂತೋಷ ತ. ಪಾರ್ಶಿ ತಿಳಿಸಿದ್ದಾರೆ.

ಮೂಡಲಗಿ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾಗಿರುವ ವಿದ್ಯಾರ್ಥಿಗಳು ನಮ್ಮ ಕಾಲೇಜಿನಲ್ಲಿ ಸೈನ್ಸ್‌ಗೆ ಪ್ರವೇಶ ಪಡೆದು ಈಗಾಗಲೇ ಪಿಯುಸಿ ಸೈನ್ಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ನೀಟ್, ಜೆಇಇ, ಕೆಸಿಇಟಿ, ಎನ್‌ಡಿಎ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ತರಗತಿಗಳಿಗೆ ಹಾಜರಾಗುವಂತೆ ಅವರು ತಿಳಿಸಿದ್ದಾರೆ.



ಕಳ್ಳತನ ಪ್ರಕರಣ: ಇಬ್ಬರ ಬಂಧನ



ತೆಲಸಂಗ: ಸಮೀಪದ ಐಗಳಿ ಪೊಲೀಸ್ ಠಾಣೆಯ ವ್ಯಾಪ್ತಿಯ ಕೊಕಟನೂರ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಪ್ರಕರಣ ದಾಖಲಾದ ಕೇವಲ 24 ಗಂಟೆಯ ಒಳಗಾಗಿ ಇಬ್ಬರು ಆರೋಪಿಗಳನ್ನು ಬಂಧಿಸಿ, ಅವರಿಂದ 1 ಲಕ್ಷ ಮೌಲ್ಯದ ಲ್ಯಾಪ್‌ಟಾಪ್ ಹಾಗೂ ಪ್ರೊಜೆಕ್ಟರ್ ವಶಪಡಿಸಿಕೊಂಡಿದ್ದಾರೆ.

ಕೊಕಟನೂರ ಗ್ರಾಮದ ನಿವಾಸಿಗಳಾದ ದರ್ಶನ ರಾಜಕುಮಾರ ಹೊನಕಾಂಬಳೆ (19) ಮತ್ತು ರಾಕೇಶ ಮನೋಹರ ಹೊನಕಾಂಬಳೆ (22) ಬಂಧಿತ ಆರೋಪಿಗಳು. ಈ ಕುರಿತು ಕಾಲೇಜಿನ ಪ್ರಾಚಾರ್ಯರಾದ ಸುರೇಶ ನಾಯಿಕ ಅವರು ಮೇ. 16 ರಂದು ಐಗಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅಥಣಿ ಸಿಪಿಐ ಸಂತೋಷ್ ಡಿ. ಹಳ್ಳೂರ ಹಾಗೂ ಐಗಳಿ ಪಿಎಸ್‌ಐ ಚಂದ್ರಶೇಖರ ಸಾಗನೂರ ಅವರ ಮುಂದಾಳತ್ವದಲ್ಲಿ ಕಾರ್ಯಾಚರಣೆ ಕೈಗೊಂಡ ತನಿಖಾ ತಂಡವು, ಮೇ.17 ರಂದು ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದೆ. ಐಗಳಿ ಪೊಲೀಸ್ ಠಾಣೆಯ ಪ್ರೊಬೇಶನರಿ ಪಿಎಸ್‌ಐ ಆರೀಫ್, ಎಎಸ್‌ಐ ಎಸ್. ಎಚ್. ಬಾಗೋಜಿ, ಸಿಬ್ಬಂದಿಗಳಾದ ಪಿ.ಎನ್.ಕುರಿ, ಎಂ.ಬಿ.ಕೊಣ್ಣೂರ, ಸಂಜೀವಕುಮಾರ ಸನಗೊಂಡ, ಎಸ್.ಎ.ಬಿರಾದಾರ, ಎ.ಬಿ.ರೋಡಗಿ, ಕೆ.ಎಸ್.ವಾಘಮೋರೆ, ಎಸ್ .ಬಿ. ಪೂಜಾರಿ ಪಾಲ್ಗೊಂಡಿದ್ದರು.

ಕಿರುಸುದ್ದಿ

ಮರು ಮೌಲ್ಯಮಾಪನ: ಎಸ್‌ಆರ್‌ಎಗೆ ಇಬ್ಬರು ತೃತೀಯ





ರಬಕವಿ-ಬನಹಟ್ಟಿ: ಇಲ್ಲಿಯ ಎಸ್‌ಆರ್‌ಎ ಹೈಸ್ಕೂಲ್‌ನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಾದ ಸಾಧನಾ ಕಿರಣ ಆಳಗಿ ಹಾಗೂ ಕಾವ್ಯಾ ದಡ್ಡೆನ್ನವರ 625ಕ್ಕೆ 614 ಅಂಕ ಪಡೆದು 98.24%ನಲ್ಲಿ ಶಾಲೆಗೆ 3ನೇ ಸ್ಥಾನ ಪಡೆದಿದ್ದಾರೆ.

ಸಾಧನಾ ಆಳಗಿಗೆ ಇಂಗ್ಲೀಷ್ ಹಾಗೂ ವಿಜ್ಞಾನ ವಿಷಯಕ್ಕೆ ತಲಾ 1 ಅಂಕ ಮತ್ತು ಕಾವ್ಯಾ ದಡ್ಡೇನ್ನವರರಿಗೆ ಕನ್ನಡದಲ್ಲಿ 1 ಅಂಕಗಳನ್ನು ಗಳಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗೆ ಮಹಾವಿದ್ಯಾಲಯದ ಚೇರಮನ್ ಬಸವರಾಜ ಜಾಡಗೌಡ, ಉಪಪ್ರಾಚಾರ್ಯ ಎನ್.ಎಸ್. ಕಂಕನಮೇಲಿ, ಆಡಳಿತ ಮಂಡಳಿಯ ಸದಸ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಶುಭ ಹಾರೈಸಿದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ಇಳಕಲ್: ಕುಲಕರ್ಣಿ ಪೇಟೆಯಲ್ಲಿ ಮತ್ತು ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಎಸ್.ಕಾಶಪ್ಪನವರ ಉದ್ಘಾಟಿಸಿದರು. ಕರ್ನಾಟಕ ಸರ್ಕಾರ ಜಿಪಂ ಬಾಗಲಕೋಟೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಾಗಲಕೋಟೆ 2023-24 ಗಣಿಗಾರಿಕೆಯಿಂದ ಬಾಧಿತವಾದ ಪ್ರದೇಶಗಳಲ್ಲಿ ಡಿಎಂಎಫ್ ಯೋಜನೆಯಡಿಯಲ್ಲಿ ಮಂಜುರಾದ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಗೊಳಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಯಾವುದೇ ಸಂದರ್ಭದಲ್ಲೂ ನೀರಿನ ಅಭಾವ ಉಂಟಾಗದಹಾಗೆ ನೋಡಿಕೊಳ್ಳಿ ಎಂದು ಹೇಳಿದರು.

ಕೊಲೆ ಪ್ರಕರಣ: ಸಾಕ್ಷಿದಾರರ ಕೊಲೆ ಯತ್ನ



ರಬಕವಿ-ಬನಹಟ್ಟಿ: ಕಳೆದ 2025 ಅಕ್ಟೋಬರ್ ತಿಂಗಳಲ್ಲಿ ಜಮಖಂಡಿ-ಕುಡಚಿ ರಾಜ್ಯ ಹೆದ್ದಾರಿಯಲ್ಲಿ ಮಿನಿ ಲಾರಿಯಿಂದ ಅಪಘಾತ ರೂಪದಲ್ಲಿ ಪತ್ರಕರ್ತ ಬಸವರಾಜ ಕಾನಗೊಂಡರನ್ನು ಕೊಲೆ ಮಾಡಿದ ಆರೋಪಿಗಳಾದ ರಬಕವಿ ಆಸ್ಪಾಕ್ ಮುಲ್ಲಾ, ಮಹೇಶ ಪವಾಡಿ ಹಾಗೂ ನಂದೇಶ್ವರ ಪವಾಡಿಯವರ ವಿರುದ್ಧ ಸಾಕ್ಷಿದಾರರಾಗಿದ್ದ ರಾಘವೇಂದ್ರ ತೇಲಿ ಹಾಗೂ ಸಹೋದರ ವಿನಾಯಕ ಎಂಬುವರರನ್ನು ಕೊಲೆಗೆ ಪ್ರಯತ್ನಸಿದ್ದಾರೆ ಎಂದು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಘಟನೆ ವಿವರ: ಆರೋಪಿಗಳು ಆಸ್ಪಾಕ್ ಮುಲ್ಲಾರ ಸಹೋದರ ಇಸಾಕ್, ಯೂಸಫ್ ಮತ್ತು ಗ್ಯಾಂಗ್‌ನಿಂದ ತಾಲೂಕಿನ ಜಗದಾಳ ಗ್ರಾಮದ ಹತ್ತಿರ ವೇಗವಾಗಿ ಕಾರ್ ಬೆನ್ನತ್ತಿ ಕೊಲೆಗೆ ಸಂಚು ರೂಪಿಸಿದ್ದರೆಂದು ರಾಘವೇಂದ್ರ ತೇಲಿ ದೂರಿನಲ್ಲಿ ತಿಳಿಸಿದ್ದಾರೆ. ಸಾಕ್ಷಿದಾರರಾಗಿರುವ ರಾಘವೇಂದ್ರ, ವಿನಾಯಕರನ್ನು ಕರೆಸಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿ ಹೇಳದಂತೆ ತಾಕೀತು ಮಾಡಿದ್ದಾರೆ. ಇದಕ್ಕೆ ಸ್ಪಂದಿಸದ ಅವರು ಕೊಲೆಗೆ ಯತ್ನಿಸಿದ್ದಾರೆಂದು ದೂರಿನಿಂದ ತಿಳಿದು ಬಂದಿದೆ. ಈ ಕುರಿತು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆಯನ್ನು ಪಿಎಸ್‌ಐ ಶಿವರಾಜ ಧರಿಗೋಣ ಕೈಗೊಂಡಿದ್ದಾರೆ. ಸ್ಥಳೀಯ ಡಿವೈಎಸ್ಪಿ ಹಾಗೂ ಸಿಪಿಐ ಅಂಥವರನ್ನು ಹೆಡೆಮುರಿ ಕಟ್ಟುವ ಮೂಲಕ ಅವಳಿ ನಗರ ಶಾಂತತೆಗೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವದು ಅಗತ್ಯವಾಗಿದೆ.

ನಿಧನಸುದ್ದಿ

ಶ್ಯಾಮರಾವ್ ಕೋಪರ್ಡೆ



ರಬಕವಿ-ಬನಹಟ್ಟಿ: ಬನಹಟ್ಟಿ ನಿವಾಸಿ ಶ್ಯಾಮರಾವ್ ಕೋಪರ್ಡೆ(51) ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಳಗವಿದೆ.



ಬಾದಾಮಿ: ಅಂಜುಮನ್ ಸಂಸ್ಥೆಯ ಸಭಾಭವನದಲ್ಲಿ ಕರ್ನಾಟಕ ರಾಜ್ಯ, ನದಾಫ್, ಪಿಂಜಾರ ಸಂಘದ ತಾಲೂಕಾ ಘಟಕದ ಪ್ರಾಯೋಕತ್ವದಲ್ಲಿ ಬಾನು ಅಸೋಸಿಯೇಟ್ಸ್ ಗೋವಾ ಇವರ ಸಹಯೋಗದಲ್ಲಿ ಉದ್ಯೋಗಾವಕಾಶ-2026 ಕಾರ್ಯಕ್ರಮ ಜರುಗಿತು.

ಶಿಬಿರದಿಂದ ಯುವಕರಿಗೆ ಉದ್ಯೋಗ: ಶಾಸಕ

ಬಾದಾಮಿ: ಯುವಕರಿಗೆ ಉದ್ಯೋಗವಕಾಶ ಒದಗಿಸುವ ಉದ್ದೇಶದಿಂದ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ರವಿವಾರ ಅಂಜುಮನ್ ಸಂಸ್ಥೆಯ ಸಭಾಭವನದಲ್ಲಿ ಕರ್ನಾಟಕ ರಾಜ್ಯ ನದಾಫ್, ಪಿಂಜಾರ ಸಂಘದ ತಾಲೂಕಾ ಘಟಕದ ಪ್ರಾಯೋಕತ್ವದಲ್ಲಿ ಬಾನು ಅಸೋಸಿಯೇಟ್ಸ್ ಗೋವಾ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉದ್ಯೋಗಾವಕಾಶ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತಾಲೂಕಾ ನದಾಫ್, ಪಿಂಜಾರ ಸಂಘದ ಅಧ್ಯಕ್ಷ ವೈ.ಎಫ್.ಶರೀಫ್ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಪತ್ರಕರ್ತ ಎಸ್.ಎಂ.ಹಿರೇಮಠ, ಮಾಜಿ ಪುರಸಭೆ ಸದಸ್ಯರಾದ ರಾಜಮಹ್ಮದ ಬಾಗವಾನ, ಫಾರೂಕ್ ಅಹ್ಮದ್ ದೊಡಮನಿ, ಅಂಜುಮನ್ ಸಂಸ್ಥೆ ಅಧ್ಯಕ್ಷ ಯುಸುಫ್ ಪೀರ್ಜಾದೆ, ಸದಸ್ಯ ನೂರಹದ್ ನದಾಫ್, ಗುತ್ತಿಗೆದಾರ ಎಲ್., ಎಂ.ಯಂಡಿಗೇರಿ, ಗೋವಾ ಎಂಆರ್‌ಎಫ್ ಕಂಪನಿ ಹಿರಿಯ ವ್ಯವಸ್ಥಾಪಕ ಸರ್ವೇಶ ಹಾಲಂಕಾರ, ಭಾನು ಅಸೋಸಿಯೇಟ್ ಎಂ.ಆರ್.ನದಾಫ್ ಸೇರಿದಂತೆ ಇತರರು ಹಾಜರಿದ್ದರು. ಕೊತಬಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಚ್.ಎಸ್.ನದಾಫ್ ಸ್ವಾಗತಿಸಿದರು. ರಿಯಾಜ್ ನರೇಗಲ್ ನಿರೂಪಿಸಿದರು. ಮುನ್ನಾ ನದಾಫ್ ವಂದಿಸಿದರು. ಈ ಉದ್ಯೋಗಾವಕಾಶದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಪಾಸ್, ಫೇಲ್ ಆದ 18 ರಿಂದ 25 ವಯೋಮಾನದ 55 ಯುವಕರು ಆಯ್ಕೆಯಾದರು.



ರಬಕವಿ-ಬನಹಟ್ಟಿ: ಬೆಂಗಳೂರಿನಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರರನ್ನು ಕ್ಷೇತ್ರದ ಕಾಂಗ್ರೆಸ್ ನಾಯಕ ಸಿದ್ದು ಕೊಣ್ಣೂರ ಜೊತೆಗೂಡಿ ಭೇಟಿ ಮಾಡಿದ ರಬಕವಿಯ ಸಂಜೀವ ಜೋತಾವರ, ರಾಮಣ್ಣಾ ಹುಲಕುಂದ ನೇತೃತ್ವದ ತಂಡಕ್ಕೆ ಡಿಸಿಎಂ ಸೇತುವೆ ನಿರ್ಮಾಣಕ್ಕೆ ಚುರುಕು ಮೂಡಿಸಲು ಮೂವರು ಅಭಿಯಂತರರನ್ನು ನಿಗಾವಹಿಸಲು ನಿಯೋಜಿಸಿದ್ದು, ಬೇಸಿಗೆಯೊಳಗೆ ಎರಡು ಪಿಲ್ಲರ್ ನಿರ್ಮಾಣ ಕಾಮಗಾರಿ ಪೂರೈಸುವಂತೆ ಆದೇಶ ನೀಡಿದ್ದಾರೆಂದು ಸಂಜೀವ ತಿಳಿಸಿದ್ದಾರೆ.

356 ಮಕ್ಕಳಿಗೆ ಆರ್ಥಿಕ ಸೌಲಭ್ಯ



ಬಾಗಲಕೋಟೆ: ಎಚ್‌ಐವಿ ಸೋಂಕಿತ ಮತ್ತು ಬಾಧಿತ ಮಕ್ಕಳಿಗೆ ಪೌಷ್ಠಿಕ ಆಹಾರ, ವೈದ್ಯಕೀಯ ವೆಚ್ಚ ಹಾಗೂ ಇತರೆ ವೆಚ್ಚಕ್ಕಾಗಿ ಪ್ರತೀ ಮಾಹೆ 2 ಸಾವಿರ ರೂ.ಗಳಂತೆ ಡಿಬಿಟಿ ಮೂಲಕ ಆರ್ಥಿಕ ಸಹಾಯಧನ ನೀಡಲಾಗುತ್ತಿದ್ದು, 2025-26ನೇ ಸಾಲಿನ ಒಟ್ಟು 356 ಮಕ್ಕಳಿಗೆ ಆರ್ಥಿಕ ಸೌಲಭ್ಯ ನೀಡಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರ ಅಶೋಕ ತೇಲಿ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ 3ನೇ ಮತ್ತು 4ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಸಭೆಯಲ್ಲಿ ಬಾಲನ್ಯಾಯ ಕಾಯ್ದೆ-2015ಗೆ ಸಂಬಂಧಿಸಿದ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಜಿಲ್ಲಾ ತನಿಖಾ ಸಮಿತಿ, ಮಕ್ಕಳ ಸಲಹಾ ಮಂಡಳಿಯ ಪ್ರಗತಿಯನ್ನು ಪರಿಶೀಲಿಸಲಾಯಿತು.

ಮಕ್ಕಳ ಪಾಲನಾ ಸಂಸ್ಥೆಗಳಿಂದ ಬಿಡುಗಡೆಯಾದ ಮಕ್ಕಳು, ಅನಾಥ, ಏಕಪೋಷಕ, ಜೈಲಿನಲ್ಲಿರುವ ಪಾಲಕರ ಮಕ್ಕಳಿಗೆ ಹಾಗೂ ಇತರೆ ಮಕ್ಕಳಿಗೆ ಕುಟುಂಬದ ವಾತಾವರಣ ದಲ್ಲಿ ಬೆಳೆಯಲು ಹಾಗೂ ವಿದ್ಯಾಭ್ಯಾಸ ಮುಂದುವರೆಸಲು ಪ್ರತೀ ಮಾಹೆ 4 ಸಾವಿರ ರೂ. ಗಳಂತೆ ಆರ್ಥಿಕ ಸಹಾಯಧನ ನೀಡಲಾಗುವುದು. 4ನೇ ತ್ರೈಮಾಸಿಕದಲ್ಲಿ ಒಟ್ಟು 169 ಮಕ್ಕಳಿಗೆ ಆರ್ಥಿಕ ಸೌಲಭ್ಯ ನೀಡಲಾಗಿದೆ. 427 ಮಕ್ಕಳಿಗೆ ಅನುದಾನ ಬೇಡಿಕೆಗೆ ಕೇಂದ್ರ ಕಛೇರಿಗೆ ಸಲ್ಲಿಸಲಾಗಿದೆ. 2026-27ನೇ ಸಾಲಿಗೆ 324 ಮಕ್ಕಳನ್ನು ಸಭೆಯಲ್ಲಿ ಅನುಮೋದಿಸಲಾಯಿತು ಎಂದರು.

ಈ ತ್ರೈಮಾಸಿಕದಲ್ಲಿ ಒಟ್ಟು 58 ತರಬೇತಿ ಹಾಗೂ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದಾಗ ಇದಕ್ಕೆ ಅಪರ ಜಿಲ್ಲಾಧಿಕಾರಿಗಳು ಪ್ರಾಥಶಾಲಾ ಮಕ್ಕಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು. ಪೋಷಕತ್ವ ಕಾರ್ಯಕ್ರಮದಡಿ ಮಕ್ಕಳನ್ನು ತಾತ್ಕಾಲಿಕವಾಗಿ ಕುಟುಂಬ ವಾತಾವರಣದಲ್ಲಿ ಬೆಳೆಸುವ ಉದ್ದೇಶ ಒಟ್ಟು 02 ಮಕ್ಕಳನ್ನು ಪೋಷಕತ್ವದಡಿಯಲ್ಲಿ ನೀಡಲಾಗಿದೆ. ಪ್ರತೀ ತ್ರೈಮಾಸಿಕಕ್ಕೊಮ್ಮೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿಯಿಂದ ಅನುಸರಣೆ ಮಾಡಲಾಗುತ್ತಿದೆ ಎಂದರು.

ಪೋಕ್ಸೋ ಕಾಯ್ದೆ-2012, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಅಭಯಾ ನಿಧಿ ಯೋಜನೆಯಡಿ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಆರ್ಥಿಕ ಸಹಾಯ ಧನ ಒದಗಿಸಲಾಗುವುದು. 3 ಮತ್ತು 4ನೇ ತ್ರೈಮಾಸಿಕದಲ್ಲಿ ಒಟ್ಟು 28 ಮಕ್ಕಳಿಗೆ ಸಹಾಯಧನ ನೀಡಲಾಗಿದೆ. ಬಾಲ ನ್ಯಾಯಮಂಡಳಿಯ ಸದಸ್ಯೆ ಸುವರ್ಣಾ ನಾಗಠಾಣ ಬಾಲನ್ಯಾಯ ಮಂಡಳಿ ಮುಂದೆ ದಾಖಲಾದ ಪ್ರಕರಣಗಳ ಬಗ್ಗೆ ವಿವರಿಸಿದರು. ಒಟ್ಟು 40 ಪ್ರಕರಣಗಳು ಬಾಕಿ ಇವೆ ಎಂದು ಸಭೆಗೆ ತಿಳಿಸಿದಾಗ ಬಾಕಿ ಉಳಿಯಲು ಕಾರಣವೇನೆಂದು ಅಪರ ಜಿಲ್ಲಾಧಿಕಾರಿಗಳು ಪ್ರಶ್ನಿಸಿದರು. ಚಾರ್ಜ್ ಶೀಟ್ ಸಲ್ಲಿಕೆಯಾಗದಿರುವ ಕಾರಣ ಬಾಕಿ ಉಳಿದಿವೆ ಎಂದು ತಿಳಿಸಿದರು.

ಕೋವಿಡ್-19 ದಿಂದ ತಂದೆ-ತಾಯಿಯನ್ನು ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳಿಗೆ ಕುಟುಂಬದ ಆರೈಕೆಯಲ್ಲಿರುವ ಮಕ್ಕಳಿಗೆ ಪ್ರತೀ ತಿಂಗಳು ರೂ.3,500ದಂತೆ ಆರ್ಥಿಕ ಸಹಾಯಧನ. ಒಟ್ಟು 2 ಮಕ್ಕಳಿಗೆ ಆರ್ಥಿಕ ಸಹಾಯಧನ ನೀಡಲಾಗಿದೆ ಎಂದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಒಟ್ಟು 123 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 74 ಪ್ರಕರಣಗಳು ಬಾಕಿ ಇವೆ. ಮಕ್ಕಳ ಸಹಾಯವಾಣಿ ಮುಂದೆ ದಾಖಲಾದ ಪ್ರಕರಣಗಳ ಬಗ್ಗೆ ವಿವರಿಸಿದರು. ಮಕ್ಕಳ ಸಹಾಯವಾಣಿಗೆ ಒಟ್ಟು 275 ಪ್ರಕರಣಗಳು ದಾಖಲಾಗಿದ್ದು, ಎಲ್ಲ ಪ್ರಕರಣ ಇತ್ಯರ್ಥಪಡಿಸಲಾಗಿದ್ದು, ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಸಭೆಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ, ಜಿಲ್ಲಾ ಜಿಲ್ಲಾ ಕಾರ್ಮಿಕಾಧಿಕಾರಿ ರಮೇಶ ಸುಂಬಡ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಹಿರೇಮಠ ಸೇರಿದಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು, ಜಿಲ್ಲಾ ಬಾಲನ್ಯಾಯ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ರಸ್ತೆ ಅತಿಕ್ರಮಣ: ಸ್ವಯಂಪ್ರೇರಿತವಾಗಿ ತೆರವುಗೊಳಿಸಿ

ಗುಳೇದಗುಡ್ಡ: ಪಟ್ಟಣದ ಭಾರತ ಮಾರ್ಕೆಟ್‌ನಲ್ಲಿ ರಸ್ತೆಯನ್ನು ಅತಿಕ್ರಮಿಸಿರುವ ಖೋಕಾ ಅಂಗಡಿಗಳಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಅತಿಕ್ರಮಣ ಕೈಗೊಂಡ ಖೋಕಾ ಅಂಗಡಿ ಮಾಲೀಕರು ಸ್ವಯಂಪ್ರೇರಿತವಾಗಿ ತಮ್ಮ ಅಂಗಡಿಗಳನ್ನು ತೆರವುಗೊಳಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಅಸ್ಲಂ ಮುಜಾವರ ಹೇಳಿದರು.

ಅವರು ಸ್ಥಳೀಯ ಪುರಸಭೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಬೀದಿ ಬದಿ ವ್ಯಾಪಾರಸ್ಥರು ರಸ್ತೆಯಲ್ಲಿಯೇ ಇಟ್ಟು ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಅಂಗಡಿಕಾರರಿಗೆ ಅರಿವು ಮೂಡಿಸಿ, ಅವರು ಸ್ವಯಂಪ್ರೇರಿತವಾಗಿ ಅಂಗಡಿ ತೆರವುಗಳಿಸಲಿ, ಅವರು ಹಠ ಮಾಡಿದರೆ ಕಾನೂನು ಪ್ರಕ್ರಿಯೇ ನಡೆಸಿ ಎಂದು ಪುರಸಭೆ ಆಡಳಿತಾಧಿಕಾರಿಗಳು ಹೇಳಿದ್ದಾರೆ ಎಂದರು.

ಕೇಂದ್ರ, ರಾಜ್ಯ ಸರ್ಕಾರದ ಅನುದಾನದಲ್ಲಿ ಸುಮಾರು 6 ಕೋಟಿ 27 ಲಕ್ಷ ರೂ ವೆಚ್ಚದಲ್ಲಿ ಭಾರತ ಮಾರ್ಕೆಟ್‌ನ ನವೀಕರಣಕ್ಕೆ ಯೋಜನೆ ರೂಪಿಸಲಾಗಿದೆ. ವ್ಯಾಪಾರಸ್ಥರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಯೋಜನೆ ತರಲಾಗುತ್ತಿದೆ ಎಂದರು.

ಬೀದಿ ವ್ಯಾಪಾರಸ್ಥರು ಮಾತನಾಡಿ, ಮಾರ್ಕೆಟ್‌ನಲ್ಲಿ ನೂರರಿಂದ ನೂರಾಐವತ್ತು ಅಂಗಡಿಗಳು ಇದ್ದು, ಈ ಅಂಗಡಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿ, ವ್ಯಾಪಾರಕ್ಕೆ ಅನುಕೂಲ ಮಾಡಿಕೊಡಿ. ಹೀಗೆ ಏಕಾಏಕಿ ಅಂಗಡಿ ಕಿತ್ತಿಸಿದರೆ ನಮ್ಮ ಕುಟುಂಬ ನಿರ್ವಹಣೆಗೆ ತೊಂದರೆಯಾಗುತ್ತದೆ ಎಂದು ಅಳಲು ತೋಡಿಕೊಂಡರು.

ಬಿಜೆಪಿ ಮುಖಂಡ ಕಮಲಕಿಶೋರ ಮಾಲಪಾಣಿ, ಪ್ರಕಾಶ ಮುರಗೋಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ ಮಾತನಾಡಿದರು.

ತಹಶೀಲ್ದಾರ್ ಎಸ್.ಎಫ್.ಬೊಮ್ಮಣ್ಣವರ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ನಾಮನಿರ್ದೇಶನ ಸದಸ್ಯರಾದ ಚಿದಾನಂದಸಾ ಕಾಟವಾ, ಶಿವಾನಂದ ಮಳೀಮಠ, ಜಮೀರ ಮೌಲ್ವಿ, ಹನಮಂತಪ್ಪ ಕಟಗೇರಿ, ಪಿಎಸ್‌ಐ ಸಿದ್ದಪ್ಪ ಯಡಹಳ್ಳಿ, ವಸಂತಸಾ ಧೋಂಗಡೆ, ಶ್ರೀಕಾಂತ ಭಾವಿ, ನಗರ ಯೋಜನಿ ಇಲಾಖೆ ಅಧಿಕಾರಿ ಶ್ರೀಕಾಂತ ಹೊಸಮನಿ, ಸಿದ್ದು ಅರಕಲಚಿಟ್ಟಿ, ಮದುಸೂಧನ ರಾಂದಡ, ಸಂಗಪ್ಪ ಚಿಟ್ಟೇರ, ಸಂಗಣ್ಣ ಹುನಗುಂದ, ಭಾಗ್ಯಾ ಉದ್ನೂರ ಸೇರಿದಂತೆ ಬೀದಿಬದಿ ವ್ಯಾಪಾರಸ್ಥರು ಉಪಸ್ಥಿತರಿದ್ದರು.



ಮಲ್ಲಮ್ಮ ಅವರ ಆದರ್ಶಗಳು ಎಂದಿಗೂ ಪ್ರಸ್ತುತ: ಗೌಡಪ್ಪಗೋಳ

ಬಾದಾಮಿ: ಹೇಮರಡ್ಡಿ ಮಲ್ಲಮ್ಮ ಅವರ ಆದರ್ಶಗಳು ಎಂದೆಂದಿಗೂ ಪ್ರಸ್ತುವಾಗಿವೆ. ಆದರ್ಶಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿಗೆ ಅರ್ಥ ಬರುತ್ತದೆ ಎಂದು ಹುಬ್ಬಳ್ಳಿ ವಾಣಿಜ್ಯ ತೆರಿಗೆ ಇಲಾಖೆಯ ವಿಶ್ರಾಂತ ಉಪ ಆಯುಕ್ತ ಜಿ.ಜಿ.ಗೌಡಪ್ಪಗೋಳ ಹೇಳಿದರು.

ಅವರು ರವಿವಾರ ಪಟ್ಟಣದ ವಿದ್ಯಾನಗರದ ಹೇಮ ವೇಮ ಚಾರಿಟೇಬಲ್ ಸಂಸ್ಥೆ(ರಿ) ವತಿಯಿಂದ ಹೇಮರಡ್ಡಿ ಮಲ್ಲಮ್ಮ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಇವರ ತಾಲೂಕಾಮಟ್ಟದ 604ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ತಾಳ್ಮೆ, ಸಹನೆ, ಸದಾಚಾರ, ಸಂತೃಪ್ತಿ, ದಾನ, ನಿಷ್ಕಲ್ಮಷ ಭಕ್ತಿ ಇವುಗಳನ್ನು ಅಳವಡಿಸಿಕೊಂಡು ಮಲ್ಲಮ್ಮರ ಜೀವನದಲ್ಲಿ ಬಹಳ ಕಷ್ಟ ಅನುಭವಿಸಿ ಶಿವಶರಣೆಯಾದಳು. ಇವರ ಆದರ್ಶಗಳು ಎಲ್ಲರಿಗೂ ಮಾದರಿಯಾಗಿವೆ ಎಂದರು. ಸಂಸ್ಥೆಯ ಅಧ್ಯಕ್ಷ ಡಿ.ಎಂ.ಪೈಲ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯ ಮಾರಾಟ ಮಂಡಳಿ ನಿರ್ದೇಶಕ ಎಸ್.ಆರ್.ಮೆಳ್ಳಿ, ಹೇಮ ವೇಮ ಚಾರಿಟೇಬಲ್ ಸಂಸ್ಥೆ ಉಪಾಧ್ಯಕ್ಷ ಡಿ.ಪಿ.ಆಮಲಝರಿ, ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ವಿ.ಎಸ್.ದೇಸಾಯಿ, ಹೇಮರಡ್ಡಿ ಮಲ್ಲಮ್ಮ ಮಹಿಳಾ ವೇದಿಕೆ ಅಧ್ಯಕ್ಷೆ ಲಕ್ಷ್ಮೀ ಕಟ್ಟಿ, ಉಪಾಧ್ಯಕ್ಷೆ ಪ್ರೇಮಾ ಪಾಟೀಲ ಉಪಸ್ಥಿತರಿದ್ದರು.

ಈ ವೇಳೆ ಅಧಿಕ ಅಂಕ ಪಡೆದ ರಡ್ಡಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮತ್ತು ಸೇವೆಯಿಂದ ನಿವೃತ್ತರಾದ ನೌಕರರನ್ನು ಸನ್ಮಾನಿಸಿ ಗೌರವಿಸಲಾಯಿತು. ನಿವೃತ್ತ ನೌಕರರ ಪರವಾಗಿ ನಿವೃತ್ತ ಶಿಕ್ಷಣಾಧಿಕಾರಿ ಎಚ್.ಜಿ.ಮಿರ್ಜಿ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಎ.ಭರಮಗೌಡರ ಪ್ರಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಖಜಾಂಚಿ ಸಿ.ವಿ.ಚನವೀರಗೌಡರ, ಸಹಕಾರ್ಯದರ್ಶಿ ಎಸ್.ಎಂ.ಪಾಟೀಲ, ನಿರ್ದೇಶಕ ವಿ.ಆರ್.ಪಾಟೀಲ, ಎಸ್.ಎಂ.ಸುಂಕದ, ವಿ.ಎಸ್.ಪಾಟೀಲ, ಸಿ.ಎಸ್.ಹೊಸಗೌಡರ, ಡಾ.ಎಸ್.ಆರ್.ಉಗಲವಾಟ, ಎಂ.ಜಿ.ಗೋಪಾಲಪ್ಪನ್ನವರ, ಶ್ರೀನಿವಾಸ ಪಾಟೀಲ, ಕೆ.ಆರ್.ಪಾಟೀಲ, ಎಂ.ಎಸ್.ಚನ್ನಪ್ಪಗೌಡರ ಸೇರಿದಂತೆ ಸಂಸ್ಥೆ ಸರ್ವ ಸದಸ್ಯರು. ಮಹಿಳಾ ವೇದಿಕೆಯ ಸದಸ್ಯರು, ಸಾರ್ವಜನಿಕರು, ಸಮಾಜದ ಮುಖಂಡರು, ಮಹಿಳೆಯರು, ನೌಕರರು ಭಾಗವಹಿಸಿದ್ದರು. ಪೂರ್ಣಿಮಾ ಗಂಗಲ್ ಸ್ವಾಗತಿಸಿದರು. ಮಧುಮಾಲಾ ನಾಲತವಾಡ ನಿರೂಪಿಸಿದರು. ಪ್ರತಿಭಾ ಚನ್ನಪ್ಪಗೌಡರ ವಂದಿಸಿದರು.



ಬದುಕುವುದಕ್ಕೆ ಇಂಗ್ಲಿಷ್ ಅನಿವಾರ್ಯ ಅಲ್ಲ: ಡಾ.ಮೀನಾ



ಬಾಗಲಕೋಟೆ: ಶಿಕ್ಷಣ ವ್ಯವಸ್ಥೆಯಲ್ಲಿ ಭಾರತೀಯತೆ ತರುವ ಆಂದೋಲನದ ಅಗತ್ಯವಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನವಾಗಬೇಕಿದೆ ಎಂದು ಅಖಿಲ ಭಾರತೀಯ ಸಂಯುಕ್ತ ಮಹಾಮಂತ್ರಿ ಡಾ. ಮೀನಾ ಚಂದಾವರಕರ ಹೇಳಿದರು.

ನಗರದ ಬಿವಿವಿಎಸ್ ಪಾಲಿಟೆಕ್ನಿಕ್ ಸಭಾಭವನದಲ್ಲಿ ಇತ್ತೀಚಿಗೆ ನಡೆದ ಭಾರತೀಯ ಶಿಕ್ಷಣ ಮಂಡಲ ಜಿಲ್ಲಾ ಘಟಕದ ಕಾರ್ಯಕಾರಿ ಘೋಷಣೆ ಕಾರ್ಯಕ್ರಮದಲ್ಲಿ 2026- 28 ನೇ ಸಾಲಿನ ಜಿಲ್ಲಾ ಕಾರ್ಯಕಾರಿಣಿ ಘೋಷಣೆ ಮಾಡಿ ಮಾತನಾಡಿದ ಅವರು, ಬೆಳಗ್ಗೆ ಹತ್ತರಿಂದ ಸಂಜೆ ಐದರ ನಡುವೆ ನಡೆಯುವ ಪಾಠ ಪ್ರವಚನವೇ ಶಿಕ್ಷಣವಲ್ಲ, ಅದು ಈ ವ್ಯಾಪ್ತಿಯನ್ನು ಮೀರಿದ ಒಂದು ಪ್ರಕ್ರಿಯೆ. ಬದುಕುವುದಕ್ಕೆ ಇಂಗ್ಲಿಷ್ ಅನಿವಾರ್ಯ ಎಂಬ ತಪ್ಪು ಕಲ್ಪನೆ ಇಡೀ ಸಮಾಜಲ್ಲಿ ಬಿತ್ತಲಾಗಿದೆ. ವ್ಯವಹಾರಕ್ಕೆ ಇಂಗ್ಲಿಷ್‌ಬೇಕು. ಆದರೆ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ನಡೆಯಬೇಕು. ಪ್ರಶ್ನಿಸುವ ಗುಣವೇ ಭಾರತದ ಪ್ರಾಚೀನ ಪರಂಪರೆಯ ಅಂತಃಸತ್ವ ಎಂದರು.

ಬಸವರಾಜ ಯಂಕಂಚಿ ಮಾತನಾಡಿ, ಗುರುಕುಲ ಪದ್ಧತಿ ನಮ್ಮ ದೇಶದ ಅತ್ಯಂತ ಪ್ರಾಚೀನ ಪದ್ಧತಿಯಾಗಿದ್ದು, ಅದನ್ನು ಇವತ್ತಿಗೂ ನಾವು ಮುಂದುವರಿಸಬೇಕಾದ ಅಗತ್ಯವಿದೆ ಎಂದರು. ಭಾರತೀಯ ಶಿಕ್ಷಣ ಮಂಡಲ ಜಿಲ್ಲಾ ಅಧ್ಯಕ್ಷ ಎಸ್.ಆರ್.ಮನಹಳ್ಳಿ ಮಾತನಾಡಿ, ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಬೋಧನೆಗಿಂತಲೂ ಕಲಿಕೆಗೆ ಹೆಚ್ಚಿನ ಮಹತ್ವ, ಆತ್ಮನಿರ್ಭರತೆ ಸಾಧಿಸುವುದೇ ಶಿಕ್ಷಣದ ಉದ್ದೇಶ ಎಂದರು. ಗೀತಾ ಕಂಚಿ ಧ್ಯೇಯ ಶ್ಲೋಕವನ್ನು ಹೇಳಿದರು. ಸುಷ್ಮಾ ಒಡೆಯರ ಸ್ವಾಗತಿಸಿದರು. ಭಾರತೀಯ ಶಿಕ್ಷಣ ಮಂಡಲದ ಜಿಲ್ಲಾ ಕಾರ್ಯದರ್ಶಿ ಎಲ್.ಜಿ.ವೈದ್ಯ ವಂದಿಸಿದರು. ಅರುಣಾ ರಘುವೀರ್ ಶಾಂತಿ ಮಂತ್ರ ಪಠಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳಿಸಿದರು.

ಈ ವೇಳೆ ಪಾಲಿಟೆಕ್ನಿಕ್ ಕಾಲೇಜ್ ಪ್ರಾಚಾರ್ಯ ಎಂ.ಎಸ್ ಮಾಟೂರ, ಡಾ.ಅರುಣ ಹೂಲಿ, ಡಾ.ಜಗನ್ನಾಥ ಚವ್ಹಾಣ ಡಾ.ರವಿ ಕೋಟೆನ್ನವರ, ಡಾ.ಜಿ.ಐ.ನಂದಿಕೋಲ್ಮಠ, ಡಾ.ಬಸವರಾಜ ಕುಂಬಾರ, ಡಾ.ಆರ್.ಎಂ.ಕುಲಕರ್ಣಿ, ಅನೇಕ ಭಾರತೀಯ ಶಿಕ್ಷಣ ಮಂಡಲದ ಸದಸ್ಯರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ನೂತನ ಜಿಲ್ಲಾಧ್ಯಕ್ಷರಾಗಿ ಮುತ್ತಣ್ಣಾ

ಜಮಖಂಡಿ : ಸ್ಥಳೀಯ ರಮಾನಿವಾಸ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ಅಮೇಚೂರ ಸೈಕ್ಲಿಂಗ್ ಅಸೋಸಿಯೇಷನ್ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ನೂತನ ಜಿಲ್ಲಾಧ್ಯಕ್ಷರಾಗಿ ಕುಂಬಾರಹಳ್ಳ ಗ್ರಾಮದ ಮುತ್ತಣ್ಣಾ ಮೇತ್ರಿ ಆಯ್ಕೆಯಾಗಿದ್ದಾರೆ.

ನೂತನ ಜಿಲ್ಲಾಧ್ಯಕ್ಷ ಮುತ್ತಣ್ಣ ಮೇತ್ರ ಮಾತನಾಡಿ, ಕರ್ನಾಟಕ ಅಮೆಚೂರು ಸೈಕ್ಲಿಂಗ್ ಅಸೋಸಿಯೇಷನ್ ರಾಜ್ಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಒಗ್ಗಟ್ಟಾಗಿ ಸೇರಿ ಜಮಖಂಡಿಯಲ್ಲಿ ರೋಡ್ ಸೈಕ್ಲಿಂಗ್ ಚಾಂಪಿಯನಶಿಪ್ ನಡೆಸಲು ಮನವಿ ಮಾಡುತ್ತೇವೆ ಎಂದರು.

ಸಿ.ಕೆ.ಚನಾಳ, ಶ್ರೀಶೈಲ ಕುರಣಿ, ಪರುಶುರಾಮ ಗುದಗಿ ಮಾತನಾಡಿದರು.

ಯಂಕಪ್ಪ ಎಂಟೆತ್ತ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸೈಕ್ಲಿಂಗ್ ಪಟು ಎ.ಎಸ್.ಐ ಭೀಮಸಿ ಮದರಖಂಡಿ, ಕೋಚ ವಿಠ್ಠಲ ಬೋರ್ಜಿ, ಚಿನ್ನಪ್ಪ ಆಲಗೂರು, ಬಸವರಾಜ ಗುಳೇದ, ನಾಗಪ್ಪ ಹೆಗಡೆ, ಮಂಜು ಹಾರೂಗೇರಿ, ಮಾದೇವ ಕುರಣಿ, ಸದಾಶಿವ ಕುರಣಿ, ಮಾದೇವ ಪಾಟೀಲ, ಈಶ್ವರ ಗುಳೇದ, ಪರಸಪ್ಪ ಸವಳತೋಟ, ಗಿರೀಶ ಬೂದಿಹಾಳ, ಅಡಿವಪ್ಪ ಅವಟಿ, ಗುರುಪಾದಯ್ಯ ಮಠಪತಿ, ಸೋಮನಿಂಗ ಗಾಳಿ, ರಾಚಪ್ಪ ಕಿತ್ತೂರ್, ಸಚಿನ್ ಮಠಪತಿ, ಸಚಿನ ಪೂಜಾರಿ, ಶಂಕರ ಕೋರನವರ, ಹಾಗೂ ಬಾಗಲಕೋಟೆ ಜಿಲ್ಲಾ ಅಮೆಚೂರ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



ರಬಕವಿಯಲ್ಲೊಂದು ವಿಶೇಷ ವಸ್ತು ಸಂಗ್ರಹಾಲಯ

▸ಮಲ್ಲಿಕಾರ್ಜುನ ತುಂಗಳ



ದಿಗಂತ ವಿಶೇಷ

ರಬಕವಿ-ಬನಹಟ್ಟಿ: ರಬಕವಿ ನಗರದ ಬಸವರಾಜ ದಲಾಲ ಪರಿವಾರದ ಫಾರ್ಮ್ ಹೌಸ್‌ನಲ್ಲಿ ಶತಮಾನದ ಇತಿಹಾಸ ಸಾರುವ ಪೂರ್ವಜರು ಬಳಸಿದ ಹಾಗೂ ಇತ್ತೀಚಿನ ಅನೇಕ ವಸ್ತುಗಳನ್ನು ನೋಡಲು ಉತ್ತಮ ವಸ್ತು ಸಂಗ್ರಹಾಲಯ ನಿರ್ಮಿಸಿದ್ದಾರೆ.

ಇದನ್ನು ನೋಡಲೆಂದೇ ಜನತೆ ಬರುತ್ತಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ನಮಗೆ ವಸ್ತುಗಳ ಸಂಗ್ರಹ, ಹಳೆಯ ಹಾಗೂ ಹೊಸ ಮಾದರಿಯ ಕಾರ್‌ಗಳನ್ನು ಸಹ ನಾವು ಸಂಗ್ರಹ ಮಾಡಿದ್ದೇವೆ. ವಸ್ತುಗಳನ್ನು ಸಂಗ್ರಹಿಸುವುದುರಿಂದ ನಮಗೆ ತೃಪ್ತಿಯಿದೆ. ಜೊತೆಗೆ ಕಾಲಘಟ್ಟದ ಕುರಿತು ಮುಂದಿನ ಪೀಳಿಗೆಗೆ ಒಂದು ಹೊಸ ಅಧ್ಯಾಯ ನೋಡುವಂತಾಗುತ್ತದೆ ಎನ್ನುತ್ತಾರೆ ಬಸವರಾಜ.

1977ರಿಂದ ಶುರುವಾದ ಈ ಆಕರ್ಷಣೆಯ ಪ್ರಮುಖ ಉದ್ದೇಶವೆಂದರೆ ಸಂಸ್ಕೃತಿ ಪರಿಚಯ ಹಾಗೂ ವಿನಿಮಯ. ಇಲ್ಲಿ ಹಳೆಕಾಲದ ಕಂದೀಲು, ರೇಡಿಯೋ, ಕ್ಯಾಸೆಟ್, ಟೆಲಿಫೋನ್, ಅಮಿತಾ ಬಚ್‌ನ, ವಿಜಯ ಮಲ್ಯ, ರಜನಿಕಾಂತ ರವರು ಬಳಸಿದ ಹಳೆ ಕಾರುಗಳು, ಆಟಿಕೆ ಸಾಮಾನುಗಳು, ನೂರಾರು ವರ್ಷಗಳ ಹಿಂದೆ ಬಳಸಿದ ಕ್ಯಾಮರಾಗಳು, ರಾಜಮಹಾರಾಜರು ಬಳಸಿದ ತಲ್ವಾರ್, ವಿದೇಶಿ ಕೀಲಿಗಳು, ಟೈಪರೈಟಿಂಗ್ ಮಶಿನ್, ಅಡಿಗೆ ಮನೆಯಲ್ಲಿ ಬಳಸುವ ಅನೇಕ ವಸ್ತುಗಳು ಹೀಗೆ ಹತ್ತು ಹಲವು ಮಾದರಿಯ ಇತಿಹಾಸ ಹೇಳುವ ವಸ್ತುಗಳಿವೆ.

ಒಂದು ಎಕರೆ ತೋಟದ ಮೈದಾನದಲ್ಲಿ ನಾವು ಅನೇಕ ತೆಂಗಿನ ಮರಗಳು, ವಿವಿಧ ರೀತಿಯ ಹೂಗಳನ್ನು ನೆಟ್ಟಿದ್ದೇವೆ. ಇತಿಹಾಸದ ಅವಶೇಷಗಳನ್ನು ಸಂರಕ್ಷಿಸುವ, ಅಧ್ಯಯನ ಮಾಡುವ ಮತ್ತು ಪ್ರದರ್ಶಿಸುವ ಸಂಸ್ಥೆಗಳಾಗಿ ವಸ್ತು ಸಂಗ್ರಹಾಲಯಗಳ ಪಾತ್ರವನ್ನು ಇದು ಎತ್ತಿ ಹಿಡಿಯುತ್ತದೆ.

ನಡೆದಾಡುವ ದೇವರು ಸಿದ್ದೇಶ್ವರ ಶ್ರೀಗಳು ಈ ಸ್ಥಳವನ್ನು ಹೆಚ್ಚು ಇಷ್ಟ ಪಡುತ್ತಿದ್ದರಲ್ಲದೆ, ಅನೇಕ ಬಾರಿ ಇಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಅವರಿಗೆ ಒಂದು ಉತ್ತಮವಾದ ಕೊಠಡಿ ಕೂಡಾ ನಿರ್ಮಿಸಿದ್ದೇವು, ಅವರು ಬಳಸಿದ ಈ ಕೊಠಡಿಯನ್ನು ಇಂದಿಗೂ ನಾವು ದೇವಾಲಯದಂತೆ ಬಳಸುತ್ತೇವೆ ಎನ್ನುತ್ತಾರೆ ಬಸವರಾಜ ದಲಾಲ.

ಒಟ್ಟಾರೆ ಸುಂದರ ಪರಿಸರದ ವಾತಾವರಣದಲ್ಲಿ ಕೃಷ್ಣಾ ನದಿಗೆ ತೆರಗಳು ರಸ್ತೆಬದಿಯಲ್ಲಿ ಇರುವ ಈ ಪಾರ್ಮಹೌಸ್ ನೋಡುಗರಿಗೆ ಒಂದು ಭೂಮಿ ಮೇಲಿನ ಸ್ವರ್ಗದಂತೆ ಅನಿಸುತ್ತದೆ.

ವಾಟಾಳ್ ಜೊತೆ ಖಾಜಿ ಮಾತುಕತೆ: ಬೆಂಬಲಕ್ಕೆ ಸಾಥ್



ರಬಕವಿ-ಬನಹಟ್ಟಿ: ಬಾಗಲಕೋಟೆ-ಕುಡಚಿ ರೈಲು ಮಾರ್ಗ(142 ಕಿ.ಮೀ) ಕಾಮಗಾರಿ 2008 ರಲ್ಲಿ ಹೋರಾಟ ಸಮಿತಿ ಅಧ್ಯಕ್ಷ ಕುತ್ಬುದ್ದೀನ್ ಖಾಜಿ ಇದೀಗ ಬೆಂಗಳೂರಿನಲ್ಲಿ ರವಿವಾರ ಕನ್ನಡ ಕಟ್ಟಾಳು ವಾಟಾಳ್ ನಾಗರಾಜರೊಂದಿಗೆ ಸಮಾಲೋಚನೆ ನಡೆಸಿ, ವಾಸ್ತವತೆ ತಿಳಿಸಿದರು. ಇದಕ್ಕೆ ಪೂರಕವಾಗಿ ಬೆಂಬಲ ವ್ಯಕ್ತಪಡಿಸಿದ ವಾಟಾಳ್ ಖಾಜಿಯವರ ಬೆಂಬಲಕ್ಕೆ ಕನ್ನಡ ಪರ ಸಂಘಟನೆಗಳಿಂದ ಬೆಂಬಲವಿದೆಯೆಂದು ಸ್ಪಷ್ಟನೆಯೊಂದಿಗೆ ಹೋರಾಟದ ರೂಪುರೇಷ ಚರ್ಚಿಸಲಾಯಿತೆಂದು ಖಾಜಿ ತಿಳಿಸಿದರು.

2012 ರಲ್ಲಿ ಶುರುವಾದ ರೈಲು ಮಾರ್ಗ ಕಾರ್ಯ 142 ಕಿ.ಮೀ. ಪೈಕಿ ಕೇವಲ 41 ಕಿ.ಮೀ.ನಷ್ಟು ಕಾಮಗಾರಿ ನಡೆದಿದೆ. ಇನ್ನುಳಿದ 101 ಕಿ.ಮೀ.ನಷ್ಟು ಕಾರ್ಯದಲ್ಲಿ ಲೋಕಾಪೂರದಿಂದ ಯಾದವಾಡವರೆಗೆ 22 ಕಿ.ಮೀ.ನಷ್ಟು ಕಾಮಗಾರಿ ಪ್ರಗತಿಯಲ್ಲಿದ್ದರೆ ಯಾದವಾಡದಿಂದ ಜಮಖಂಡಿವರೆಗಿನ 28 ಕಿ.ಮೀ.ನಷ್ಟು ಕಾರ್ಯ ಇನ್ನೂ ನಡೆದಿಲ್ಲ. ಕಳೆದ ತಿಂಗಳಷ್ಟೇ ಹೋರಾಟ ಸಮಿತಿಯಿಂದ ಕುಡಚಿಯಲ್ಲಿ ಸತ್ಯಾಗ್ರಹ ನಡೆಸಿದ್ದರ ಪೂರಕವಾಗಿ ಕುಡಚಿಯಿಂದ-ಜಮಖಂಡಿವರೆಗಿನ 51 ಕಿ.ಮೀ.ನಷ್ಟು ಕೆಲಸ ಪ್ರಾರಂಭಿಸುವದಾಗಿ ಜನಪ್ರತಿನಿದಿಗಳ ವಿಶ್ವಾಸದಿಂದ ಸತ್ಯಾಗ್ರಹ ಕೈ ಬಿಡಲಾಗಿತ್ತು. ಅದೂ ಕಾರ್ಯ ಮಂದಗತಿಯಲ್ಲಿಯೇ ಸಾಗುತ್ತಿದೆ.

ಭೂ ಸ್ವಾಧೀನ, ಟೆಂಡರ್ ಗುತ್ತಿಗೆ ಅರ್ಧಮರ್ಧ ಸೇರಿದಂತೆ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿಯೋಜನೆಯಾಗದೆ ಕಾಮಗಾರಿಯನ್ನು ತೀವ್ರ ನಿರ್ಲಕ್ಷ್ಯಕ್ಕೆ ಕಾರಣವಾಗಿದೆ. ಹಲವಾರು ಹೋರಾಟಗಳನ್ನು ನಡೆಸಿದರೂ ಕೆಲ ದಿನಗಳಷ್ಟೇ ಕಾರ್ಯ ನಡೆಸಿ ಮತ್ತೇ ಮಂದಗತಿಯೇ ಅನಿವಾರ್ಯವಾಗಿರುವದು ಖೇದಕರವೆಂದು ಖಾಜಿ ಬೇಸರ ವ್ಯಕ್ತಪಡಿಸಿದ್ದಾರೆ.

ಉತ್ತರ ಕರ್ನಾಟಕ ನಿರ್ಲಕ್ಷ್ಯ ನಡೆಯದು. ಬಹುದಿನಗಳ ಬಾಗಲಕೋಟೆ-ಕುಡಚಿ ರೈಲು ಮಾರ್ಗದ ಹೋರಾಟದಲ್ಲಿ ನಾವೂ ಸಹ ಧುಮುಕುವದಲ್ಲದೆ ಕಾರ್ಯ ಶೀಘ್ರ ಪೂರ್ಣಗೊಳ್ಳುವಂತೆ ವಿನೂತನ ಹೋರಾಟ ನಡೆಸಲಾಗುವದು.

■ ವಾಟಾಳ್ ನಾಗರಾಜ್, ಕನ್ನಡ ಚಳವಳಿ ವಾಟಾಳ್ ಪಕ್ಷ ಅಧ್ಯಕ್ಷ

ಸಮಿತಿ ಚುರುಕು: ರೈಲ್ವೆ ಹೋರಾಟ ಸಮಿತಿಯು ಆಯಾ ತಾಲೂಕಾ ಅಧ್ಯಕ್ಷತ ನೇತೃತ್ವದಲ್ಲಿ ಮಹತ್ವದ ಸಭೆಗಳನ್ನು ನಡೆಸುತ್ತಿದೆ. ಶೀಘ್ರ ಕಾಮಗಾರಿ ವೇಗಕ್ಕೆ ಸಂಸದರಿಗೆ ಬಿಸಿ ಮುಟ್ಟಿಸುವದರೊಂದಿಗೆ ರಾಜ್ಯ ಸರ್ಕಾರವೂ ಕಾಳಜಿಪೂರ್ವಕ ಕಾರ್ಯ ನಡೆಸುವಲ್ಲಿ ಮಹತ್ತರ ನಿರ್ಧಾರಕ್ಕೆ ಮಹತ್ತರ ಹೋರಾಟ ನಡೆಸುವ ಸಿದ್ಧತೆಗಳನ್ನು ಮಾಡಲಾಗುತ್ತಿದೆಯೆಂದು ಹೋರಾಟ ಸಮಿತಿ ಅಧ್ಯಕ್ಷ ಕುತ್ಬುದ್ದೀನ್ ಖಾಜಿ ತಿಳಿಸಿದರು.

ಕಿರುಸುದ್ದಿ

ವಿಶ್ವ ಕಲ್ಯಾಣಕ್ಕಾಗಿ ನಿತ್ಯ ಹೋಮ-ಹವನ

◆**ವಿಜಯಪುರ:** ನಗರದ ತೊರವಿ ರಸ್ತೆಯ ವಿಷ್ಣು ಸಹಸ್ರನಾಮ ಭವನದ ಸಾಲಿಗ್ರಾಮ ಶಿಲಾ ವೆಂಕಟೇಶ್ವರ ಸಾನ್ನಿಧಿಯಲ್ಲಿ ಅಧಿಕ ಮಾಸದ ವಿವಿಧ ಧಾರ್ಮಿಕ ಚಟುವಟಿಕೆಗಳು ಜರುಗಿದವು. ವಿಶ್ವ ಕಲ್ಯಾಣಕ್ಕಾಗಿ ನಿತ್ಯ ಹೋಮಹವನ ಮತ್ತು ಗೌರಿ ಪ್ರತಿಷ್ಠಾಪನೆ, ಮಹಿಳೆಯರಿಂದ 33 ಹಾಡು ಇತ್ಯಾದಿ ಕಾರ್ಯಕ್ರಮಗಳು ಮುಂದಿನ 15 ದಿನಗಳ ಕಾಲ ಅವ್ಯಾಹತವಾಗಿ ನಡೆಯಲಿವೆ. ಪ್ರಥಮ ದಿನದಂದು ಎಂ.ವಿ.ದೇಶಪಾಂಡೆ ದಂಪತಿಯಿಂದ ಸಂಕಲ್ಪಸಿದ ಪವಮಾನ ಹೋಮ, ನರಸಿಂಹ ಮತ್ತು ಶ್ರೀಸೂಕ್ತ ಹೋಮ ಪ್ರಾರಂಭಗೊಂಡವು. ಹೋಮವನ್ನು ಸನ್ನಿಧಾನದ ಧರ್ಮದರ್ಶಿ ಪಂಡಿತ ವೇದನಿಧಿ ಆಚಾರ್ಯರು ಮತ್ತು ವಿದ್ಯಾರ್ಥಿಗಳು ನಡೆಸಿದರು. ಸಾಕ್ಷಾತ ತಿರುಪತಿಯಂತೆ ಕಂಗೊಳಿಸುವ ವೆಂಕಟೇಶ ದೇವರ ದರ್ಶನ ಪಡೆದರು. ಕಾರ್ಯಕ್ರಮದಲ್ಲಿ ಸದ್ಭಕ್ತರು ಪಾಲ್ಗೊಳ್ಳಲು ಆಡಳಿತ ಮಂಡಳಿ ಪದಾಧಿಕಾರಿಗಳು ಕೋರಿದ್ದಾರೆ.

ಗಾನಗಂಗೋತ್ರಿ ಗಾಯನಕ್ಕೆ ವಿದ್ಯಾಶ್ರೀ ಆಯ್ಕೆ

◆**ಇಂಡಿ:** ಬೆಂಗಳೂರಿನ ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 11ನೇ ರಾಷ್ಟ್ರೀಯ ನೃತ್ಯ ಕಲಾ ಮೇಳ ಹಾಗೂ 75ನೇ ರಾಜ್ಯ ಮಟ್ಟದ ಸಾಂಸ್ಕೃತಿಕ ಕಲಾ ಪ್ರತಿಭೋತ್ಸವ ಕಾರ್ಯಕ್ರಮವನ್ನು ಮೇ



23, 24ರಂದು ಬೆಂಗಳೂರಿನ ಸಂಸ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಕವನ ವಾಚನ, ನೃತ್ಯಾಂಜಲಿ, ಸಮೂಹ ನೃತ್ಯ ಪ್ರದರ್ಶನ, ಗಾನಗಂಗೋತ್ರಿ ಕರೋಕೆ ಗಾಯನ ಏರ್ಪಡಿಸಲಾಗಿದ್ದು, ತಾಲೂಕಿನ ತಾಂಬಾ ನಿವಾಸಿ ವಿದ್ಯಾಶ್ರೀ ನಡುಗಡ್ಡಿ ಅವರನ್ನು ಗಾನಗಂಗೋತ್ರಿ ಕರೋಕೆ ಗಾಯನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಪತ್ರಕರ್ತ ರಮೇಶ ಸುರ್ವೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯಾಶ್ರೀ ಇಂಡಿ ತಾಲೂಕು ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್.ನಡುಗಡ್ಡಿ ಅವರ ಸುಪುತ್ರಿಯಾಗಿದ್ದು, ಅವರ ಈ ಆಯ್ಕೆಗೆ ಕುಟುಂಬ ಹಾಗೂ ತಾಂಬಾ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ಶೆಡ್ ಬಿದ್ದು ಬಾಲಕನಿಗೆ ಗಾಯ



◆**ನಿಡಗುಂದಿ:** ಪಟ್ಟಣದಲ್ಲಿ ರವಿವಾರ ಮಧ್ಯಾಹ್ನ ಸುಮಾರು 3 ಗಂಟೆ ಸುಮಾರಿಗೆ ಸುರಿದ ಅಕಾಲಿಕ ಮಳೆ ಹಾಗೂ ಗಾಳಿಯಿಂದ ತೋಟದ ಮನೆಯ ಪಕ್ಕದಲ್ಲಿದ್ದ ಜಾಲಿ ಮರ ತಗಡಿನ ಶೆಡ್ ಮೇಲೆಗೆ ಬಿದ್ದು ಬಾಲಕನೋರ್ವ ಗಾಯಗೊಂಡಿದ್ದಾನೆ.

ಅವಘಡ ವೇಳೆ ಮನೆಯೊಳಗಿದ್ದ ನಾಲ್ವರಲ್ಲಿ ಶಿವಪ್ಪ ಹುವಪ್ಪ ಹುಗ್ಗಿ, ರಮೇಶ ಹುಗ್ಗಿ, ಶರಣಪ್ಪ ಬಳಬಟ್ಟಿ, ಗಯಾಳು ಪರಸಪ್ಪ ಶಿವಪ್ಪ ಹುಗ್ಗಿ(14) ಎಂಬ 6ನೇ ತರಗತಿ ವಿದ್ಯಾರ್ಥಿಗೆ ಗಾಯವಾಗಿದೆ. ತಕ್ಷಣ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾಶೀನಕುಂಟಿ ಗ್ರಾಮದ ಭರತ ಕಾಮನಕೇರಿ ಅವರ ಜಮೀನಿನಲ್ಲಿನ ಮನೆಯ ಮೇಲಿನ ಪತ್ರಾಸ್‌ಗಳು ಹಾರಿ ಹೋಗಿದ್ದು, ಪಕ್ಕದಲ್ಲಿ ಕಟ್ಟಿದ್ದ ಎಮ್ಮೆಗೆ ಗಾಯವಾಗಿದೆ.

ಮರುಮೌಲ್ಯ ಮಾಪನ: ಸಿಂಚನಾ ದ್ವಿತೀಯ ರ‍್ಯಾಂಕ್

◆**ಇಂಡಿ:** ನಗರದ ಶ್ರೀ ಸಾಯಿ ಪಬ್ಲಿಕ್ ಪ್ರೌಢಶಾಲೆಯ ವಿದ್ಯಾರ್ಥಿನಿ ಸಿಂಚನಾ ಪತ್ತಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಮರುಮೌಲ್ಯ ಮಾಪನದಲ್ಲಿ 624 ಅಂಕಗಳೊಂದಿಗೆ ಶೇ. 99.84% ಫಲಿತಾಂಶ ಪಡೆದು ರಾಜ್ಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದಿರುತ್ತಾರೆ. ಈ ಅಭೂತ ಪೂರ್ವ ಸಾಧನೆಯಿಂದ ಶಾಲೆ ಕೀರ್ತಿ ರಾಜ್ಯ ಮಟ್ಟದಲ್ಲಿ ಕೊಂಡೊಯ್ದಿರುತ್ತಾಳೆ.



ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಸಂಜೀವ. ಎಸ್.ಧನಪಾಲ, ಕಾರ್ಯದರ್ಶಿ ಶಿವಾನಂದ ಕೊಪ್ಪದ, ನಿರ್ದೇಶಕರು ರವೀಂದ್ರ ನಿಗಡಿ, ರಾಜಶೇಖರ ಪೂಜಾರಿ, ಸಿದ್ರಾಮಪ್ಪಾ ಲಬ್ಬಾ, ಸದಾನಂದ ಬಿರಾದಾರ, ಸೋಮಶೇಖರ ಸುರಪೂರ, ರೇವಣಸಿದ್ದಪ್ಪ ಪಾಟೀಲ, ಸಚಿನ ಕಾಳಗಿ, ಈಶ್ವರಲಿಂಗ ಕಲಘಟಗಿ, ಶಾಲಾ ಆಡಳಿತಾಧಿಕಾರಿ ಡಾ.ಎಸ್.ಎಸ್.ಕಲಘಟಗಿ, ಪ್ರಾಚಾರ್ಯ ವಿವೇಕಾನಂದ.ಬಿ.ಎಚ್., ಎಲ್ಲ ಶಿಕ್ಷಕ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



ವಿಜಯಪುರ: ನಗರದ ತೊರವಿ ರಸ್ತೆಯ ವಿಷ್ಣು ಸಹಸ್ರನಾಮ ಭವನದ ಸಾಲಿಗ್ರಾಮ ಶಿಲಾ ವೆಂಕಟೇಶ್ವರ ಸಾನ್ನಿಧಿಯಲ್ಲಿ ಅಧಿಕ ಮಾಸದ ವಿವಿಧ ಧಾರ್ಮಿಕ ಚಟುವಟಿಕೆಗಳು ಜರುಗಿದವು. ಪ್ರಥಮ ದಿನದಂದು ಎಂ.ವಿ.ದೇಶಪಾಂಡೆ ದಂಪತಿಯಿಂದ ಸಂಕಲ್ಪಸಿದ ಪವಮಾನ ಹೋಮ, ನರಸಿಂಹ ಮತ್ತು ಶ್ರೀಸೂಕ್ತ ಹೋಮ ಪ್ರಾರಂಭಗೊಂಡವು.

ಇಂದಿನಿಂದ ಎರಡು ದಿನ ರಾಷ್ಟ್ರೀಯ ವಿಚಾರ ಸಂಕಿರಣ

◆**ಬಸವನಬಾಗೇವಾಡಿ:** ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ಸ್ಥಳೀಯ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಕನಕದಾಸ ಸಾಹಿತ್ಯ ಬಹುಶಿಸ್ತೀಯ ನೋಟ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಮೇ 18, 19ರಂದು ಸ್ಥಳೀಯ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಬೆಳಗ್ಗೆ 10ಗಂಟೆ ನಡೆಯಲಿದೆ.

ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಅಧ್ಯಕ್ಷ ಡಾ.ಕಾ.ತ.ಚಿಕ್ಕಣ್ಣ ಉದ್ಘಾಟಿಸುವರು. ಬಿಎಲ್‌ಡಿಇ ಸಂಸ್ಥೆ ಆಡಳಿತಾಧಿಕಾರಿ ಪ್ರೊ.ವಿ.ಎಸ್.ಬಗಲಿ ಅಧ್ಯಕ್ಷತೆ ವಹಿಸುವರು, ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎ.ವಿ.ಸೂರ್ಯವಂಶಿ, ಬಿಎಸಿಸಿ ಕನ್ನಡ ವಿಭಾಗದ ಮುಖ್ಯಸ್ಥ ಬಸವರಾಜ ಸಾಲವಾಡಗಿ, ಬಿಎಸಿಸಿ ಐಕ್ಯೂಎಸಿ ಮುಖ್ಯಸ್ಥ ಸಿ.ಸಿ.ದಡೇಕರ ಉಪಸ್ಥಿತರಿರುವರು.

ಆಶೋಕ ಹಂಚಲಿ, ಡಾ.ಎಂ.ಪ್ರಸನ್ನಕುಮಾರ, ಡಾ.ಬಿ.ಸಿ.ದೊಡ್ಡೇಗೌಡ, ಡಾ.ಕೆ. ವೆಂಕಟೇಶ, ಶಾಲಿನಿ ರುದ್ರಮುನಿ, ಬಸವರಾಜ ಜಾಲವಾದಿ, ಪ್ರೊ.ಎಂ.ಶಂಕರ ಉಪನ್ಯಾಸ ನೀಡಿವರು ಎಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿ ಭಾರತಿ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಬಸವನಬಾಗೇವಾಡಿ: ನವದೆಹಲಿಯಲ್ಲಿ ಕೇಂದ್ರದ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿಯವರನ್ನು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸೋಮನಗೌಡ(ಅಪ್ಪುಗೌಡ) ಪಾಟೀಲ ಮನಗೂಳಿ ಅವರು ಭೇಟಿಯಾಗಿ ಬಸವನಬಾಗೇವಾಡಿ ಕ್ಷೇತ್ರದ ವಿಷಯ ಹಾಗೂ ಕೂಡಗಿ ಎನ್‌ಟಿಪಿಸಿ ಉಷ್ಣ ವಿದ್ಯುತ್ ಸ್ಥಾವರಕ್ಕೆ ಭೂಮಿ ಕಳೆದುಕೊಂಡ ರೈತರಿಗೆ ಉಳಿದ ಪರಿಹಾರದ ಕುರಿತು ಚರ್ಚಿಸಿದರು.

ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಸಚಿವ ಪಾಟೀಲ ಚಾಲನೆ

ಕ್ರೀಡಾಪಟುಗಳಿಗೆ ಹೊಸ ಹುರುಪು

◆**ವಿಜಯಪುರ:** ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ನಗರದಲ್ಲಿ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ಹಮ್ಮಿಕೊಂಡಿರುವುದು, ಜಿಲ್ಲೆಯ ಇತಿಹಾಸದಲ್ಲಿಯೇ ಮೊದಲ ಬಾರಿಯಾಗಿದ್ದು, ಇದರಿಂದ ಕ್ರೀಡಾಪಟುಗಳಿಗೆ ಹೊಸ ಹುರುಪು ನೀಡಿದಂತಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.



ನಗರದಲ್ಲಿ ಭಾನುವಾರ ಆರಂಭವಾದ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟಕ್ಕೆ ಚಾಲನೆ ನೀಡಿ ಮಾತನಾಡಿ, ರಾಜ್ಯ ಮಟ್ಟದ ಪಂದ್ಯಾಟಗಳನ್ನು ಆಯೋಜಿಸುವುದರಿಂದ ವಿಜಯಪುರ ಜಿಲ್ಲೆಯ ಕೀರ್ತಿ ಹೆಚ್ಚುತ್ತದೆ. ಇದರಿಂದ ನಗರಕ್ಕೆ ಹೊಸ ಔಟ್ ಲುಕ್ ಲಭ್ಯವಾಗಲಿದೆ ಎಂದರು.

ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರು ಬ್ಯಾಡ್ಮಿಂಟನ್ ಆಟಗಾರರಾಗಿದ್ದರು. ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ಅದೇ ಮೊದಲ ಬಾರಿಗೆ ಶಾಸಕನಾಗಿದೆ. ಅವರು ಬ್ಯಾಡ್ಮಿಂಟನ್‌ಗೆ ಹೆಚ್ಚು ಒತ್ತು ನೀಡಿದ್ದರು. ಈಗ ಅವರ ಪುತ್ರ ಕುಮಾರ ಬಂಗಾರಪ್ಪನವರು ಯುವ ತಂಡ ಕಟ್ಟಿಕೊಂಡು ಬ್ಯಾಡ್ಮಿಂಟನ್ ಆಟೋಟಗಳನ್ನು ಮುನ್ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ, ಮಾಜಿ ಸಚಿವ ಕುಮಾರ ಬಂಗಾರಪ್ಪ ಮಾತನಾಡಿ, ವಿಜಯಪುರದಲ್ಲಿ ಮೊದಲ ಬಾರಿಗೆ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾಟವನ್ನು ಬೃಹತ್ ಪ್ರಮಾಣದಲ್ಲಿ ಆಯೋಜಿಸಿದ್ದೇವೆ. ವಿಜಯಪುರದಲ್ಲಿ ನಡೆದಿರುವ ಪಂದ್ಯಾಟಕ್ಕೆ ಬಿಎಲ್‌ಡಿಇ ಸಂಸ್ಥೆ, ಜಿಲ್ಲಾಡಳಿತ ಸಹಕಾರ ನೀಡಿದೆ. ಶಾಸಕರು ಹಾಗೂ ಅಧಿಕಾರಿಗಳು ಸಹಕಾರ ನೀಡಿದ್ದಾರೆ. ಇದರಿಂದಾಗಿ ವಿಜಯಪುರದಲ್ಲಿ ಆಯೋಜಿಸಿರುವ ಬ್ಯಾಡ್ಮಿಂಟನ್ ಪಂದ್ಯಾಟ ಯಶಸ್ವಿಯಾಗುವ ವಿಶ್ವಾಸವಿದೆ. ಜೊತೆಗೆ ಇಲ್ಲಿ ಕ್ರೀಡೆಗೆ ಮಹತ್ತರ ಅವಕಾಶವಿದೆ ಎಂಬುದು ಸಾಬೀತಾಗಿದೆ ಎಂದರು.

> ಜಿಲ್ಲೆಯು ಸೈಕ್ಲಿಂಗ್ ಸೇರಿದಂತೆ ವಿವಿಧ ಕ್ರೀಡೆಗಳಿಗೆ ಈಗಾಗಲೇ ಹೆಸರುವಾಸಿಯಾಗಿದೆ. ಈ ರೀತಿಯ ಪಂದ್ಯಾಟಗಳನ್ನು ಆಯೋಜಿಸುವುದರಿಂದ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾಕೂಟದಲ್ಲಿ ಮಹತ್ವ ಸಿಗಲಿದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿ, ಅಧಿಕಾರಿಗಳು ಸಂಪೂರ್ಣ ಸಹಕಾರ ನೀಡುತ್ತೇವೆ.
>
> ■ **ಎಂ.ಬಿ. ಪಾಟೀಲ ಜಿಲ್ಲಾ ಉಸ್ತುವಾರಿ ಸಚಿವ**

ಶಾಸಕ ವಿಠ್ಠಲ ಕಟಕಧೋಂಡ ಮಾತನಾಡಿ, ಈ ಪಂದ್ಯಾವಳಿಗಾಗಿ ರಾಜ್ಯದ ವಿವಿಧ ಮೂಲೆಗಳಿಂದ ಸುಮಾರು ಎರಡು ಸಾವಿರ ಕ್ರೀಡಾಪಟುಗಳು ಜಿಲ್ಲೆಗೆ ಆಗಮಿಸಿದ್ದಾರೆ. ಆ ಮೂಲಕ ಕ್ರೀಡಾಕ್ಷೇತ್ರದಲ್ಲಿ ಜಿಲ್ಲೆ ಗುರುತಿಸಿಕೊಳ್ಳುತ್ತಿದೆ. ದ್ರಾಕ್ಷಿಯ ಸಿಹಿಗೆ ಹೆಸರಾದ ನಮ್ಮ ಜಿಲ್ಲೆಯು ಈಗ ಕ್ರೀಡಾಕ್ಷೇತ್ರದಲ್ಲೂ ಮುಂಚೂಣಿಗೆ ಬರುತ್ತಿರುವುದು ಸಂತಸದ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ಯಾವುದೇ ಆಟೋಟ ಹಾಗೂ ಕಾರ್ಯಕ್ರಮಗಳಿಗೆ ನಮ್ಮ ಜಿಲ್ಲೆಯ ಆತಿಥ್ಯ ನೀಡಲಿದೆ. ಅತಿಥಿಗಳು ಬಂದರೆ, ಊಟೋಪಚಾರ ಹಾಗೂ ಸತ್ಕಾರಕ್ಕೆ ನಮ್ಮ ಜಿಲ್ಲೆ ಹೆಸರುವಾಸಿಯಾಗಿದೆ ಎಂದರು.

ವಿಡಿಎ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಮೇಯರ್ ಮಡಿವಾಳಪ್ಪ ಕರಡಿ, ಸದಸ್ಯ ಪ್ರೇಮಾನಂದ ಬಿರಾದಾರ, ಜಿಲ್ಲಾಧಿಕಾರಿ ಡಾ.ಆನಂದ ಕೆ., ಜಿಪಂ ಸಿಇಒ ರಿಷಿ ಆನಂದ, ಕ್ರೀಡಾಧಿಕಾರಿ ರಾಜಶೇಖರ ದೈವಾಡಿ, ಕೆಎಂಎಫ್ ಅಧ್ಯಕ್ಷ ಲಿಂಗರಾಜ ಪಾಟೀಲ, ಬಿಎಲ್‌ಡಿಇ ಉಪಕುಲಪತಿ ಡಾ.ಅರುಣ್ ಇನಾಮದಾರ, ಡಾ. ಮಹಾಂತೇಶ ಬಿರಾದಾರ ಇದ್ದರು.

ಮೂಲಭೂತ ಸೌಲಭ್ಯ ಒದಗಿಸಲು ಪಿಡಿಒಗಳಿಗೆ ಸೂಚನೆ

ನರೇಗಾ ಕಾಮಗಾರಿ ಸ್ಥಳಕ್ಕೆ ಗ್ರಾಪಂ ಇಒ ಭೇಟಿ

◆**ದೇವರ ಹಿಪ್ಪರಗಿ:** ತಾಲೂಕಿನ ಸಾತಿಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೈರವಾಡಗಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಡೆಯುತ್ತಿರುವ ಗ್ರಾಮದ ಅಮೀನಸಾಬ ನಬಿಸಾಬ ಡೋಣೂರ ಜಮೀನಿಗೆ ದೊಡ್ಡ ದರ್ಗಾದಿಂದ ಸರ್ಕಾರಿ ನಾಲಾ ಹೂಳು ತೆಗೆಯುವ ಕಾಮಗಾರಿ ಸ್ಥಳಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ ಚೆಲುವಯ್ಯರವರು ಭೇಟಿ ನೀಡಿ ಕಾಮಗಾರಿ ಪ್ರಗತಿ ಪರಿಶೀಲಿಸಿದರು.



ಈ ವೇಳೆ ಗಂಡು-29 ಹಾಗೂ ಹೆಣ್ಣು-21 ಸೇರಿ ಒಟ್ಟು-50 ಕೂಲಿಕಾರರು ಹಾಜರಿದ್ದರು. ಕೂಲಿಕಾರರೊಂದಿಗೆ ಸಂವಾದ ನಡೆಸಿ, ಮನರೇಗಾ ಯೋಜನೆಯ ಉದ್ದೇಶ, ಕೂಲಿಕಾರರ ಹಕ್ಕುಗಳು, ಸರ್ಕಾರದಿಂದ ದೊರೆಯುವ ಸೌಲಭ್ಯ ಹಾಗೂ ಕೆಲಸದ ಸ್ಥಳದಲ್ಲಿ ಪಾಲಿಸಬೇಕಾದ ನಿಯಮಗಳ ಕುರಿತು ಮಾಹಿತಿ ನೀಡಿದರು. ಎನ್‌ಎಂಎಂಎಸ್ ಫೇಸ್ ಅಥೆಂಟಿಕೇಶನ್ ಪರಿಶೀಲಿಸಿ, ಹಾಜರಾತಿ ದಾಖಲಾತಿ ವೀಕ್ಷಿಸಿದರು.

ನಂತರ ಕೂಲಿಕಾರರಿಗೆ ಅಗತ್ಯವಾದ ಕುಡಿಯುವ ನೀರು, ನೆರಳು ಹಾಗೂ ಮೂಲಭೂತ ಸೌಲಭ್ಯ ಸಮರ್ಪಕವಾಗಿ ಒದಗಿಸುವಂತೆ ಪಿಡಿಒರವರಿಗೆ ಸೂಚನೆ ನೀಡಿದರು. ಕಾಮಗಾರಿ ಗುಣಮಟ್ಟ ಕಾಪಾಡುವ ಜೊತೆಗೆ ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳು ಮಾರ್ಗದರ್ಶನ ನೀಡಿದರು.

ನರೇಗಾ ಸಹಾಯಕ ನಿರ್ದೇಶಕರಾದ (ಗ್ರಾಉ) ಶಾಂತಗೌಡ ನ್ಯಾಮಣ್ಣವರ ಅವರು ಮಾತನಾಡಿ, ತಮಗೆ ನೀಡಿರುವ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಿ, ಗ್ರಾಮದಲ್ಲಿನ ಇತರ ಕೂಲಿಕಾರರು, ಸಂಬಂಧಿಕರಿಗೂ ಮನರೇಗಾ ಯೋಜನೆಯಡಿ ಉದ್ಯೋಗಾವಕಾಶ ದೊರೆಯುವ ಕುರಿತು ಜಾಗೃತಿ ಮೂಡಿಸಿ ಎಂದು ತಿಳಿಸಿದರು.

ಮನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಯಾಗುವುದರ ಜೊತೆಗೆ ನೀರಿನ ಸಂರಕ್ಷಣೆ, ಭೂ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆಗೆ ಸಹಕಾರಿಯಾಗುವ ಕಾಮಗಾರಿಗಳು ಪರಿಣಾಮಕಾರಿಯಾಗಿ ನಡೆಯುತ್ತಿವೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಪಿಡಿಒ ಎಂ.ಎನ್. ಕತ್ತಿ, ಐಇಸಿ ಸಂಯೋಜಕ ಸಿದ್ದು ಕಾಂಬಳೆ, ತಾಂಡ ರೋಜ್ಗಾರ್ ಮಿತ್ರ ವಿನೋದ ಚವ್ಹಾಣ ಸೇರಿದಂತೆ ಗ್ರಾಪಂ ಸಿಬ್ಬಂದಿಗಳು ಹಾಗೂ ಕಾರ್ಮಿಕರು ಹಾಜರಿದ್ದರು.

ನೀರಾವರಿ ಜೊತೆಗೆ ವಿದ್ಯುತ್‌ಗೂ ಆದ್ಯತೆ: ಸಚಿವ ಎಂಬಿಪಾ

◆**ವಿಜಯಪುರ:** ನಮ್ಮ ಸರ್ಕಾರ ನೀರಾವರಿಯಷ್ಟೇ ವಿದ್ಯುತ್ತಿಗೂ ಪ್ರಾಮುಖ್ಯತೆ ನೀಡಿದೆ. ಜಲಕ್ರಾಂತಿಯೊಂದಿಗೆ ಇಂಧನ ಕ್ರಾಂತಿಯಲ್ಲಿ ಬದಲಾವಣೆ ಮಾಡಿ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಿಂದ ನಗರದಲ್ಲಿ ನಿರ್ಮಿಸಲಾದ ವಿಜಯಪುರದ ಕಾರ್ಯ ಮತ್ತು ಪಾಲನೆ ವಿಭಾಗೀಯ ಕಚೇರಿ ನೂತನ ಕಟ್ಟಡ ಭಾನುವಾರಲೋಕಾರ್ಪಣೆಗೊಳಿಸಿಮಾತನಾಡಿ, ರೈತರಿಗೆ ವಿದ್ಯುತ್ ಒದಗಿಸಲಾಗುತ್ತಿದೆ. ಟಿಸಿ ದುರಸ್ತಿ ಸಕಾಲದಲ್ಲಿ ಆಗಬೇಕು. ಇಲಾಖೆ ಬಹಳಷ್ಟು ಮಾರ್ಪಾಡಾಗುತ್ತಿವೆ. ಬಹಳಷ್ಟು ಅಚ್ಚುಕಟ್ಟಾಗಿ ಕಟ್ಟಲ್ಪಟ್ಟ ಈ ಕಟ್ಟಡ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಟ್ಟಡವಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

2016-2017ರಲ್ಲಿ 400 ಕೆವಿ ಸ್ಟೇಷನ್ ನಿರ್ಮಾಣಕ್ಕೆ ಅದನ್ನು ಈ ಮೊದಲು ದೇವರಹಿಪ್ಪರಗಿಯಲ್ಲಿ ಮಾಡಲು ಪ್ರಯತ್ನ ಮಾಡಿದ್ದೆವು. ಆದರೆ ಸರ್ಕಾರಿ ಜಮೀನು ಭೂಸ್ವಾಧೀನ ವೆಚ್ಚ ಬಹಳಷ್ಟಾಗಿದ್ದರಿಂದ ಕಷ್ಟವಾಯಿತು. ಹಾಗಾಗಿ ಸರ್ಕಾರಿ ಜಮೀನು ಹಡಗಲಿಯಲ್ಲಿದ್ದುದನ್ನು ಗಮನಿಸಿ, ಅಲ್ಲಿ ನಿರ್ಮಾಣವಾಗುತ್ತಿದೆ. ಅಧಿಕಾರಿಗಳು ಸಲಹೆ ಮೇರೆಗೆ ಹಡಗಲಿಯಲ್ಲಿ 800 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ ಎಂದರು.

ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ನಗರದಲ್ಲಿ ಅಭಿವೃದ್ಧಿ ಬದಲಾವಣೆ ಪರ್ವ ಆರಂಭವಾಗಿದೆ. ನೀರಾವರಿ, ಕೆರೆ ತುಂಬುವ, ವಿದ್ಯುತ್ ಸರಬರಾಜಿನ ಉನ್ನತೀಕರಣ, ಸರ್ಕಾರಿ ಕಟ್ಟಡ, ಸಿಟಿ ಅಂಡರ್ ಗ್ರೌಂಡ್ ಕೇಬಲ್ ಕಾರ್ಯಗಳು ನಡೆದಿವೆ. ಇಂಧನ ಸಚಿವರು ಕೆಲಸ ಮಾಡಿಕೊಡುತ್ತಿದ್ದಾರೆ. ಅಭಿವೃದ್ಧಿ ಬಂದಾಗ ನಾನು ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ಕಾಲಕಾಲಕ್ಕೆ ಜನರಿಗೆ ನ್ಯಾಯ ಕೊಡುವ ಕೆಲಸ ಮಾಡಬೇಕು ಎಂದರು.

ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯಲಿಕ್ಕೆ ನೀರು ಸಿಗುತ್ತಿರಲಿಲ್ಲ, ಈಗ ಬಿರು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಟ್ಯಾಂಕರ್ ಹಚ್ಚುತ್ತಿಲ್ಲ. ಹತ್ತು ವರ್ಷದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಸಚಿವ ಎಂ.ಬಿ.ಪಾಟೀಲರ ದೂರದೃಷ್ಟಿಯ ಫಲದಿಂದ ನೀರಾವರಿ ಯೋಜನೆಗಳಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯಾವುದೇ ಸಮಸ್ಯೆ ಬಾರದೆ ಇರುವುದಕ್ಕೆ ಸಚಿವರ ಸತತ ಪ್ರಯತ್ನದ ಫಲವಾಗಿದೆ ಎಂದರು.

ಹೆಸ್ಕಾಂನ ಅಧೀಕ್ಷಕ ಅಭಿಯಂತರರಾದ ಸಿದ್ದಪ್ಪ ಬಿಂಜಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮೇಯರ್ ಮಡಿವಾಳಪ್ಪ ಕರಡಿ, ವಿಡಿಎ ಡಾ.ಗಂಗಾಧರ ಸಂಬಣ್ಣಿ, ನಗರ ಘಟಕದ ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಬ್ಬೀರ ಜಾಗೀರದಾರ, ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ಸಿವಿಲ್ ಅಧೀಕ್ಷಕ ಅಭಿಯಂತರರಾದ ತಿಪ್ಪಣ್ಣ ಇದ್ದರು.



ಸುಭಾಷ ಕಲ್ಲೂರ 5ನೇ ಪುಣ್ಯಸ್ಮರಣೆ

◆**ಇಂಡಿ:** ನಮ್ಮನ್ನು ಈ ಭೂಮಿಗೆ ಕಾಣಲು ಕಾರಣಿಕರ್ತರನ್ನು ನಮ್ಮ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ ಈ ನಿಟ್ಟಿನಲ್ಲಿ ಅವರ ನೆನಪಿಗಾಗಿ ಮೂರ್ತಿಯನ್ನು ನಿರ್ಮಿಸಿ ಪೂಜೆ ಮಾಡುತ್ತಿರುವ ಅಪ್ಪಣ್ಣ ಕಲ್ಲೂರ ಅವರ ಕಾರ್ಯ ಶ್ಲಾಘನಿಯ ಎಂದು ನಿವೃತ್ತ ಪ್ರಾಚಾರ್ಯ ಎಸ್.ಎಸ್. ಕನಾಳ ಹೇಳಿದರು.

ಗ್ರಾಮದಲ್ಲಿ ನಡೆದ ಸುಭಾಷ ಕಲ್ಲೂರ ಅವರ 5ನೇ ಪುಣ್ಯಸ್ಮರಣೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿ, ಸುಭಾಷ ಕಲ್ಲೂರ ಅವರು ಜನರ ಸಮಸ್ಯೆಗಳಿಗೆ ಸದಾ ಧ್ವನಿಯಾಗಿ ಜನರ ಒಳಿತನ್ನು ಮಾಡುವ ತುಡಿತ, ಬಡವರಿಗಾಗಿ ಸದಾ ಮಿಡಿಯುವ ಹೃದಯ, ಬಡವರ ಸೇವೆಯಲ್ಲಿಯೇ ಜನಾರ್ಧನನ್ನು ಕಾಣುವ ಹೃದಯ ಅವರದಾಗಿತ್ತು ಎಂದರು.

ಎಸ್‌ವಿವಿ ಸಂಘದ ನಿರ್ದೇಶಕ ಜೆ.ಎಸ್.ಹತ್ತಳ್ಳಿ ಮಾತನಾಡಿ, ಅಜ್ಞಾನದಿಂದ ಸುಜ್ಞಾನದಡಿಗೆ ಕತ್ತಲೆಯಿಂದ ಬೆಳಕಿನೆಡೆಗೆ ನಮ್ಮ ಜೀವನ ಪಾವನಗೊಳಿಸಿಕೊಳ್ಳಲು ದಿ.ಸುಭಾಷ ಕಲ್ಲೂರ ಅವರ ಆದರ್ಶ ಮೈಗೂಡಿಸಿಕೊಳ್ಳಬೇಕು ಎಂದರು.



ಜಿಪಂ ಮಾಜಿ ಸದಸ್ಯ ಶಕುಂತಲಾ ಕಲ್ಲೂರ, ಕಾಂಗ್ರೆಸ್ ಪಕ್ಷದ ಯುವ ನಾಯಕ ಅಪ್ಪಣ್ಣ ಕಲ್ಲೂರ, ಪ್ರಕಾಶ ಕಲ್ಲೂರ ಪಾಲ್ಗೊಂಡು ದಿ.ಸುಭಾಷ ಕಲ್ಲೂರ ಅವರ ಮೂರ್ತಿಗೆ ಪೂಜೆ ಸಲ್ಲಿಸಿದರು.

ಮಾಜಿ ಗ್ರಾಪಂ ಅಧ್ಯಕ್ಷ ರಾಚಪ್ಪ ಗಳೇದ, ಪಿಕೆಪಿಎಸ್ ಅಧ್ಯಕ್ಷ ಲಕ್ಷ್ಮಣ ಹಿರೇಕುರುಬರ, ಹಾಲುಮತ ಸಮಾಜದ ಮುಖಂಡ ಸಿದ್ದಗೊಂಡ ಹಿರೇಕುರುಬರ, ಶಿಕ್ಷಕ ಜೆ.ಎಸ್.ಹಿರೇಮಠ, ಶಿವಪುತ್ರ ಗಂಗನಳ್ಳಿ, ಶ್ರೀಶೈಲ ನಿಂಗಮನಿ, ಧರ್ಮಣ್ಣ ಮಸಳಿ, ನಾಗಪ್ಪ ಗೊಂಗಿ, ನಾಗಪ್ಪ ಕುರುಬತಳ್ಳಿ, ಟಿ.ಎಸ್.ಗಿರಿಗೌಡರ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸಂಘಟನೆ ಹೆಸರು ಅನಧಿಕೃತವಾಗಿ ಬಳಸಿದರೆ ಕಾನೂನಾತ್ಮಕ ಕ್ರಮ: ವೆಂಕಟೇಶ

◆**ವಿಜಯಪುರ:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ನಾಗವಾರ ಬಣವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಲಪಡಿಸುವ ನಿಟ್ಟಿನಲ್ಲಿ ಸಂಘಟನಾತ್ಮಕ ಚಟುವಟಿಕೆಗಳಿಗೆ ವೇಗ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಜೀವನಹಳ್ಳಿ ಆರ್. ವೆಂಕಟೇಶ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೆಲವರು ನಮ್ಮ ಸಂಘಟನೆ ಹೆಸರು ದುರ್ಬಳಕೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಯಾರಾದರೂ ಸಂಘಟನೆ ಹೆಸರು ಅನಧಿಕೃತವಾಗಿ ಬಳಕೆ ಮಾಡಿದರೆ ಅದರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನಾತ್ಮಕ ಹೋರಾಟದ ಹೆಜ್ಜೆ ಇರಿಸಲಾಗುವುದು ಎಂದರು.

ಎಸ್‌ಐಆರ್ ಪ್ರಕ್ರಿಯೆ ವೇಳೆ ಯಾವ ಕಾರಣಕ್ಕೂ ಅರ್ಹ ಮತದಾರರನ್ನು ಕೈ ಬಿಡುವ ಪ್ರಯತ್ನ ನಡೆಯಬಾರದು. ಅತ್ಯಂತ ಜಾಗರೂಕತೆಯಿಂದ ಈ ಕಾರ್ಯ ನಡೆಯಲಿ. ಬ್ಯಾಕಲಾಗ್ ಹುದ್ದೆ ಭರ್ತಿಗಾಗಿ ಹೋರಾಟ ನಿರಂತರವಾಗಿ ನಡೆಯಲಿದೆ. ಇದು ನ್ಯಾಯಯುತ ಕೂಗು ಎಂದರು.

ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕಿ ಡಾ.ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ ಮಾತನಾಡಿ, ಸಂಘಟನೆಯನ್ನು



ಪರಿಣಾಮಕಾರಿಯಾಗಿ ಬಲಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದರು.

ಜಿಲ್ಲಾ ಸಂಚಾಲಕರನ್ನಾಗಿ ಗುರುರಾಜ ಗುಡಿಮನಿ, ಸಂಘಟನಾ ಸಂಚಾಲಕರನ್ನಾಗಿ ಪರಶುರಾಮ ಕಟ್ಟಿಮನಿ, ಕಾಮೇಶ ಭಜಂತ್ರಿ, ಪವಾಡೆಪ್ಪ, ವಿದ್ಯಾರ್ಥಿ ಘಟಕದ ಅಧ್ಯಕ್ಷರಾಗಿ ನಾಗೇಶ ಕಟ್ಟಿಮನಿ, ಮಹಾಂತೇಶ ಕಟ್ಟಿಮನಿ ಅವರನ್ನು ನೇಮಕ ಮಾಡಿ ಅಧಿಕೃತ ಆದೇಶ ಹೊರಡಿಸಲಾಯಿತು.

ಪತ್ರಿಕಾಗೋಷ್ಠಿಯಲ್ಲಿ ಮೈಸೂರು ವಿಭಾಗೀಯ ಅಧ್ಯಕ್ಷ ರಾಜಶೇಖರ ಕೋಟೆ, ಉಮಾಶಂಕರ, ರಾವುತ ತಳಕೇರಿ, ರಾಜ್ಯ ಸಮಿತಿ ಸದಸ್ಯ ದೇವೇಂದ್ರ ಹಾದಿಮನಿ, ಹುಯೋಗಿ ತಳ್ಳೊಳ್ಳಿ, ಗುರುರಾಜ ಗುಡಿಮನಿ, ನಾಗೇಶ ಕಟ್ಟಿಮನಿ ಇದ್ದರು.

ಕೊಟ್ಟೂರು-ಡೋಣೂರ ಶ್ರೀಗಳ ಕಾರ್ಯ ಶ್ಲಾಘನೀಯ

◆**ಬಸವನಬಾಗೇವಾಡಿ:** ಡೋಣೂರ ಶ್ರೀಮಠ ಜಾತ್ಯಾತೀತ ಪಕ್ಷಾತೀತವಾಗಿ ಬಡವರಿಗೆ ಶಕ್ತಿಯಾಗಿ ಗ್ರಾಮದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮ ಮಾಡುವುದರೊಂದಿಗೆ ಡೋಣೂರ ಗ್ರಾಮವನ್ನು ಬೆಂಗಳೂರಿನವರೆಗೆ ಪರಿಚಯಿಸಿದ ಕೊಟ್ಟೂರು-ಡೋಣೂರ ಶ್ರೀಗಳು ಕಾರ್ಯ ಶ್ಲಾಘನೀಯವಾಗಿದೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲೂಕಿನ ಡೋಣೂರ ಗ್ರಾಮದ ಕಟ್ಟೀಮನಿ ಹಿರೇಮಠದ ಶ್ರೀಗುರು ಮರುಳಸಿದ್ದೇಶ್ವರ ಜಾತ್ರಾ ರಥೋತ್ಸವ ಹಾಗೂ ಹಜರತ್ ಸುಲೇಮಾನ ಉರುಸು ಹಾಗೂ ಚೌಡಮ್ಮದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಸಾಮೂಹಿಕ ವಿವಾಹ, ಅಭಿನಂದನಾ ಗೌರವ, ಅಗ್ನಿಶಮನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಡೋಣೂರು ಸರ್ವಾಂಗೀಣ ಅಭಿವೃದ್ಧಿಯಾಗಬೇಕು. ಗ್ರಾಮದ ಸೇತುವೆಗಾಗಿ ಸಚಿವ ಸಂಪುಟದಲ್ಲಿ 35ಕೋ, ರೂ.ಗಳನ್ನು ಇರಿಸಲಾಗಿದೆ. ನೇಗಿನಾಳ ಸೇತುವೆ ನಿರ್ಮಿಸಲಾಗುವುದು, ಬಸವನಬಾಗೇವಾಡಿ, ವಿಜಯಪುರ, ಇಂಡಿ ತಾಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆಯಾಗಬಾರದು ಎನ್ನುವ ಉದ್ದೇಶದಿಂದ 13ನೂರು ಕೋ,ರೂ.ಗಳಲ್ಲಿ ನಿರಂತರ ಕುಡಿಯುವ ನೀರಿನ ಯೋಜನೆಗೆ ಮುಂದಿನ ವರ್ಷ ಚಾಲನೆ ನೀಡಲಾಗುವುದು ಎಂದರು.

ಸನಾತನ ಧರ್ಮವನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ. ಸರ್ಕಾರ ಮಾಡದೇ ಇರುವ ಕೆಲಸಗಳನ್ನು ಬಂಥನಾಳ ಶಿವಯೋಗಿಗಳು ಮಾಡಿದರು ಎಂದರು.

ಶಿವಗಂಗೆ ಡಾ.ಮಲಯಶಾಂತಮುನಿ ಶಿವಾಚಾರ್ಯ



ಸ್ವಾಮೀಜಿ ಮಾತನಾಡಿ ರಾಜ್ಯದಲ್ಲಿ ಒಂದೇ ದೇವರ ಜಾತ್ರೆ ಮಾಡುವುದು ಕಾಣುತ್ತೇವೆ ಆದರೆ ಡೋಣೂರ ಶ್ರೀಗಳು ಜಾತಿ, ಧರ್ಮ,ಭೇದ ಮಾಡದೇ ಸರ್ವಜನಾಂಗದ ದೇವರ ಜಾತ್ರೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕೊಟ್ಟೂರಿನ ಡಾ.ಸಿದ್ಧಲಿಂಗ ಶ್ರೀಗಳು, ಜಾಲಹಳ್ಳಿಯ ಡಾ.ಜಯಶಾಂತಲಿಂಗ ಶ್ರೀಗಳು, ತಡವಲಗಾ ರಾಯಚೋಟೇಶ್ವರ ಶ್ರೀಗಳು,ಕವಲಗಿಯ ಅಭಿನವ ಸಿದ್ಧರಾಮ ಶಿವಯೋಗಿ ಶ್ರೀಗಳು, ಮನಗೂಳಿಯ ಡಾ.ಮಹಾಂತಲಿಂಗ ಶ್ರೀಗಳು, ಕೆರೂರ ಡಾ.ಶಿವಕುಮಾರ ಶ್ರೀಗಳು, ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ ಮಾತನಾಡಿದರು.

ಇಂಗಳೇಶ್ವರ ಬೃಂಗೀಶ್ವರ ಶ್ರೀಗಳು, ಚೈನಾಪೂರ ರೇಣುಕ ಶ್ರೀಗಳು, ಗುಳೇದಗುಡ್ಡದ ಡಾ.ನೀಲಕಂಠ ಶ್ರೀಗಳು, ಮುತ್ತಯ್ಯ ಗುರುವಿನ, ಎಂ.ಟಿ.ಆನಂದಶೆಟ್ಟಿ ಇದ್ದರು. ಸಿದ್ದರಾಮ ಹಳ್ಳಿ, ಪ್ರಕಾಶ ಸೊನ್ನದ ನಿರ್ವಹಿಸಿದರು. ಈ ವೇಳೆ ಮೂರು ಜೋಡಿ ನವ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಟಿಕೆಟ್ ನೀಡಿದರೆ ಬಿಜೆಪಿಯಿಂದ ಸ್ಪರ್ಧೆ: ರವಿಕಾಂತ

◆**ಇಂಡಿ:** ರಾಷ್ಟ್ರೀಯ ಹಾಗೂ ರಾಜ್ಯದ ಹಿರಿಯ ಬಿಜೆಪಿ ನಾಯಕರು ನನ್ನನ್ನು ಕರೆದು ಬಿಜೆಪಿ ಕಾರ್ಯಗಳಲ್ಲಿ ಭಾಗವಹಿಸಿ ಪಕ್ಷ ತಮಗೆ ಟಿಕೆಟ್ ನೀಡುವ ಯೋಚನೆಯಲ್ಲಿದೆ ಎಂದು ಹೇಳಿದ್ದಾರೆ. ಬಿಜೆಪಿ ನಾಯಕರು ಟಿಕೇಟ್ ನೀಡಿದರೆ ಇಂಡಿಯಿಂದ ವಿಧಾನಸಭೆಗೆ ಸ್ಪರ್ಧಿಸುವದಾಗಿ ಮಾಜಿ ಶಾಸಕ ರವಿಕಾಂತ ಪಾಟೀಲರು ಹೇಳಿದರು.



ನಗರದ ಪ್ರವಾಸಿಮಂದಿರದಲ್ಲಿ ಇತ್ತೀಚಿಗೆ ಬೃಹತ್ ಕಾರ್ಯಕರ್ತರ ಮಧ್ಯೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಮೊದಲು ಬಿಜೆಪಿ ಪಕ್ಷದಲ್ಲದ್ದೆ, ಈಗಲೂ ಬಿಜೆಪಿ ಪಕ್ಷದಲ್ಲಿದ್ದೇನೆ. ಕಳೆದ ವಿಧಾನಸಭೆಯಲ್ಲಿ ಕುಮಾರಸ್ವಾಮಿಯವರ ಕೋರಿಕೆ ಮೇರೆಗೆ ಜೆಡಿಎಸ್ ಬೆಂಬಲ ನೀಡಿದ್ದೆ. ಈಗ ಮೈತ್ರಿ ಇರುವದರಿಂದ ಕುಮಾರಸ್ವಾಮಿಯವರು ನನ್ನ ಜೊತೆಗೆ ಇರುವದಾಗಿ ತಿಳಿಸಿದ್ದಾರೆ ಎಂದರು.

ಇಂಡಿಯ ಶಾಸಕ ಯಶವಂತಗೌಡ ಪಾಟೀಲರು ರಾಷ್ಟ್ರ ನಾಯಕ ಮೋದಿಜಿಯವರ ಬಗ್ಗೆ ಹಗುರವಾಗಿ ಮಾತನಾಡಿರುವದು ತಪ್ಪು. ಮೋದಿಜಿ ಬಂಗಾರ ಖರಿದಿ ಮಾಡಬೇಡಿ ಪೆಟ್ರೋಲ ಕಡಿಮೆ ಬಳಸಿ ಎಂದು ಜನರ ಒಳ್ಳೆದಕ್ಕಾಗಿ ಹೇಳಿದ್ದಾರೆ. ಹೊರತು ಯಶವಂತರಾಯಗೌಡ ರಂತಹ ಕೀಳುಮಟ್ಟದ ರಾಜಕೀಯ ಜನರು ಅದನ್ನು ಅರ್ಥ ಮಾಡಿಕೊಳ್ಳದೆ ಟೀಕಿಸುಸುವದು ತಪ್ಪು. ರಾಷ್ಟ್ರ ಮಟ್ಟದಲ್ಲಿ ಮೋದಿ ಎಷ್ಟು ಹೆದ್ದಾರೆ ನಿರ್ಮಾನ ಕ್ಕೆ ಸಹಕರಿಸಿದ್ದಾರೆ ಎಂಬುದಕ್ಕೆ ಉದಾಹರಣೆ. ತಾಲೂಕಿನಲ್ಲಿ ಎಷ್ಟು ರಸ್ತೆ ಹದೆಗೆಟ್ಟಿವೆ ಎಂಬುದಕ್ಕೆ ಯಶವಂತರಾಯರು ಉಧಾಹರಣೆ ಎಂದರು.

ಈ ವೇಳೆ ಶಂಕರಗೌಡ ಪಾಟೀಲ, ಬಾಳು ಗಣೋರೆ, ಭೀಮನಗೌಡ ಬಿರಾದಾರ, ಮಲ್ಲನಗೌಡ ಪಾಟೀಲ, ಬೋರಾಮಣಿ, ಮಾಳಪ್ಪ ಪೂಜಾರಿ, ಗಂಗಾರಾಯ ಕ್ಷತ್ರಿ, ರಮೇಶ ಬಿರಾದಾರ, ಸಿಕಂದರ ಬೋರಾಮಣಿ, ಪ್ರಕಾಶ ಹೊಸಮನಿ ಮತ್ತಿತರಿದ್ದರು.

ಚಿತ್ರಕಲಾ ಶಿಕ್ಷಕರ ನೇಮಕಾತಿ ಅಗತ್ಯ: ವಾಲೀಕಾರ

◆**ವಿಜಯಪುರ:** ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡದೇ ಇರುವುದು ನೋವಿನ ಸಂಗತಿ ಎಂದು ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಹೇಳಿದರು.

ವಿಜಯಪುರದ ಆರ್ಟ್ ಗ್ಯಾಲರಿಯಲ್ಲಿ ಖ್ಯಾತ ಕಲಾವಿದೆ ಡಾ.ಶಶಿಕಲಾ ಹೂಗಾರ ಅವರ ಏಕ ವ್ಯಕ್ತಿ ಚಿತ್ರ ಕಲಾ ಪ್ರದರ್ಶನ ಹಾಗೂ ಕಲಾ ಚಿಂತನಗೋಷ್ಠಿಗೆ ಚಾಲನೆ ನೀಡಿ ಮಾತನಾಡಿದ ಅವರು, ಚಿತ್ರಕಲೆಯ ಬಗ್ಗೆ ಪ್ರೋತ್ಸಾಹ ನೀಡಿ ಕಲಾ ಪ್ರತಿಭೆಗಳನ್ನು ಬೆಳೆಸಬೇಕಿದೆ, ಆದರೆ ಶಾಲಾ ಕಾಲೇಜುಗಳಲ್ಲಿ ಚಿತ್ರಕಲಾ ಶಿಕ್ಷಣ ಗಗನ ಕುಸುಮವಾಗಿದೆ, ಇನ್ನೂ ಚಿತ್ರಕಲಾ ಪದವಿ ಪಡೆದ ಅದೇಷ್ಟೋ ಯುವಕರು ನೇಮಕಾತಿ ಪ್ರಕ್ರಿಯೆಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ, ಕೂಡಲೇ ಚಿತ್ರಕಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದರು.

ಖ್ಯಾತಕಲಾವಿದೆ ಡಾ.ಶಶಿಕಲಾ ಹೂಗಾರ ಮಾತನಾಡಿ, ಪ್ರತಿಷ್ಠಿತ ಸೈನಿಕ ಶಾಲೆಯಲ್ಲಿ 28 ವರ್ಷಗಳಿಂದ ಸೇವೆ ಸಲ್ಲಿಸಿದ ಹೆಮ್ಮೆ ನನಗಿದೆ. ಇದೇ ವರ್ಷ ಲಲಿತಕಲಾ ಅಕಾಡೆಮಿಯಿಂದ ಗೌರವ ಪ್ರಶಸ್ತಿ ದೊರಕಿರುವದು ತುಂಬ ಸಂತೋಷವಾಗಿದೆ. ಚಿತ್ರಕಲೆಗೆ ಸಮಾಜ ಹಾಗೂ ಸರ್ಕಾರದಿಂದ ಪ್ರೋತ್ಸಾಹ ಅಗತ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಕಲಾವಿದ ಪೊನ್ನಪ್ಪ ಕಡೆಮನಿ ಮಾತನಾಡಿ, ಪ್ರತಿಭೆ ಹಾಗೂ ಶ್ರಮಜೀವಿಗಳು



ಮಾತ್ರ ಚಿತ್ರಕಲೆಯಲ್ಲಿ ಯಶಸ್ವಿಯಾಗುತ್ತಾರೆ. ಇತ್ತೀಚಿಗೆ ಚಿತ್ರಕಾರ ರವಿವರ್ಮ ಚಿತ್ರ 168 ಕೋಟಿ ರೂ. ಮಾರಾಟವಾಗಿದ್ದು ಸ್ಮರಣೀಯ ಎಂದರು.

ಹಿರಿಯ ಚಿತ್ರಕಲಾವಿದ ವಿದ್ಯಾದರ ಸಾಲಿ, ಪ್ರವಾಸೋದ್ಯಮ ಇಲಾಖೆಯ ಅಧಿಕಾರಿ ಅನೀಲಕುಮಾರ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯೆ ರಾಜಶ್ರೀ ಮೋಪಗಾರ, ಶರಣಮ್ಮ ಹರವಾಳ, ದ್ರಾಕ್ಷಾಯಿಣಿ ಚೌಡಯ್ಯ, ಕಲ್ಪನಾ, ಯಾಮಿನಿ, ಸುಭಾಷ ಪ್ರಧಾನಿ, ಎಂ.ಕೆ. ಪತ್ತಾರ. ಮುರಳೀಧರ ಭೋವಿ. ರಾಘವೇಂದ್ರ ಪಾಟೀಲ, ರವಿ ನಾಯಕ, ಆನಂದ ಝುಂಡೆ, ಶಬ್ಬೀರ ನದಾಫ, ಬಿ.ಎಸ್. ಪಾಟೀಲ, ಶಿವಾನಂದ ಅಥಣಿ, ರಮೇಶ ಚವ್ಹಾಣ, ಗಿರೀಜಾ ಸಜ್ಜನ ಉಪಸ್ಥಿತರಿದ್ದರು.

ಶಶಿಕಲಾ ನಾಯ್ಕೋಡಿ ಪ್ರಾರ್ಥಿಸಿದರು. ರಾಜೇಂದ್ರ ಗೊಳಸಂಗಿ ಸ್ವಾಗತಿಸಿದರು. ಮಹಾದೇವ ಮೋಪಗಾರ ನಿರೂಪಿಸಿದರು. ಬಸವರಾಜ ಹೂಗಾರ ವಂದಿಸಿದರು.

ಕಿರುಸುದ್ದಿ

ಬಸವರಾಜ ರಾಯರೆಡ್ಡಿ ರಾಜೀನಾಮೆ ನೀಡಲಿ

ಕೊಪ್ಪಳ: ಬೆಲೆ ಏರಿಕೆ ವಿಷಯದಲ್ಲಿ ರಾಜೀನಾಮೆ ಕೇಳುವುದಾದರೆ ಮೊದಲು ಸಿದ್ದರಾಮಯ್ಯ ಅವರನ್ನು ರಾಜೀನಾಮೆ ಕೊಡಿ ಅಂತ ಕೇಳಿ, ನೀವೇ ಅವರಿಗೆ ಆರ್ಥಿಕ ಸಲಹೆಗಾರ ಅಲ್ವಾ? (ಬಸವರಾಜ ರಾಯರೆಡ್ಡಿ) ನೀವು ಸಹಿತ ಅವರ ಜೊತೆ ರಾಜೀನಾಮೆ ಕೊಡಿ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನಕುಮಾರ ಗುಳಗಣ್ಣನವರ ಹೇಳಿದರು. ಈ ಕುರಿತು ಪ್ರಕಟಣೆ ನೀಡಿದ ಅವರು, ಕಳೆದ 3 ವರ್ಷ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿಯೆ ಅಗತ್ಯ ವಸ್ತುಗಳಿಂದ ಹಿಡಿದು ಎಲ್ಲಾ ವಸ್ತುಗಳ ಬೆಲೆ ವಿಪರೀತ ಏರಿದೆ. ವಿದ್ಯುತ್ ಪರಿವರ್ತಕದ ಬೆಲೆ 25 ಸಾವಿರ ರೂ. ಇದ್ದದ್ದು 3 ಲಕ್ಷ ಆದಾಗ, 20 ರೂ. ಸ್ಟಾಂಪ್ ಪೇಪರ್ 100 ಅದಾಗ, ಜಮೀನು ನೋಂದಣಿ ಶುಲ್ಕ 3 ಪಟ್ಟು ಜಾಸ್ತಿ ಆದಾಗ, ವಿದ್ಯುತ್, ಹಾಲು, ನೀರು ಬಿಲ್ ಮತ್ತು ರಾಜ್ಯ ಸರ್ಕಾರ ಪೆಟ್ರೋಲ್ ಸುಂಕ ಇತ್ಯಾದಿ ಜಾಸ್ತಿಯಾಗಿದೆ ಎಂದರು. ಸಿದ್ದರಾಮಯ್ಯ ಅವರ 2021ರ ಟ್ವೀಟ್ ಒಮ್ಮೆ ನೋಡಿ ಬಸವರಾಜ ರಾಯರೆಡ್ಡಿ ಅವರೇ, ನಮ್ಮ ಸರ್ಕಾರ ಇದ್ದರೆ 10 ಪೆಟ್ರೋಲ್ ಮೇಲೆ ಸುಂಕ ಕಡಿತ ಮಾಡುತ್ತಿತ್ತು ಅಂತ ಹೇಳಿದ್ದರು. ನಿಮಗೆ ತಾಕತ್ತು ಇದ್ದರೆ ಈಗ ನಿಮ್ಮ ಸರ್ಕಾರ ಇದೆ, ಕಡಿಮೆ ಮಾಡಿ ನೋಡೋಣ? ನೀವೇ ಹೇಳಿದ್ದಿರಿ ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದೇ ಕಷ್ಟ ಅಭಿವೃದ್ಧಿ ಎಲ್ಲಿಂದ ಮಾಡಬೇಕು ಅಂತ? ಆ ನೆನಪು ಮರೆತಿರಾ ರಾಯರೆಡ್ಡಿ ಅವರೇ? ನಿಮ್ಮ ಸರ್ಕಾರ ಎಷ್ಟು ಸಾಲ ಮಾಡಿದೆ ನೋಡಿದಿರಾ ಎಂದು ಪ್ರಶ್ನಿಸಿದರು.



ಶರಣಮ್ಮ ಅಧಿಕಾರ ಸ್ವೀಕಾರ

ರಾಯಚೂರು: ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನೂತನ ಉಪ ನಿರ್ದೇಶಕರಾಗಿ (ಡಿಡಿ) ಶರಣಮ್ಮ ಅಧಿಕಾರ ಸ್ವೀಕರಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ಗಮಿತ ಉಪ ನಿರ್ದೇಶಕ ನವೀನಕುಮಾರ ಅಧಿಕಾರ ಹಸ್ತಾಂತರಿಸಿದರು. ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು ನೂತನ ಉಪ ನಿರ್ದೇಶಕರಿಗೆ ಶುಭ ಕೋರಿದರು.



ಯಲಬುರ್ಗಾದಲ್ಲಿ ತಂಪೆರೆದ ಮಳೆ

ಯಲಬುರ್ಗಾ: ಪಟ್ಟಣದಲ್ಲಿ ಭಾನುವಾರ ಸಂಜೆ ಗುಡುಗು,ಸಿಡಿಲು ಗಾಳಿಯ ಅಬ್ಬರದೊಂದಿಗೆ ಮಳೆ ಸುರಿಯಿತು. ಕಳೆದ ಎರಡ್ಮೂರು ತಿಂಗಳಿಂದ ಉರಿಬಿಸಿಲು ಬಿಸಿಗಾಳಿಯಿಂದ ತತ್ತರಿಸಿದ್ದ ಜನತೆಗೆ ಇಂದು ಸಂಜೆ ಸುರಿದ ಮಳೆ ಜೀವಕ್ಕೆ ತಂಪೆರೆಯಿತು. ಅರ್ಧ ಗಂಟೆಗೂ ಹೆಚ್ಚು ಸುರಿದ ಮಳೆಯಿಂದ ರಸ್ತೆಯೆಲ್ಲೆಲ್ಲ ನೀರು ಹರಿದಾಡಿದವು. ಪಟ್ಟಣದ ಮೀನಾಕ್ಷಿ ನಗರದಲ್ಲಿ ಮಳೆಯ ನೀರು ಚರಂಡಿಯಲ್ಲಿ ಸುಗಮವಾಗಿ ಹರಿಯದೆ ಪಕ್ಕದ ಕೆಲ ಮನೆಗಳಿಗೆ ನುಗ್ಗಿದ ಘಟನೆ ಕೂಡ ನಡೆದಿದೆ. ಇದರಿಂದ ಕೆಲಸಮಯ ಜನಜೀವನ ಅಸ್ತವ್ಯಸ್ಥಗೊಂಡಿತು. ಇನ್ನೂ ಹಲವು ಕಡೆಗಳಲ್ಲಿ ಗಿಡಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದರಿಂದ ಒಂದರೆಡು ಗಂಟೆಗಳ ಅಧಿಕ ವಿದ್ಯುತ್ ಸಂಪರ್ಕ ಕಡಿತಗೊಂಡ ಪರಿಣಾಮ ಪಟ್ಟಣದ ಜನತೆ ಸಾಕಷ್ಟು ಪರದಾಡುವಂತಾಯಿತು.

ಕಾನೂನು ಸಲಹೆಗಾರರ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಾರ್ಯಾಲಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸಲು ಓರ್ವ ಕಾನೂನು ಸಲಹೆಗಾರರ ಹುದ್ದೆಗೆ ಅರ್ಹ ಎಲ್ಎಲ್‌ಬಿ ಕಾನೂನು ಪದವಿಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಬಾರ್ ಕೌನ್ಸಿಲ್ ಆಫ್ ಇಂಡಿಯಾ ಅಥವಾ ಬಾರ್ ಕೌನ್ಸಿಲ್ ಆಫ್ ಕರ್ನಾಟಕದಲ್ಲಿ ನೋಂದಣಿಯಾಗಿರಬೇಕು. ವಕೀಲ ವೃತ್ತಿಯಲ್ಲಿ ಸಿವಿಲ್ ಪ್ರಕರಣಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿದ ಹಾಗೂ ಕಲಬುರಗಿಯಲ್ಲಿ ವಕೀಲ ವೃತ್ತಿಯ ಕಚೇರಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗೆ ಮಾಸಿಕ 30,000 ರೂ. ಗೌರವಧನ ನೀಡಲಾಗುವುದು ಎಂದು ಮಂಡಳಿ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳು ಮತ್ತು ತಮ್ಮ ಸ್ವ-ವಿವರದೊಂದಿಗೆ ಇದೇ ಮೇ 25ರೊಳಗಾಗಿ ಕಾರ್ಯದರ್ಶಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ ಅವರಿಗೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ವೆಬ್‌ಸೈಟ್ hkrdb.kar.nic.in ವೀಕ್ಷಿಸಬಹುದು ಅಥವಾ ಮಂಡಳಿ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ.



ಗಂಗಾವತಿ: ನಗರದ ಲಯನ್ಸ್ ಕ್ಲಬ್ ಆವರಣದಲ್ಲಿ ಹಿರೇಬೆಣಕಲ್ ಮೋರೆರ ಸಾಂಸ್ಕೃತಿಕ ಸಂಭ್ರಮ ಲೋಗೋವನ್ನು ಭಾನುವಾರ ಮಾಜಿ ಶಾಸಕ ಪರಣ್ಣ ಮುನವಳ್ಳಿ ಬಿಡುಗಡೆ ಮಾಡಿದರು. ಡಾ.ಶಿವಕುಮಾರ್ ಮಾಲಿಪಾಟೀಲ, ಮಂಜುನಾಥ್ ಗುಡ್ಲಾನೂರ್, ಜಂಬಣ್ಣ ಐಲಿ, ರಾಘವೇಂದ್ರ, ಮಂಜುನಾಥ್, ವೀರೇಶ್ ಹಿರೇಬೆಣಕಲ್, ಆರಾಳ್ ರುದ್ರೇಶ್, ಶ್ರವಣಕುಮಾರ್ ರಾಯ್ಕರ್, ವಿಷ್ಣುತೀರ್ಥ, ಬಸನಗೌಡ, ಹರನಾಯಕ, ಅರ್ಜುನ್ ಉಪಸ್ಥಿತರಿದ್ದರು.

ಹಿರೇಮನ್ನಾಪುರದಲ್ಲಿ 'ಸುಗ್ಗಿ ಸಂಭ್ರಮ'

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದ ಶ್ರೀಗುರು ಶಂಕರಲಿಂಗ ಸಭಾಭವನದಲ್ಲಿ ಪುಣ್ಯಕೋಟಿ ಕಲೆ ಕುಷ್ಟಗಿ ಸಂಸ್ಕೃತಿ ವಿಕಾಸ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೇತೃತ್ವದಲ್ಲಿ 2025-26ರ ಸಂಘ ಸಂಸ್ಥೆ ಧನಸಹಾಯ ಗಿರಿಜನ ಉಪಯೋಜನೆಯಡಿ ಏರ್ಪಡಿಸಲಾದ 'ಸುಗ್ಗಿ ಸಂಭ್ರಮ' ಕಾರ್ಯಕ್ರಮ ಶನಿವಾರ ನಡೆಯಿತು.

ನಿವೃತ್ತ ಶಿಕ್ಷಕ ಹಾಗೂ ರಂಗಭೂಮಿ ನಿರ್ದೇಶಕ ವಿ.ಎಸ್.ಕಾಡಗಿಮಠ ಉಪನ್ಯಾಸ ನೀಡಿ, ಈಚೆಗೆ ಅಶ್ಲೀಲ ಹಾಡುಗಳ ಹಾವಳಿಗೆ ನಮ್ಮ ನೆಲ ಮೂಲದ ಕಲೆ ಸಂಸ್ಕೃತಿಯ ಕೊಂಡಿಗಳು ಒಂದೊಡೆ ಕಳಚುತ್ತಿರುವದನ್ನು ವಿಷಾದನೀಯಎಂದು ತಿಳಿಸಿದರು.

ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಇಮಾಮಸಾಬ್ ಕೋಳೂರು ಕಾರ್ಯಕ್ರಮ ಉದ್ಘಾಟಿಸಿದರು. ಪುಣ್ಯಕೋಟಿ ಸಂಸ್ಥೆಯ ಅಧ್ಯಕ್ಷ ವಾ.ಹ.ಯಕ್ಕರನಾಳ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಗುರುಶಂಕರ ಲಿಂಗಮಠದ ಧರ್ಮಾಧಿಕಾರಿ ಡಾ.ಬಾಲಚಂದ್ರಪ್ಪಜ್ಜನವರು ಸಾನ್ನಿಧ್ಯವಹಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಎಸ್.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಭಾಷಾಸಾಬ್, ಸೈಯದ್ ಮುರ್ತುಜ್, ಮುಖಂಡರಾದ ಶರಣಗೌಡ ಪಾಟೀಲ, ದೇವಣ್ಣ ಬಳಿಗಾರ್, ಹನಮಂತಪ್ಪ, ಹುಸೇನಸಾಬ್ ಆಗಸಿಮುಂದಿನ್, ಮಲಕಾಜಪ್ಪ ತೋಟದ್, ಬಾಳಪ್ಪ ಪೂಜಾರ್, ಕರಿಯಪ್ಪ ಚಾಮಲಾಪುರ ಕಲಾವಿದ ದೇವೇಂದ್ರಪ್ಪ ಕಮ್ಮಾರ್ ಅವರಿಂದ ಸುಗಮ ಸಂಗೀತ ಭಕ್ತಿಗೀತೆ ನಡೆಸಿಕೊಟ್ಟರು. ಕಲಾವಿದ ಹನಮಂತಕುಮಾರ ಗವಾಯಿ ವಚನ ಗಾಯನ ಹಾಡಿದರು.



ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರ ಗ್ರಾಮದ ಶ್ರೀಗುರು ಶಂಕರಲಿಂಗ ಸಭಾಭವನದಲ್ಲಿ ಪುಣ್ಯಕೋಟಿ ಕಲೆ ಕುಷ್ಟಗಿ ಸಂಸ್ಕೃತಿ ವಿಕಾಸ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೇತೃತ್ವದಲ್ಲಿ 2025-26ರ ಸಂಘ ಸಂಸ್ಥೆ ಧನಸಹಾಯ ಗಿರಿಜನ ಉಪಯೋಜನೆಯಡಿ ಏರ್ಪಡಿಸಲಾದ 'ಸುಗ್ಗಿ ಸಂಭ್ರಮ' ಕಾರ್ಯಕ್ರಮ ಶನಿವಾರ ನಡೆಯಿತು.ಕಲಾವಿದರಾದ ಶುಖಮುನಿ ದೋಟಿಹಾಳ, ಹನಮಂತಪ್ಪ ಜಾಲಿಮರದ, ಶಿಕ್ಷಕ ಸುರೇಶ, ಕಾಡಗಿಮಠ ಇತರರಿದ್ದರು.

ಬೆಳೆ ಹಾನಿ ಪ್ರದೇಶಕ್ಕೆ ಭೇಟಿ | ಸರ್ಕಾರಕ್ಕೆ ಬಿಜೆಪಿ ನಾಯಕರ ಆಗ್ರಹ

ಎಕರೆಗೆ 5 ಲಕ್ಷ ರೂ. ಕೊಡಿ

ಕೊಪ್ಪಳ: ಜಿಲ್ಲೆಯ ವಿವಿಧೆಡೆ ಮಳೆಗೆ ಹಾಳಾಗಿರುವ ತೋಟಗಾರಿಕೆ ಹಾಗೂ ಕೃಷಿ ಬೆಳೆ ಬೆಳೆದ ರೈತರಿಗೆ ಸರಕಾರ ಕೂಡಲೇ ಪ್ರತಿ ಎಕರೆಗೆ 5 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಜಿಲ್ಲಾ ಬಿಜೆಪಿ ನಾಯಕರು ಒತ್ತಾಯಿಸಿದರು.

ತಾಲೂಕಿನ ಹೊಸಹಳ್ಳಿ, ಮುದ್ದಾಬಳ್ಳಿ, ಹ್ಯಾಟಿ ಗ್ರಾಮದ ರೈತರ ಹೊಲಗಳಿಗೆ ಭಾನುವಾರ ಬೆಳಂ-ಬೆಳಗ್ಗೆ ಅನ್ನದಾತರೊಂದಿಗೆ ಭೇಟಿ ನೀಡಿ, ಪರಿಶೀಲಿಸಿದರು. ಏಕಾಏಕಿ ಸುರಿದ ಮಳೆಗೆ ಬೆಳೆ ಹಾಳಾಗಿರುವುದನ್ನು ರೈತರು ಬಿಜೆಪಿ ನಾಯಕರಿಗೆ ತೋರಿಸಿದರು. ಬಾಳೆ ಬೆಳೆ, ಕಬ್ಬು, ಎಲೆ ನೂರಾರು ಎಕರೆ ಪ್ರದೇಶದಲ್ಲಿ ಹಾಳಾಗಿರುವುದನ್ನು ನೋಡಿ ಬಿಜೆಪಿ ನಾಯಕರು ಮಮ್ಮಲ ಮರಗಿದರು.

ಈ ವೇಳೆ ಮಾತನಾಡಿದ ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಮಾತನಾಡಿ, ರೈತರು ಕಷ್ಟಪಟ್ಟು ಬೆಳೆದ ಬೆಳೆಗಳೆಲ್ಲ ಹಾಳಾಗಿರುವುದು ಸಂಕಟ ತಂದಿದೆ. ಎಕರೆಗೆ ಲಕ್ಷಾಂತರ ರೂ. ಖರ್ಚು ಮಾಡಿ, ಇನ್ನೇನು ಬೆಳೆ ಕೈಗೆ ಬರುತ್ತದೆ ಎನ್ನುವಷ್ಟರಲ್ಲಿ ಅಕಾಲಿಕ ಮಳೆಗೆ ಬೆಳೆ ಹಾಳಾಗಿದೆ. ಸರಕಾರ, ಹಾಳಾದ ಬೆಳೆಗೆ ಎಕರೆಗೆ 22,500 ರೂ. ಕೊಡಲು ಮುಂದಾಗಿದೆ. ಆದರೆ, ಇದು, ಸರಿಯಲ್ಲ. ಎಕರೆಗೆ ಕನಿಷ್ಠ 5 ಲಕ್ಷ ರೂ. ಪರಿಹಾರ ಕೊಡಬೇಕು. ಅಲ್ಲದೆ, ಬಹಳಷ್ಟು ಹಲವು ರೈತರು ವರ್ಷಕ್ಕೆ 1.5 ಲಕ್ಷಕ್ಕೆ ಗುತ್ತಿಗೆ ಆಧಾರದ ಮೇಲೆ ಹೊಲ ಪಡೆದು ಉಳುಮೆ ಮಾಡಿದ್ದಾರೆ. ಇತ್ತ ಬೆಳೆ ಬೆಳೆ ಬೆಳೆಯಲು 2 ಲಕ್ಷ ರೂ.ವರೆಗೆ ಖರ್ಚು ಮಾಡಿದ್ದಾರೆ. ಹೀಗಾಗಿ ಸರಕಾರ ಕೊಡುವ 22500 ರೂ. ಪರಿಹಾರ ಯಾವುದಕ್ಕೂ ಸಾಲುವುದಿಲ್ಲ, ಕೂಡಲೇ ಪರಿಹಾರವನ್ನು 5 ಲಕ್ಷ ರೂ. ಗೆ ಏರಿಸಿ ಎಂದು ಒತ್ತಾಯಿಸಿದರು.



> **ಮೂರು ತಿಂಗಳ ಹಿಂದೆ ಬಸಾಪೂರ ಬಳಿ ಕಾಲುವೆ ಹೊಡೆದು ಅಪಾರ ಪ್ರಮಾಣದಲ್ಲಿ ಭತ್ತ ಬೆಳೆ ಹಾಳಾದರೂ ಈವರೆಗೆ ರೈತರಿಗೆ ಪರಿಹಾರ ಕೊಟ್ಟಿಲ್ಲ. ಅದರಂತೆ ಈಗಲೂ ಮಳೆಗೆ ಹಾನಿಗೊಳಗಾದ ರೈತರ ಪರಿಸ್ಥಿತಿಯಾಗಬಾರದು. ಶಾಸಕ ಹಿಟ್ನಾಳ್ ಕೇವಲ ಕಾಟಾಚಾರಕ್ಕೆ ಬೆಳೆ ಹಾನಿ ವೀಕ್ಷಣೆ ಮಾಡುವುದಲ್ಲ. ಕೂಡಲೇ ಸರಕಾರದಿಂದ ಪರಿಹಾರ ಕೊಡಿಸುವುದಕ್ಕೆ ಮೊದಲ ಆದ್ಯತೆ ನೀಡಬೇಕು. ಇಲ್ಲದಿದ್ದರೇ ರೈತರು ದಂಗೆ ಏಳಲಿದ್ದಾರೆ. ಅನ್ನದಾತರೊಂದಿಗೆ ನಾವು ಕೂಡ ಜತೆಯಾಗಿ ತೀವ್ರ ಪ್ರತಿಭಟನೆ ಮಾಡಬೇಕಾಗುತ್ತದೆ.**
>
> ■ ಡಾ.ಬಸವರಾಜ್ ಎಸ್ ಕ್ಯಾವಟರ್, ಬಿಜೆಪಿ ರಾಜ್ಯ ಕೋರ್ ಕಮಿಟಿ ಸದಸ್ಯ

ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ಮಾತನಾಡಿ, ಅಕಾಲಿಕ ಮಳೆಗೆ ರೈತರು ಬೆಳೆದ ತೋಟಗಾರಿಕೆ ಬೆಳೆಗಳು ಸಂಪೂರ್ಣ ಹಾಳಾಗಿವೆ. ರೈತರ ಕಷ್ಟವನ್ನು ನೋಡಲಾಗುತ್ತಿಲ್ಲ. ನಮಗೆಲ್ಲ ಅನ್ನ ಕೊಡುವ ರೈತನಿಗೆ ಸಂಕಷ್ಟ ಎದುರಾಗಿದೆ.

ಸರಕಾರ, ಈ ವಿಚಾರದಲ್ಲಿ ನಿರ್ಲಕ್ಷ್ಯ ಮಾಡದೇ ಕೂಡಲೇ ಹೆಚ್ಚಿನ ಮಟ್ಟದಲ್ಲಿ ಪರಿಹಾರ ವಿತರಣೆಗೆ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಗ್ರಾಮೀಣ ಹಾಗೂ ನಗರ ಮಂಡಲದ ಬಿಜೆಪಿ ಅಧ್ಯಕ್ಷರಾದ ವೀರೇಶ ಸಜ್ಜನ್ ಹಾಗೂ ಅಮರೇಶ ಮುರಳಿ, ಮುಖಂಡರಾದ ಅಪ್ಪಣ್ಣ ಪದಕಿ, ಮಹಾಂತೇಶ್ ಪಾಟೀಲ್ ಮೈನಳ್ಳಿ, ಚಂದ್ರಶೇಖರ ಕವಲೂರ್, ಹಲವರ್ತಿ ವೆಂಕಟೇಶ್, ಗಣೇಶ ಹೊರತಟ್ನಾಳ್, ಪ್ರದೀಪ್ ಹಿಟ್ನಾಳ್, ರಮೇಶ ಕವಲೂರ್, ಯೋಗಾನಂದ ಲೇಬಗೇರಿ, ಚನ್ನಬಸವ ಗಾಳಿ, ಗವಿ ಹಲವರ್ತಿ, ಮಾರುತಿ ಹಡಪದ, ಗುರಪ್ಪ, ದೇವರಾಜ ಹಾಲಸಮುದ್ರ, ಸಿದ್ದನಗೌಡ ಪಾಟೀಲ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು., ನೂರಾರು ರೈತರು ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರಿದ್ದರು.

ಬೆಳೆ ಹಾನಿ ವೀಕ್ಷಿಸಿದ ಶಾಸಕ ರಾಘವೇಂದ್ರ ಹಿಟ್ನಾಳ

ಕೊಪ್ಪಳ: ಮಳೆಯಿಂದ ಹಾನಿಗೊಳಗಾದ ಪ್ರದೇಶದ ಸರ್ವೇ ಕಾರ್ಯವನ್ನು ವಿಳಂಬ ಮಾಡದೆ ತ್ವರಿತಗತಿಯಲ್ಲಿ ಮಾಡಿ ಸರ್ಕಾರಕ್ಕೆ ವರದಿ ಕಳಿಸಿ ಎಂದು ಅಧಿಕಾರಿಗಳಿಗೆ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಸೂಚನೆ ನೀಡಿದರು.

ಶನಿವಾರ ಸಂಜೆ ಸುರಿದ ಮಳೆ ಹಾಗೂ ಗಾಳಿಯಿಂದಾಗಿ ಹಾನಿಗೋಳಗಾದ ಕೊಪ್ಪಳ ತಾಲೂಕಿನ ಬಿ. ಹೊಸಳ್ಳಿ, ಹ್ಯಾಟಿ, ಮೆಳ್ಳಿಕೇರಿ ಗ್ರಾಮಗಳ ಅಪಾರ ಪ್ರಮಾಣದ ಬಾಳೆ ಬೆಳೆಯ ಹಾನಿಯನ್ನು ಅಧಿಕಾರಿಗಳ ಸಮ್ಮುಖದಲ್ಲಿ ವೀಕ್ಷಿಸಿದರು.

ನಂತರ ತೋಟಗಾರಿಕೆ ಇಲಾಖೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಕರೆ ಮಾಡಿ ಮಾತನಾಡಿದ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರು ಮಳೆಯಿಂದ ಹಾನಿಗೊಳಗಾದ ಬಾಳೆ ಬೆಳೆಯ ಕುರಿತು ಸಮಗ್ರ ಮಾಹಿತಿ ನೀಡಿದರು. ಇದಕ್ಕೆ ಸ್ಪಂದಿಸಿರುವ ತೋಟಗಾರಿಕೆ ಇಲಾಖೆ ಸಚಿವರು ಶೀಘ್ರದಲ್ಲಿ ವರದಿ ಕಳಿಸಿ ಅದರ ಆದರದ ಮೇಲೆ ಪರಿಹಾರ ಒದಗಿಸುವ ಕೆಲಸ ಮಾಡೋಣ ಎಂದು ಭರವಸೆ ವ್ಯಕ್ತಪಡಿಸಿದರು.

ತೋಟಪ್ಪ ಕಾಮನೂರು, ಹನಮೇಶ ಹೊಸಳ್ಳಿ,ಚಾಂದಪಾಷ ಕಿಲ್ಲೆದರ್, ಆನಂದ ಹಾಲವರ್ತಿ,ಗ್ಯಾನಪ್ಪ ಹ್ಯಾಟಿ, ಚಿನ್ನರೆಡ್ಡಿ, ಬಸುರೆಡ್ಡಿ, ತಹಶೀಲ್ದಾರ್ ಬಸವರಾಜ್, ತಾಲೂಕ ಪಂಚಾಯತ್ ಇಓ ದುಂದೇಶ ತುರಾದಿ ಸೇರಿದಂತೆ ಅನೇಕ ಅಧಿಕಾರಿಗಳು ರೈತರು ಉಪಸ್ಥಿತರಿದ್ದರು.



ಹಣ, ಬಂಗಾರ ದೋಚಿ ಪರಾರಿ | ಆತಂಕ

ಸಾಧು ವೇಷದಲ್ಲಿ ಕಳ್ಳರ ಕೈಚಳಕ

ಸಿಂಧನೂರು: ಸಾಧು-ಸಂತರ ವೇಷದಲ್ಲಿ ಸಂಚರಿಸುತ್ತಿರುವ ಖದೀಮರ ತಂಡ ನಗರದಲ್ಲಿ ತಮ್ಮ ಕೈಚಳಕ ಪ್ರದರ್ಶಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು ಇದರಿಂದಾಗಿ ಸಾರ್ವಜನಿಕರಲ್ಲಿ ಭೀತಿ ಮತ್ತು ಆತಂಕ ಮೂಡಿಸಿದೆ.

ಹೌದು ನಗರದ ಕುಷ್ಟಗಿ ಮುಖ್ಯರಸ್ತೆಯ ಕೂಡಲಸಂಗಮ ಚಿತ್ರಮಂದಿರ ಎದುರುಗಡೆ ಇರುವ ಶ್ರೀಸಾಯಿ ಮೆಡಿಕಲ್ ಆ್ಯಂಡ್ ಜನರಲ್ ಸ್ಟೋರ್‌ನಲ್ಲಿ ಖದೀಮರು ಮಂಕುಬೂದಿ ಎರಚಿ, ಭವಿಷ್ಯ ಹೇಳುವ ನೆಪದಲ್ಲಿ ಹಣ ಹಾಗೂ ಬಂಗಾರ ದೋಚಿದ ಘಟನೆ ನಡೆದಿದೆ.

ಸಾಧು ವೇಷದಲ್ಲಿರುವ ಕಳ್ಳರು ಮೇ 12ರಂದು ಮಂಗಳವಾರ ಬೆಳಿಗ್ಗೆ ಸುಮಾರು 10 ಗಂಟೆ ವೇಳೆಗೆ ಸಾಧುವಿನ ವೇಷದಲ್ಲಿ ಬಂದಿದ್ದ ಅಪರಿಚಿತ ವ್ಯಕ್ತಿಯೊಬ್ಬ ಮೆಡಿಕಲ್ ಅಂಗಡಿಗೆ ಭೇಟಿ ನೀಡಿದ್ದಾನೆ. ಆಗ ಅವರು ಬಿಸಿಲಿನಿಂದ ಬಂದಿದ್ದೇವೆ ನೀರು ಕೊಡಿ ಎಂದು ಹೇಳಿದ ವ್ಯಕ್ತಿಗೆ ಮಾಲೀಕರಾದ ಟಿಂಕು ದತ್ ಅವರ ಪತಿ ವಿಷ್ಣು ದತ್ ಅವರು ತಣ್ಣೀರು ನೀಡಿದ್ದಾರೆ.

ನೀರು ಕುಡಿದ ಖದೀಮ ಬಳಿಕ ಭವಿಷ್ಯ ಹೇಳುವ ನೆಪದಲ್ಲಿ ಎರಡು ಹೂಗಳನ್ನು ವಿಷ್ಣು ದತ್ ಅವರಿಗೆ ನೀಡಿದ ಆರೋಪಿಯು, ಇದನ್ನು ವಾಸನೆ ನೋಡಿ ಎಂದು ಹೇಳಿದ್ದಾನೆ. ಹೂವನ್ನು ವಾಸನೆ ನೋಡಿದ ಕೆಲವೇ ಕ್ಷಣಗಳಲ್ಲಿ ವಿಷ್ಣು ದತ್ ಅವರಿಗೆ ಮಬ್ಬು ಬಡಿದಂತಾಗಿ, ತಾವು ಏನು ಮಾಡುತ್ತಿದ್ದಾರೆ ಎಂಬ ಅರಿವೇ ಇಲ್ಲದಂತಾಗಿದೆ ಎಂದು ತಿಳಿದು ಬಂದಿದೆ.



ಈ ಸಂದರ್ಭವನ್ನು ಬಳಸಿಕೊಂಡ ಖದೀಮನು ಗಲ್ಲಾಪೆಟ್ಟಿಗೆಯಲ್ಲಿದ್ದ 10,500 ನಗದು ಹಾಗೂ ವಿಷ್ಣು ದತ್ ಅವರ ಕೈಯಲ್ಲಿದ್ದ ಅರ್ಧ ತೊಲೆಯ ಬಂಗಾರದ ಉಂಗುರವನ್ನು ಪಡೆದು ಪರಾರಿಯಾಗಿದ್ದಾನೆ.

ಬಳಿಕ ಸ್ವಲ್ಪ ಸಮಯದ ನಂತರ ಚೇತರಿಸಿಕೊಂಡ ವಿಷ್ಣು ದತ್ ಅವರಿಗೆ ತಾವು ಮೋಸ ಹೋಗಿರುವುದು ಗೊತ್ತಾಗಿದೆ.

ಘಟನೆಯ ಸಂಬಂಧ ಅವರು ನಗರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಈ ಒಂದು ಘಟನೆ ನಗರದ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತಿರುವುದರಿಂದ ಪೊಲೀಸ್ ಇಲಾಖೆ ತಕ್ಷಣ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿದೆ.

ಭಾರೀ ಮಳೆಗೆ ಕ್ರೀಡಾಂಗಣದ ಗ್ಯಾಲರಿ ನೆಲಸಮ

ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲೂಕಿನಲ್ಲಿ ಭಾನುವಾರ ಸಂಜೆ ಸುರಿದ ಭಾರೀ ಮಳೆ ಮತ್ತು ಬಿರುಗಾಳಿಗೆ ಇಲ್ಲಿನ ತಾಲೂಕು ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿ ನೆಲಸಮಗೊಂಡಿದೆ. ಇದೇ ವೇಳೆ ಮಿನಿ ವಿಧಾನಸೌಧದ ಎದುರು ಪ್ರತಿಭಟನಾ ನಿರತರ ಟೆಂಟ್ ಮೇಲೆಯೇ ವಿದ್ಯುತ್ ಕಂಬ ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಭಾನುವಾರ ಸಂಜೆ ವೇಳೆ ಹಠಾತ್ ಮಾರುತಗಳೊಂದಿಗೆ ಅರ್ಭಟಿಸಿದ ಮಳೆಗೆ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯ ಆರ್ಚ್ ಹಾಗೂ ಜರ್ಮನ್ ತಂತ್ರಜ್ಞಾನದ ಮೇಲ್ಛಾವಣಿ ಸಂಪೂರ್ಣವಾಗಿ ಕಿತ್ತುಕೊಂಡು ನೆಲಕ್ಕೆ ಉರುಳಿದೆ. ಇತ್ತ ಮಿನಿ ವಿಧಾನಸೌಧದ ಮುಂಭಾಗದಲ್ಲಿ ವಿವಿಧ ಬೇಡಿಕೆಗಳಿಗಾಗಿ ಧರಣಿ ಕುಳಿತಿದ್ದ ಜಾಗದ ಟೆಂಟ್ ಮೇಲೆಯೇ ವಿದ್ಯುತ್ ಕಂಬ ಮುರಿದು ಬಿದ್ದಿದೆ. ಧರಣಿ ನಿರತರು ತಕ್ಷಣವೇ ಜಾಗರೂಕರಾಗಿದ್ದರಿಂದ ದೊಡ್ಡ ಅನಾಹುತವೊಂದು ತಪ್ಪಿದಂತಾಗಿದೆ.

ಕಳಪೆ ಕಾಮಗಾರಿ ಆಕ್ರೋಶ: ತಾಲೂಕು ಕ್ರೀಡಾಂಗಣದ ಕಾಮಗಾರಿಯು ತೀರಾ ಕಳಪೆಯಾಗಿ ನಡೆದಿರುವುದೇ ಈ ದುರ್ಘಟನೆಗೆ ಮುಖ್ಯ ಕಾರಣ. ಅಲ್ಪ ಮಳೆಗೆ ಗ್ಯಾಲರಿಯ ಮೇಲ್ಛಾವಣಿ ಕುಸಿದಿರುವುದು ಕಾಮಗಾರಿಯ ಗುಣಮಟ್ಟವನ್ನು ಬಿಚ್ಚಿಟ್ಟಿದೆ. ಆದ್ದರಿಂದ, ಸ್ಥಳೀಯ ಶಾಸಕರು ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷರು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಗುಣಮಟ್ಟದ ಮರುಕಾಮಗಾರಿ ನಡೆಸಿ ಕ್ರೀಡಾಪಟುಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಸ್ಥಳೀಯ ಕ್ರೀಡಾಪಟು ವಿಶ್ವ ಆಲೂರು ಆಗ್ರಹಿಸಿದ್ದಾರೆ.



ಮೃಗಾಲಯ ಲೋಕಾರ್ಪಣೆ ಇಂದು

ಕಲಬುರಗಿ: ಜಿಲ್ಲೆಯಲ್ಲಿ ಆಧುನೀಕರಿಸಲಾಗಿರುವ ನೂತನ ಮೃಗಾಲಯವನ್ನು ಮೇ 18ರಂದು ಲೋಕಾರ್ಪಣೆ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಚಿತ್ತಾಪುರ ತಾಲೂಕು ಮಾಡಬೂಳ ಬಳಿ ಸುಮಾರು 23 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಈ ಮೃಗಾಲಯದಲ್ಲಿ 23 ಪ್ರತ್ಯೇಕ ಪ್ರದೇಶಗಳಿದ್ದು, ಹುಲಿ, ಸಿಂಹ, ಕರಡಿ, ಆಮೆ, ಮೊಸಳೆ, ಚುಕ್ಕೆ ಚಿಂಕೆ, ಚಿನ್ನದ ಬಣ್ಣದ ನರಿ, ಜೀಬ್ರಾ, ಲಂಗೂರ್ ಸೇರಿದಂತೆ ಹಲವು ಪ್ರಾಣಿಗಳು ಹಾಗೂ ವಿವಿಧ ಪ್ರಭೇದದ ಪಕ್ಷಿಗಳ ಸುಂದರ ಕೋಣೆಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಚಿತ್ತಾಪೂರ ಶಾಸಕ ಹಾಗೂ ಕಲಬುರಗಿ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಅವರೂ ಈ ಮೃಗಾಲಯದ ಅಭಿವೃದ್ಧಿಗೆ ಆಸಕ್ತಿಯಿಂದ ಶ್ರಮಿಸಿದ್ದು, ಈ ಮೃಗಾಲಯ ನಿರ್ಮಾಣಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 27.61 ಕೋಟಿ ರೂ. ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ 6 ಕೋಟಿ ರೂ. ಒದಗಿಸಲಾಗಿದೆ. ಕರ್ನಾಟಕ ಅರಣ್ಯ ಇಲಾಖೆ 50 ಲಕ್ಷ ರೂ. ವೆಚ್ಚದಲ್ಲಿ ಮೃಗಾಲಯದಲ್ಲಿ ಹುಲ್ಲುಗಾವಲು, ವೃಕ್ಷಾರೋಪಣ ಕಾರ್ಯವನ್ನು ಮಾಡಿದೆ ಎಂದು ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಂಪಿಯಲ್ಲಿ ಈಗಾಗಲೇ ಮೃಗಾಲಯವಿದ್ದು, ಕಲ್ಬುರ್ಗಿಯಲ್ಲಿ ನಾಳೆ ಉದ್ಘಾಟನೆಯಾಗಲಿರುವ ಮೃಗಾಲಯ ಹಲವು ದಶಕಗಳ ಬೇಡಿಕೆ ಈಡೇರಿಸಿದೆ ಎಂದು ಅರಣ್ಯ ಸಚಿವರು ತಿಳಿಸಿದ್ದಾರೆ.

ಪ್ರತಿನಿತ್ಯ ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ಮೃಗಾಲಯ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ. ಪ್ರತಿ ಮಂಗಳವಾರ ಮೃಗಾಲಯಕ್ಕೆ ರಜೆ ಇರುತ್ತದೆ ಎಂದು ತಿಳಿಸಿದ್ದಾರೆ.

ಶಾಲಾ ಮಕ್ಕಳಿಗೆ ಮೃಗಾಲಯ ಭೇಟಿಯಿಂದ ವಿವಿಧ ವನ್ಯಜೀವಿಗಳ ಬಗ್ಗೆ ಮಾಹಿತಿ ದೊರಕುವುದರ ಜೊತೆಗೆ ವಿವಿಧ ಜಾತಿಯ ಸಸ್ಯ ಪ್ರಭೇದಗಳ ಪರಿಚಯವೂ ಆಗುತ್ತದೆ. ಇದು ಮಕ್ಕಳಲ್ಲಿ ಪ್ರಕೃತಿ ಪರಿಸರದ ಬಗ್ಗೆ ಪ್ರೀತಿ ಮೂಡಿಸುತ್ತದೆ ಎಂದು ಹೇಳಿದ್ದಾರೆ. ಈ ಮೃಗಾಲಯದಲ್ಲಿ 50 ಕಾರು ಮತ್ತು 20 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣಕ್ಕೆ ವರ್ಷ: ಕೇಕ್ ಕತ್ತರಿಸಿ ಸಂಭ್ರಮ

ಕುಷ್ಟಗಿ: ಇಲ್ಲಿನ ಕಂದಕೂರು ರಸ್ತೆಯಲ್ಲಿರುವ ರೈಲ್ವೆ ನಿಲ್ದಾಣಕ್ಕೆ ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರೈಲ್ವೆ ಹೋರಾಟ ಸಮಿತಿ, ಸಾರ್ವಜನಿಕರು, ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಕೇಕ್ ಕತ್ತರಿಸುವ ಮೂಲಕ ಸಿಹಿ ಹಂಚಿ ಸಂಭ್ರಮದಿಂದ ಶನಿವಾರ ಆಚರಿಸಲಾಯಿತು.

ರೈಲ್ವೆ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ವಿರೇಶ್ ಬಂಗಾರಶೆಟ್ರ ಮಾತನಾಡಿ, ಪಟ್ಟಣಕ್ಕೆ ದಶಕಗಳ ಕನಸಾಗಿದ್ದ ರೈಲ್ವೆ ನಿಲ್ದಾಣ ನಿರ್ಮಾಣಗೊಂಡು ಈವರೆಗೆ ಒಂದು ವರ್ಷ ಗತಿಸಿದೆ. ಪಟ್ಟಣದ ಜನತೆಗೆ ಖುಷಿ ನೀಡಿದೆ. ರೈಲು ಸೇವೆಗಳು ಆರಂಭದಿಂದ ಸಂಚಾರ ವ್ಯಾಪಾರ, ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಕುಷ್ಟಗಿಯಿಂದ ರಾಜಧಾನಿ ಕೇಂದ್ರಕ್ಕೆ ಗ್ರಾಮೀಣ ಭಾಗದಿಂದ ಖಾಸಗಿ ವಾಹನಗಳ ಮೂಲಕ ತೆರಳುತ್ತಿದ್ದು, ಜನರಿಗೆ ಹೆಚ್ಚುವರಿ ಹೊರೆಯಾಗುತ್ತಿದೆ. ಹುಬ್ಬಳ್ಳಿಗೆ ಹೆಚ್ಚುವರಿ ರೈಲು ಸೇವೆ ಆರಂಭಿಸುವಂತೆ ರೈಲ್ವೆ ಇಲಾಖೆದವರು ಕ್ರಮವಹಿಸಬೇಕು ಎಂದು ಮನವಿ ಮಾಡಿದರು.

ಮುಖಂಡರಾದ ಜೆ.ಜೆ. ಆಚಾರ್, ಅಭಿನಂದನ ಗೋಗಿ, ಶ್ರೀಧರ ಘೋರ್ಪಡೆ, ಶಾರದಾ ಶೆಟ್ಟರ್, ವಂದನಾ ಗೋಗಿ, ಡಾ.ಪಾರ್ವತಿ ಪಳೋಟಿ, ಡಾ. ರವಿಕುಮಾರ ದಾನಿ, ಮಹಾಂತಯ್ಯ ಆರಳೆಲಿಮಠ ವಿರೇಶ್ ಕರಡಿ, ಭರತೇಶ ಜೋಷಿ ಇನ್ನಿತರರು ಇದ್ದರು.



ಭಾರೀ ಮಳೆ: ಸಿಡಿಲಿಗೆ ಎಮ್ಮೆ, ಎತ್ತು ಸಾವು

ಯಲಬುರ್ಗಾ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಭಾನುವಾರ ಸಂಜೆ ಸುರಿದ ಭಾರೀ ಮಳೆ ಹಾಗೂ ಸಿಡಿಲಿನ ಅಬ್ಬರಕ್ಕೆ ಪ್ರತ್ಯೇಕ ಘಟನೆಗಳಲ್ಲಿ ಒಮದು ಎಮ್ಮೆ,ಒಂದು ಎತ್ತು ಸಾವನ್ನಪ್ಪಿದ ಘಟನೆ ನಡೆದಿದೆ.

ತಾಲೂಕಿನ ದಮ್ಮೂರು ಗ್ರಾಮದ ರೈತ ವಿರುಪಣ್ಣ ಹಳ್ಳಿಕೇರಿ ಅವರಿಗೆ ಸೇರಿದ ಎಮ್ಮೆ ಸಿಡಿಲಿನ ಹೊಡೆತಕ್ಕೆ ಬಲಿಯಾಗಿದ್ದು,ಮತ್ತೊಮದು ಘಟನೆಯಲ್ಲಿ ತಾಲೂಕಿನ ಹಗೇದಾಳ ಗ್ರಾಮದ ನೀಲಪ್ಪ ಚೂರಿ ಅವರಿಗೆ ಸೇರಿದ ಎತ್ತು ಸಹ ಸಿಡಿಲಿನ ಪರಿಣಾಮವಾಗಿ ಮೃತಪಟ್ಟಿದೆ.ಸಂಜೆ ವೇಲೆ ಸುರಿದ ಹಗೂ ಗುಡುಗು-ಸಿಡಿಲಿನ ಆರ್ಭಟಕ್ಕೆ ಈ ದುರ್ಘಟನೆಗಳು ಸಂಭವಿಸಿದ್ದು ಉ ಇದರಿಂದ ರೈತರಿಗೆ ಭಾರೀ ಆರ್ಥಿಕ ನಷ್ಟ ಉಂಟಾಗಿದೆ.

ಮಾಹಿತಿ ತಿಳಿದು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.ಸಂತ್ರಸ್ತ ರೈತರಿಗೆ ಸರಕಾರದಿಂದಸೂಕ್ತ ಪರಿಹರ ನೀಡುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ದುಡಿಯೋಣ ಬಾ ಅಭಿಯಾನ ಸದುಪಯೋಗಕ್ಕೆ ಸಲಹೆ

ಯಲಬುರ್ಗಾ: ನರೇಗಾದಡಿ ಬೇಸಿಗೆಯ ಎರಡು ತಿಂಗಳು ನಿರಂತರವಾಗಿ ಕೆಲಸ ಕೊಡಲು ದುಡಿಯೋಣ ಬಾ ಅಭಿಯಾನ ಮಾಡುತ್ತಿದ್ದು, ಎಲ್ಲ ಅಕುಶಲ ಕೂಲಿಕಾರರು ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಪಂ ಇಒ ನೀಲಗಂಗಾ ಬಬಲಾದ ಹೇಳಿದರು.

ತಾಲೂಕಿನ ವಣಗೇರಿ ಗ್ರಾಮದಲ್ಲಿ ಭಾನುವಾರ ನಡೆದ ನಾಲಾ ಹೂಳೆತ್ತುವ ಕಾಮಗಾರಿಯ ಎನ್ಎಂಎಂಎಸ್ ಹಾಜರಾತಿ ಪರಿಶೀಲಿಸಿ ಮಾತನಾಡಿದ ಅವರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಆರ್ಥಿಕವಾಗಿ ಸಬಲರಾಗಬೇಕಿದೆ. ಸರ್ಕಾರದಿಂದ ಮಹಿಳೆಯರಿಗೆ ವಿಶೇಷ ಯೋಜನೆಗಳ ಲಾಭ ಪಡೆದುಕೊಂಡು ಆರ್ಥಿಕ ಸ್ವಾವಲಂಬಿಗಳಾಗಬೇಕು ಎಂದರು.



ಗ್ರಾಪಂಗಳು ಮಹಿಳಾ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಾ ಆರ್ಥಿಕವಾಗಿ ಸಬಲರನ್ನಾಗಿಸುವಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿವೆ ಹೀಗಾಗಿ ಕೂಲಿಕಾರರು ಕೆಲಸ ಮಾಡುವ ಸಂದರ್ಭದಲ್ಲಿ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಬಿಸಿಲಿನ ವೇಳೆ ಹೊರಗಡೆ ಬರಬಾರದು. ಹೆಚ್ಚು ನೀರು ಕುಡಿಯಬೇಕು ಎಂದು ಹೇಳಿದರು.

ತಾಲೂಕು ಐಇಸಿ ಸಂಯೋಜಕರಾದ ಶರಣಪ್ಪ ಹಾಳಕೇರಿ, ಕಂಪ್ಯೂಟರ್ ಆಪರೇಟರ್ ಶರಣಪ್ಪ, ಕಾಯಕ ಬಂಧುಗಳು, ಕೂಲಿಕಾರರು, ಇದ್ದರು.

ಶ್ರೀನಿವಾಸ ಕಲ್ಯಾಣೋತ್ಸವ

ಮಾನ್ವಿ: ತಾಲೂಕಿನ ಚೀಕಲಪರ್ವಿ ಗ್ರಾಮದಲ್ಲಿನ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದ 7ನೇ ವಾರ್ಷಿಕೋತ್ಸವ ಅಂಗವಾಗಿ ಐತಿಹಾಸಿಕ ಸ್ವಯಂಭು ಶ್ರೀತಿಮ್ಮಪ್ಪ ಸ್ವಾಮಿ ಸನ್ನಿಧಾನದಲ್ಲಿ ಭಾನುವಾರ ಬೆಳಿಗ್ಗೆ ರುದ್ರಮುನೀಶ್ವರ ಮಠದ ಸದಾಶಿವ ಸ್ವಾಮೀಜಿ ದಿವ್ಯಸಾನಿಧ್ಯದಲ್ಲಿ ಲೋಕ ಕಲ್ಯಾಣಾರ್ಥವಾಗಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಅಂಗವಾಗಿ ಶ್ರೀನಿವಾಸ ಮೂಲ ವಿಗ್ರಹಕ್ಕೆ ಹಾಗೂ ಸ್ವಯಂಭು ಶ್ರೀನಿವಾಸ ಮೂರ್ತಿಗೆ ವಿಶೇಷ ಅಭಿಷೇಕ ಹಾಗೂ ಅಲಂಕಾರ ನೆರವೇರಿಸಲಾಯಿತು.



ತಿರುಪತಿಯಿಂದ ತಂದಿರುವ ಶ್ರೀನಿವಾಸ ಸಮೇತ ಶ್ರೀದೇವಿ, ಭೂದೇವಿ ಪಂಚಲೋಹದ ಉತ್ಸವ ಮೂರ್ತಿಗಳಿಗೆ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀನಿವಾಸ್ ಪೂಜಾರ್ ವಿಶೇಷ ಅಭಿಷೇಕ ನೆರವೇರಿಸಿ ಶಾಸ್ತ್ರೋಕ್ತವಾಗಿ ಶ್ರೀನಿವಾಸ ಕಲ್ಯಾಣೋತ್ಸವ ನೆರವೇರಿಸಿದರು.

ದೇವಸ್ಥಾನದ ಅರ್ಚಕರಾದ ಗಿರಿಧರಪೂಜಾರ್, ಓಬಳೇಶ್ವರ್ ಪೂಜಾರ್, ಶ್ರೀಕಾಂತಸ್ವಾಮಿ, ಚಿರಂಜೀವಿ ಆಚಾರ್ಯ, ರಮೇಶ್ ಪೂಜಾರ್ ಪೂಜಾವಿಧಿ ವಿಧಾನಗಳನ್ನು ನಡೆಸಿಕೊಟ್ಟರು.

ಮಾನ್ವಿ ತಾಲೂಕು ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್.ಮುತ್ತುರಾಜ್ ಶೆಟ್ಟಿ ಸೇರಿದಂತೆ ಗ್ರಾಮದ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಕಿರುಸುದ್ದಿ

ಶನೇಶ್ವರ ಜಯಂತಿ ಆಚರಣೆ



◆**ಸಿರುಗುಪ್ಪ:** ನಗರದ ಶ್ರೀನಿವಾಸ ಆಂಜನೇಯ ಶನೈಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಮತ್ತು ಶನೇಶ್ವರ ಜಯಂತಿ ನಿಮಿತ್ತ ಶನಿವಾರ ಸಂಜೆ ವಿಶೇಷ ಪೂಜಾ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ದೇವಸ್ಥಾನದಲ್ಲಿ ಬೆಳಿಗ್ಗೆ ಪಂಚಾಮೃತ ಅಭಿಷೇಕ, ತೈಲಾಭಿಷೇಕ, ತಿಲಹೋಮ ಹಾಗೂ ಸಂಜೆ ರಥೋತ್ಸವ ಸಂಪನ್ನಗೊಂಡ ನಂತರ ರಂಗಪೂಜೆ ಸೇವೆ ಮತ್ತು ಸಾಮೂಹಿಕ ಏಳು ಗಂಟು ದೀಪೋತ್ಸವ ಅದ್ದೂರಿಯಾಗಿ ಜರುಗಿತು.

ವಿದ್ಯುತ್ ತಂತಿ ಕಳ್ಳರ ಬಂಧನ



◆**ಕೊಟ್ಟೂರು:** ತಾಲೂಕಿನಲ್ಲಿನ ವಿಂಡ್ ಪವರ್ ವಿದ್ಯುತ್ ಕಂಬದಲ್ಲಿನ ಅಲ್ಯೂಮಿನಿಯಂ ತಂತಿಗಳನ್ನು ಕಳವು ಮಾಡಿದ್ದ ಆರೋಪಿಗಳನ್ನು ಪತ್ತೆ ಹಚ್ಚಿ ತಂತಿ, ನಗದು ಹಣ, ವಾಹನ ಜಪ್ತಿ ಮಾಡಲಾಗಿದೆ ಎಂದು ಪಿಎಸ್ಐ ಗೀತಾಂಜಲಿ ಭಾನುವಾರ ತಿಳಿಸಿದ್ದಾರೆ. ವಿದ್ಯುತ್ ತಂತಿ ಕಳುವಾಗುತ್ತಿರುವ ಕುರಿತು ಕೊಟ್ಟೂರು ಠಾಣೆಯಲ್ಲಿ ಏ.7ರಂದು ದೂರ ದಾಖಲಾಗಿತ್ತು. ಕಳ್ಳರ ಪತ್ತೆ ಕಾರ್ಯದಲ್ಲಿ ನಿರತರಾದ ಪೊಲೀಸರು ಮೇ 15ರಂದು ಸಮೀಪದ ಗಂಗಮ್ಮನಹಳ್ಳಿ ಗ್ರಾಮದ ಕ್ರಾಸ್ ಬಳಿ ಆರೋಪಿಗಳನ್ನು ಪತ್ತೆ ಹಚ್ಚಿ ವಿಚಾರಣೆಗೊಳಪಡಿಸಲಾಗಿತ್ತು. ಸಂಡೂರು ತಾಲೂಕಿನ ಹಿರೇಕೆರೆಯಾಗಿನಹಳ್ಳಿಯ ಎ.ಮಲ್ಲಿಕಾರ್ಜುನ, ಜೋಗಜ್ಜರ ಅಂಜಿನಪ್ಪ, ಗುಡ್ಲುಮಾರಪ್ಪರ ಬಸವರಾಜ, ಜೋಗಜ್ಜರ ದುರುಗಪ್ಪ ಆರೋಪಿಗಳು. ಬಂಧಿತರಿಂದ 4 ಲಕ್ಷ ರೂ. ಮೌಲ್ಯದ ಅಲ್ಯೂಮಿನಿಯಂ ತಂತಿ, 3 ಲಕ್ಷ ರೂ. ನಗದು, ಕೃತ್ಯಕ್ಕೆ ಬಳಸಿದ್ದ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಖರೀದಿ ಕೇಂದ್ರಗಳಲ್ಲಿ ನೋಂದಣಿಗೆ ಮನವಿ

◆**ರಾಯಚೂರು:** ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್ಎಕ್ಯೂ ಗುಣಮಟ್ಟದ ಹಿಂಗಾರು ಹಂಗಾಮಿನ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ರೈತರು ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಿ ಸೂರ್ಯಕಾಂತಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ಎಸ್.ಪೂವಿತಾ ಕೋರಿದ್ದಾರೆ. ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಎಕರೆಗೆ 4 ಕ್ವಿಂಟಾಲ್ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್‌ಗೆ 7,721ರೂ. ಗಳಂತೆ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವುದು. ಇದೇ ಮೇ 7ರಿಂದ ರೈತರ ನೋಂದಣಿ ಕಾಲಾವಧಿಯನ್ನು 50 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 60 ದಿನಗಳವರೆಗೆ ನಿಗದಿಪಡಿಸಿದೆ.

ಮಳೆ, ಗಾಳಿಗೆ ವಿದ್ಯುತ್ ಕಂಬಗಳು ನೆಲಸಮ



◆**ಕುರುಗೋಡು:** ಸಮೀಪದ ಶ್ರೀರಾಮಚಂದ್ರಪುರ ಸೇರಿದಂತೆ ಸುತ್ತಮುತ್ತಲಿನಲ್ಲಿ 4.2 ಮಿಮೀ. ನಷ್ಟು ಮಳೆಯಾಗಿದ್ದು, ಮಳೆ, ಗಾಳಿಗೆ ವಿದ್ಯುತ್ ಕಂಬ, ಮರಗಳು ನೆಲಕ್ಕೆ ಉರುಳಿವೆ. ಗ್ರಾಪಂ ಶ್ರೀರಾಮಚಂದ್ರಾಪುರ ಕ್ಯಾಂಪ್‌ನಲ್ಲಿ ಗಾಳಿ ರಭಸಕ್ಕೆ ಹುಲ್ಲಿನ ಬಣಿವೆ ಕೊಚ್ಚಿ ಹೋಗಿದ್ದಲ್ಲದೆ, ಮಾವು ಫಸಲು ಹಾಗೂ ಜಾನುವಾರಗಳಿಗೆ ಸಂಗ್ರಹಿಸಿದ ಬಣವಿ ಗಾಳಿಗೆ ಕದಲಿದ್ದು, ಗಿಡಗಳು ನೆಲಸಮಾವಾಗಿವೆ. ಯಾವುದೇ ಪ್ರಾಣ ಅಪಾಯ ಸಂಬವಿಸಿಲ್ಲ. ಗಾಳಿಗೆ ಆರು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದರಿಂದ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿತ್ತು. ಪ್ರಮುಖ ರಸ್ತೆಯಿಂದ ಹಲವು ಕ್ಯಾಂಪ್‌ನ ಮಾರ್ಗ ಬಂದ್ ಆಗಿವೆ. ಜೆಸ್ಕಾಂ ಸಿಬ್ಬಂದಿ ವಿದ್ಯುತ್ ಕಂಬ ದುರಸ್ತಿಗೊಳಿಸಿ ಶುಕ್ರವಾರ ಸಂಜೆ ವೇಳೆಗೆ ವಿದ್ಯುತ್ ಪೂರೈಸಿದರು. ನಾಲ್ಕೈದು ಮರಗಳು ನೆಲಕ್ಕೆ ಉರುಳಿವೆ. ಗಾಳಿಯ ರಭಸಕ್ಕೆ ರೈತರು ಹಾಕಿದ್ದ 8 ಹುಲ್ಲಿನ ಬಣಿವೆಗಳು ಕತ್ತರಿಸಿ ಬಿದ್ದು ಭಾಗಶಃ ಹುಲ್ಲು ಗಾಳಿಗೆ ಹಾರಿ ಹೋಗಿದೆ. ಗಾಳಿಯ ರಭಸಕ್ಕೆ ಮಾವು ಉದುರಿಬಿದ್ದಿವೆ. ನೆಲ್ಲುಡಿ ಹಾಗೂ ಶ್ರೀರಾಮಚಂದ್ರಾಪುರ ಕ್ಯಾಂಪ್‌ಗೆ ಎಮ್ಮಿಗನೂರು 110 ಕೆವಿ ಶಾಖಾಧಿಕಾರಿ ಬಸವರಾಜ ಸ್ಥಳಕ್ಕೆ ಬೇಟಿ ನೀಡಿ ದುರಸ್ತಿಗೊಳಿಸಿದರು.



ಹೂವಿನಹಡಗಲಿ: ಪಟ್ಟಣದ ದಿ ಬೆಸ್ಟ್ ಕೋಚಿಂಗ್ ಸೆಂಟರ್‌ನಲ್ಲಿ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ತರಗತಿಯನ್ನು ಆಯೋಜಿಸಲಾಗಿತ್ತು.

ಗುರಿ ಸಾಧನೆಗೆ ಸಕಾರಾತ್ಮಕ ಚಿಂತನೆ ಅಗತ್ಯ

◆**ಹೂವಿನಹಡಗಲಿ:** ಪಟ್ಟಣದ ದಿ ಬೆಸ್ಟ್ ಕೋಚಿಂಗ್ ಸೆಂಟರ್‌ನಲ್ಲಿ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗಾಗಿ ವ್ಯಕ್ತಿತ್ವ ವಿಕಸನ ತರಗತಿಯನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ತುಂಗಭದ್ರ ಪ್ರೌಢಶಾಲೆಯ ಶಿಕ್ಷಕ ಎಸ್.ದ್ವಾರಕೇಶ್ ರೆಡ್ಡಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ. ಮಾತನಾಡಿದ ಅವರು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ವ್ಯಕ್ತಿತ್ವ, ಶಿಸ್ತು, ಆತ್ಮವಿಶ್ವಾಸ ಮತ್ತು ಸಮಯಪಾಲನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗುರಿ ಸಾಧನೆಗೆ ಕಠಿಣ ಪರಿಶ್ರಮ, ಏಕಾಗ್ರತೆ ಹಾಗೂ ಸಕಾರಾತ್ಮಕ ಚಿಂತನೆ ಅಗತ್ಯವಾಗಿದೆ ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಂಕಗಳು ಮಾತ್ರವಲ್ಲದೆ ಸಂವಹನ ಕೌಶಲ್ಯ, ನಾಯಕತ್ವ ಗುಣಗಳು ಮತ್ತು ನೈತಿಕ ಮೌಲ್ಯಗಳು ಕೂಡ ಮಹತ್ವದ್ದಾಗಿವೆ. ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿಕೊಂಡು ನಿರಂತರ ಅಭ್ಯಾಸದ ಮೂಲಕ ಯಶಸ್ಸಿನತ್ತ ಸಾಗಬೇಕು ಎಂದು ಕರೆ ನೀಡಿದರು.

ದಿ ಬೆಸ್ಟ್ ಕೋಚಿಂಗ್ ಸೆಂಟರ್‌ನ ಸಂಸ್ಥಾಪಕ ಮುರ್ತಜ ಎಂ., ಇಕ್ಬಾಲ್ ಅಹ್ಮದ್ ಎಂ. ಸೇರಿದಂತೆ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕೊನೆಯಲ್ಲಿ ವಿದ್ಯಾರ್ಥಿಗಳು ದ್ವಾರಕೇಶ್ ರೆಡ್ಡಿ ಅವರ ಉಪನ್ಯಾಸದಿಂದ ಪ್ರೇರಣೆ ಪಡೆದಿರುವುದಾಗಿ ಅಭಿಪ್ರಾಯಪಟ್ಟರು.ನಂತರ ಸಂಪನ್ಮೂಲ ವ್ಯಕ್ತಿಗಳಾದ ದ್ವಾರಕೇಶ್ ರೆಡ್ಡಿ ಅವರನ್ನು ಸಂಸ್ಥೆಯಿಂದ ಅಭಿನಂದಿಸಿ ಗೌರವಿಸಲಾಯಿತು.



ಕುರುಗೋಡು: ಹೆಲ್ಮೆಟ್ ಜಾಗೃತಿ ಅಂಗವಾಗಿ ಪಟ್ಟಣದಲ್ಲಿ ಬೈಕ್ ರ‍್ಯಾಲಿ ನಡೆಯಿತು. ಸಿಪಿಐ ಬಾಳನಗೌಡ ಮಾನತಟ್ಟಿ ಹಾಗೂ ಪಿಎಸ್ಐ ಸುಪ್ರೀತ್ ವಿರುಪಕ್ಷಪ್ಪ ಜಾಗೃತಿ ಅಂಗವಾಗಿ ಸ್ವತಃ ತಾವೇ ಬೈಕ್ ಸವಾರಿ ಮಾಡುವ ಮೂಲಕ ಚಾಲನೆ ನೀಡಿದರು ಇದಕ್ಕೆ ಪೋಲೀಸ್ ಸಿಬ್ಬಂದಿ ಸಾಥ್ ನೀಡಿದ್ದು ವಿಶೇಷವಾಗಿತ್ತು ಅಲ್ಲದೆ ರಸ್ತೆಗಳಲ್ಲಿ ಸಾರ್ವಜನಿಕರ ಗಮನ ಸೆಳೆಯಿತು.

ರೈತರ, ಪರಿಸರ ಪ್ರೇಮಿಗಳ ಕಾಳಜಿ | ಮಲೆನಾಡಿನ ಅನುಭವ
ಗಮನ ಸೆಳೆವ ಸಾಲು ಮರಗಳು

▸**ಪುಷ್ಪವತಿ ಜೆಎಂ ಬಸಯ್ಯ**

ದಿಗಂತ ವಿಶೇಷ



◆**ಕುರುಗೋಡು:** ತಾಲೂಕಿನ ಕೂಗಳತೆಯಲ್ಲಿನ ಮುಸ್ವಗಟ್ಟೆ ಗ್ರಾಮದಿಂದ ಎಚ್.ವೀರಾಪುರ ಗ್ರಾಮದಡೆಗೆ ರಸ್ತೆಗಿಳಿದರೆ ಸಾಕು, ದಾರಿಯುದ್ದಕ್ಕೂ ಎಡ-ಬಲ ಎರಡೂವರೆ ಕಿಮೀ. ಉದ್ದಕ್ಕೂ ಮರಗಳ ಹೊಂದಿಕೆ ಕೊಂಡಿರುವ ವಿವಿಧ ಮರಗಳ ಸಾಲುಗಳು, ನೆರಳು ಸ್ವಾಗತಿಸಿ ಗಣಿನಾಡಿನಲ್ಲೂ ಮಲೆನಾಡಿನ ಅನುಭವವಾಗಿಗುತ್ತದೆ.

ಪ್ರಸಕ್ತ ಸಾಲಿನ ಸುಡುವ ಪ್ರಖರತೆ ಸೂರ್ಯನ ಮಾಯವಾಗಿ ಮೈಮನಕ್ಕೆ ತಂಪು ನೀಡುವ ಹಸಿರು ನಡುವೆ ನೆರಳು ಹೃದಯಕ್ಕೆ ಸಂತೋಷದ ಕ್ಷಣ ಕರೆಯೋಲೆ ಕಂಡಿತ ಹೌದು! ಈ ರಸ್ತೆ ಒಂದುಸಲ ಬನ್ನಿ ಅನುಭವಕ್ಕೆ ಕಮ್ಮಿ ಇಲ್ಲಂತೆ ಕಣ್ತುಂಬ ಕಾಣುವಿರಿ. ತಂಪು ಹವೆಯನ್ನು ಸೃಷ್ಟಿಸಿಗೆ ಕೆಲ ವರ್ಷಗಳು ಹಿಂದೆ ಅರಣ್ಯ ಇಲಾಖೆ ರಸ್ತೆ ಬದುವಿನಲ್ಲಿ ನೆಟ್ಟ ಸಸಿಗಳು ಇಂದು ಮರಗಳಂತೆ ಮನಕ್ಕೆ ಶಾಂತಿ ತಂಗಾಳಿ ಸೆಳತವಾಗಿದೆ. ಹೋಗುವ ಮಾರ್ಗದುದ್ದಕ್ಕೂ ರಸ್ತೆಯ ಎರಡೂ ಬದಿಗಳಲ್ಲಿ ಮರಗಳು ಹಸಿರು ಚಪ್ಪರ ಹಾಕಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

ರೈತರು ಕಾರಣ: ಇಂದು ನಾವು ಅನುಭವಿಸುತ್ತಿರುವ ರೈತರು ಕಾರಣ ಬಹುತೇಕ ಈ ತಂಪಿನ ಹಿಂದೆ ಹಿಂದಿನ ದೊಡ್ಡ ಶ್ರಮವಿದೆ. ಹೌದು ಯಾಕೆ ಅಂದರೆ ಇಲಾಖೆ ಸಸಿಗಳು ಇಟ್ಟ ನಂತರ ಕೆಲ ತಿಂಗಳದಲ್ಲಿ ಜಾನುವಾರು ಕಾಟ. ಎರಡು ಬದುನಲ್ಲಿ ರಸ್ತೆ ವತ್ತುವರಿ ಮಾಡದೇ ವಿಷೇಶ ಹಾಗೂ ಹಾಗೂ ಬೆಳದಿರುವ ಮರಗಳಿಗೆ ಈ ಭಾಗದಲ್ಲಿ ರೈತರು ಕೊಡಲೆ ಪೆಟ್ಟು ಬಿಳದೆ ಕಾಯಕ ಯೋಗಿ ಹಾಗೂ ಪರಿಸರ ಪೇಮಿ ಶ್ರಮ ಇದೆ.

ಅರಣ್ಯ ಇಲಾಖೆ ಯೋಜನೆಯಡಿ ಈ ಸಸಿಗಳನ್ನು ನೆಟ್ಟಿದ್ದರು. ಅಂದಿನ ಎನ್ನುವುದು ಇಲ್ಲಿನ ಪ್ರಮುಖ ಗಮನರ್ಹ ತಂಪಿನ ನೆರಳು. ಇಂದಿನ ಬಿರುಸುಲು ಬಚಾವಾಗಲು ನಾವು ಮರಗಳ ನೆರಳು ಹುಡುಕುತ್ತೇವೆ. ಕಾರು-ಬೈಕ್‌ಗಳನ್ನು ಮರದ ಕೆಳಗೆ ನಿಲ್ಲಿಸುತ್ತೇವೆ.

> ನಮ್ಮ ಮಠದಲ್ಲಿ ಪುರಾಣ ಧಾರ್ಮಿಕ ಕಾರ್ಯಕ್ರಮ ಅಂಗವಾಗಿ ಸತತ 10 ವರ್ಷದಿಂದ ಇಂದಿಗೂ ಸಸಿ ಭಕ್ತರಿಗೆ 15-18 ಸಾವಿರ ಉಚಿತ ನೀಡಲಾಗುತ್ತದೆ. ಇದರಲ್ಲಿ ಭಕ್ತರು ಹಾಗೂ ಪರಿಸರ ಪ್ರೇಮಿಗಳು ಕನಿಷ್ಟವಾಗಿ 1000-1500 ಹೆಮ್ಮರವಾಗಿವೆ. ಈ ಸಸಿಗಳು ಹೆಮ್ಮರವಾಗುವವರೆಗೆ ಮಕ್ಕಳಂತೆ ಪೋಷಿಸಿದ್ದಾರೆ.
>
> ■ **ವಾಮದೇವಾ ಮಹಾಂತ ಶಿವಾಚಾರ್ಯ ಸ್ವಾಮಿಜಿ,** ಹಂಪಿ ಸಾವಿರ ದೇವರ ಮಠ ಎಮ್ಮಿಗನೂರು

> ಈ ಭಾಗದಲ್ಲಿನ ಹಂಪಿ ಶ್ರೀಗಳ ಪ್ರೇರಣೆ ಎಮ್ಮಿಗನೂರು ಗ್ರಾಮದ ಸಾವಿರ ಮಠದ ವಾಮದೇವಾ ಮಹಾಂತ ಶಿವಚಾಯರು ಸ್ವಾಮೀಜಿ, ಸಸಿ ದೀಕ್ಷೆ ಎಂಬ ಪುರಾಣದಲ್ಲಿ ಪ್ರತಿಯೊಬ್ಬರು ಸತಿ-ಪತಿಗಳಿಗೆ ಉಚಿತ ನೀಡುವುದರ ಮೂಲಕ ಪ್ರೇರಣೆ ಹಲವು ಕುಟುಂಬ ಹೊಲ ಹಾಗೂ ಮನೆ ಬಾಗದಲ್ಲಿನ ಸಾಕ್ಷಿ ಯಾಗಿದೆ.
>
> ■ **ಮಂಜುನಾಥ ಸ್ವಾಮಿ,** ಎಚ್. ವೀರಾಪುರ

ಯೋಗದಿಂದ ಉತ್ತಮ ಆರೋಗ್ಯ: ಡಾ.ಹಂದ್ರಾಳ್

◆**ವಿಜಯನಗರ:** ಪ್ರಕೃತಿಯಲ್ಲಿರುವಂತೆ ನಮ್ಮ ದೇಹದಲ್ಲಿ ಪೃಥ್ವಿ, ಜಲ, ಅಗ್ನಿ ವಾಯು ಮತ್ತ ಆಕಾಶ ಎಂಬ ಪಂಚತತ್ವಗಳ ಸಂಗಮ ವಿದೆ. ಪ್ರತಿನಿತ್ಯ ಧ್ಯಾನ ಮತ್ತು ಯೋಗದಿಂದ ಅವುಗಳ ಸಮತೋಲನದ ಮೂಲಕ ಉತ್ತಮ ಆರೋಗ್ಯ ಹೊಂದಲು ಸಾಧ್ಯ ಎಂದು ಪತಂಜಲಿ ಯೋಗ ಸಮಿತಿಯ ಗದಗ ಮತ್ತು ವಿಜಯನಗರ ಜಿಲ್ಲಾ ಉಸ್ತುವಾರಿ ಡಾ.ಎಸ್.ಬಿ.ಹಂದ್ರಾಳ ಹೇಳಿದರು.

ಫ್ರೀಡಂ ಪಾರ್ಕ್‌ನಲ್ಲಿ ಪತಂಜಲಿ ಯೋಗ ಸಮಿತಿ ಭಾನುವಾರ ಬೆಳಿಗ್ಗೆ ನಡೆದ ವಿಶೇಷ ಯೋಗ ಶಿಬಿರದಲ್ಲಿ ಅವರು ಉತ್ತಮ ಆರೋಗ್ಯ ಹೊಂದುವ ಕುರಿತು ಮಾಹಿತಿ ನೀಡಿದರು.

ನಾಶಿಕಾಗ್ರಹ, ಜ್ಞಾನೇಂದ್ರಿಯ, ಆತ್ಮಾವಲೋಕ, ಅಂತರಾತ್ಮದ ಜೊತೆ ಮಾತನಾಡುತ್ತಾ ನಮ್ಮನು ನಾವು ನಿಗ್ರಹಿಸಬಹುದು. ಉದರಕ್ಕೂ ಮತ್ತು ಮೆದಳಿಗೆ ಸಂಬಂದವಿದ್ದು, ಈ ಜಟರಾಗ್ನಿ ಸರಿಯಾಗಿಡಲು ಕಪಾಲಭಾತಿ ಮೂರು ಮುದ್ರೆಗಳಾದ ಅಪಾನ ಮುದ್ರೆ , ಸೂರ್ಯ ಮುದ್ರೆ ಯೊಂದಿಗೆ ಮಾಡಿದಲ್ಲಿ ನಮ್ಮ ಉದರದ ಸಮಸ್ಯೆಗಳನ್ನು ಸಹ ನಿವಾರಿಸಲು ರಾಮಬಾಣವಾದಂತಾಗುತ್ತದೆ. ರಕ್ತದೊತ್ತಡ ಕಡಿಮೆ ಮಾಡಲು ಚಂದ್ರನಾಡಿಯನ್ನು ಕ್ರಿಯಾಶೀಲವಾಗಿಸಿದರೆ ಸಮತೋಲನ ಸಾಧಿಸಲು ಸಾಧ್ಯವಾಗಲಿದೆ. ಇಂತಹ. ಜೀವನಶೈಲಿಯ ಬದಲಾವಣೆಯಿಂದ ಉತ್ತಮ ಆರೋಗ್ಯ ಸಾಧ್ಯವಾಗಲಿದೆ. ಆದಕ್ಕಾಗಿ ಪ್ರತಿನಿತ್ಯ ಯೋಗ ಮತ್ತು ಧ್ಯಾನ ಮಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ಯೋಗಿಕ್ ಜಾಗಿಂಗ್, ಸರಳ ವ್ಯಾಯಾಮ, ಪ್ರಣಾಯಾಮ, ಬಸ್ತ್ರಿಕಾ, ವಿವಿಧ ಮುದ್ರೆಗಳ ಸಹಿತ ಉಸಿರಾಟದ ಕ್ರಮಗಳ ಕುರಿತು ಯೋಗ ಸಾಧಕರಿಗೆ ಮಾರ್ಗದರ್ಶನ ನೀಡಿದರು.

ಪತಂಜಲಿ ಯೋಗ ಸಮಿತಿ ಜಿಲ್ಲಾ ಪ್ರಭಾರಿ ಡಾ.ಎಫ್.ಟಿ.ಹಳ್ಳಿಕೇರಿ, ಬಳ್ಳಾರಿ ಜಿಲ್ಲಾ ಪ್ರಭಾರಿ ರಾಜೇಶ್ ಕರ್ವ, ಸತ್ಯಪ್ಪ, ವಿಠೋಬ ಬಲ್ಲೂರು. ದಾಕ್ಷಾಯಿಣಿ ಶಿವಕುಮಾರ್, ಕವಿತಾ ಆನಂದ್, ಶ್ರೀಧರ್, ಪ್ರಕಾಶ್ ಕುಲಕರ್ಣಿ, ಶಿವಮೂರ್ತಿ, ಶ್ರೀಧರ್, ವೆಂಕಟೇಶ್ ವಾಸಿ, ಅಶೋಕ ಚಿತ್ರಗಾರ, ಶ್ರೀರಾಮ್, ಚಂದ್ರಿಕಾ, ಶೈಲಜಾ ಕಳಕಪ್ಪ, ರಾಮಚಂದ್ರ ಕಂಬದ, ಡಾ.ಸುಮಂಗಲದೇವಿ ಪಾಲ್ಗೊಂಡಿದ್ದರು. ಫ್ರೀಡಂ ಪಾರ್ಕ್ ಯೋಗ ಕೇಂದ್ರದ ಮುಖ್ಯಸ್ಥ ನಿರ್ವಹಿಸಿದರು.



ಬಿತ್ತನೆ ಬೀಜಗಳಿಗೆ ಕಂಪನಿ ಅವಲಂಬಿಸಬೇಡಿ

◆**ಕೊಟ್ಟೂರು:** ಬಿತ್ತನೆ ಬೀಜ ಉತ್ಪಾದನೆಯನ್ನು ಮಾಡಿಕೊಳ್ಳಲು ನಮ್ಮ ರೈತರು ಸಾಮರ್ಥ್ಯ ಹೊಂದಿದ್ದರೂ, ವಿದೇಶಿ ಕಂಪನಿಗಳ ಬಿತ್ತನೆ ಬೀಜಕ್ಕೆ ಅವಲಂಬನೆಯಾಗಿರುವುದು ಸರಿಯಲ್ಲ ಎಂದು ನಂದೀಪುರ ಡಾ.ಮಹೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಇಕ್ರಾ ಸಂಸ್ಥೆ ಆಯೋಜಿಸಿದ್ದ ಮಿಶ್ರ ಬೆಳೆ ಬೀಜ ಮೇಳ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಭಾನುವಾರ ಮಾತನಾಡಿದರು.

ತಾವು ಬೆಳೆದ ಬೆಳೆಗಳನ್ನು ಬಿತ್ತನೆಗಾಗಿ ಬೀಜ ಮಾಡಿಕೊಳ್ಳುತ್ತಿದ್ದ ಪದ್ಧತಿಯನ್ನು ಇಂದಿನ ನಮ್ಮ ರೈತರು ಕೈಬಿಟ್ಟು, ಕಂಪನಿಗಳನ್ನು ಅವಲಂಬಿಸಿದ್ದಾರೆ. ದೇಶೀಯ ಕೃಷಿ ಪದ್ಧತಿಯನ್ನು ನಾವು ಕೈಬಿಟ್ಟಿದ್ದರೂ, ವಿದೇಶಿಗರು ಅದನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ತಯಾರಾದ ಬಿತ್ತನೆ ಬೀಜ, ಯಾವಗಲೂ ಬಿತ್ತನೆಗೆ ಬರುತ್ತದೆ. ಆದರೆ ಕಂಪನಿಗಳ ಬೀಜಗಳನ್ನು ಒಮ್ಮೆ ಮಾತ್ರ ಬಿತ್ತನೆಗೆ ಬರುತ್ತವೆ. ಇದರಿಂದ ರೈತರು ಮೊದಲಿನಂತೆ ತಾವೇ ಬಿತ್ತನೆ ಬೀಜಗಳನ್ನು ತಯಾರಿಸಿಕೊಳ್ಳುವತ್ತ ಗಮನ ಹರಿಸಬೇಕು. ಈ ಭಾಗದಲ್ಲಿ ಮಿಶ್ರ ಬೆಳೆ, ಸಾವಯವ ಪದ್ಧತಿ ಅಳವಡಿಕೆಗೆ ರೈತರನ್ನು ಉತ್ತೇಜಿಸುವ ಮೂಲಕ ಜಾಗೃತಿ ಮೂಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದರು.

ಪರಿಸರ ವಾದಿ ಸಿರಸಿಯ ಪಾಂಡುರಂಗ ಹೆಗಡೆ ಮಾತನಾಡಿ, ಇಂದಿನ ದಿನಗಳಲ್ಲಿ ಹೆಚ್ಚು ಇಳುವರಿಗಾಗಿ ನಾವುಗಳ ಭೂಮಿ ಮೇಲೆ ದೌರ್ಜನ್ಯ ಮಾಡುತ್ತಿದ್ದೇವೆ. ಹೆಚ್ಚು ರಾಸಾಯನಿಗೊಬ್ಬರ, ಔಷಧಗಳನ್ನು ಬಳಸದೇ ಸಾವಯುವ ಪದ್ಧತಿಯಲ್ಲಿ ಬೆಳೆಗಳನ್ನು ಬೆಳೆಸುವುದನ್ನು ರೈತರು ರೂಢಿ ಮಾಡಿಕೊಳ್ಳಬೇಕು ಎಂದು ಹೇಳಿದರು.

ಸಾವಯವ ಕೃಷಿಕ ವಿಜಯಪುರದ ರಾಜಶೇಖರ ನಿಂಬರಗಿ ಮಾತನಾಡಿ, ಮೆಕ್ಕೆಜೋಳದಿಂದ ರೈತರಿಗೆ ಆಗುವ ಲಾಭಕ್ಕಿಂತ ಅದನ್ನು ಖರೀದಿಸುವ ಕಂಪನಿಗಗಳಿಗೆ ಹೆಚ್ಚು ಲಾಭವಾಗುತ್ತದೆ ಎಂದರು.

ರೈತ ಮಹಿಳೆಯರಾದ ಕಾಂತಮಣಿ, ಗೀತಮ್ಮ,ಸಿ.ಮಂಜುನಾಥ ಇತರರು ಮಾತನಾಡಿದರು. ಎಪಿಎಂಸಿ ಕಾರ್ಯದರ್ಶಿ ಸಿ.ಕೆ.ವೀರಣ್ಣ, ಇಕ್ರಾ ಸಂಸ್ಥೆ ಮುಖ್ಯಸ್ಥ ಪಿ.ಬಾಬು ಇದ್ದರು.

ಇಕ್ರಾ ಸಂಸ್ಥೆಯ ಗಾಯತ್ರಿ ಪ್ರಾಸ್ತಾವಿಕ ಮಾತನಾಡಿದರು. ಚಪ್ಪರದಹಳ್ಳಿ ಮಂಜುನಾಥ, ಶಿಕ್ಷಕ ಕಾಂತರಾಜ, ಕೆ.ಕೊಟ್ರೇಶ ನಿರ್ವಹಿಸಿದರು.

ಮೇಳದಲ್ಲಿ ನೂರಕ್ಕೂ ಹೆಚ್ಚು ರೈತರು ಸಾವಯವ ಹಾಗೂ ನಾನಾ ಬಗೆಯ ಸೊಪ್ಪು, ತರಕಾರಿ, ಧಾನ್ಯಗಳ ಜವಾರಿ ಬಿತ್ತನೆ ಬೀಜಗಳನ್ನು ಪ್ರದರ್ಶಿಸಿ ಮಾರಾಟ ಮಾಡಿದರು.



ಪಿಂಚಣಿ ವಿಲೇವಾರಿ ವೇಗಗೊಳಿಸಲು ಕ್ರಮ: ಸಚಿನ್ ಕೃಷ್ಣ ಕೌಶಿಕ್

◆**ಬಳ್ಳಾರಿ:** ಪಿಂಚಣಿ ವಿಲೇವಾರಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲು ಸಿದ್ಧತೆ ನಡೆಸಲಾಗುತ್ತಿದ್ದು, ಶೀಘ್ರದಲ್ಲೇ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಡೆಪ್ಯುಟಿ ಅಕೌಂಟ್ ಜನರಲ್ (ಪಿಂಚಣಿ ವಿಭಾಗ) ಸಚಿನ್ ಕೃಷ್ಣ ಕೌಶಿಕ್ ಹೇಳಿದರು.

ನಗರದತಾಲೂಕುಆಡಳಿತಭವನದ ಸಭಾಂಗಣದಲ್ಲಿ ಅಕೌಂಟೆಂಟ್ ಜನರಲ್ ಕಚೇರಿ ಬೆಂಗಳೂರು ಹಾಗೂ ಖಜಾನೆ ಇಲಾಖೆ ಬೆಂಗಳೂರು, ಖಜಾನೆ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಪಿಂಚಣಿ ಅದಾಲತ್, ಸಾಮಾನ್ಯ ಭವಿಷ್ಯ ನಿಧಿ ಅದಾಲತ್ ಹಾಗೂ ಲೆಕ್ಕಪತ್ರ ಸಮಸ್ಯೆಗಳ ಕುರಿತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ನಿವೃತ್ತ ಸರ್ಕಾರಿ ನೌಕರರು ತಮ್ಮ ಪಿಂಚಣಿ ಸೌಲಭ್ಯಗಳಿಗಾಗಿ ಕಚೇರಿಯಿಂದ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಮತ್ತು ವಿಳಂಬವಿಲ್ಲದೆ ಸೌಲಭ್ಯ ಒದಗಿಸಲು ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ಹಿಂದೆ ಪಿಂಚಣಿ ಮಂಜೂರಾತಿಗೆ ದೀರ್ಘಕಾಲತೆಗೆದುಕೊಳ್ಳಲಾಗುತ್ತಿತ್ತು. ಆದರೆ ಕಳೆದ ಐದಾರು ತಿಂಗಳಿನಿಂದ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದ್ದು, ಗರಿಷ್ಠ 30 ರಿಂದ 45 ದಿನಗಳೊಳಗೆ ವಿಲೇವಾರಿ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದರು.

ಮಹಾಲೇಖಪಾಲರ ಕಚೇರಿಯ ಸೀನಿಯರ್ ಡಿ.ಎ.ಜಿ ಯಶೋದಾ, ಬೆಂಗಳೂರು ಮಹಾಲೇಖಪಾಲರ ಕಚೇರಿಯ ಸೀನಿಯರ್ ಅಕೌಂಟ್ಸ್ ಆಫೀಸರ್ ನಾಗಜ್ಯೋತಿ, ಅಕೌಂಟ್ಸ್ ಆಫೀಸರ್ ಶ್ರೀಕಾಂತ್ ಎಂ.ಜೆ., ಜಿಲ್ಲಾ ಖಜಾನೆ ಬಳ್ಳಾರಿಯ ಉಪ ನಿರ್ದೇಶಕ ಶೇಖರಪ್ಪ, ಸಹಾಯಕ ಖಜಾನಾಧಿಕಾರಿ ಪ್ರಭು ಮತ್ತು ಸಣ್ಣ ಉಳಿತಾಯ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಹೊನ್ನೂರಪ್ಪ ಸೇರಿದಂತೆ ವಿವಿಧ ಬ್ಯಾಂಕ್ ಗಳ ಮುಖ್ಯಸ್ಥರು, ನಿವೃತ್ತ ಪಿಂಚಣಿದಾರರು, ಇತರರು ಉಪಸ್ಥಿತರಿದ್ದರು.

ವೈದ್ಯರ ನಿರ್ಲಕ್ಷ್ಯದಿಂದ ಹಸು ಸಾವು: ಪರಿಹಾರಕ್ಕೆ ಮನವಿ

◆**ಸಿರುಗುಪ್ಪ:** ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೇ ಹಾಗೂ ಪಶು ವೈದ್ಯಾಧಿಕಾರಗಳ ನಿರ್ಲಕ್ಷ್ಯದಿಂದ ಹಸು ಮೃತಪಟ್ಟಿದೆ. ರೈತರಿಗೆ ಪರಿಹಾರ ನೀಡಬೇಕು. ವೈದ್ಯಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಶರಣಬಸವ ಅವರು ಶನಿವಾರ ಜಿಲ್ಲಾ ಪಶು ವೈದ್ಯಾಧಿಕಾರಿ ಸದಾಶಿವ ಉಪ್ಪಾರ್ ಅವರಿಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ಬಗ್ಗೂರು ಗ್ರಾಮದ ರೈತ ಮಲ್ಲಪ್ಪ ಅವರಿಗೆ ಸೇರಿದ ಹಸು, ಎಮ್ಮೆ, ಕರುಗೆ ಬೆಳಿಗ್ಗೆ 10ಗಂಟೆ ಸುಮಾರಿಗೆ ಹಿಟ್ ಸ್ಟ್ರೋಕ್ ಆಗಿದ್ದು, ರಾರಾವಿ ಪಶು ವೈದ್ಯ ಆಸ್ಪತ್ರೆಗೆ ಹೋದರೆ ಬೀಗ ಹಾಕಿತ್ತು ಗ್ರಾಮ ಮತ್ತು ತಾಲೂಕು ಪಶು ವೈದ್ಯ ಅಧಿಕಾರಿಗಳಿಗೆ ಕರೆ ಮಾಡಿದರೆ ಕರೆ ಸ್ವೀಕರಿಸಿದೆ ಕಾರಣದಿಂದಾಗಿ ಮಧ್ಯಾಹ್ನ ಹಸು ಮೃತಪಟ್ಟಿತು.



ಇನ್ನೂಳಿದ ಎಮ್ಮೆ, ಕರುವನ್ನು ಗ್ರಾಮಸ್ಥರ ಸಹಾಯದಿಂದ ಹಾರೈಕೆ ಮಾಡುಕೊಂಡು ಉಳಿಸಿಕೊಳ್ಳಲಾಗಿದೆ. 1962 ಸಹಾಯವಾಣಿಗೆ ಕರೆ ಮಾಡಿದರೆ ಸಂಚಾರಿ ವಾಹನ ರಿಪೇರಿ ಇದೆ ಎಂದು ಹೇಳಿದರು. ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದ ವೈದ್ಯರ ವಿರುದ್ಧ ಸೂಕ್ತ ಕ್ರಮಕೈಗೊಳಬೇಕು. ನಷ್ಟ ಅನುಭವಿಸಿದರೈತನಿಗೆಪರಿಹಾರ ಧನ ಒದಗಿಸಬೇಕೆಂದು ಒತ್ತಾಯಿಸಿದರು.

ಇಲ್ಲಿನ ಪಶು ವೈದ್ಯರು ದುಡ್ಡು ಕೊಟ್ಟರೆ ಮಾತ್ರ ಚಿಕಿತ್ಸೆ ನೀಡುತ್ತಾರೆ ಎಂದು ಆರೋಪ ಮಾಡಿದರು.

ಮೀಸಲಾತಿ ಕಡಿತದ ಹಿಂದೆ ಕಾಂಗ್ರೆಸ್ ಷಡ್ಯಂತ್ರ: ಸೋಮಶೇಖರ ರೆಡ್ಡಿ

◆**ಬಳ್ಳಾರಿ:** ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಸ್ಸಿ ಹಾಗೂ ಎಸ್ಟಿ ಸಮುದಾಯಗಳಿಗೆ ಹೆಚ್ಚಳ ಮಾಡಿದ್ದ ಮೀಸಲಾತಿಯನ್ನು ಕಡಿತಗೊಳಿಸಿದ ಕೀರ್ತಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲಲಿದೆ, ದಲಿತರ ವಿರೋಧಿ ಕಾಂಗ್ರೆಸ್ ಎಂದು ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಂವಿಧಾನಬದ್ಧವಾಗಿ ಜನಸಂಖ್ಯೆಗೆ ಅನುಗುಣವಾಗಿ ಎಸ್ಸಿ ಹಾಗೂ ಎಸ್ಟಿ ಸಮುದಾಯಗಳಿಗೆ ಸಿಗಬೇಕಾಗಿದ್ದ ಮೀಸಲಾತಿ ಸಿಕ್ಕಿರಲಿಲ್ಲ, ಈ ಕುರಿತು ಹೈಕೋರ್ಟ್ ಕೂಡಲೇ ತುರ್ತು ನಿಗಾ ವಹಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ಮಾಡಿತು. ಆಗ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಗಳಾಗಿದ್ದರು, 3 ವರ್ಷಗಳಿಂದಲೂ ಏನೂ ಮಾಡಲಿಲ್ಲ, ಕಾಂಗ್ರೆಸ್ ದಲಿತರನ್ನು ಕೇವಲ ಓಟ್ ಬ್ಯಾಂಕ್ ನ್ನಾಗಿ ಮಾಡಿಕೊಂಡಿದೆ ಹೊರತು, ಸಮುದಾಯಗಳ ಅಭಿವೃದ್ಧಿಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಾಗ್ದಾಳಿ ನಡೆಸಿದರು. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಚ್.ಹನುಮಂತಪ್ಪ ಅವರು ಮಾತನಾಡಿ, ಸಿ.ಎಂ.ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಪೂರ್ಣ ದಲಿತರ ವಿರೋಧಿ, ಮೀಸಲಾತಿ ಕಲ್ಪಿಸುವಲ್ಲಿ ಸರ್ಕಾರ ದೊಂಬರಾಟ ಆಡುತ್ತಿದೆ. ಅಹಿಂದ ಚಾಂಪಿಯನ್ ಸಿದ್ದರಾಮಯ್ಯ ಅವರು ದಲಿತರಿಗೆ ಅನ್ಯಾಯ ಮಾಡಿದ್ದಾರೆ, ಬೀದಿಪಾಲು ಮಾಡಿದ ಕೀರ್ತಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲಲಿದೆ. ಈ ಹಿಂದೆ ತೀರಾ ಕಡಿಮೆ ಜಾತಿಗಳಿದ್ದವು. 101 ಜಾತಿಗಳು ಹೆಚ್ಚಳವಾಗಲು ಕಾಂಗ್ರೆಸ್ ಕಾರಣ. ಪರಿಶಿಷ್ಟ ಜಾತಿಗಳು ಹೆಚ್ಚವಾದರೆ ಮೀಸಲಾತಿ ಹೆಚ್ಚಾಗಬೇಕು, ಅಹಿಂದ ಚಾಂಪಿಯನ್ ಸಿದ್ದರಾಮಯ್ಯ ಅವರು ಸಂಪೂರ್ಣ ಕಡೆಗಣಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.


ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಧರಪ್ಪ ನಾಯಕ್ ಅವರು ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತರ ವಿರೋಧಿ ಸರ್ಕಾರವಾಗಿದೆ. ನಮ್ಮ ಸಮಾಜದ ಸ್ವಾಮೀಜಿ ಅವರ, ಮಾಜಿ ಸಚಿವ ಶ್ರೀರಾಮುಲು ಸೇರಿದಂತೆ ಅನೇಕ ನಾಯಕರ ಅವಿರತ ಹೋರಾಟದ ಫಲವಾಗಿ ನಮ್ಮ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೀಸಲಾತಿ ಹೆಚ್ಚಳ ಮಾಡಿತು. ನಮ್ಮ ಸರ್ಕಾರ ಮುಂದುವರೆದಿದ್ದರೆ ಖಂಡಿತ ಈ ಮೀಸಲಾತಿ ಸಮಸ್ಯೆ ಸಂಪೂರ್ಣ ಸರಿಪಡಿಸಲಾಗುತ್ತಿತ್ತು. ಈ ವಿಚಾರದಲ್ಲಿ ಕಾಂಗ್ರೆಸ್ ವಿನಾಕಾರಣ ಕಲಹರಾನ್ ಮಾಡುತ್ತಿದೆ ಎಂದರು.

ಎಮ್ಮೆಲ್ಸಿ ವೈ.ಎಂ.ಸತೀಶ್ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಿ.ಹನುಮಂತಪ್ಪ, ಅಡವಿಸ್ವಾಮಿ, ಸುನಿಲ್ ಕುಮಾರ್ ಇತರರಿದ್ದರು.

ಸಮಾಜದ ಏಳ್ಗೆಗೆ ಎಲ್ಲರೂ ಒಟ್ಟಾಗಿ ಶ್ರಮಿಸೋಣ

◆**ಯಾದಗಿರಿ:** ಒಗ್ಗಟ್ಟಿನಲ್ಲಿ ಬಲವಿದೆ. ಸಮಾಜದ ವಿಷಯ ಬಂದಾಗ ಎಲ್ಲರೂ ರಾಜಕೀಯ, ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲರೂ ಒಂದಾಗಿ ಶ್ರಮಿಸೋಣ ಎಂದು ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಹಾಗೂ ಉದ್ಯಮಿ ರಾಚನಗೌಡ ಮುದ್ನಾಳ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕ, ಜಿಲ್ಲಾ ಯುವ ಘಟಕ, ತಾಲೂಕು ಘಟಕ, ತಾಲೂಕು ಯುವ ಘಟಕ ಹಾಗೂ ವೀರಶೈವ ಸಮಾಜದ ಸಂಯುಕ್ತಾಶ್ರಯದಲ್ಲಿ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ನೂತನ ಪದಾಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಯುವಘಟಕವು ತನ್ನ ಪದಾಧಿಕಾರಿಗಳ ಪಟ್ಟಿಯಲ್ಲಿ ಯಾದಗಿರಿ ಜಿಲ್ಲೆಗೆ ಅಗ್ರಸ್ಥಾನ ನೀಡಿದೆ. ಉತ್ಸಾಹಿ ಯುವಕರಾದ ಮಹೇಶರೆಡ್ಡಿ ಮುದ್ನಾಳ ಅವರನ್ನು ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷರನ್ನಾಗಿ ಹಾಗೂ ಮಲ್ಲಿಕಾರ್ಜುನ ಅರುಣಿ, ಸುನೀಲಕುಮಾರವಾರದಅವರನ್ನು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ನೇಮಿಸಿರುವುದು ಸಮಾಜಕ್ಕೆ ಆನೆಬಲ ತುಂಬಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿದ ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಮಹೇಶರೆಡ್ಡಿ ಮುದ್ನಾಳ ಮಾತನಾಡಿ, ಮಹಾಸಭಾದ ಅಸ್ತಿತ್ವ ಮತ್ತು ಅಭಿವೃದ್ಧಿಯಲ್ಲಿ ಮುದ್ನಾಳ ಕುಟುಂಬದ ಪಾತ್ರ ಹಿರಿದು. ಮಾಜಿ ಸಚಿವ ಲಿಂ.ವಿಶ್ವನಾಥರೆಡ್ಡಿ ಮುದ್ನಾಳ, ಮಾಜಿ ಶಾಸಕ ಲಿಂ.ವೆಂಕಟರೆಡ್ಡಿ ಮುದ್ನಾಳ ಅವರು ಮಹಾಸಭಾದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಸ್ಥಾಪನೆ, ಹೈದರಾಬಾದ್‌ನಲ್ಲಿ ಸಮಾಜದ ವಸತಿ ನಿಲಯ, ಕಟ್ಟಡ ನಿರ್ಮಾಣಕ್ಕೆ ಇವರು ನೀಡಿರುವ ಕೊಡುಗೆ ಮರೆಯುವಂತಿಲ್ಲ ಎಂದರು.

ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಮಲ್ಲಿಕಾರ್ಜುನ ಅರುಣಿ ಗಾಜರಕೋಟ ಮಾತನಾಡಿದರು.

ಅಬ್ಬೆತುಮಕೂರು ವಿಶ್ವಾರಾಧ್ಯ ಸಿದ್ಧಸಂಸ್ಥಾನ ಮಠದ ಶಿವಶೇಖರ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಸೊಪ್ಪಿ ಮಠದ ಚನ್ನವೀರ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಚನ್ನಪ್ಪಗೌಡ ಮೊಸಂಬಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಮುಖಂಡರಾದ ಶರಣಪ್ಪಗೌಡ ಕಾರೆಡ್ಡಿ ಮಲ್ಹಾರ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸಿದ್ದಪ್ಪ ಹೊಟ್ಟಿ, ಜಿಲ್ಲಾ ಯುವ ಅಧ್ಯಕ್ಷ ಸುರೇಶ ಜಾಕಾ, ತಾಲ್ಲೂಕು ಅಧ್ಯಕ್ಷ ರಾಜಶೇಖರಪಾಟೀಲ ಚಾಮನಹಳ್ಳಿ ಇದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ಸಿದ್ಧರಾಜರೆಡ್ಡಿ ನಿರೂಪಿಸಿ ವಂದಿಸಿದರು.